# ಭಾವಸ್ಪಂದನ

ಶ್ರೀ ಹರಿ ಎಲ್. ಖೋಡೆ

www.sriharikhoday.com

ಪ್ರಕಾಶಕರು
ಖೋಡೆ ಫೌಂಢೇಶನ್
7ನೇ ಮೈಲು, ಕನಕಪುರ ರಸ್ತೆ, ಬೆಂಗಳೂರು

# ಭಾವಸ್ಪಂದನ

ಲೇಖಕರು :
ಶ್ರೀ ಹರಿ ಎಲ್. ಖೋಡೆ

ಪ್ರಕಾಶಕರು :
ಖೋಡೆ ಫೌಂಢೇಶನ್
7ನೇ ಮೈಲು, ಕನಕಪುರ ರಸ್ತೆ, ಬೆಂಗಳೂರು

© ಲೇಖಕರು

ಮೊದಲ ಮುದ್ರಣ : ೨೦೧೬

ಕಾಗದ : 80 GSM White Maplitho Paper

ಪುಟ : ix + 693=702

ಬೆಲೆ : ರೂ. 350/-

ಮುಖಪುಟ ವಿನ್ಯಾಸ
ಮೋನಪ್ಪ

ಛಾಯಾಕ್ಷರ ಜೋಡಣೆ :
ವರ್ಷಿಣಿ ಗ್ರಾಫಿಕ್ಸ್
ಬೆಂಗಳೂರು-40

ಮುದ್ರಕರು :
ಸ್ನೇಹಾ ಪ್ರಿಂಟರ್ಸ್
ನಂ. 16, 1ನೇ ಬಿ ಮುಖ್ಯರಸ್ತೆ, ಶ್ರೀ ರಾಘವೇಂದ್ರ ಮಠದ ರಸ್ತೆ,
ಪಾಪರೆಡ್ಡಿಪಾಳ್ಯ 11ನೇ ಬ್ಲಾಕ್, ನಾಗರಬಾವಿ 2ನೇ ಹಂತ,
ಬೆಂಗಳೂರು - ೭೨
ದೂ : 080 23212814, ಮೊ : 9845062549, 9986050012



# ಮುನ್ನುಡಿ

"ಶ್ರೀಹರಿ" ಕಾವ್ಯನಾಮದ ಶ್ರೀಹರಿ ಎಲ್. ಖೋಡೆಯವರು ದಿನಾಂಕ ೧೪-೧೧-೨೦೧೪ ರಿಂದ ೨೩.೨.೨೦೧೬ರವರೆಗೆ ಬರೆದ ಕವನಗಳ ಸಂಪುಟ. ಇಂತಹ ಹಲವು ಸಂಪುಟಗಳು ಈಗಾಗಲೇ ಬಿಡುಗಡೆಯಾಗಿ ಕನ್ನಡಮ್ಮನ ಮಡಿಲು ಸೇರಿವೆ. ಬೆಂಗಳೂರು ನಗರದ ಬೃಹತ್ ಉದ್ಯಮಿಯೊಬ್ಬರು ತಮ್ಮ ಕಾರ್ಯ ಒತ್ತಡದ ನಡುವೆಯೂ, ಕವನ ರಚಿಸಿರುವುದು ಅವುಗಳನ್ನು ವ್ಯವಸ್ಥಿತವಾಗಿ ಮುದ್ರಣ ಮಾಡಿಸುತ್ತಿರುವುದು ಬಹು ಸಂತೋಷದ ವಿಷಯ. ಪ್ರಕಟಿತ ದಾಸ ಸಾಹಿತ್ಯ, ವಚನಸಾಹಿತ್ಯ, ಭಾವಗೀತೆಗಳು, ಭಕ್ತಿಗೀತೆಗಳು, ತತ್ತ್ವಪದಗಳು, ಮುಂತಾದ ಸಾಹಿತ್ಯ ಮೂಲವನ್ನು ತಲಿಸ್ಪರ್ಶಿಯಾಗಿ ಅಧ್ಯಯನ ಮಾಡಿರುವುದು ಈ ಕವನಗಳ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ಪರಿಪೂರ್ಣ ಭಾವದಿಂದ ಪೂರ್ಣವಾದ ದೇವರ ಜೊತೆಗೆ
ಪೂರ್ಣವನ್ನು ಅನುಭವಿಸುತ್ತ
ಪ್ರೀತಿ–ಪ್ರೇಮಗಳನ್ನು ತಿಳಿಸಿರುವ ದೇವರು
ನಾನು ನನ್ನದು ಮರೆತು ಹೋದರೆ
(೮೧೨ನೇ ಪದ್ಯದ – ೬ನೇ ಚರಣ)

ಪರಿಪೂರ್ಣ ಭಾವದಿಂದ ಪೂರ್ಣವಾದ ದೇವರ ಜೊತೆಗೆ, ಭಗವಂತನ ಕರುಣೆಯ ಪೂರ್ಣವನ್ನು ಅನುಭವಿಸುತ್ತ ಇರುವ ನನಗೆ ಪ್ರೀತಿ–ಪ್ರೇಮದ ನೀರನ್ನು ಭಗವಂತ ನನಗೆ ಎರೆದು ನನ್ನಲ್ಲಿ ಆಸೆ ಚಿಗುರಿಸಿದ, ಇದು ಬಿಟ್ಟು ನಾನು ನನ್ನದು ಎಂಬ ವಿಷಯ ಮರೆತು ಹೋದರೆ ಯಾವ ಆಸೆ ಇಲ್ಲದೆ ನಿಶ್ಚಲವಾಗಿ ಬದುಕುತ್ತಿದ್ದೆ. ಹೀಗೆ ಪ್ರಾಪಂಚಿಕ ಸತ್ಯವನ್ನು ಶ್ರೀಹರಿ ಸ್ಪಷ್ಟವಾಗಿ ತಿಳಿಸಿದ್ದಾರೆ.

ಹೃದಯದ ಬಟ್ಟಲನ್ನು ಕದ್ದುಕೊಳ್ಳುತ್ತಿರುವ ನಾವುಗಳು
ಸತ್ಯದಲ್ಲಿ ಅಡಗಿರುವ ಗೂಢಾರ್ಥಗಳನ್ನು
ಲೌಖಿಕ ರೀತಿಯಲ್ಲಿ ನಾವು ಜೀವಿಸಿದರೆ
ಒಂದು ಜಗಳ ನಾಟ್ಯವಾಗಿ (೮೧೮–೨)

ಪ್ರತಿಯೊಬ್ಬ ಯುವಕ-ಯುವತಿಯರ ಹೃದಯ ಪ್ರೇಮದಿಂದ ತುಂಬಿ ಹೋಗಿರುತ್ತೆ. ಅಂತಹ ಬಟ್ಟಲನ್ನು ಕದ್ದುಕೊಳ್ಳುತ್ತಿರುವ ನಾವು ಸತ್ಯದಲ್ಲಿ ಅಡಗಿರುವ ಗೂಡಾರ್ಥಗಳನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಇದ್ದರೆ ನಮ್ಮ ಜೀವನದಲ್ಲಿ ಜಗಳ ಮತ್ತು ನೃತ್ಯ ಎರಡನ್ನು ಮಾಡಬೇಕಾಗುತ್ತದೆ ಎಂದು ಜೀವನದ ಸತ್ಯವನ್ನು ತಿಳಿಸಿದ್ದಾರೆ.

ಮನುಷ್ಯನ ಸ್ವಭಾವ ಹತ್ತಲ್ಲ ನೂರಲ್ಲ ಸಾವಿರವಲ್ಲ
ಮನುಷ್ಯನಿಗೆ ಕೋಟಿ ಕೋಟಿ ಸ್ವಭಾವಗಳು
ಸಂದರ್ಭ ಬಂದ ಹಾಗೆ ಹೊಸ ರೂಪ ತಾಳುತ್ತಿರುವ
ಅನುಭವದ ಘಳಿಗೆಗಳು (೮೧೯-೬)

ಮನುಷ್ಯನ ಸ್ವಭಾವ ಅರ್ಥ ಮಾಡಿಕೊಳ್ಳಲು ಸಾವಿರ ತಲೆ ಇರುವ ಆದಿಶೇಷನಿಗೂ ಸಾಧ್ಯವಿಲ್ಲ. ಈ ಬಗ್ಗೆ ಮನಶಾಸ್ತ್ರಜ್ಞನರ ಜೊತೆ ಚರ್ಚೆ ಮಾಡಿದಾಗ ಜನರ ನೂರಾರು ದುಃಖದುಮ್ಮಾನ ಸ್ವಭಾವ ಎಲ್ಲವೂ ರೋಗ ತರಹ ಕಾಡುವುದನ್ನು ಮನೋವೈದ್ಯರು ಗಮನಿಸಿದ್ದಾರೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಕವಿ, ಮನುಷ್ಯ ಸಂದರ್ಭ ಬಂದ ಹಾಗೆ ಹೊಸ ರೂಪ ತಾಳುತ್ತಿರುವ ವಿಷಯವನ್ನು ಬಹಳ ಸೂಕ್ಷ್ಮವಾಗಿ ಗಮನಿಸಿ ತಮ್ಮ ಅನುಭವವನ್ನು ಈ ಪದ್ಯದಲ್ಲಿ ಹಿಡಿದಿಟ್ಟಿದ್ದಾರೆ.

ಪವಿತ್ರ ಪ್ರೀತಿಯು ಮನದಲ್ಲಿರದಿದ್ದರೆ ಪ್ರೇಮ ಹರಿಯುವುದೇ......?
ಅನುಭವದ ಅರ್ಥ ತಿಳಿಯದಿದ್ದರೆ ಆನಂದವನ್ನು ಪಡೆಯಲಾಗುವುದಾ...
(೮೨೩-೪)

ಪವಿತ್ರ ಪ್ರೀತಿ ಮನದಲ್ಲಿ ಹುಟ್ಟದಿದ್ದರೆ ಪ್ರೇಮ ಹರಿಯುವುದೇ ಎಂದು ಕವಿ ಪ್ರಶ್ನಿಸಿದ್ದಾನೆ. ಮನದಲ್ಲಿ ಪ್ರೀತಿ ಪ್ರೇಮ ಹುಟ್ಟದಿದ್ದರೆ ಪ್ರಪಂಚ ಮುಂದುವರೆಯುತ್ತಾ ಇರಲಿಲ್ಲ ಇದನ್ನು ಕವಿ ಸೂಕ್ಷ್ಮವಾಗಿ ಗಮನಿಸಿ ಚರ್ಚಿಸಿದ್ದಾರೆ.

ಪ್ರೀತಿ-ಪ್ರೇಮಗಳು ಇಲ್ಲದ
ಪ್ರೀತಿ-ಪ್ರೇಮಗಳ ಅರ್ಥ ತಿಳಿಯದ ಮಾನವರು
ದ್ವೇಷದಿಂದ ಓರೆಗಣ್ಣಿಂದ ದ್ವೇಷವನ್ನು ಪ್ರತಿಬಿಂಬಿಸುತ್ತಿದ್ದಾರೆ !
(೮೩೩-೬)

ಮನುಷ್ಯ ಸಹಜವಾದ-ವಯೋ ಸಹಜವಾದ ಪ್ರೀತಿ-ಪ್ರೇಮದ ಬಗ್ಗೆ ಬರೆಯದೆ ಇರುವ ಕವಿಗಳೇ ಇಲ್ಲ, ಪ್ರಾಚೀನ ಕಾವ್ಯಗಳೇ ಇರಲಿ ಅಧುನಿಕ ಪದ್ಯ ಸಂಕಲನಗಳೇ ಇರಲಿ ಎಲ್ಲರೂ ಪ್ರೀತಿ ಪ್ರೇಮದ ಬಗ್ಗೆ ಚರ್ಚಿಸಿದ್ದಾರೆ



www.sriharikhoday.com

ವಯೋಸಹಜವಾಗಿ ಉಂಟಾಗುವ ಪ್ರೀತಿ ಪ್ರೇಮದ ಅರ್ಥ ತಿಳಿಯದ ಮಾನವರು ಯುವ ಪ್ರೇಮಿಗಳ ಪ್ರೀತಿಯನ್ನು ಓರೆಗಣ್ಣಿನಿಂದ ನೋಡುವುದು ಅಲ್ಲದೆ ದ್ವೇಷವನ್ನು ಸಾಧಿಸುವುದನ್ನು, ಕವಿ ಇಲ್ಲಿ ಸೂಕ್ಷ್ಮವಾಗಿ ಹೇಳಿ ನಮಗೆಲ್ಲ ಮಾರ್ಗದರ್ಶನ ಮಾಡಿದ್ದಾರೆ.

ಕಷ್ಟದಿಂದ ನರಳುತ್ತಿರುವುದನ್ನು ಕಂಡು ಮನಸ್ಸು ಅಯ್ಯೋ ಎಂದು
ಮರುಗಿದರೆ ಅದೇ ಧರ್ಮದ ಕೂಗು
ತನ್ನ ಹತ್ತಿರ ಹೆಚ್ಚಾಗಿದ್ದು ಬೇಡಿಕೆಗಾಗಿ ಸಹಾಯ
ಕೇಳಿದರೆ ಸಹಾಯ ಮಾಡುವುದು ಧರ್ಮ
ಯಾರ ಸಹಾಯವೂ ಕೇಳದೆ ತಮ್ಮ ಪಾಡಿಗೆ ತಾವೇ ಕಷ್ಟ
ಪಡುತ್ತಿರುವುದ ಕಂಡು
ಮನಸ್ಸಿನಲ್ಲಿ ಕರುಣೆ ಹುಟ್ಟಿದರೆ ಆ ಕರುಣೆ ಧರ್ಮ. (೮೭೦-೩)

ಅಂಕಿತ ಇಲ್ಲದ ವಚನದಂತೆ ಕಂಡು ಬರುವ ಈ ಪದ್ಯದಲ್ಲಿ ಕವಿ ತಾನು ಪ್ರತಿನಿತ್ಯ ಗಮನಿಸುವ, ವ್ಯವಹರಿಸುವ, ಚಿಂತಿಸುವ ವಿಷಯವನ್ನು ಕುರಿತು ಬಹಳ ಸೂಕ್ಷ್ಮವಾಗಿ ಬರೆದಿದ್ದಾರೆ. ಇಂತಹ ಪದ್ಯ ರಚನೆ ಮಾಡಲು ಶ್ರೀಮಂತ ಮನಸ್ಸು, ಜೊತೆಗೆ ಸೇವಾನಿರತವಾದ ಜೀವನ ಬೇಕಾಗುತ್ತದೆ. ಅಂತಹ ಕ್ರಿಯೆ ಇಲ್ಲದಿದ್ದರೆ ಇಂತಹ ಪದ್ಯ ರಚನೆ ಸಾಧ್ಯವಿಲ್ಲ. ಯಾರೇ ಕಷ್ಟದಲ್ಲಿ ಇರಲಿ ಅವರ ಸಂಕಟವನ್ನು ನಮ್ಮ ಸಂಕಟ ಅಂದು ಕೊಂಡು ಮನಸ್ಸು ಮರುಗುತ್ತದೆ. ಅಂತಹ ಮರುಗುವಿಕೆಯನ್ನ ಕವಿ "ಧರ್ಮದ ಕೂಗು" ಎಂದಿದ್ದಾರೆ. ತನ್ನ ಹತ್ತಿರ ಹೆಚ್ಚಾಗಿದ್ದು ಬೇಡಿಕೆಗಾಗಿ ಸಹಾಯ ಕೇಳಿದರೆ ಸಹಾಯ ಮಾಡುವುದು ಧರ್ಮ. ಇಲ್ಲಿ ಒಂದು ವಿಷಯ ಸ್ಪಷ್ಟ ಮಾಡುವುದು ನಮ್ಮ ಹತ್ತಿರ ಹಣ ಯಥೇಚ್ಚವಾಗಿ ಇದ್ದರೂ ನಮ್ಮ ಆಪ್ತರಿಗೆ ರಕ್ತ ಅದರಲ್ಲೂ ಅಪರೂಪದ ಸಹಜವಾಗಿ ಲಭ್ಯವಿಲ್ಲದ ರಕ್ತ ಗುಂಪಿನ ರಕ್ತ ಬೇಕಾದರೆ, ಅವನ ಚಡಪಡಿಕೆ ಗಮನಿಸಬೇಕು. ಅಂತಹ ರಕ್ತ, ಲಭ್ಯವಾದಾದ ರಕ್ತವನ್ನು ಕೊಟ್ಟ ಮನುಷ್ಯನಿಗೆ ಎಷ್ಟು ಕೃತಜ್ಞತೆಯನ್ನು ಹೇಳುತ್ತಾನೆ ಇಂತಹ ವಿಷಯವನ್ನು ಬಾಯಲ್ಲಿ ಹೇಳುವುದಕ್ಕಿಂತ ಇಂತಹ ಘಟನೆಯನ್ನು ಕಣ್ಣಲ್ಲಿ ನೋಡಿ ಅನುಭವಿಸಬೇಕು. ಹೀಗೆ ಈ ಪದ್ಯದಲ್ಲಿ ಬಹಳ ಅಪರೂಪದ ಮಾನವ ಸಹಜವಾದ ಕರುಣೆ, ಧರ್ಮದ ಬಗ್ಗೆ ಚರ್ಚಿಸಿದ್ದಾರೆ.

ಭಕ್ತಿ ಸಾಹಿತ್ಯದಲ್ಲಿ ಭಗವಂತನನ್ನು ಅವನ ಕರುಣೆಯನ್ನು ಎಷ್ಟು ಕೊಂಡಾಡಿದರು ಸಾಧಕನಿಗೆ ತೃಪ್ತಿ ಇಲ್ಲ. ಮುಂದೆ ಪ್ರಸ್ತಾಪಿಸುವ ಈ ಪದ್ಯ ದಾಸ ಸಾಹಿತ್ಯದ ಕೀರ್ತನೆಯಂತೆ ಇದೆ, ಅಂಕಿತ ಮಾತ್ರ ಇಲ್ಲ.

ನೀ ನನ್ನ ಮೇಲೆ ಬಡ್ಡಿಯ ಮೇಲೆ ಬಡ್ಡಿ ಹಾಕು
ನಿನ್ನ ಕರುಣೆಯ ಸಾಲ ಅಪಾರವಾದದ್ದು
ನೀ ನನ್ನ ಕೈಗೆ ದೊರಕದೇ ಇದ್ದರೂ
ನಾ ನಿನ್ನನ್ನು ಪೂರ್ಣ ರೀತಿಯಲ್ಲಿ ಪಡೆದೆ (೮೭೧–೩)

ನೀನು ನನಗೆ ಕೊಟ್ಟಿರುವ ಅಪಾರವಾದ ಅನುಗ್ರಹ ಎಂಬ ಮೂಲ ಧನಕ್ಕೆ, ಬಡ್ಡಿಯನ್ನು ನಾನು ಕೊಡಲು ಸಿದ್ಧ. ಅದಕ್ಕೇನಂತೆ ಬಡ್ಡಿಯ ಮೇಲೆ ಬಡ್ಡಿ ಹಾಕು. ನಿನ್ನ ಕರುಣೆ ಸಾಲ ಅಪಾರವಾದದ್ದು, ನನಗೆ ನಿನ್ನ ದರ್ಶನ ಅಸಾಧ್ಯವಾದರೂ, ಸದಾ ನಿನ್ನ ಅನುಗ್ರಹವನ್ನು ಪೂರ್ಣ ರೀತಿಯಲ್ಲಿ ಪಡೆಯುತ್ತಾ ಇದ್ದೇನೆ. ಎಂದು ಆನಂದದಿಂದ ಕವಿ ಹೇಳುತ್ತಾ ಅಪರಿಮಿತವಾದ ಭಕ್ತಿಯನ್ನು ಭಗವಂತನಲ್ಲಿ ಅರ್ಪಿಸಿದ್ದಾನೆ.

ನಾನು ಯಾರು...? ಎಲ್ಲಿಂದ ಬಂದನೆಂದು ತಿಳಿಯದೆ
ನಾ ಯಾರು...? ಎಲ್ಲಿ ಹೋಗುವೆನೆಂದು ಅರಿಯದೆ
ಮೋಡಗಳಂತೆ ಬಂದು ಕರಗಿ ಹೋಗುತ್ತಿರುವ ಜೀವ
ರೂಪವನ್ನು ಬದಲಾಯಿಸುವ ಜೀವದ ಅರ್ಥ (೮೮೬–೮)

ಭಾರತದೇಶದಲ್ಲಿ ಮೊದಲಿನಿಂದ ನಾನು ಯಾರು? ಎಲ್ಲಿಂದ ಬಂದೆ ಎಲ್ಲಿಗೆ ಹೋಗುತ್ತೇವೆ ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆ ಮಾಡುತ್ತಾ ಬಂದಿದ್ದೇವೆ, ಮುಂದೆ ಸಹ ಮಾಡುತ್ತೇವೆ. ಕವಿ ಈ ಬಗ್ಗೆ ಚಿಂತನೆ ಮಾಡಿ ಮೋಡಗಳಂತೆ ಬಂದು ಕರಗಿ ಹೋಗುವಂತೆ ಮನುಷ್ಯ ಈ ಪ್ರಪಂಚಕ್ಕೆ ಬಂದು ತನ್ನ ಜೀವನ ನಾಟಕವನ್ನು ಮುಗಿಸಿ ನೇಪಥ್ಯಕ್ಕೆ ಸರಿಯುತ್ತಾನೆ. ಎಂಬ ಸತ್ಯವನ್ನು ಕವಿ ಸ್ಪಷ್ಟವಾಗಿ ತಿಳಿ ಹೇಳಿದ್ದಾರೆ.

ಬುಗುರಿಯಂತೆ ತಿರುಗುತ್ತಿರುವ ನಮ್ಮ ಮನಸ್ಸು
ಮನಸ್ಸಿನ ಜೊತೆ ಮತ್ತೊಂದು ಮನಸ್ಸು
ಹಗಲು–ರಾತ್ರಿ ನಡೆಸುತ್ತಿದೆ ಪಿತೂರಿ
ಕೊನೆಗೆ ಪಡೆಯುವುದು ಜನಗಳ ಭೀಮಾರಿ ! (೯೧೯–೩)

ಮನಸ್ಸಿನ ವೇಗವನ್ನು ಅಳತೆ ಮಾಡಲು ಸಾಧ್ಯವಿಲ್ಲ ಎಂದು ಭಾರತೀಯ ಚಿಂತಕರು, ವಿಶ್ವದ ವಿದ್ವಾಂಸರು ಅನೇಕ ಪ್ರಸಂಗಗಳಲ್ಲಿ ಒತ್ತಿ ಒತ್ತಿ ಹೇಳಿದ್ದಾರೆ ಮನೋವೇಗ ಎಂಬ ಮಾತೆ ನಮ್ಮಲ್ಲಿ ಇದೆ. ಮನಸ್ಸು ಸದಾ ಒಂದಲ್ಲ ಒಂದು ಚಿಂತನೆ ಮಾಡುತ್ತಾ ಇರುವಂತಹದು. ಕವಿ ಅದನ್ನು ಬುಗುರಿಗೆ ಹೋಲಿಸಿದ್ದಾರೆ.



www.sriharikhoday.com

ಸದಾ ಮನಸ್ಸಿನಲ್ಲಿ ಲೆಕ್ಕಚಾರ ಅದು ಹಗಲು–ರಾತ್ರಿ ಮನುಷ್ಯನ ತಂತ್ರ ಪ್ರತಿತಂತ್ರಕ್ಕೆ ಜನ ಭೀಮಾರಿ ಹಾಕಿದರು, ಮನಸ್ಸು ಮಾತ್ರ ಅದು ಯಾವುದನ್ನು ಕೇಳದೆ ತನ್ನ ಲೆಕ್ಕಾಚಾರವನ್ನು ಮುಂದುವರೆಸುತ್ತಾ, ಬಂದಿರುವುದನ್ನು ಕವಿ ಬಹಳ ಒಳ್ಳೆಯ ಉದಾಹರಣೆಯೊಂದಿಗೆ ನಮ್ಮೆಲ್ಲರ ಮನಸ್ಸಿಗೆ ನಾಟುವಂತೆ ವಿವರಿಸಿದ್ದಾರೆ.

ಮನದಲ್ಲಿರುವ ಶಿವಲಿಂಗವನ್ನು ಪೂಜಿಸು ಮಾನವ
ಸಿದ್ಧಾರೂಢ ಅವಧೂತರ ಜೊತೆಗೆ
ನಮ್ಮನ್ನು ನಾವೇ ಮರೆತು ಬೆರೆತು
ಪೂಜೆ ಮಾಡೆ ಭವಿಷ್ಯವನ್ನು ಪಡೆಯಿರಿ (೧೦೩೫–೧)

ಮಹಾನ್ ಅವಧೂತರು–ಶಿವಯೋಗಿಗಳು ಆದ ಸಿದ್ಧಾರೂಢರ ಪರಮ ಭಕ್ತರಾದ ಕವಿ, ಇಲ್ಲಿ ಆತ್ಮಲಿಂಗುವಿನ ಪೂಜೆಗೆ ಹೀಗೆ ಏನು ಎಂಬುದಕ್ಕೆ ಬಹಳ ಮಾರ್ಮಿಕವಾದ ಉತ್ತರವನ್ನು ಕವಿ ಇಲ್ಲಿ ನೀಡಿದ್ದಾರೆ. ಎಲ್ಲರಲ್ಲಿ ಇರುವ ಆತ್ಮಲಿಂಗವನ್ನು ಪೂಜಿಸಬೇಕು. ಅದು ಯಾರ ಜೊತೆಗೆ ಸಿದ್ಧಾರೂಢರೆಂಬ ಅವಧೂತರ ಜೊತೆಗೆ, ನಮ್ಮನ್ನು ನಾವೆ ಮರೆತು ಪೂಜೆ ಮಾಡಬೇಕು ಎಂದಿದ್ದಾರೆ.

ತಲ್ಲಣಿಸದಿರು ಮನ ತಲ್ಲಣಿಸದಿರು
ಗುರುಪಾದಗಳ ಜೊತೆಗೆ ಇರುವಾಗ
ತಲ್ಲಣಿಸದಿರು ಮನ ತಲ್ಲಣಿಸದಿರು ! (೧೦೪೫–೧)

ಕವಿಗೆ ದಾಸ ಸಾಹಿತ್ಯದ ಪ್ರಭಾವ ಚೆನ್ನಾಗಿ ಆಗಿದೆ, ಕನಕದಾಸರ ಕೀರ್ತನೆಯ ಛಾಯೆಯನ್ನು ಈ ಕವನದಲ್ಲಿ ಗುರುತಿಸಬಹುದು. ಇಲ್ಲಿ ಕವಿ ತನ್ನ ಕೃತಿಗೆ ಅಂಕಿತವನ್ನು ಸೇರಿಸಿಲ್ಲ, ಅದು ಬಿಟ್ಟರೆ, ಈ ಪದ್ಯ ಆಧುನಿಕ ದಾಸರ ಪದದಂತೆ ಇದೆ. ದಾಸರು ಅಲ್ಲಿ ಹರಿಯ ಕೃಪೆಯ ಬಗ್ಗೆ ಮಾತನಾಡಿದರೆ ಕವಿ ಇಲ್ಲಿ ಗುರುಕೃಪೆ ಬಗ್ಗೆ ವಿವರವಾಗಿ ಚರ್ಚಿಸಿದ್ದಾರೆ.

ನಿರ್ಮಲ ಜ್ಯೋತಿ ಬೆಳಗಲಿ ಜಗದೊಳಗೆಲ್ಲ ಬೆಳಗಲಿ
ಎಲ್ಲರ ಮನದಲ್ಲಿರುವ ಬಾಳು ಬೆಳೆಯಲಿ
ಜ್ಞಾನ ಜ್ಯೋತಿಯನ್ನು ಬೆಳಗಲಿ ! (೧೦೪೬–೧)

ಬಸವಾದಿ ಪ್ರಮಥರ ಕಾಲದಲ್ಲಿ ರಚನೆಯಾದ ಸ್ವರವಚನ– ವಚನದ ರಚನೆಯನ್ನು ಮುಮುಕ್ಷುಗಳು ಮುಂದುವರೆಸಿಕೊಂಡು ಬಂದಿದ್ದಾರೆ, ಶಿವಾದ್ವೈತ್ಯ ಸಿದ್ಧಾಂತವನ್ನು ಮನಮುಟ್ಟಿ ರಚನೆ ಮಾಡಿ ಲೋಕ ವಿಖ್ಯಾತರಾದರು ಹದಿನೈದನೆಯ

ಶತಮಾನದ ಕಡೆಯ ಪಾದದಲ್ಲಿ ಮತ್ತು ಹದಿನಾರನೇ ಶತಮಾನದ ಆರಂಭದ ಎರಡು ಪಾದದಲ್ಲಿ ಬದುಕಿ ಬಾಳಿದವರು ನಿಜಗುಣ ಶಿವಯೋಗಿಗಳು ಅವರು ರಚಿಸಿದ ಪ್ರಸಿದ್ಧ ಹಾಡುಗಬ್ಬ ಅಥವಾ ಸ್ವರವಚನಗಳ "ಕೈವಲ್ಯ ಪದ್ಧತಿ" ಪುಸ್ತಕದ ಕಟ್ಟ ಕಡೆಯ ಸ್ವರವಚನ "ಜ್ಯೋತಿ ಬೆಳಗುತಿದೆ ನಿರ್ಮಲ ಪರಂಜ್ಯೋತಿ ಬೆಳಗುತಿದೆ" ಈ ಸ್ವರವಚನದ ಸಂಪೂರ್ಣದ ಪ್ರಭಾವ ಕವಿ ರಚಿಸಿರುವ ಮೇಲಿನ ಪದ್ಯದ ಮೇಲೆ ಆಗಿದೆ. ಈ ಪದ್ಯದ ಪ್ರಭಾವ ಭಕ್ತ ಜನರ ಮೇಲೆ ಯಾವ ರೀತಿಯಾಗುತ್ತದೆ ಎಂಬುದಕ್ಕೆ ಪ್ರತಿನಿತ್ಯ ಬೆಳ್ಳಿಗ್ಗೆ ಮತ್ತು ಸಂಜೆ ಸಿದ್ಧಗಂಗಾಕ್ಷೇತ್ರದ ವಿದ್ಯಾರ್ಥಿಗಳ ಸಾಮೂಹಿಕ ಪ್ರಾರ್ಥನೆಯಲ್ಲಿ ಗಮನಿಸಬಹುದು.

ಧರ್ಮದಿಂದ ಬಾಳೋಣ
ಸರಳ ಜೀವನದಲ್ಲಿ ಆಸಕ್ತಿ ತೋರಿಸೋಣ
ಶ್ರದ್ಧೆಯಿಂದ ಕೆಲಸಗಳಲ್ಲಿ ತಾವೆ ತೊಡಗಿಕೊಂಡರೆ
ದ್ವೇಷ ಎಂದಿಗೂ ನಮ್ಮ ಮನದಲ್ಲಿ ಎಂದಿಗೂ ಅರಳುವುದಿಲ್ಲ !
(೧೦೭೧-೪)

ಪ್ರಪಂಚದ ಜನ ಬೆಕ್ಕಸ ಬೆರಗಾಗಿ ನೋಡುವುದು ನಮ್ಮ ದೇಶದಲ್ಲಿ ಇರುವ ಧರ್ಮ ಸಾಮರಸ್ಯಕ್ಕಾಗಿ. ಸದಾ ಭಾರತೀಯ ಋಷಿ ಮುನಿಗಳು ಸಂತ–ಮಹಂತರು, ಅನುಭಾವಿಗಳು ಗುರು–ವಿರಕ್ತರು, ಸಂನ್ಯಾಸಿಗಳು, ಅವಧೂತರು, ಜ್ಞಾನಿಗಳು, ಭೋದಿಸಿದ್ದು ಧರ್ಮದಿಂದ ಬಾಳೋಣ ಎಂಬ ಮಂತ್ರವನ್ನು ಅದೇ ಮಂತ್ರ ನಮ್ಮ ದೇಶವನ್ನು ಸಂರಕ್ಷಿಸಿರುವುದು. ಹೀಗೆ ಕವಿ ಸಾರ್ವತಿಕ ಸತ್ಯವನ್ನು ತನ್ನ ಪದ್ಯದಲ್ಲಿ ಜಗತ್ತಿಗೆ ಸಾರಿ ಹೇಳಿದ್ದಾರೆ. ಮುಂದಕ್ಕೇ ನಮ್ಮ ಜೀವನ ಸರಳವಾಗಿರಬೇಕು. ಎಂದು ಒತ್ತಿ ಒತ್ತಿ ಹೇಳಿದ್ದಾರೆ. ಜೀವನದ ಬದುಕಿನಲ್ಲಿ ಶ್ರದ್ಧೆ ಬಹಳ ಮುಖ್ಯ ನಮ್ಮ ಕಾಯಕ ಸತ್ಯ–ಶುದ್ಧವಾಗಿರಬೇಕು, ಮತ್ತು ಮಾಡುವ ಕಾಯಕದ ಬಗ್ಗೆ ಶ್ರದ್ಧೆ ಬೇಕು ಎಂದಿದ್ದಾರೆ. ಈ ಮೇಲಿನ ವಿಷಯವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ನಮ್ಮ ಬದುಕಿನಲ್ಲಿ ಯಾವ ವಿಧವಾದ ತೊಂದರೆಯು ಬರುವುದಿಲ್ಲ ಸಂಪೂರ್ಣ ಪಾರದರ್ಶಕವಾಗಿರುತ್ತೆ ಎಂದು ತಮ್ಮ ಜೀವನದ ಅನುಭವವನ್ನು ಬಿಚ್ಚಿ ಇಟ್ಟಿದ್ದಾರೆ. ಸದಾ ಒತ್ತಡದ ಬದುಕಿನಲ್ಲಿ, ಬದುಕುವ ನಮಗೆ ಈಗ ಸಮಯದ ಅಭಾವ ಇಂತಹ ಕ್ಲಿಷ್ಟ ಕಾಲದಲ್ಲು, ಪ್ರತಿನಿತ್ಯ ಶಾಂತನಾಗಿ ಆಲೋಚಿಸಿ ತಮ್ಮ ಆಲೋಚನೆಯಲ್ಲಿ ಹೊಳೆದ ವಿಚಾರವನ್ನು ಪದ್ಯರೂಪದಲ್ಲಿ ಬರೆದು, ನಮ್ಮೆಲ್ಲರಿಗೂ ಅಧ್ಯಯನ ಮಾಡಲು ಹಿರಿದಾದ ಕವನ ಸಂಪುಟವನ್ನು



ನೀಡಿರುವ, ಶ್ರೀಹರಿ ಕಾವ್ಯನಾಮಾಂಕಿತರಾದ ಶ್ರೀ ಹರಿ. ಎಲ್. ಖೋಡೆಯವರನ್ನು ಅಭಿನಂದಿಸುತ್ತಾ, ವಿರಮಿಸುತ್ತೇನೆ.


೧೯-೭-೨೦೧೬
ಮಹಾವೀರ ಜಯಂತಿ
ಮೊ : ೯೮೮೧೯೬೧೯೬

**–ಡಾ.ಬಿ. ನಂಜುಂಡ ಸ್ವಾಮಿ**
ಪಂಡಿತ ತಾರಾನಾಥ್
ಆಯುರ್ವೇದ ಚಿಕಿತ್ಸಾಲಯ
ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್
ಬಿ.ಹೆಚ್. ರಸ್ತೆ, ತುಮಕೂರು–೫೭೨ ೧೦೨




www.sriharikhoday.com

# 811

ದಡಧಡನೆ ಎಡವದೆ ಓಡುತ್ತಿರುವ ಕೆಲಸ ಸಾಧಿಸಿ
ಅಲ್ಲಾಡದೇ ಒಂದೆಡೆ ಕುಳಿತು ಎಡವಿ ಕೆಳಗೆ ಬೀಳುವೆ
ಎಂಬ ಭಯ . . .
ಕುಳಿತಲ್ಲೇ ಕುಳಿತು ಕರಗಿ ಹೋಗುತ್ತಿರುವರು !

ಮಾತು ಮಾತಿನ ನಿಪುಣತೆ ಕಷ್ಟಜೀವಿಯಾಗಿ
ಜಾಣತನದಿಂದ ಕೆಲಸ ಮುಗಿಸುವವನು ಕಷ್ಟಜೀವಿ
ಮಾತನಾಡಿದರೆ ತಪ್ಪು ಅವನ ಜೊತೆ ಮಾತು ಬಿಟ್ಟಿದ್ದೇನೆ
ಅವನ ಜೊತೆಗೂ ನನಗೂ ಸಂಬಂಧವಿಲ್ಲವೆಂದು ಹೇಳುವವರು
ಜಗಲಿ ಸೋಂಬೇರಿಗಳು

ಮಿತ್ರನ ಭಾವನೆಯಿಂದ ತ್ರಿಕರಣ ಶುದ್ಧಿಯಿಂದ
ಸಮಾಜದಲ್ಲಿ ಬೆರೆಯುವವನು ಸಮಾಜದಲ್ಲಿ ಹೆಸರನ್ನು ಗಳಿಸುವನು
ಮನಸ್ಸಿನಲ್ಲಿ ದ್ವೇಷ ಭಯದ ಮನೋವಾತಾವರಣ
ಹೊರಗಡೆ ಹೋಗದೆ ತನ್ನ ಭಾವಣೆಯಲ್ಲೇ ಕುಳಿತಿರುವನು

ದುಡಿದು ಕೆಲಸ ಮಾಡಿ ಶೇಖರಿಸಿದವನಿಗೆ
ಧೈರ್ಯದಿಂದ ಮನಸ್ಸಿಗೆ ಹೆದರಿ ಜೀವಿಸುತ್ತಿರುವವನು ತಲೆ ಎತ್ತಿ
ಜೀವಿಸುವನು
ನಿಂದಿಸುತ . .ಅವನು ನನ್ನಿಂದ ಕಲಿತನೆಂಬ ಹಾಸ್ಯ
ಮಾತುಗಳನ್ನಾಡುವವನು
ಒಳಗಣ್ಣು ತೆಗೆಯದೆ ಮುಚ್ಚಿಕೊಂಡಿರುವನು !

www.sriharikhoday.com

ಮುಳ್ಳಣ್ಣ ದ್ವೇಶದ ದುರ್ವಾಸನೆ ಸಿಡಿಲ ನಾಲಿಗೆ ಕೆಟ್ಟ ನುಡಿಗಳ
ನಾಲಿಗೆಯ ವಾಡಿಕೆ
ಯಾರಿಂದಲೂ ಕಲಿಯದೆ ತಾನೊಬ್ಬನೇ ಕಲಿಯುತ
ದ್ವಂದ್ವ ಅರ್ಥದ ಭಾಷೆಗಳನ್ನು ಹೇಳುತ ಅರ್ಥವೇ
ತಿಳಿಯದಿರುವವನು
ಜೊತೆಗಿದ್ದ ಸಮಾಜ ಇದ್ದಕ್ಕಿದ್ದಂತೆಯೇ ಜೊತೆ
ಕಾಣದಂತಾಗುವುದು !

**- ಶ್ರೀ ಹರಿ.**

**14-11-2014**



## 812.

ಪೂರ್ಣ ಪರಿಪೂರ್ಣ ಭಾವನೆಯೇ ಪ್ರೀತಿ
ಸಂಪೂರ್ಣ ಮನೋಧಾರೆಯೇ ಪ್ರೇಮ
ಸ್ವಯಂಪ್ರೇರಿತ ಪ್ರೀತಿ-ಪ್ರೇಮದ ಜೊತೆ
ಅಡಚಣೆಯಿಲ್ಲದ ಪ್ರೀತಿ-ಪ್ರೇಮದ ಹೊಂದಾಣಿಕೆ !

ಮನೋ ಅಂತರ್ ವಾಣಿಯ ಎಚ್ಚರ ಪ್ರೀತಿ
ಕಣ್ ಕರೆಯ ವಾಣಿಯೇ ಪ್ರೇಮ
ಸತ್ಯದ ಟಿಪ್ಪಣಿಯೇ ಪ್ರೀತಿ-ಪ್ರೇಮದ ಜೊತೆ ದೇವರು
ಧರಣಿಗೆ ಬೇಕಾಗಿರುವುದು ಮಾನವನಿಂದ ಪರಿಪೂರ್ಣದ
ಬಿಂಬಗಳು !

ದೇವರು ಸೃಷ್ಟಿಸಿರುವ ಮಾನವ
ಮಾನವನ ಜೊತೆಯಾಯಿತು ಗಂಡು-ಹೆಣ್ಣಿನ ಸಂಬಂಧಗಳು
ಪ್ರಕೃತಿಯ ಮನೋ ಸೃಷ್ಟಿಯ ಮಾನವ
ಪೂರ್ಣ ಪರಿಪೂರ್ಣಗಳ ಸಂಬಂಧಗಳ ಅರ್ಥ ತಿಳಿದು

ವಿಶ್ವದ ಮಾನವನ ಸಂತೋಹನದಲ್ಲಿ ಒಬ್ಬರೊಬ್ಬರ ಸಂಬಂಧಗಳು
ಸಂಬಂಧಗಳ ಜೊತೆ ದೇವರ ಸಂಬಂಧ
ಅದರಲ್ಲಡಗಿರುವ ಅನೇಕ ಸತ್ಯದ ಬೆಳಕು
ಕಾಲವೇ ಶಿಕ್ಷಕನಾಗಿ ಹಂತ ಹಂತದಲ್ಲಿ

www.sriharikhoday.com

ಮಾನವನ ಭಾವನೆಯಲ್ಲಿ ಬೆರೆತು
ಕಳೆದು ಹೋಗಿ. .ಮತ್ತೆ ಜೊತೆ ಬೆರೆತುಕೊಂಡು
ಆಕರ್ಷಣೆಯ ಶಕ್ತಿಕರ ಪ್ರೀತಿ-ಪ್ರೇಮದ ಸಂಬಂಧ
ಮಾನವನ ಆಭರಣವಾಗಿ ಆತ್ಮವೇ ಜೊತೆಯಾಗಿ

ಪರಿಪೂರ್ಣ ಭಾವದಿಂದ ಪೂರ್ಣವಾದ ದೇವರ ಜೊತೆಗೆ
ಪೂರ್ಣವನ್ನು ಅನುಭವಿಸುತ್ತ
ಪ್ರೀತಿ-ಪ್ರೇಮಗಳನ್ನು ಬೆಳೆಸಿರುವ ದೇವರು
ನಾನು ನನ್ನದು ಮರೆತು ಹೋದರೆ

ನಾನೂ ಕೂಡ ದೇವರ ಅನುಭವ ಪಡೆದು
ಅನೇಕ ಬಣ್ಣಗಳಿಂದ ಮಿನುಗಬಲ್ಲ ಮಾನವನ ಮೇಲೆ
ಅನೇಕ ಪ್ರತಿ ಬಿಂಬಗಳು ಸುರಿಮಳೆಯಾಗಿ ಬಿದ್ದು
ಸುಖ-ಕಷ್ಟಗಳನ್ನು ಅರ್ಪಣೆ ಭಾವದಿಂದ ಪ್ರಕಟಿಸುತ್ತಿರುವ
ಮಾನವ

ಪವಿತ್ರ ವಸ್ತುವಾಗಿ ಜಗತ್ತಿನಲ್ಲಿ ಜೀವಿಸುತ್ತಿದ್ದಾನೆ
ಮಾನವನು ಮಾತ್ರ ಪೂರ್ಣ ಪರಿಪೂರ್ಣ
ದೇವರ ಜೊತೆ ಪೂರ್ಣದಲ್ಲಿ ಕರಗಿಹೋಗುತ್ತಿದ್ದಾನೆ !

**- ಶ್ರೀ ಹರಿ.**

**18-11-2014**



www.sriharikhoday.com

# 813

ಹತೋಟಿಯಿಲ್ಲದ ಮನಸ್ಸು
ವೈರಾಗ್ಯ ಕಟ್ಟುತ್ತಿದೆ
ಕಟ್ಟಿದ ಮನೋಕಟ್ಟಡದಲ್ಲಿ ವೈರಾಗ್ಯ ಬೆಳೆಯುತ್ತಿದೆ !

ನಮ್ಮನ್ನಗಲಿದ ಮನಸ್ಸು
ವೈರಾಗ್ಯದಲ್ಲಿ ಏನೂ ಸುಖ ಸಿಗದೆ
ಸುಖಪಡುವ ಆಸೆಗಳು ಹೆಚ್ಚಿ

ವೈರಾಗ್ಯದ ಬಯಕೆಗಳನ್ನು ಬದಿಗೆ ತಳ್ಳಿ
ಇಮ್ಮಡಿಯಾಗುತ್ತಿರುವ ಬಯಕೆಗಳು
ಸಾಲು ಸಾಲು ನಿಂತಿದೆ !

ಪಾವಿತ್ರತೆಯ ನಿಯಮಗಳನ್ನು ಉಲ್ಲಂಘಿಸಿದರೆ
ಹುಚ್ಚನಂತೆ ಹತೋಟಿಯಿಲ್ಲದ ಮನಸ್ಸು
ಬೇರೆ ಬೇರೆ ಭಾವನೆಗಳಿಗೆ ಜನುಮ ನೀಡುತ್ತ
ಮನಸ್ಸಿನ ಗರ್ಭದಿಂದ ಆಧಾರವಿಲ್ಲದ ಭಾವನೆಗಳು
ತೃಪ್ತಿಯ ಸಂತಸವನ್ನು ಕಳೆದುಕೊಳ್ಳುತ್ತಿದೆ !

ಭಾವನೆಗಳನ್ನು ಭೇದ ಮಾಡದೆ
ಉಸಿರಿನಂತೆ ಅವಶ್ಯಕವಾಗಿರುವ ಭಾವನೆಗಳು
ಉಸಿರು ಬಂದು ಹೋದರೂ ಉಸಿರಿನ ತೃಪ್ತಿ ಪಡೆಯುವಂತೆ

ಉಸಿರನ್ನೇ ಮರೆತಿರುವ ಅಭ್ಯಾಸಿಗಳಾಗಿರುವ ನಾವು
ಕಾಮನ ಬಿಲ್ಲಿನ ಬಣ್ಣ ಬಣ್ಣಗಳಲ್ಲಿ ಬೆರೆತು
ರಸಭರಿತ ಜೀವನದಲ್ಲಿ ಎಲ್ಲಾ ಭಾವನೆಗಳ ಜೊತೆ ಬೆರೆತು

ಸಂತಸದ ಹಬ್ಬದ ಸುಖ
ಎಂದಿಗೂ ನೆನೆದುಕೊಳ್ಳುವಂತೆ
ಕ್ಷಣ ಕ್ಷಣದ ಅನುಭವಗಳಲ್ಲಿ ಸುಖವನ್ನು ಬೆರೆಸಿಕೊಂಡು ಬೆರೆತು

ನಮ್ಮನ್ನಗಲಿರುವ ಮನಸ್ಸುಗಳನ್ನು ಜೊತೆ ಸೇರಿಸಿಕೊಂಡು
ಪ್ರೀತಿಯಿಂದ ಬೆಟ್ಟ-ಕಣಿವೆಗಳ ಪವಿತ್ರ ಸುಖ ಪಡೆಯುತ
ನಮ್ಮ ಜೀವನ ಕಾಲದ ಉಯ್ಯಾಲೆಯಲ್ಲಿ ತೇಲುತ್ತಾ

ಉಸಿರು-ನಿಟ್ಟುಸಿರು ಗಣಿಕೆ ಇಲ್ಲದೆ ಸುಖ ಪಡೆಯುವಂತೆ
ಗಣಿಕೆಗಳ ಮರೆತು ಕಾಲದ ಉಯಾಲೆಯಲ್ಲಿ ಬೆರೆತು
ಸುಖ ಸಂತಸವನ್ನು ಮನದಲ್ಲೆಡೆ ಚಿಗುರಿಸೋಣ

**- ಶ್ರೀ ಹರಿ.**

**20-11-2014**



# 814

ನನ್ನದು ಇಂದ ಆದ ನಾನು
ನಮ್ಮದು ಇಂದ ಆದ ನಾವುಗಳು
ನಾನು ನಾನು ಎಂಬ ಅರ್ಥವಿಲ್ಲದ ಭಾವ
ನಾನು . .ನನ್ನದು .. ಎಂಬ
ಅಹಂಕಾರದ ಭಾವವನ್ನು ಬೆಳೆಸುತ್ತಿದೆ !

ಭೂತ-ಭವಿಷ್ಯಗಳ ಭಾವನೆಗಳಲ್ಲಿ
ತೇಲುತ್ತಿರುವ ಮಾನವನ ಮನಸ್ಸು
ತನ್ನ ಹಿನ್ನೆಲೆಯಲ್ಲಿ ನನ್ನದಾಗಬೇಕು
ನಾನು ಪಡೆಯಬೇಕು. .ಪಡೆದು ಜೊತೆಗಿರಬೇಕೆಂಬ
ಅರ್ಥವಿಲ್ಲದ ನಿರ್ಧಾರಗಳು !

ತನ್ನನ್ನು ತಾನೇ ಪಡೆಯಲಾಗದ ಮಾನವ
ಬೇರೆಯದನ್ನು ಪಡೆಯಲು ಮಾಡುತ್ತಿರುವ ಪ್ರಯತ್ನಗಳು
ಇಲ್ಲದ್ದನ್ನು ಕಲ್ಪಿಸಿ ಇದ್ದದ್ದರ ಜೊತೆ ತಾಪಿಸಿ
ವರ್ತಮಾನಗಳಲ್ಲಿ ಜೀವಿಸದೆ ಭವಿಷ್ಯದಲ್ಲಿ
ಜೀವನ ಯಾತ್ರೆಯನ್ನು ನಡೆಸುತ್ತಿದ್ದಾನೆ !

ನನ್ನಿಂದಾದ ನಾನು .. ನಾನು ಇಲ್ಲದ ನಾನು
ಅನುಭವಿಸುತ್ತಿರುವ ಮಹಾನ್ ಶಕ್ತಿಯೆಂಬ ದೇವರನ್ನು
ನಾನು ಇಲ್ಲದ ನಾನು ಸತ್ಯದ ಪ್ರಭಾವದಿಂದ

www.sriharikhoday.com

ಸರಿ ಮಾನವನಾಗಿ ಭೂತ-ಭವಿಷ್ಯ-ವರ್ತಮಾನದ
ಅನುಭವ ಏಕಕಾಲದಲ್ಲಿ ಪಡೆಯುತ್ತಾನೆ !

ನಾನು ಇಲ್ಲದ ನಾನು ಎಲ್ಲದರಲ್ಲಿ ಬೆರೆತು
ಬೆರೆತದ್ದನ್ನು ಪಡೆಯಲು ಯತ್ನಿಸುತ್ತ
ಬೆರೆತಾದ ಮೇಲೆ ಗಾತ್ರ ಇಲ್ಲದ ವಿಶ್ವವಾಗಿ
ಕಾಣುವ ಜೊತೆ ಬೆರೆತು ಆನಂದವನ್ನು ಅನುಭವಿಸಿ
ಹಿಡಿಯಲಾಗದ ಆನಂದ . .

ಹಿಡಿದು ಜೊತೆ ಜೀವಿಸುವ ಆಸೆಗಳು
ಅನೇಕವಾಗಿ ಬೆಳೆದು .. ಆಸೆಗಳೇ ಆನಂದವಾಗಿ ಹೊಗಳಿಕೆಗಳ
ಅಲೆಗಳಲ್ಲಿ ಅರ್ಥವಿಲ್ಲದೆ ಜೀವಿಸುತ
ಸರಿ ಅರ್ಥ ತಿಳಿಯದ ಜೀವ ಜೀವನವಾಗಿ
ಹೊಗಳಿಕೆ . .ತೆಗಳಿಕೆ . ಬಣ್ಣಗಳನ್ನು ಮೇಲೆ ಸುರಿಸಿಕೊಂಡು

ಹಿಗ್ಗುತ್ತಾ. ದುಃಖಿಸುತ್ತ ನಗುತ್ತಾ. ಅಳುತ್ತ . .
ಪ್ರೀತಿಸುತ್ತಾ. .ದ್ವೇಶಿಸುತ್ತಾ. .ನನ್ನದು . ನನ್ನದು
ಎಂಬ ಮಾತುಗಳನ್ನು ಬೆಳಸಿಕೊಳ್ಳುತ್ತ
ನಾನು ನಾನು ಎಂಬ ಜಂಭ
ಮಾನವನ ಮೇಲೆ ಬೆಳೆಯುತ್ತಲೇ ಇದೆ.

**- ಶ್ರೀ ಹರಿ.**

**21-11-2014**



# 815

ಹೆದರುತ್ತಾ. . .ಹೆದರುತ್ತಾ . ಹೆದರಿಸುತ್ತಾ
ಜಂಭದ ಧೈರ್ಯದಿಂದ ಬದುಕುತ್ತ
ಧರೆಯಲ್ಲಿ ಹೆಜ್ಜೆ ಹೆಜ್ಜೆಗೂ ಹೆದರಿಕೆಯಿಂದ ಬದುಕುತ್ತ
ಜೀವನದಲ್ಲಿ ಜೀವನ ಕಷ್ಟಕರವಾಗಿದೆಯೆಂದು ಹೇಳುತ್ತಾ ಹೇಳುತ್ತಾ
ಸುಖ ಏನೆಂದು ಮಾನವನಿಗೆ ಕಾಣದಾಗಿದೆ !

ಜಂಭದಿಂದ ಬೇರೆಯವರ ಜೊತೆಗೆ ಬೆರೆಯದೆ
ಚಿಂತೆ ಹುಚ್ಚನ್ನು ಚಿಗುರಿಸುತ್ತ
ಅನೇಕ ಭಾವನೆಗಳು ಮರುಗಾಳಿನ ಧೂಳಾಗಿ
ಜಗತ್ತಿನ ವಾಡಿಕೆಯನ್ನು ಅನುಭವಿಸದೆ
ಚಿತ್ರ ಬಿಡಿಸುವ ಕುಂಚ ಸೋತಿರುವಂತಿದೆ !

ನಿಜ ಅರ್ಥ ತಿಳಿಯದ ಛಲ ಚಕ್ರದಿಂದ ನಾಶವಾಗುತ್ತ
ಗೆಳೆಯರ ಗೆಳೆತನದ ಬಯಕೆಗಳಿಗೆ ಸಿಲುಕದೆ
ಅರಿವಿನ ಸುಖದಿಂದ ಯೋಗ್ಯ ಸುಖ ದೊರೆಯದೆ
ಸುಖದ ರಹಸ್ಯ ಪುಸ್ತಕದಲ್ಲಿ ಸಿಗದೆ
ಬೇರೆಯವರಲ್ಲಿ ನನ್ನನ್ನು ಕಾಣದೆ ಅನೇಕ ಸುಖಗಳಿಂದ
ದೂರವಾಗುತ್ತಿರುವನು

www.sriharikhoday.com

ತನ್ನನ್ನು ಮರೆತು ಜಗತ್ತನ್ನು ನೋಡದೆ
ಕಾಣುವ ಸುಖದಲ್ಲಿ ಮಾನವನ ಬೆಲೆಯನ್ನು ಕಾಣದೆ
ಬಾಳಲು ತನ್ನ ಮನದಲ್ಲಿ ಪ್ರೀತಿ-ಪ್ರೇಮದ ಕಣಿವೆ ಇಲ್ಲದೆ
ಪ್ರೀತಿ-ಪ್ರೇಮಗಳು ಮನಸ್ಸಿನಲ್ಲಿ ಹರಿಯಬೇಕಾಗಿದೆ
ಜೀವ ಹೂವಿನಂತೆ ಬೆಳೆದು ಸುಗಂಧವನ್ನು ಹೊರಚೆಲ್ಲಬೇಕಾಗಿದೆ !

ಬಲತ್ಕಾರವಿಲ್ಲದ ಭರವಸೆ ನೀಡುತ್ತ
ಸುಖದಿಂದ ಭವಿಷ್ಯವನ್ನು ಚಿತ್ರಿಸುತ್ತ
ಬೆಳೆದಿರುವ ಸೃಷ್ಟಿಯ ಜೊತೆಗೆ ಹೊಸದನ್ನು ಕಟ್ಟುತ್ತ
ಜೊತೆ ಜೊತೆ ನಮ್ಮ ಜೊತೆಯಿರುವ ದೇವರಲ್ಲಿ ಬೆರೆಯುತ್ತ
ತನ್ನದರಲ್ಲಿ ಭವ್ಯ ಭಾವನೆಯಿಂದ ನೋಡುತ್ತ

ಕಾಣುವ ಸುಖದ ಪ್ರಭಾವದಲ್ಲಿ ಬೆರೆಯುತ್ತ
ಹೆದರದೆ ಹೆದರಿಸದೆ ಜಂಭ ಅಹಂಕಾರಗಳ ಕಿರೀಟಗಳನ್ನು
ಕೆಳಗಿಳಿಸುತ್ತ
ಸುಖ ನೀಡುವ ಪ್ರೀತಿ-ಪ್ರೇಮಗಳ ಸುಗಂಧ
ಮಾನವ ಲೇಪಿಸಿಕೊಳ್ಳಬೇಕಾಗಿದೆ ಈಗ .

**- ಶ್ರೀ ಹರಿ.**

**24-11-2014**



www.sriharikhoday.com

# 816

ಕೊನೆ ತಿಳಿಯದ ನಮ್ಮ ಒಲುಮೆ
ಅಂತರಾಳದ ಪ್ರೀತಿಯ ಚೆಲುವು
ಅಂತಃಕರಣದ ಕೊರಳನ್ನು ಸುತ್ತಿಕೊಂಡಿದೆ
ಹೇ . .ಪ್ರಿಯೆ ! ವಿಧಿ ವಿಧಿಸಿದ ನಮ್ಮ ಜೊತೆ ಒಡತಿಯೇ
ನೀನಾಗು

ಆಗಸದಂತಿರುವ ನಿನ್ನ ದೃಷ್ಟಿಕೋನ ಸಾಕು ನನಗೆ
ಮಧುವನ್ನು ನಾನೊಬ್ಬನೇ ಕುಡಿದರೆ ಕೆಟ್ಟವನೆನ್ನುವರು
ನೀನೂ ನನ್ನ ಜೊತೆ ಸೇರಿಕೋ. ..
ಬೇರೆಯವರ ಮಾತು ನಮಗೆ ಬೇಕಿಲ್ಲ. .!

ನಮ್ಮಿಬ್ಬರ ಪ್ರೀತಿ ಸರಿ ತಿಳಿದಿಹ ಮರದಡಿ
ಆ ನೆರಳು ನಮ್ಮಿಬ್ಬರ ಕರುಳು ಒಂದಾಗಿಸಿದೆ
ನಮ್ಮಿಬ್ಬರ ಕೈಪಿಡಿತದಲ್ಲಿ ಸತ್ಯವೇ ಜೊತೆ ಬೆರೆತಂತಿದೆ
ನಮ್ಮಲ್ಲಿ ನಾವಿಬ್ಬರು ಕಷ್ಟಗಳನ್ನು ಮರೆತಿರುವುದು ಜೀವನದ
ಗೋಳನ್ನು ದೂರ ತಳ್ಳಿದೆ

ನಮ್ಮ ಲೋಕದಲ್ಲಿ ವಿಹರಿಸಿ ಜೀವಿಸೋಣ
ಕಷ್ಟಗಳ ಚಿಂತಿಸದೇ ಇರುವ ನಾವುಗಳು
ಕಷ್ಟಗಳು ನಮಗೆ ತೊಂದರೆ ನೀಡಲು ಹೆದರುತ್ತಿವೆ
ಸುಖ ಸುರಿಯುತ್ತಿರುವ ನೀನು ಅನುಭವಿಸುತ್ತಿರುವ ನಾನು

ನಮ್ಮ ಸತ್ಯದ ಅನುಭವ ಬಿಟ್ಟು ಮಿಕ್ಕಿದ್ದೆಲ್ಲ ಭ್ರಾಂತಿ ಎನ್ನೋಣ
ಶುಚಿಯಾಗಿ ಶೂನ್ಯದಿಂದ ಬಂದಿರುವ ನಾವು

ನಾವಿಬ್ಬರೂ ಜೊತೆ ಬೆಳೆಸಿಕೊಂಡಿರುವ
ಅನುಭವದ ಜ್ಞಾನವೃಕ್ಷದಿಂದ ಫಲಗಳ ಬೇಡದೆ

ಅದು ನೀಡುತ್ತಿರುವ ಫಲವನ್ನು ಸವಿಯೋಣ
ದೇವರ ಅನುಭವಿಸಲು ಚಪಲವುಳ್ಳ ನಾವು
ನಮ್ಮ ಉಸಿರಿನ ಉಸಿರಾಗಿರುವ ದೇವರ ಚಪಲದಲ್ಲಿ
ದೇವರನ್ನು ಜೊತೆ ಅನುಭವಿಸೋಣ !

**– ಶ್ರೀ ಹರಿ.**

**26–11–2014**



## 817

ಇದು ಬೇಡ ಅದು ಬೇಡ . ಬೇಕು ಬೇಕು . .ಬೇಕೇ ಬೇಕು ನಮಗೆ
ನಮ್ಮನ್ನು ಮರೆಸುವ ಮಧುಬಟ್ಟಲು
ಬಂದಿರುವ ನಿಶೆ ನಮ್ಮ ಸ್ನೇಹತನಕ್ಕೆ ಬೆರೆತು
ನಾಚಿಕೆ ಮರೆತಿರುವ ನಮ್ಮ ಮಾತುಗಳು ಸ್ನೇಹದಲ್ಲಿ
ಬೆರೆತುಹೋಗಿದೆ
ಹೇಳೋಣ . . ಹೇಳಲೇಬೇಕು. . ಜಯ ಜಯ !

ಸುಖದ ಬೇಡಿಕೆ ಎಲ್ಲರಿಗೂ . ನಮ್ಮನ್ನೆಲ್ಲ ಮರೆಸುವ ಸುಖದ
ಬೇಡಿಕೆ ಎಲ್ಲರಿಗೂ
ಯಾರಿಗೂ ಸಿಗದೆ ನಮಗೆ ಮಾತ್ರ ಇಂದು ಸಿಕ್ಕಿದೆ
ಎಲ್ಲದರಲ್ಲಿ ಬೆರೆತಿರುವ ನಮ್ಮ ಭಾವನೆ
ಭುಜದ ಮೇಲೆ ಭುಜಗಳು ಒಂದಾಗಿ
ನಮ್ಮ ಸ್ನೇಹ ನಮ್ಮ ಜೊತೆಗೇ ಮತ್ತೇರಿ ಪ್ರೀತಿಯನ್ನು ಹೆಚ್ಚಿಸುತ್ತಿದೆ

ನಮ್ಮ ಜೊತೆಗೆ ನಿಶೆಯನ್ನು ಜೊತೆ ಸೇರಿಸಿಕೊಂಡು
ಹೇಳೋಣ. ಹೇಳಲೇಬೇಕು. .ಜಯ ಜಯ !

ನಮ್ಮ ಜೀವನ ದೋಣಿಗೆ ಸುಳ್ಳಿನ ಹಾಯಿ ಬೇಡ
ಜೀವನ ಸಮಾನ ಭಾವ ಅರ್ಥಗಳುಳ್ಳ ನಮ್ಮ ಸ್ನೇಹ
ಎದುರು ಬಡಿಯುತ್ತಿರುವ ಅಲೆಗಳನ್ನು ಹೆದರದೇ ಬೆದರಿಸಿ



www.sriharikhoday.com

ನಮ್ಮೆಲ್ಲರ ಸ್ನೇಹತನವನ್ನಾಗಿ ಮುನ್ನಡೆಸೋಣ
ಅಂತರಾಳದ ನಮ್ಮೆಲ್ಲರ ಸ್ನೇಹ ಮತ್ತೆ ಮತ್ತೆ ಹೆಚ್ಚಲಿ ಎನ್ನುತ
ನಾವೆಲ್ಲರೂ ಸೇರಿ ಜೊತೆ
ಹೇಳೋಣ . .ಹೇಳಲೇಬೇಕು . ಜಯ ಜಯ !

ನಾನು ಹೇಳುವ ಮಾತಿಗೆ . .
ಸ್ನೇಹಿತನಾಗಿರುವ ನಿನ್ನ ಮಾತು ಒಂದೇ
ನಮ್ಮಗಳ ಮಾತುಗಳು ಜೊತೆ ಮಾತಾಗಿ
ಎಲ್ಲರ ಹಿತವನ್ನು ಬಯಸುತ್ತ ಮನೆಯಿಂದ ದೂರವಿರುವ ನಾವು
ನಮ್ಮ ಮನೆಯಲ್ಲಿರುವ ಕಾಂತೆಯನ್ನು ನಾವು ನೆನೆಯುತ್ತ

ನಮ್ಮ ಪ್ರೀತಿ-ಪ್ರೇಮ ಅವಳ ಜೊತೆಗೆ ನೆನಪುಗಳ ಓಕುಳಿಯಾಡುತ್ತ
ಹೇಳೋಣ . .ಹೇಳಲೇಬೇಕು . .ಜಯ ಜಯ!

– ಶ್ರೀ ಹರಿ.

26-11-2014

# 818

ಕಾವ್ಯವನ್ನು ತುಂಬುವ ಪದಗಳು
ಸೌಂದರ್ಯವನ್ನು ಸೆಳೆದು ತುಂಬಿಕೊಳ್ಳುವ ಕಣ್ಣೋಟಗಳು
ಪ್ರತಿಕ್ರಿಯೆ ನೀಡುತ್ತಿರುವ ಹಂತ ಹಂತದ ಕ್ರಿಯೆಗಳು
ಬೇರೆ ಬೇರೆಯವರಿಂದ ಬರುತ್ತಿರುವ ಆನಂದ

ಹೃದಯದ ಬಟ್ಟಲನ್ನು ಕದ್ದುಕೊಳ್ಳುತ್ತಿರುವ ನಾವುಗಳು
ಸತ್ಯದಲ್ಲಿ ಅಡಗಿರುವ ಗೂಢಾರ್ಥಗಳನ್ನು
ಲೌಕಿಕ ರೀತಿಯಲ್ಲಿ ನಾವು ಜೀವಿಸಿದರೆ
ಒಂದು ಜಗಳ ನಾಟ್ಯವಾಗಿ

ಜಗಳದ ಮಾತುಗಳು ಜೀವನ ನಾಟಕದ ಸಾಹಿತ್ಯವಾಗಿ
ಪ್ರಿಯವಾದದ್ದನ್ನು ಆಗಾಗ್ಗೆ ನೆನಪಿಸಿಕೊಂಡು
ನೆನಪುಗಳ ನೆನಪಿನಿಂದ ಆನಂದ ಮಾನವನಿಗೆ ನೀಡುತ್ತಿರುವುದು
ಮಾನವನ ಜೀವನದ ನಿಜ ತತ್ವಗಳು !

ಕಲ್ಪನೆಗಳಿಂದ ಅರ್ಥಗಳು . .ಅರ್ಥಗಳಿಂದ ಹೊಸ ಕಲ್ಪನೆಗಳು
ವೇದಾಂತದ ರಹಸ್ಯಗಳನ್ನು ಉಪಯೋಗಿಸು ಅನುಭವ ಪಡೆ
ಆನಂದಿಸು ಎಂಬ ಪದಗಳ ಅಕ್ಷರಗಳು
ಮಾನವನಿಗೆ ಸತ್ಯ . .. ತತ್ವದ ಬೋಧಕರಾಗಿದ್ದಾರೆ !

– ಶ್ರೀ ಹರಿ.

27-11-2014



www.sriharikhoday.com

# 819

ಒಪ್ಪುವುದು ಒಂದು ಘಳಿಗೆ
ಒಪ್ಪಿಕೊಂಡು ನಡೆಯುವುದು ಮತ್ತೊಂದು ಘಳಿಗೆ
ಮನದ ಒಪ್ಪಿಗೆಯೇ ಸೌಂದರ್ಯದ ಒಪ್ಪಿಗೆ
ಭಾವಕ್ಕೊಂದು ಘಳಿಗೆ ಕಾವ್ಯ ರಚನೆಗೂ ಘಳಿಗೆಗಳು

ಉಲ್ಲಾಸದ ಬಯಕೆಗಳಿಗೊಂದು ಘಳಿಗೆ
ಉಲ್ಲಾಸದ ಸಂಪಾದನೆಗೆ ಮತ್ತೊಂದು ಘಳಿಗೆ
ಸೌಂದರ್ಯವನ್ನು ಒಪ್ಪಿ ಸಂತಸಪಡುವುದೊಂದು ಘಳಿಗೆ
ಸೌಂದರ್ಯದ ಅನುಭವಗಳು ಅನೇಕ ಘಳಿಗೆಗಳು

ಭಗವತ್ ಚಿಂತನೆಯೇ ಅನೇಕ ಘಳಿಗೆಗಳು
ಯಾವುದು ಬೇಕು ಯಾವುದು ಬೇಡವೆಂಬ ಮನೋ ಗಣಿಕೆಗಳು
ತಪ್ಪನ್ನು ತಿದ್ದುಕೊಳ್ಳುವ ಘಳಿಗೆಗಳು
ಸರಳತೆಯ ಅಭ್ಯಾಸ ಮಾಡುವ ಘಳಿಗೆಗಳು

ಬೇಕು-ಬೇಡಗಳ ಮನೋ ಘಳಿಗೆಗಳು
ಜಿಜ್ಞಾಸಿಗಳು ತಮ್ಮ ಅನುಭವಗಳನ್ನು ತಾವೇ ವಿಚಾರಿಸಿಕೊಳ್ಳುವ
ಘಳಿಗೆಗಳು
ಸರಿ -ತಪ್ಪುಗಳ ಎರಡು ಮಾರ್ಗಗಳು
ಕಾಲ ಮನಸ್ಸಿಗೆ ಹಾಕುತ್ತಿರುವ ಸವಾಲುಗಳು



ಒಂದು ದೃಷ್ಟಿಯಿಂದ ಒಂದು ತರಹ
ಮತ್ತೊಂದು ದೃಷ್ಟಿಕೋನದಿಂದ ಇನ್ನೊಂದು ತರಹ
ಹೊತ್ತನ್ನು ಮರೆತು ಸೌಂದರ್ಯದಲ್ಲಿ ಬೆರೆತು
ಆನಂದ ಪಡೆಯುವ ಘಳಿಗೆಗಳು !

ಮನುಷ್ಯನ ಸ್ವಭಾವ ಹತ್ತಲ್ಲ. ನೂರಲ್ಲ. .ಸಾವಿರವಲ್ಲ
ಮನುಷ್ಯನಿಗೆ ಕೋಟಿ ಕೋಟಿ ಸ್ವಭಾವಗಳು
ಸಂದರ್ಭ ಬಂದ ಹಾಗೆ ಹೊಸ ರೂಪ ತಾಳುತ್ತಿರುವ
ಅನುಭವದ ಘಳಿಗೆಗಳು

ಅಂತರಂಗ ಚಲನೆ ಬಹಿರಂಗ ಚಾಲನೆ
ಅಂತಪೂರ್ಣರಾಗಿ ದೇವರಲ್ಲಿ ಬೆರೆತಿರುವ ಘಳಿಗೆಗಳು
ಅಮೂಲ್ಯ ಘಳಿಗೆಗಳು !

**- ಶ್ರೀ ಹರಿ.**

**28-11-2014**

www.sriharikhoday.com

## 820

ಶುದ್ಧವಾಗಿರುವ ಭಾವನೆಗಳನ್ನು
ಅಶುದ್ಧ ಮಾಡದಿದ್ದರೆ ಲೇಸು
ಶುದ್ಧ ಭಾವನೆಗಳಿಗೆ ಸಾಧನೆಗಳ ವರ್ಚಸ್ಸು ಬೇಕಿಲ್ಲದೆ
ಮನಸ್ಸಿನ ಪ್ರಭಾವದಿಂದ ಭಾವನೆಗಳು ಬದಲುತ್ತಿವೆ !

ಯೋಚಿಸದೆ ಎಂದೂ ಭಾವನೆಗಳಿಗೆ ಜನ್ಮ ನೀಡಕೂಡದು
ವಿಶ್ವವೇ ಶುದ್ಧ. .ಅದರ ಗುಣವೇ ಪರಿಶುದ್ಧ
ಅದರಲ್ಲಿರುವ ನೆರಳಿಗೆ ನೆರಳಾದ ನಮಗೆ
ಅಶುದ್ಧತೆಯೇ ಬೇಕಿಲ್ಲ

ಮಾನವ ತನ್ನ ಹಿರಿಮೆಯನ್ನು ಪ್ರಯತ್ನವಿಲ್ಲದೆ
ಸಾಧಿಸಲು ಯತ್ನಿಸುತ್ತಿರುವನು
ನೀರು ಎಂದೂ ನೀರಾಗಿ ಉಳಿಯುವಂತೆ
ಗಾಳಿ ಎಂದಿಗೂ ಗಾಳಿಯಾಗಿರುವಂತೆ

ಬೆಳಕು ಬೆಳಕಾಗಿ ಎಲ್ಲೆಲ್ಲೂ ಪ್ರಕಾಶಿಸುವಂತೆ
ನಮ್ಮ ಭಾವನೆಗಳೆಲ್ಲ ಪ್ರಕೃತಿಯ ಅಂಶಗಳಾಗಿ
ಶುದ್ಧ ಸ್ಥಾನದಲ್ಲಿ ಭಾವನೆಗಳು ವಿಹರಿಸಲಿ !

ಯೋಗ್ಯ ಜನಗಳು ಜೊತೆ ಯೋಗ್ಯ ರೀತಿಯ ಭಾವನೆ
ಯೋಗ್ಯ ಸಮಸ್ಯೆಗಳ ಜೊತೆಗೆ ಯೋಗ್ಯ ಉತ್ತರ ರೀತಿಯ ಸಾಧನೆ
ಯೋಗ್ಯ ರೀತಿಯಲ್ಲಿ ಸ್ವೀಕರಿಸಿ ಯೋಗ್ಯ ರೀತಿಯಲ್ಲಿ ವಿಸ್ತರಿಸಿ
ಯೋಗ್ಯ ಸಾಧನೆಗಳನ್ನು ಸಂಪಾದಿಸೋಣ !

**– ಶ್ರೀ ಹರಿ.**

**29–11–2014**



## 821

ಹಾಳೆಗಳ ಮಧ್ಯೆ ಅನುಭವಿಸದೇ ಇರುವ ಕಾವ್ಯಗಳು
ತೆರೆದು ನೋಡಿದಾಗಲೆಲ್ಲ ನವ ನವ ಭವ್ಯ ಭಾವನೆಗಳು
ಸುಳ್ಳಿಗೆ ಸಿಲುಕಿ ಸುಳಿಗೆ ಸಿಲುಕದೆ ತೇಲಿ ಹಾರುತ್ತಿರುವ
ಭಾವನೆಗಳು . .!

ಭಾವನೆ ತರ್ಜುಮೆ ಮಾಡಲಾಗದ ಭಾವನೆಗಳು
ಮೂಕನಿಗೂ ಭಾವನೆಗಳು. . ಕುರುಡನಿಗೂ ಭಾವನೆಗಳು
ಜ್ಞಾನಿಗೂ ಭಾವನೆಗಳು .. ತ್ಯಾಗಿಗೂ ಭಾವನೆಗಳು

ಬೆಳಕಿನ ಕಾರಣ ಹಣತೆ ಹಣತೆಗಳು ಉರಿಯುತ್ತಿದೆ
ಅವಶ್ಯದ ಕಾರಣ ಸ್ವಯಂ ಪ್ರೇರಣೆ ಬೆಳಕು
ಬೆಳಕನ್ನು ನೀಡುತ್ತಲೇ ಇದೆ !

ಯೋಚಿಸುವಾಗ ಯೋಚನೆಯಲ್ಲಿ ಮಗ್ನನಾಗಿರುವಾಗ
ಹಳೆಯದು . .ಹೊಸದಲ್ಲ. .
ಎಲ್ಲವೂ ದಿವ್ಯ ತೇಜಸ್ಸಿನಿಂದ ಆಕರ್ಷಿಸಿ ಜೊತೆ
ಸೇರಿಸಿಕೊಳ್ಳುವುದು !

ಕಹಿ ಎಂದೂ ಸಿಹಿಯಾಗಿರುವುದಿಲ್ಲ
ಪ್ರೀತಿಯೆಂಬ ಸಿಹಿ ಸವಿಯುತ್ತಿದ್ದರೆ
ಪುಟದ ಪುಟಗಳಲ್ಲಿ ಅಡಗಿರುವ ರಸಿಕ ಕವಿತೆಗಳು

www.sriharikhoday.com

ಅನುಭವಿಸು . .ಅನುಭವಿಸು ಸುಖಪಡು
ನನ್ನಲ್ಲಿ ಅಡಗಿರುವ ರಸಿಕತೆಯ ಸವಿಯನ್ನು
ಚಪ್ಪರಿಸಿಕೊಂಡು ಚಪ್ಪರಿಸುತ್ತಾ

ಚಪ್ಪರಿಸಿ ತುಟಿಯನ್ನು ಅನುಭವಿಸುತ್ತ
ಸಮಭಾವಗಳ ಜೋಡಣೆಯಲ್ಲಿ
ಕಾಲದ ಕನ್ನಡಿಯಲ್ಲಿ ನೋಡಿ ಅನುಭವಿಸೋಣ !

ಜಾಣ್ಮೆಯಿಲ್ಲದ ಬಾಳು ಬಾಳೋಣ
ಇಬ್ಬರ ಚೆಲುವಿನ ಒಲುಮೆಯಲ್ಲಿ
ಬೆರೆತು ಕಳೆದುಹೋಗೋಣ !

**– ಶ್ರೀ ಹರಿ.**

**02–12–2014**



# 822

ಆನಂದದಿ ನಿನ್ನ ಕಣ್ಣಲ್ಲಿ ತುಂಬಿಕೊಂಡಿರುವ ತಾರೆಗಳನ್ನು
ಹಿಡಿಯಲು ಬಯಸಲಾ . . ?
ಶುದ್ಧವಾದ ನಿನ್ನ ಪ್ರೀತಿಯನ್ನು . .ನನ್ನ ಪ್ರೇಮವನ್ನು ಬೆರೆಸಿ
ನೀ ನನ್ನವಳೆಂದು ಹೇಳಲಾ. . .!

ಆನಂದದಲಿ ಮಿನುಗಿ ಹೊರ ಬಿಂಬಿಸುತ್ತಿರುವ
ನಿನ್ನ ರೂಪವನ್ನು ನನ್ನದು ಎನ್ನಲಾ . .?
ನಿನ್ನ ಅಂಗಾಂಗಗಳ ನನ್ನ ದೃಷ್ಟಿ ನೋಡುತಾ . .ನೋಡುತಾ
ನಿನ್ನಲ್ಲೇ ಕಳೆದುಹೋಗಿ ಅದು ನಿನ್ನಲ್ಲಿ ಎಲ್ಲಿದೆ ಎಂದು
ಹುಡುಕಲಾ . .?

ಬುದ್ಧಿವಂತಿಕೆ ಇಲ್ಲದ ಪ್ರೀತಿ–ಪ್ರೇಮಗಳು
ನಿನ್ನ ಮನದಾಳದಲ್ಲಿ ನಾಚಿ ನಿನ್ನ ಮನದ ಸೆರೆಯಾಗಿದೆಯಾ . .?
ಒಬ್ಬರೊಬ್ಬರ ಆನಂದದ ಬಯಕೆ ನಮ್ಮಿಬ್ಬರಲ್ಲಿ ರಸಿಕತೆ ಜಾರಿ
ನಾವಿಬ್ಬರೂ ಪ್ರೇಮಿಗಳು ಎನ್ನಲಾ . . !

ರಸಿಕತೆಗೆ ಬೇಕಾದ ಗುಣಗಳು
ಜೋಡಿಯಾಗಿ ಬಾಳುವ ಗುಣಗಳು
ನಮ್ಮಿಬ್ಬರಲ್ಲಿ ದೈವಾಂಶದ ಕಣಗಳಿಂದ
ಹೋಲಿಸಿ ಜೊತೆ ಮಾಡಿದೆಯಾ . .?

www.sriharikhoday.com

ನಮ್ಮ ಬರೀ ನೋಟದಲ್ಲಿ ಕಾಲ ಕಳೆಯದೆ
ದೈವರೂಪಿಯಾದ ಆನಂದದ ಜೊತೆಗೆ ಜೊತೆಯಾಗೋಣವಾ . .
ನನ್ನ ಕರೆಯೋ . ಮನೋರೋಧನೆಯೋ . .ಅಪೇಕ್ಷೆಯೋ
..ಆಸೆಯೋ
ತಿಳಿಯದೆ ನೀ ನನ್ನ ಜೊತೆ ಮಾತ್ರ ಸತ್ಯ ಎಂದು ನಂಬಿರುವ ನನಗೆ

ಉಲ್ಲಾಸದಿಂದ ಓಡೋಡಿ ಬಂದು
ನನ್ನ ಜೊತೆಗೆ ಬೆರೆತುಕೊಳ್ಳಬೇಕಿದೆ !

ಹೆ ಪ್ರೇಯಸಿಯೇ.. ನಿನ್ನ ಪ್ರೇಮದ ಕಣ್ಣೀರಿನಲ್ಲಿ
ಕಣ್ಣೀರಿನ ಹನಿ ಹನಿಗಳಲ್ಲಿ
ಪ್ರತಿಬಿಂಬಿಸುತ್ತಿರುವ ನಿನ್ನ ರೂಪ
ನನ್ನ ಜೊತೆ ಜೊತೆಯಾಗಿಸೋಣ ಬಾ . . !

**– ಶ್ರೀ ಹರಿ.**

**03–12–2014**



## 823

ಒಂಟಿತನ ಆನಂದವನು ಅನುಭವಿಸಬಹುದಾ . . ?
ಸಮುದ್ರ ಅಲೆಗಳಿಲ್ಲದೆ ಬಾಳಬಹುದಾ . . ?
ಹೂವು ಸ್ವಾದವಿಲ್ಲದೆ ಇರಬಹುದೇ . . ?
ಆಕಾಶ ನೀಲಿ ಬಣ್ಣ ಚಿಮ್ಮದೆ ಇರುವುದಕ್ಕಾಗುವುದಾ . . ?

ಹಗಲು ಸೂರ್ಯನಿಲ್ಲದೆ ಹಗಲಾಗುವುದಾ . .?
ಸರಿ ಬಾಳಿಲ್ಲದೆ ಧರ್ಮ ಬಾಳುವುದೇ . . ?
ಅಕ್ಷರಗಳಿಲ್ಲದೆ ಪದಗಳು ಕಾವ್ಯವಾಗುವುದೇ .
ಕಥಾನಾಯಕನಿಲ್ಲದಿದ್ದರೆ ಕಥೆ ರೂಪ ಪಡೆಯಬಹುದೇ . .!

ಪವಿತ್ರ ಪ್ರೀತಿಯು ಮನದಲ್ಲಿರದಿದ್ದರೆ ಪ್ರೇಮ ಹರಿಯುವುದೇ ..?
ಅನುಭವದ ಅರ್ಥ ತಿಳಿಯದಿದ್ದರೆ ಆನಂದವನ್ನು
ಪಡೆಯಲಾಗುವುದಾ . . ?
ಜೊತೆ ಆಧಾರವಿಲ್ಲದೆ ಒಂದು ಉಗಮವಾಗುವುದಾ . . ?
ವಿಶ್ವದಲ್ಲಿ ಒಂದೇ ಒಂದಾಗಿರುವುದು ಹುಡುಕಿದರೆ ಸಿಗಬಹುದಾ..?

ಜೊತೆ ಜೊತೆಯಲ್ಲಿ ಇಲ್ಲದಿರುವುದು ಪ್ರಕೃತಿ ಎನ್ನಬಹುದಾ . .?
ಒಂಟಿಯಾಗಿರುವ ದೇವರಿಗೆ ನಾವು ಸೇರದೇ ಇದ್ದರೆ
ದೇವರು ದೇವರಾಗಬಹುದಾ . . ? ಒಂದೇ ಬಾಳು ಬಾಳೆಲ್ಲ
ಅನೇಕ ಹೂವುಗಳು ಇಲ್ಲದಿದ್ದರೆ ದೇವರಿಗೆ ಹೂಮಾಲೆ
ಆಗುವುದಿಲ್ಲ



www.sriharikhoday.com

ಅನೇಕ ಅಕ್ಷರಗಳಿಂದ ಕಾವ್ಯಗಳು, ಅನೇಕ ಪದಗಳಿಂದ ವೇದಗಳು
ಅನೇಕ ವೇದಗಳಿಂದ ಸೃಷ್ಟಿಯ ಅರಿವು
ಒಂಟಿತನವು ಎಂದೆಂದಿಗೂ ಆನಂದವನ್ನು ಅನುಭವಿಸುವುದಿಲ್ಲ
ಒಂಟಿತನದಿಂದ ಸತ್ಯವನ್ನು ಅರಿಯಲಿಕ್ಕಾಗುವುದಿಲ್ಲ

ದೇವರಿಲ್ಲದೆ ನಾವು ಬಾಳುವುದಕ್ಕಾಗುವುದಿಲ್ಲ
ಬಿಂಬ ಪ್ರತಿಬಿಂಬಗಳಿಲ್ಲದಿದ್ದರೆ ಕನ್ನಡಿ ಎನಿಸಿಕೊಳ್ಳುವುದಿಲ್ಲ !
ಸುಖ ದುಃಖಗಳಿಲ್ಲದಿದ್ದರೆ ಜೀವನವೇ ಅಲ್ಲ
ನಮ್ಮ ಅನುಭವಗಳಿಲ್ಲದಿರೆ ನಮ್ಮ ನೆನಪುಗಳಿಲ್ಲದಿರೆ
ಒಂಟಿಯಾಗಿರುವ ಕಾಲ ಇರುತ್ತಿರಲಿಲ್ಲ.

ಒಂಟಿಯಾಗಿರುವ ಶೂನ್ಯ ತನ್ನ ಇರುವಿಕೆಗಾಗಿ
ಕ್ಷಣ ಕ್ಷಣಗಳಲ್ಲಿ ತರಂಗಗಳ ಜೊತೆಗೆ ಜೀವಿಸುತ್ತಿದ್ದರೆ
ಏನೂ ಇಲ್ಲದ ಮರಳುಗಾಡಿನಲ್ಲಿ
ನಾನು ಒಂಟಿಯಾಗಿರದೆ . .ದೇವರು ನನ್ನ ಜೊತೆಗಿರುವನು!

**– ಶ್ರೀ ಹರಿ.**

**05–12–2014**



## 824

ಪೀಠದ ಮೇಲೆ ನಾವು ಕೂರಬೇಕು
ಪೀಠದ ಮೇಲೆ ನಾ ಅಲಂಕೃತವಾಗಬೇಕು
ಎತ್ತರದ ಪೀಠದಿಂದ ಎಲ್ಲರನ್ನೂ ನಾ ಕೆಳಗೆ ನೋಡಬೇಕು
ಎತ್ತರದ ಪೀಠದಲ್ಲಿ ಇರುವ ನನ್ನನ್ನು ಎಲ್ಲರೂ ತಲೆ ಎತ್ತಿ
ನೋಡಬೇಕು !

ಪೀಠದ ಮೇಲೆ ಕಷ್ಟಗಳು ಕಾಡುತ್ತಿದ್ದರೂ ನಾ ನಗುತ್ತಲೇ
ಇರಬೇಕು

ಪೀಠಕ್ಕೆ ನೀಡುತ್ತಿರುವ ಪರಾಕುಗಳು . ಶ್ಲಾಘನೆಗಳು
ಎಲ್ಲರೂ ತಲೆತಗ್ಗಿಸಿ ಎತ್ತರದಲ್ಲಿ ಕುಳಿತಿರುವ ನನಗೆ
ಎಂದೆಂದಿಗೂ ನನ್ನ ಜೊತೆ ಜನಗಳಿದ್ದು
ದಿಗಂತಗಳಿರುವ ನನ್ನ ಸಾಮ್ರಾಜ್ಯ ನನ್ನ ಜೊತೆ ಇರಬೇಕು !

ಪೀಠದ ಮೇಲೆ ಕುಳಿತು ಬೇರೆಯವರ ತೊಂದರೆ
ತೊಂದರೆ ಜೊತೆ ಜೊತೆಗೆ ಇರುವ ದ್ವೇಶದ ಪ್ರತೀಕಾರ
ಮೇಲೆ ಎತ್ತರವನ್ನು ಹೆಚ್ಚಿಸಲು ಕಷ್ಟವಾಗಿರುವ ದ್ವೇಶದ ಕಿರೀಟ
ಜನಗಳಿಗೆ ನನ್ನನ್ನು ದೇವರ ರೂಪದಲ್ಲಿ ನೋಡಬೇಕೆಂಬ ಆಸೆ !

ದ್ವೇಶಗಳು ಹೆಚ್ಚುತ್ತಾ . . ಹೆಚ್ಚಿಸಿಕೊಳ್ಳುತ್ತಾ ಪೀಠದಿಂದ ನನ್ನನ್ನು
ಇಳಿಸಲು ಸಾಲು ಸಾಲು
ಆ ಸಾಲಲ್ಲಿ ನಾನು ಹೆಚ್ಚು .. ನೀನು ಕಡಿಮೆ ಎಂದು
ಶಪಿಸುತ್ತಿರುವರು

www.sriharikhoday.com

ಮೇಲ್ನೋಟಗಳಿಂದ ಜನಗಳ ಸಮೂಹ . .ಅನೇಕ ಪಂಗಡಗಳು
ಪಟ್ಟಕ್ಕೆ ಅವಕಾಶ ಕೊಟ್ಟಿರುವ ತಾವುಗಳೇ ನಮಗೇ ಬೇಕೆಂಬ

ಕೂಗಲಾಗದ ಮನೋ ಸಂಚು, ಕಣ್ಣಿಗೆ ಕಾಣದ ಪಟ್ಟದ ಪ್ರಭಾವಕ್ಕೆ
ಪಟ್ಟದ ಆಟಕ್ಕೆ ತಾವು ಜಯ ಘೋಷಿಸಿ ತನಗೆ ಪೀಠ ಹತ್ತಿ
ಕೂರುವ ಆಸೆ

ಕಣ್ಣಿಗೇ ಕಾಣದಿರುವ ಪೀಠದಲ್ಲಿ ಅಡಗಿರುವ ಜೀವ ಮರ್ಮ
ಎಂದಿಗೂ ಹೊಸ ಅನುಭವ ಪಡೆಯಲು ಮರ್ಮಕ್ಕೆ ಆಸೆ

ಪಟ್ಟದ ಮೇಲೆ ಕುಳ್ಳಿರಿಸುವುದು . .ಕೆಳಗಿಳಿಸುವುದು ಮತ್ತೊಬ್ಬನನ್ನು
ರಚಿಸುವುದು
ಅನೇಕ ಭಾವನೆಗಳ ತೆರೆಗಳ ಹಿನ್ನೆಲೆಗಳು ಹೊಸ ಹೊಸದು ಬೇಕು,
ಪೀಠ ಜನಗಳಲ್ಲಿ
ಪೀಠದಲ್ಲಿ ಮರ್ಮವಾಗಿ ಕುಳಿತಿರುವ ಜೀವ ಮರ್ಮ
ಜನಗಳ ಜೊತೆ ಪೀಠದ ಜೊತೆ ಆಸೆಪಡುವ ಆಟ.

– ಶ್ರೀ ಹರಿ.

12–12–2014



www.sriharikhoday.com

## 825

ಹೋಗೋಣ ಬಾರೇ. .ನೋಡೋಣ ಬಾರೆ
ಆನಂದವ ನೋಡಿ ಬೆರೆಯೋಣ ಬಾರೆ . . !

ಪ್ರೀತಿ–ಪ್ರೇಮಗಳು ನಮಗೆ ಕೈಕಾಲುಗಳಾಗಿ
ನಡೆದು ನಡೆದು ಆನಂದವ ನೋಡಿ
ಅಪ್ಪಿಕೊಳ್ಳೋಣ ಬಾರೆ . . .!

ನಾನು ನೀನು ಮರೆತು ಆನಂದದಲ್ಲೇ ಬೆರೆತು
ದೈವತ್ವದಲ್ಲಿ ಬೆರೆತಿರುವ ದೇವರನ್ನು
ಅಪ್ಪಿಕೊಳ್ಳೋಣ ಬಾರೆ . .!

ಬಾರೆ ಬಾರೆ . . ಓಡೋಡಿ ಹೋಗೋಣ
ಆನಂದದಲ್ಲಿ ಬೆರೆಯೋಣ ಬಾರೆ . . .!

ನಮ್ಮಲ್ಲಿ ಜೊತೆಗಿರುವ ನಾನು ನನ್ನದು
ನಮ್ಮ ಜೊತೆ ಜೊತೆಯಿರುವ ಅವನದು ಅವರದು
ನಮ್ಮನ್ನು ನಾವೇ ಕಳೆದುಹೋಗುವ ಆನಂದದಲ್ಲಿ
ನೋಡಿ ಬೆರೆಯೋಣ ಬಾರೆ !

ಸರಿಯಿಲ್ಲ ಎಂದು ಹೇಳಲಾಗದ ಬೇಕು ಬೇಡದ ಎಲ್ಲವೂ
ಯಥೇಚ್ಛೆಯಲ್ಲಿರುವ ತುಂಬಿತುಳುಕುತ್ತಿರುವ ಆನಂದದ ಬಣ್ಣಗಳಲ್ಲಿ
ನಾವೇ ಬಣ್ಣಗಳ ತರಂಗಗಳಾಗೋಣ ಬಾರೆ !

ಬಾರೇ. .ಬಾರೇ . ಹೋಗೋಣ ಬಾರೇ. . .
ಸತ್ಯದ ಅಮಲು ಆನಂದದಲ್ಲಿ ಬೆರೆಯೋಣ ಬಾರೇ. .!

ಯಾವ ತಂತ್ರಗಳಿಲ್ಲದ ಯಾವ ಗಂಟುಗಳೂ ಇಲ್ಲದ
ಜೊತೆ ಸೇರಿಕೊಳ್ಳುವ ನೆಂಟಸ್ತನದಲ್ಲಿ ಬೆರೆತು
ಹರುಷ ಪಡೆಯಲು

ಹರುಷ ಪಡೆದು ಆನಂದದಲ್ಲಿ ಬೆರೆತುಕೊಳ್ಳಲು
ದೈವತ್ವದಲ್ಲಿ ಬೆರೆತು ಮರೆತುಹೋಗಿರುವ
ದೇವರ ಜೊತೆ ಬೆರೆಯಲು

ಹೋಗೋಣ ಬಾರೆ . ನೋಡೋಣ ಬಾರೆ
ನೋಡಿ ಅನುಭವಿಸೋಣ ಬಾರೆ !

**– ಶ್ರೀ ಹರಿ.**

**15–12–2014**



**826**

ನನ್ನ ಮನಸ್ಸಿನ ಕುದುರೆಯೇ
ನನ್ನ ಪ್ರೀತಿಯ ಹಾದಿಯನ್ನು ತಪ್ಪಿಸಬೇಡ
ನಿನ್ನ ರಭಸದ ಹೆಜ್ಜೆಗಳು ನನ್ನ ಮನದ ಗೆಜ್ಜೆಯ ಸದ್ದಾಗಿ
ನನಗೋಸ್ಕರ ಕಾಯುತ್ತಿರುವ ನನ್ನವರಿಗೆ ನಿನ್ನ ಗೆಜ್ಜೆಸದ್ದು
ಕೇಳಿಸುತ್ತಿದೆ.

ನನ್ನನ್ನು ಕರೆದೊಯ್ಯಲು ತಡ ಮಾಡಬೇಡ ಮನಸ್ಸೇ
ಒಂಟಿಯಾಗಿ ಅವರ ಕಣ್ಣುಗಳು ನನಗಾಗಿ ಕಾಯುತ್ತಿವೆ
ಎತ್ತರ ತಗ್ಗುಗಳಿರುವ ಮನೋ ಪ್ರದೇಶದಲ್ಲಿ ನನ್ನನ್ನು ನಾಜೂಕಾಗಿ
ಹೊಯ್ಯಿ. ಅವರಿಗಾಗಿ ಹಾಡೊಂದನ್ನು ಕಲ್ಪಿಸಿಕೊಂಡಿರುವೆ.

ಸಂಗೀತ ವಾದ್ಯ ಕೈಯಲ್ಲಿ ಪಿಡಿದು ಅವರೆದುರಿಗೆ ಹಾಡಿ
ನನ್ನ ಪ್ರೀತಿಯನ್ನು ಅವರಿಗೆ ಒಪ್ಪಿಸಿ, ನಿಶೆಯ ಬಟ್ಟಲನ್ನು
ಇಬ್ಬರೂ ಜೊತೆ ಸೇವಿಸಿ ಪ್ರೀತಿ ತಬ್ಬಿನಲ್ಲಿ ಮುತ್ತಿಡುತ್ತಾ
ಒಲವಿನ ದಿಗಂತದಲ್ಲಿ ಜೊತೆ ನೋಡುತ್ತಾ ಬೆರೆಯುತ್ತಾ,
ಮಾತಾಡದೆ
ಕಣ್ಣಿಂದ ಕಣ್ಣುಗಳನ್ನು ನೋಡುತ್ತಾ, ರೂಪವನ್ನು ಮೆಚ್ಚಿಕೊಳ್ಳುತ್ತಾ .

ಮನಸ್ಸಿನ ಕುದುರೆಯಿಂದ ಕೆಳಗಿಳಿದು, ಸಂಬಂಧಗಳ ವಿಶ್ವ
ರಹಸ್ಯದಲ್ಲಿ

www.shrikhoday.com

ಬೆರೆತುಹೋಗಿ ಜೀವನವೇ ಒಂದು ರಹಸ್ಯ
ಮನದ ಅಂತಃರಾಳದಲ್ಲಿ ಬಚ್ಚಿಟ್ಟುಕೊಂಡಿರುವ ಜೀವ ರಹಸ್ಯ
ಕೊನೆಯವರೆಗೂ ನಮ್ಮಲ್ಲೇ ಬಚ್ಚಿಟ್ಟುಕೊಂಡಿರುವೆವು.

ನಾನು ಸರಿಯಾದ ರೂಪವತಿ ಅಲ್ಲದಿದ್ದರೂ ದೈವ ಭಾವನೆವುಳ್ಳ
ನಮ್ಮವರು ನನ್ನ ರೂಪವನ್ನು ಮೆಚ್ಚಿ ನನ್ನ ರೂಪ
ಹೆಚ್ಚಿಸುತ್ತಿರುವುದನ್ನು
ನೋಡಿದರೆ ಅವರ ಕಣ್ಣುಗಳು ನನಗೆ ವಿಶ್ವಸುಂದರಿಯಾಗಿಸಿ
ಹರುಷದಿಂದ ನನ್ನ ಮುಖವನ್ನು ಚಂದಿರನಿಗೆ ಹೋಲಿಸುತ್ತಿರುವರು
ಅಸತ್ಯವನ್ನು ಸತ್ಯ ಮಾಡುವ ಶಕ್ತಿ ಪ್ರೀತಿ ಪ್ರೇಮದಲ್ಲಿ ಅಡಗಿದೆ

ಹೇ ಮನದ ಕುದುರೆಯೇ ಎಂದಿಗೂ ನೀನು
ಜಾಗ್ರತೆಯಿಂದ ಮನದ ಗಡಿಗಳನ್ನು ದಾಟಿಸು

**– ಶ್ರೀ ಹರಿ.**

**15–12–2014**



## 827

ಹುಟ್ಟಿದ ಮೇಲೆ ಹೆಸರು ಪಡೆಯಬೇಕು
ಹುಟ್ಟಿದ ಮೇಲೆ ಒಳ್ಳೆಯ ಕೆಲಸಗಳನ್ನು ಹುಡುಕುತ್ತಲೇ ಇರಬೇಕು
ಹುಟ್ಟಿದ ಮೇಲೆ ಆರೋಗ್ಯ ಗಳಿಸಿಕೊಳ್ಳಬೇಕು
ಹುಟ್ಟಿದ ಮೇಲೆ ನಾನು ನನ್ನದೆಂಬ ಅಹಂಕಾರ ಮರೆಯಬೇಕು !

ಹುಟ್ಟಿದ ಮೇಲೆ ಎಲ್ಲರಿಗೂ ಶಾಂತಿ ನೀಡಬೇಕು
ಹುಟ್ಟಿದ ಮೇಲೆ ಬೇರೆಯವರ ಸಂತೋಷ ನೋಡಬೇಕು
ಹುಟ್ಟಿದ ಮೇಲೆ ನಮ್ಮನ್ನು ಪ್ರೀತಿಸುವವರನ್ನು ಗಳಿಸಿಕೊಳ್ಳಬೇಕು
ಹುಟ್ಟಿದ ಮೇಲೆ ಅರ್ಥವಿಲ್ಲದ ದ್ವೇಷ ದೂರವಿಡಬೇಕು !

ಹುಟ್ಟಿದ ಮೇಲೆ ನಮ್ಮನ್ನು ಪ್ರೀತಿಸುವ ಒಂದು ಹೆಣ್ಣಿರಬೇಕು
ಹುಟ್ಟಿದ ಮೇಲೆ ಸಮಯ ದೊರಕಿದಾಗ ಅವಳ
ನೆನಪಿಸಿಕೊಳ್ಳುತ್ತಲಿರಬೇಕು
ಹುಟ್ಟಿದ ಮೇಲೆ ನಮ್ಮನ್ನು ಮರೆಸುವ ನಿಶೆಯಲ್ಲಿ ಬೆರೆಯಬೇಕು
ಹುಟ್ಟಿದ ಮೇಲೆ ಬದಲಾಗುತ್ತಿರುವ ಪ್ರಪಂಚದ ಜೊತೆ
ಬೆರೆತುಕೊಳ್ಳಬೇಕು !

ಹುಟ್ಟಿದ ಮೇಲೆ ನಗುತ್ತಾ ನಗುತ್ತಾ. .ನಗಿಸುತ್ತಾ ನಗಿಸುತ್ತಾ ಇರಬೇಕು
ನೇರ ಕಣ್ಣೋಟಗಳಲ್ಲಿ ಬೆರೆತು ಜೊತೆ ಕಟ್ಟಿಕೊಳ್ಳಬೇಕು
ಹುಟ್ಟಿದ ಮೇಲೆ ವಿದ್ಯೆಗೋಸ್ಕರ ಗುರು ಇರಬೇಕು
ಹೆಜ್ಜೆ ಹೆಜ್ಜೆಗೂ ಸಾಧನೆಗೆ ಹೊಸ ಹೆಜ್ಜೆ ಇಡುತ್ತಲೇ ಇರಬೇಕು !

www.sriharikhoday.com

ಆಕಾಶ ನೋಡಿದಾಗಲೆಲ್ಲ ಮಳೆರಾಯನಿಗೆ ಕೆಳಗೆ ಬಾ ಎಂದು
ಕರೆಯುತ್ತಲಿರಬೇಕು
ಹುಟ್ಟಿದ ಮೇಲೆ ಕಳಕಳಿಯ ಲೆಕ್ಕಾಚಾರವಿಲ್ಲದ ಮುಗ್ಧ ಭಾವನೆಯ
ಮಾತುಗಳನ್ನೇ ಆಡಬೇಕು
ಹುಟ್ಟಿದ ಮೇಲೆ ಬೇರೆಯವರನ್ನು ನೋಡಿ ಧೈರ್ಯ ತುಂಬಿಕೊಳ್ಳಬೇಕು
ಹುಟ್ಟಿದ ಮೇಲೆ ಮುಂದೆ ಹಾಕಿದ ಕಾಲು ಹಿಂತೆಗೆದುಕೊಳ್ಳಕೂಡದು !

ಹುಟ್ಟಿದ ಮೇಲೆ ಬುದ್ಧಿಗೆ ಸಿಹಿ ನೀಡಲು ಹಾಡುತ್ತಲೇ ಇರಬೇಕು
ಹುಟ್ಟಿದ ಮೇಲೆ ದೇಹಶಕ್ತಿ ಜೊತೆಗೆ ಜಾಣ್ಮೆಯನ್ನು ಬೆರೆಸಿಕೊಳ್ಳಬೇಕು
ಹುಟ್ಟಿದ ಮೇಲೆ ಸಾಯುತ್ತೇನೆಂಬ ಹೆದರಿಕೆ ಇರಕೂಡದು
ಹುಟ್ಟಿದ ಮೇಲೆ ಕ್ಷಣ ಕ್ಷಣದಲ್ಲೂ ಜ್ಞಾನವಿಕಾಸದ ಹಾದಿಯಲ್ಲಿ
ಮನ ನಡೆಯಬೇಕು !

ಹುಟ್ಟಿದ ಮೇಲೆ ಸ್ವಾತಂತ್ರ್ಯವೆಂಬ ತಂಗಾಳಿಯನ್ನು ಸೇವಿಸುತ್ತಲೇ
ಇರಬೇಕು
ಹುಟ್ಟಿದ ಮೇಲೆ ತಾಪತ್ರಯ ಗೋಳಾಟ ಮನೋವ್ಯಥೆಗಳಿಲ್ಲದೆ
ಬಾಳಬೇಕು
ಹುಟ್ಟಿದ ಮೇಲೆ ಬೇಕಾದಷ್ಟು ಜೊತೆ ಮಾಡಿಕೊಂಡು ಹೆಚ್ಚಿರುವುದು
ಹಂಚಿಕೊಳ್ಳಬೇಕು

ಹುಟ್ಟಿದ ಮೇಲೆ ದಿನವೂ ಕನ್ನಡಿಯಲ್ಲಿ ನೋಡಿ
ನಾನು ಸುಂದರವಾಗಿರುವೆನೆಂದು ನಮ್ಮ ಸೌಂದರ್ಯವನ್ನು ನಾವೇ
ಮೆಚ್ಚಿಕೊಳ್ಳಬೇಕು
ಹುಟ್ಟಿದ ಮೇಲೆ ಈ ಜಗತ್ತಿನಲ್ಲಿ ಯಾರೂ ಕಮ್ಮಿ ಇಲ್ಲ ಯಾವುದೂ
ಜಾಸ್ತಿ ಇಲ್ಲ
ಹುಟ್ಟು ಬರೀ ಹುಟ್ಟಾಗಿಯೇ ಇರಬೇಕು .

**– ಶ್ರೀ ಹರಿ.**

**16–12–2014**



## 828

ಹೇ ಪ್ರಿಯೇ ನನ್ನ ಮೇಲೆ ಏಕೆ ಕೋಪ
ನನ್ನಲ್ಲಿ ಏನಾದರೂ ತಪ್ಪನ್ನು ಕಂಡೆಯಾ
ನನ್ನ ನಗು ಮುಖ ತೋರಿಸೋಣವೆಂದರೆ
ಕೋಪದಿಂದ ಏಕೆ ದೂರವಿರುವೆ.

ಈ ನಡುವೆ ನಿನ್ನನ್ನು ಬಿಟ್ಟು ದೇವರ ಜೊತೆ ಹೆಚ್ಚು ಕಾಲ
ಕಳೆಯುತ್ತಿರುವೆ ,
ಕೋಪ ಮಾಡಬೇಡ, ಇಂದು ನಾವು ದೇವರ ಜೊತೆಗೆ ಜೊತೆ
ಸೇರೋಣ
ನೀ ಮಾಡಿರುವ ಹೊಸ ದ್ರಾಕ್ಷಾರಸ ನಾವು ಜೊತೆ ಕುಡಿದು
ದೇವರಿಗೆ ಆನಂದದ ಅಮಲ ನೀಡೋಣ
ಏನೂ ತಿನ್ನದೆ ಮುನಿಸಿಕೊಂಡಿರುವ ನೀನು ಈ ಹಣ್ಣುಗಳನ್ನು
ಸೇವಿಸು.

ನೀ ಹಾಕಿಕೊಂಡಿರುವ ಬಟ್ಟೆಯ ಕಸೂತಿ ಚೆಂದವಾಗಿದೆ
ಅಡ್ಡಪಡಿಸಿರುವ ನಿನ್ನ ಕೇಶರಾಶಿಯನ್ನು ಬದಿಗೆ ತಳ್ಳಿ ನೇರವಾಗಿ
ನನ್ನ ಕಣ್ಣಿಗೆ ನೋಡು, ಸಂಗೀತದ ಸದ್ದನ್ನು ಮಾಡೋಣ
ಪಕ್ಕದಲ್ಲಿರುವವರಿಗೆ ಜೊತೆ ಸೇರಿಸಿಕೊಳ್ಳೋಣ
ಅವರಿಗೂ ನಮ್ಮ ಸುಖದಲ್ಲಿ ಭಾಗ ನೀಡೋಣ
ಉಲ್ಲಾಸದಲ್ಲಿರುವ ಋತುಗಳ ಜೊತೆಗೆ ಸಂಜೆಯವರೆಗೂ ಕಾಲ
ಕಳೆಯೋಣ

www.sriharikhoday.com

ಪಕ್ಕದ ತೋಟದವರು ನಮ್ಮ ಜೊತೆ ಊಟ ಮಾಡಲು
ಭಕ್ಷ್ಯವ ತರುವೆವು ಎಂದಿರುವರು, ಹಸನ್ಮುಖಿಳಾಗಿ
ಓರೆಗಣ್ಣಿನ ನೋಟದಿಂದ ನೋಡಿ ಅಂಜುತ್ತಿರುವ ತುಟಿಗಳಿಂದ
ಮುಗುಳ್ನಗು ಸೂಸುತ್ತಾ ಹತ್ತಿರ ಬಾ ಪ್ರಿಯೆ
ಭಾಷೆಯ ನೀಡು ಎಂದಿಗೂ ಮುನಿಸಿಕೊಳ್ಳುವುದಿಲ್ಲ
ಭಾಷೆಯ ನೀಡು ಎಂದೆಂದಿಗೂ ನಗುತ್ತಲೇ ಇರುವೆನೆಂದು
ಭಾಷೆಯ ನೀಡು ನನ್ನ ಮನಕ್ಕೆ ಎಂದೆಂದಿಗೂ ದುಃಖ
ಕೊಡನೆಂದು

ಇಂದು ನಿನಗೆ ಭಾಷೆ ನೀಡುವೆ ನಾ ಎಂದೆಂದಿಗೂ ನಿನಗೆ
ಕಾಯಿಸಲಾರೆ ಎಂದು, ಬಾ ಪ್ರಿಯೆ ರುಚಿಕರವಾದ
ದ್ರಾಕ್ಷಾರಸವನು ಸೇವಿಸೋಣ, ನಮ್ಮ ಜೊತೆ ಜೊತೆ ಕೂಡಿ
ಖುತುಗಳಿಗೆ ಹಿಗ್ಗನ್ನು ತರಿಸೋಣ, ನಾವೆಲ್ಲವನ್ನು ಮರೆತು
ಸುಖದಲ್ಲಿ ಬೆರೆತು ನಮ್ಮ ಜೊತೆ ಸಹಪಾಠಿ
ದೇವರ ಆನಂದದದಲ್ಲಿ ಬೆರೆತು, ಆನಂದವ ಅನುಭವಿಸೋಣ

**– ಶ್ರೀ ಹರಿ.**

**16–12–2014**



# 829

ದೊರಕಿತು ದೊರಕಿತು ಇಂದು ನನಗೆ ದೊರಕಿತು
ಎಂದೂ ಕಾಣದ ಭಾಗ್ಯ ದೊರಕಿತು
ಎಂದೂ ಪಡೆಯದ ಆನಂದ ದೊರಕಿತು
ಇಂದು ನಮಾಜಿನಲ್ಲಿ ನನಗೆ ದೇವರ ಜೊತೆ ಆನಂದ ಭಾಗ್ಯ
ದೊರಕಿತು
ದೊರಕಿತು ದೊರಕಿತು ಹೊಸ ಅನುಭವ ದೊರಕಿತು !

ನನ್ನವಳು ಮಾಡಿದ ದ್ರಾಕ್ಷಾರಸ ಕುಡಿದು ಬಂದ ಅಮಲಿನಲ್ಲಿ
ಅದೇ ಅನುಭವ ಬಂದಿತು ನಾ ಎಂದಿಗೂ ಒಂಟಿಯಾಗಿಲ್ಲ
ಈಗ ಜೊತೆ ಜೊತೆಗೆ ಅನುಭವಿಸಿದ ದೇವರ ಅನುಭವ
ಜೊತೆ ಜೊತೆಗೆ ನೆರಳಾಗಿ ದೇವರ ನೆರಳು ನನ್ನಲ್ಲಿ ಬೆರೆಯಿತು !

ಕುಳಿತು ನಮಾಜು ಮಾಡುವಾಗ ಆಕಾಶದಲ್ಲಿ ಹಕ್ಕಿಯ ಗುಂಪನ್ನು
ನೋಡಿದೆ
ಹಕ್ಕಿಗಳ ಜೊತೆ ಬೆರೆತು ಹೋಗಿರುವ ಪ್ರೀತಿ–ಪ್ರೇಮಗಳನ್ನು ಕಂಡೆ
ದ್ವೇಷವಿಲ್ಲದ ಜೊತೆ ಅವುಗಳ ರೆಕ್ಕೆಯ ಬಡಿತ ಆಕಾಶದಲ್ಲಿ
ಹಕ್ಕಿಗಳು
ದೇವರನ್ನು ಹುಡುಕಲು ಹೊರಟಿದೆ ಎನಿಸುತ್ತಿದೆ !

ದೂರದಲ್ಲಿ ಕಾಣುತ್ತಿರುವ ಬೆಟ್ಟ ಅದರ ಸಂಕಟವನ್ನು ನಾನು ಅರಿತೆ
ತನ್ನ ನೆರಳು ಕಾಣಲಾಗದ ಬೆಟ್ಟಕ್ಕೆ, ದೇವರ ನೋಡಬೇಕೆಂಬ ಆಸೆ



www.sriharikhoday.com

ನೀಲಿ ಆಕಾಶಕ್ಕೆ ನೋಡುತ್ತ ಬೆಟ್ಟದ ನೋಟ ಆಕಾಶದೆಡೆಗೆ
ಅದು ನಮಾಜು ಮಾಡುತ್ತಿರುವಂತಿದೆ !

ಎಲ್ಲವೂ ದೇವರ ಕಡೆ ದೃಷ್ಟಿ ಎಲ್ಲರ ದೃಷ್ಟಿಗೆ ಒಂದೇ ದೇವರು
ನನಗೂ ಆ ದೇವರ ಜೊತೆಗೆ ಬೆರೆತು ಅನುಭವಿಸಿರುವ ಆನಂದ
ಜನ್ಮ ತಾಳಿದ ಮೇಲೆ ನನ್ನ ಮನೋಪರಾಕ್ರಮದಿಂದ
ದೇವರನ್ನು ಗೆದ್ದು ಜಯ ಪಡೆದಂತಿದೆ !

ಒಂದೆಡೆ ಆಕಾಶದ ನೀಲಿ ಬಣ್ಣ.. ಮತ್ತೊಂದೆಡೆ ತೋಟದ ಹಸಿರು
ತೋಟದಲ್ಲಿ ದ್ರಾಕ್ಷಿ ಬಳ್ಳಿ. .
ಗೊಂಚಲುಗಳಿಂದ ನೇತಾಡುವ ದ್ರಾಕ್ಷಿಯಿಂದ ದ್ರಾಕ್ಷಾರಸ
ದ್ರಾಕ್ಷಾರಸ ಕುಡಿದು ನನ್ನಲ್ಲಿ ತೇಲಿಬಂದ ಅಮಲು
ಅಮಲಿನ ಆನಂದ ನನ್ನ ಮುಖೇನ ಭೂಮಿ ಪಡೆದಂತಿದೆ

ನನ್ನ ಮುಖೇನ ದ್ರಾಕ್ಷಿಬಳ್ಳಿ ಆನಂದವನ್ನು ಅನುಭವಿಸಿದಂತಿದೆ
ಆ ಅನುಭವ ಭಾಗಿಯಾಗಲು ಬಳ್ಳಿಯ ಮೇಲೆ
ನೊಣಗಳು ಇರುವೆಗಳು ಬಳ್ಳಿಯ ಸುತ್ತ ತಿರುಗುತ್ತ
ನನ್ನ ದೇವರ ಅನುಭವ ಇರುವೆ ಕೂಡ ಪಡೆದಂತಿದೆ
ಪ್ರಕೃತಿ ದೇವರನ್ನು ಅನುಭವಿಸುವ ಸಾಧನೆ

ಇಂದು ನಾನೊಬ್ಬನೇ ಕುಡಿಯದೆ ನನ್ನವಳು ಕೂಡ ಜೊತೆ
ನಾವು ಜೊತೆ ಬೆರೆತಿರುವ ಸ್ಪಂದನದಲ್ಲಿ
ಆನಂದವ ಅನುಭವಿಸಿ ದೇವರ ಅನುಭವ ಪಡೆಯುತ್ತಲೇ
ಇರುವೆವು

ಎಲ್ಲವೂ ಎಲ್ಲದರ ನೋಟಗಳು ಎಲ್ಲರ ದೇಹದ ಅನುಭವಗಳು
ದೇವರನ್ನು ಅನುಭವಿಸಲು ಹಗಲು ರಾತ್ರಿ ಓಡುತ್ತಲೇ ಇವೆ

ಪಡೆದ ಆನಂದ ಒಂದು ಸಲ ಅನುಭವಿಸಲು ಸಾಲದೆ
ಸಲಿ ಸಲಿ ಅನುಭವದಲ್ಲಿ ಹೊಸ ರೂಪ ಅನುಭವಗಳು
ಬರುತ್ತಿರುವುದು



ಮತ್ತೆ ಮತ್ತೆ ಬೇಡಿಕೆ ಹೆಚ್ಚಾಗುತ್ತಿರುವುದು ಪ್ರಕೃತಿಯ ದಾಹ
ಎಷ್ಟು ಕುಡಿದರೂ ಮತ್ತೆ ಹಾಜರಾಗುವಂತೆ
ನನಗೆ ಎಷ್ಟು ಅನುಭವ ಪಟ್ಟರೂ ದೇವರ ದಾಹ
ಕಡಿಮೆಯಾಗುತ್ತಿಲ್ಲ

– ಶ್ರೀ ಹರಿ.

**17-12-2014**

www.sriharikhoday.com

## 830

ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕದ್ದು ಕುಡಿಯುವಂತೆ
ಮನಸ್ಸು ಯಾರಿಗೂ ತಿಳಯುವುದಿಲ್ಲವೆಂದು ಕಣ್ಣು ಮುಚ್ಚಿಕೊಂಡು
ತಪ್ಪನ್ನು ಮಾಡುತ್ತಿದೆ !

ತಪ್ಪನ್ನೇ ಸರಿ ಎಂದು ನಾ ಮಾಡುತ್ತಿರುವುದು ಸರಿ ಎಂದು
ಅದರಷ್ಟಕ್ಕೆ ಅದೇ ಭಯವಿಲ್ಲದೆ
ತಪ್ಪನ್ನು ಮುಂದುವರೆಸಿಕೊಂಡೇ ಇದೆ !

ಬುದ್ಧಿಯು ಮನಸ್ಸಿನಿಂದ ದೂರವಾಗಿರುವ ಕಾರಣ
ಮನಸ್ಸು ಯಾರ ಕಣ್ಣಿಗೂ ಕಾಣದಾಗಿರುವ ಕಾರಣ

ತಾನು ಮಾಡಿದ್ದೇ ಸರಿ . .ನಾನು ನಡೆಯುವುದೇ ಸರಿ
ನುಡಿಯುವುದೇ ಸರಿ ಎಂದು
ಯಾರಿಗೂ ಕೇಳಿಸದೆ ತನ್ನಲ್ಲೇ ತಾನೇ ಬೊಗಳುತ್ತಿದೆ !

ಯಾರ ಕಲ್ಪನೆಗೂ ಬಾರದ ಮನಸ್ಸಿನ ತಪ್ಪುಗಳು
ಮುನ್ನಡೆಯುತ್ತಾ ಮುನ್ನಡೆಯುತ್ತ ತಾನು ಅಹಂಕಾರವನ್ನು
ಬೆಳೆಸಿಕೊಂಡು
ತಾನು ರಚಿಸಿಕೊಂಡಿರುವ ಯಾರೂ ಕಾಣದ ಮಾರ್ಗದ ಮೇಲೆ



ಹೋರಾಡುತ್ತ ಮನಸ್ಸಿನವರ ಜೊತೆ ಬೆರೆತುಕೊಂಡು
ತಾನು ನಾಯಕನಾಗುವ ಇಚ್ಛೆ!
ನಾಯಕನಾಗಿ ಇದು ಮಾಡುವೆ . . ಅದು ಮಾಡುವೆ
ತಪ್ಪು ಮಾಡುವ ಪಟ್ಟಿಯನ್ನು ಬಚ್ಚಿಟ್ಟು ತಾನು ನೋಡದೆ
ಕಣ್ಣು ಮುಚ್ಚಿಕೊಂಡಿದೆ ಮನಸ್ಸು ಸ್ಪಷ್ಟವಾಗಿ ಭ್ರಷ್ಟವಾಗುತ್ತಿದೆ !

ಮೇಲೇರುವ ಎತ್ತರ ಸಾಲದೆಂದು ಅಸೂಯೆಪಡುತ್ತ
ಸ್ವಪ್ರತಿಷ್ಠೆಯನ್ನು ಹೆಚ್ಚಾಗಿಸುತ್ತ
ಅತಿ ಎತ್ತರದಿಂದ ಸಣ್ಣ ತಪ್ಪಿಗೆ ಜಾರಿ ಸರಸರನೆ ಕೆಳಗಿಳಿದಾಗ

ಮನಸ್ಸು ಬುದ್ಧಿಯ ಆಸರೆ ಬೇಡಿ
ತಪ್ಪನ್ನು ಶುದ್ಧಿಪಡಿಸಿಕೊಳ್ಳಲು ಮನಸ್ಸು ಬುದ್ಧಿಯ ಮುಖೇನ
ಜ್ಞಾನ ಭಿಕ್ಷೆಯನ್ನು ಬೇಡುತ್ತಿದೆ !

ಆಭರಣಗಳನ್ನು ನೀರಿನಲ್ಲಿ ಶುದ್ಧಿಗೊಳಿಸುವಂತೆ
ಬುದ್ಧಿಯು ಜ್ಞಾನದಿಂದ ಶುದ್ಧಿಯಾಗುವಂತೆ
ಮನಸ್ಸು ಸತ್ಯದಿಂದ ಶುದ್ಧಿಯಾಗಿಸಿಕೊಂಡು

ಅಸೂಯೆ ಅಹಂಕಾರಗಳೆಲ್ಲ ಶಮನಗೊಂಡು
ಜ್ಞಾನದ ಜ್ಯೋತಿಯನ್ನು ಅನುಭವಿಸಲು
ಜ್ಞಾನದ ಜ್ಯೊತಿಯನ್ನು ಕಣ್ಮುಚ್ಚಿ
ಅನುಭವಿಸಲು ಮನಸ್ಸು ಸಜ್ಜಾಗುತ್ತಿದೆ !

**- ಶ್ರೀ ಹರಿ.**

**18-12-2014**

www.sriharikhoday.com

## 831

ಶಿವ ಶಿವ ಎಲ್ಲಿರುವೆ ಶಿವ
ಕೋಪದಲ್ಲಿರುವೆಯೋ ಶಾಂತಿಯಲ್ಲಿ ಸೇರಿಕೊಂಡಿರುವೆಯೋ ಶಿವ
ಹಸಿವು ಕಷ್ಟ ನಮಗೆ ಇದ್ದರೂ ನಿನೇಕೆ ಸುಮ್ಮನಿರುವೆ ಶಿವ
ನಾವು ಮಾಡಿದ ತಪ್ಪನ್ನು ಮನ್ನಿಸಿ ಕರುಣಿಸೋ ಶಿವ
ನಿನ್ನ ನೆನೆದು ನಾವು ಹಾಡುತ್ತಿದ್ದಾರೆ ಸುಖವು ಬರುತ್ತಿದೆ ಶಿವ
ನಿನ್ನನ್ನು ನೆನೆದು ಭಕ್ತಿರೂಪದಲ್ಲಿ ನಿನ್ನಲ್ಲಿ ಬೆರೆತು ಆನಂದ ಬರುತ್ತಿದೆ ಶಿವ

ಜೊತೆಗಿರುವ ಆನಂದ ನೀನೇ ಅಲ್ಲವೋ ಶಿವ
ಆನಂದದಲ್ಲಿ ನಾನು ನೀನು ಒಂದಾಗೋಣ ಶಿವ

**– ಶ್ರೀ ಹರಿ.**

**19–12–2014**



www.sriharikhoday.com

## 832

ನಡೆಯಿರೋ ಪ್ರೀತಿ–ಪ್ರೇಮಗಳ ಜೊತೆ ಆನಂದದ ಅನುಭವಿಸೋಣ
ನಡೆಯಿರೋ ಮಲೀನವಿಲ್ಲದ ಪ್ರೀತಿ–ಪ್ರೇಮಗಳಿಂದ
ಆನಂದದ ಪ್ರತಿರೂಪವಾದ ದೇವರನ್ನು ಅನುಭವಿಸೋಣ !

ನಡೆಯಿರೋ ಸತ್ಯವಾದ ಪ್ರೀತಿ–ಪ್ರೇಮಗಳ ಜೊತೆ ಎಲ್ಲದರಲ್ಲಿ ಬೆರೆತಿರುವ
ದೈವತ್ವವನ್ನು ಪಡೆದು ಅನುಭವಿಸೋಣ ಬನ್ನಿರೋ
ನಡೆಯಿರೋ ತಾಯಿ ಕಲಿಸಿದ ಪ್ರೀತಿ–ಪ್ರೇಮದ ಜೊತೆಗೆ
ಮನದಲ್ಲಿ ವಿಶ್ವರೂಪಿಯನ್ನು ಕಾಣೋಣ ಬನ್ನಿರೋ !

ನಡೆಯಿರೋ ಪ್ರೀತಿ–ಪ್ರೇಮಗಳನ್ನು ಅನುಭವಿಸುತ್ತ
ಪ್ರೀತಿ–ಪ್ರೇಮಗಳು ನಮ್ಮ ಬಾಳಿನ ಚೇತನವಾಗಿ
ದೈವತ್ವವನ್ನು ದೂರದಿಂದ ನೋಡದೆ ಅದರೊಳಗೆ ಹೊಕ್ಕು
ಅದರಲ್ಲಿ ಬೆರೆಯೋಣ ಬನ್ನಿರೋ !

ಹೊಂದಾಣಿಕೆಯನ್ನು ಮೀರಿಸಿರುವ ವಿಶ್ವದ ಹೆಗ್ಗಳಿಕೆ ಪಡೆದಿರುವ
ಹೃದಯವಂತ ಪ್ರೀತಿ–ಪ್ರೇಮದ ಬಯಲಲ್ಲಿ ಬೆರೆತಿರುವ
ದೇವರನ್ನು ಅನುಭವಿಸೋಣ ಬನ್ನಿರೋ !

ಕಣ್ಣಿಗೆ ನೀಡಲು ಆಕಾರ ನೀಡಿ ಪ್ರಕೃತಿಯ ರಥದಲ್ಲಿ ಕುಳಿತು
ಕಾಲದ ಕುದುರೆಯ ಕಡಿವಾಣ ಹಿಡಿದಿರುವ ವಿಶ್ವಕ್ಕೇ ದಿಗ್ಭ್ರಮೆ
ತರಿಸುತ್ತಿರುವ ದೈವತ್ವ
ಮನೋದೃಷ್ಟಿ ಮಾಪಕದಿಂದ ದಿಗಂತಗಳ ಜೊತೆ ಬೆರೆತು
ತಿಳುವಳಿಕೆ ತಿಳಿದಿರುವ ಪ್ರೀತಿ-ಪ್ರೇಮಗಳಿಂದ

ಕೋಟಿ ಲೋಕಗಳ ಒಡೆಯ ದೇವರ ಜೊತೆಗೆ ಸ್ನೇಹ
ಬೆಳೆಸಿಕೊಂಡು
ಅದರಲ್ಲಿ ಬೆರೆತು . . ಬೆರೆತ ಅನುಭವದ ಆನಂದವನ್ನು
ಪಡೆಯೋಣ ನಡೆಯಿರೋ . .ದೇವರ ಹತ್ತಿರ !

ದೂರವಾಗಿರುವ ದೇವರನ್ನು ಪಡೆಯಲು ನಾವು ಪಡೆಯುತ್ತಿರುವ
ಸಂಭ್ರಮದ
ನಮ್ಮ ಕಾಂತೆಯ ಸುಖದಿಂದ ಪ್ರೀತಿ-ಪ್ರೇಮಗಳನ್ನು ಬೆರೆಸಿಕೊಂಡು
ಧೈರ್ಯದಿಂದ ದೇವರ ಜೊತೆ ಆನಂದ ನಮ್ಮದು ಎಂದು ಹೇಳುತ್ತ
ದೇವರ ಗೆಳೆತನ ನಮ್ಮದು ಎಂದು ಘೋಷಿಸಿಸುತ್ತ

ದೇವರ ಸಮ್ಮತಿಯನ್ನು ಅರ್ಥೈಸಿಕೊಂಡು ಮಧುರವಾದ
ಭಾವನೆಯಿಂದ
ಮಧುವನ್ನು ಸೇವಿಸಿ ಜನ್ಮವನ್ನೇ ಪಾವನಗೊಳಿಸುತ್ತ
ದೇವರ ಜೊತೆಗೆ ದೇವರ ರಸಿಕತೆಯ ಅನುಭವಿಸೋಣ !

**– ಶ್ರೀ ಹರಿ.**

**20-12-2014**



www.shriharikhoday.com

# 833

ಬಿಂಬಕ್ಕೆ ಪ್ರತಿಬಿಂಬಿಸುವ ಕನ್ನಡಿ
ಪ್ರಶ್ನೆಗಳಿಗೆ ಉತ್ತರ ನೀಡುವ ಮನೋಕನ್ನಡಿ
ಬಿಂಬಕ್ಕೆ ದ್ವೇಷವಿಲ್ಲದೆ ಪ್ರತಿಬಿಂಬಿಸುವ ಕನ್ನಡಿ
ಬಿಂಬಕ್ಕೆ ದ್ವೇಷ ತುಂಬಿಕೊಂಡು ಪ್ರತಿಬಿಂಬಿಸುವ ಮನೋ ಕನ್ನಡಿ

ಬೇರೆಯವರಿಗೆ ಮನೋಕನ್ನಡಿಯ ಪ್ರತಿಬಿಂಬ ತಾಗಿ
ತಾಗಿದ ಬಿಂಬಕ್ಕೆ ಅವರ ದ್ವೇಷಗಳನ್ನು ಅದರಲ್ಲಿ ತುಂಬಿಕೊಂಡು
ಮುಗ್ಧ ಮನಸ್ಸುಗಳಿಗೆ ಕೇಡನ್ನು ಕಲಿಸುತ್ತಿದೆ !

ಪ್ರತಿಯೊಬ್ಬ ಜೀವಿಯು ಒಬ್ಬ ಸಂಘರ್ಷಿ ಯಶಸ್ಸನ್ನು ಬಯಸುವ
ಅಬಿಲಾಷಿ
ಮಾನವನ ಶರೀರದಲ್ಲಿ ಅಡಗಿರುವ ಮನಸ್ಸಿನ
ಬಿಂಬ ಪ್ರತಿಬಿಂಬಗಳೇ . .ಚೆಲ್ಲಾಟಗಳೇ .. ಸಮಾಜದಲ್ಲಿ ಗೋಳು
ಆಡಿಸುತ್ತಿದೆ !

ಪ್ರೇಮಗಳ ಮನೋ ಸ್ಪಂದನೆಗಳು
ಪ್ರೀತಿ-ಪ್ರೇಮಗಳ ಪ್ರತಿಬಿಂಬಗಳು ಒಂದನ್ನು ಮಾಡಿದರೆ
ಪ್ರೀತಿ-ಪ್ರೇಮವಿಲ್ಲದ ಮನಸ್ಸುಗಳಲ್ಲಿ ಮನಸ್ಸು ಶಾಂತಿಯನ್ನು
ಕಳೆದುಕೊಂಡಿದೆ !

ಪ್ರೀತಿ-ಪ್ರೇಮಗಳು ರೂಪುಗಳನ್ನು ನೀಡಿ
ರೂಪಿನ ಹಿಂದೆ ಪ್ರೀತಿ-ಪ್ರೇಮಗಳ ಜೊತೆ
ಇಬ್ಬರ ಮನಸ್ಸನ್ನು ಒಂದು ಮಾಡುತ್ತಿದ್ದರೆ
ಪ್ರೀತಿ-ಪ್ರೇಮಗಳು ಇಲ್ಲದ
ಪ್ರೀತಿ-ಪ್ರೇಮಗಳ ಅರ್ಥ ತಿಳಿಯದ ಮಾನವರು
ದ್ವೇಷದಿಂದ ಓರೆಗಣ್ಣಿಂದ ದ್ವೇಷವನ್ನು ಪ್ರತಿಬಿಂಬಿಸುತ್ತಿದ್ದಾರೆ !

ಬಿಂಬ ಪ್ರತಿಬಿಂಬಗಳೇ ವಿಶ್ವದ ರಹಸ್ಯವಾಗಿ
ಸರಿಯಾದ ದೆಸೆಯಲ್ಲಿ ಅರಿವಿಲ್ಲದಿದ್ದರೆ
ತಾನೇ ಸರಿ ಎಂಬ ಸುಳ್ಳಿನ ಕಟ್ಟಡಗಳು ಕಟ್ಟುತ್ತಿದ್ದಾರೆ

ಮನೋದೃಷ್ಟಿಕೋನ ಸರಿಯಿಲ್ಲದಲ್ಲಿ
ಹುಟ್ಟುಗುಣ ಸರಿಯಾಗಿ ಬೆಳೆಸದೇ ಇದ್ದಲ್ಲಿ
ಯಾವ ಒಳ್ಳೆ ಕೆಲಸಗಳು ಸರಿ ರೀತಿಯಲ್ಲಿ ನಿಯಂತ್ರಣ
ಮಾಡಲಾಗದೆ

ಜೀವನದ ವ್ಯಾಕರಣ ತಿಳಿಯದಾಗಿ
ಹಂತ ಹಂತದಲ್ಲಿ ಮನದಲ್ಲೇ ಹೊಸ ಹೊಸ
ಹಗರಣದ ಭಾಷೆ ಮೂಡಿಸುತ್ತಿದ್ದಾರೆ

ನೋಡುವವರಿಗೆ ಅವಲಕ್ಷಣವಾಗಿ ಕಾಣಿಸಿಕೊಂಡು
ಕೆಟ್ಟವನು ಎಂಬ ಉದಾಹರಣೆ ಕೊಡುವನು

**– ಶ್ರೀ ಹರಿ.**

**22-12-2014**



www.sriharikhoday.com

## 834

ವಿಶ್ವದ ಆಲಯ ಎಲ್ಲಾ ಆಲಯಗಳಲ್ಲಿ
ದೇವರು ಇರುವ ದೇವಾಲಯ
ಸಂಸಾರ ಎನ್ನುವುದು ಒಂದು ಆಲಯ
ಭಾಷೆ ಮಾತುಗಳು ಒಂದು ಆಲಯ

ಭಾಷೆಯ ಮಾತಿನಲ್ಲಿ ದೈವತ್ವವುಂಟು
ಕೃತಜ್ಞತೆಯ ಆಲಯ ದೇವರು ನೆಲೆಸಿರುವ ಆಲಯ
ದುಡಿಯುವ ಕೈಯ್ಯ ಮುಷ್ಠಿಯಲ್ಲಿ
ಪವಿತ್ರ ದೇವರು ಕಾಣದೇ ಇರುವನು

ಬೇರೆಯವರಿಗೆ ಸಹಾಯ ಹಸ್ತ ನೀಡಿ
ತಬ್ಬಿಕೊಂಡು ಸಹಾಯ ಮಾಡುವ ಕೈಗಳಲ್ಲಿ
ಅಲ್ಲಿ ಸದ್ದಿಲ್ಲದೆ ದೇವರು ಅಡಗಿರುವನು

ಕೈಚಾಚಿ ಬೇಡಿ ಸ್ವೀಕರಿಸುವುದು ಧರ್ಮ
ಕೈಚಾಚಿ ಕಸಿದುಕೊಳ್ಳುವುದು ಪಾಪ
ಮನದಲ್ಲಿ ಬೇರೆಯವರ ಸ್ವತ್ತನ್ನು ಕಸಿದುಕೊಳ್ಳಲು ನೆನೆದರೆ
ನೆಮ್ಮದಿ ಅವನನ್ನು ಮರೆಯುತ್ತದೆ !

ವಿದ್ಯೆಯನ್ನು ಕಲಿಸುವ ಶಾಲೆ ದೇವರಿರುವ ಶಾಲೆ
ಓದು . .ಓದುವ ಪಾಠ . .ವೇದಗಳು
ದಿನದ ಮನೋ ನಡಿಗೆಗಳು ಸರಿ ಇದ್ದಲ್ಲಿ
ನಾಳೆಯ ದಿನ ಸರಿಯನ್ನೇ ಉದಯಿಸುವುದು !

**– ಶ್ರೀ ಹರಿ.**

**22-12-2014**

## 835

ನೀನೇ ನನ್ನದು ..ನಾನೇ ನಿನ್ನದು
ನನ್ನದರಲ್ಲಿ ನೀನು ...ನಿನ್ನ ಮನದಲ್ಲಿ ನಾನು
ನಾವಿಬ್ಬರು ನಮ್ಮ ಮನೋವನದಲ್ಲಿ ಜೀವನದ ಕವನಗಳನ್ನು
ಬರೆಯೋಣ !

ನಮ್ಮಿಬ್ಬರ ಪ್ರೀತಿ-ಪ್ರೇಮಗಳನ್ನು
ನಿಧಾನವಾಗಿ ಮೆಲುಕು ಹಾಕುತ್ತ
ನಮ್ಮ ಜೀವನ ಬಂಧನವನ್ನು ಬಿಗಿಪಡಿಸೋಣ !

ಕಣ್ಣುಗಳಿಂದ ನಾವಿಬ್ಬರು ನೀಡುತ್ತಿರುವ ವಚನಗಳು
ನಮ್ಮ ಯೌವ್ವನ ಹೆಚ್ಚಾಗಿಸುತ್ತ ಸಮಾನ ಸಜ್ಜನ ಭಾವನೆಯಿಂದ
ನಮ್ಮ ಜೊತೆಗೆ ಬೆಳೆದಿರುವ ಅಬಿಮಾನವನ್ನು
ಅರ್ಥಹೀನವಾಗದಂತೆ

ನಮ್ಮ ಜೊತೆ ಆತ್ಮಜ್ಞಾನವನ್ನು ಹೆಚ್ಚಿಸುವ ಸಾಧನೆಯಾಗಿ
ದೇವರ ಜೊತೆ ಒಡೆತನವನ್ನು ಗಳಿಸಿಕೊಂಡು
ನಿನ್ನ ಗುಣಗಾನ ನಾನು ಮಾಡುತ್ತ ನನ್ನ ಗುಣಗಾನ ನಿನ್ನಿಂದ ನಾ
ಕೇಳಿಸಿಕೊಳ್ಳುತ್ತ

ಎಲ್ಲಾ ದಿಕ್ಕುಗಳಲ್ಲಿ ಅಡಗಿರುವ ದೇವರ ದಿವ್ಯದರ್ಶನ
ಪಡೆಯುತ್ತ
ಮಾನವನ ದಿವ್ಯ ಜ್ಞಾನವಾದ ಪ್ರೀತಿ-ಪ್ರೇಮಗಳ ಸಂಬಂಧ
ವಿಶ್ವಕ್ಕೆ ನಿರಶನವಾಗುವಂತೆ ಯಾವ ನಿಬಂಧನೆಗಳಿಲ್ಲದೆ



ನಮ್ಮಿಬ್ಬರಿಗೂ ಮುದಿತನ ಬರುವವರೆಗೂ ನಮ್ಮ ನೆಂಟಸ್ಥನ
ಹೆಚ್ಚಿಸಿಕೊಳ್ಳುತ್ತ
ಸಮಯ ದೊರಕಿದಲ್ಲಿ ಮಧುಪಾನ ಸೇವಿಸಿ
ರೋಮಾಂಚನದ ತುರಿಯಾಸ್ಥಿತಿ ಅನುಭವಿಸೋಣ !

ನಾವುಗಳು ನಮ್ಮ ಪ್ರೀತಿ ಶತಮಾನದ ಸುದ್ಧಿಯಾಗಿಸಿ
ಅಜ್ಞಾನದ ಕುರುಡುತನಕ್ಕೆ ಜ್ಞಾನದ ನೋಟವನ್ನು
ನಮ್ಮ ಪ್ರೀತಿಯ ಕ್ರಿಯೆಗಳಲ್ಲಿ ಕಾಣೋಣ
ದಿನೇ ದಿನೇ ನಮ್ಮಲ್ಲಿ ಚಿಗುರುತ್ತಿರುವ ನವಯೌವ್ವನಕ್ಕೆ
ಜೊತೆಯಾಗೋಣ !

**- ಶ್ರೀ ಹರಿ.**

**25-12-2014**

www.sriharikhoday.com

## 836

ದೇವರಿರುವುದು ಎಲ್ಲಿ ?
ಅದು ಇಲ್ಲಿರದಿದ್ದಲ್ಲಿ ಬೇರೆಲ್ಲಿ. . .?
ತಿಳಿದಿರುವ ನೆನಪುಗಳ ಬಿಚ್ಚಿರುವ ಮನಸ್ಸು
ತೆರೆದಿರುವ ಮನಸ್ಸೆಲ್ಲುಂಟೋ ಅಲ್ಲಿಯೇ ದೇವರು !

ಹೆಣ್ಣು ಹೊನ್ನು ಮಣ್ಣು ತುಂಬಿರುವ ಮನಸ್ಸು ದೇವರು
ನಿನ್ನಲ್ಲಿ ಬೆಳೆಯುತ್ತಿರುವ ಕಾಡು
ಎಣಿಕೆಯ ಗುಣಿಕೆಗಳು ತುಂಬಿರುವ ಮನಸ್ಸುಗಳು
ದೇವರು ನೆಲೆಸುವ ನಿಲಯ !

ಬಟ್ಟೆ ಆಭರಣಗಳ ಆಡಂಬರದಲ್ಲಿ
ದೇವರು ಎಂದೆಂದಿಗೂ ನೆಲೆಸುವುದಿಲ್ಲ
ಅಲ್ಲೊಂದು ಕಣ್ಣು . .ಇಲ್ಲೊಂದು ಕಣ್ಣು
ಆ ದೇವರ ಪೂಜೆಯಲ್ಲಿ ದೇವರು ಇರುವುದಿಲ್ಲ !

ಸಂಗೀತ ಕಲೆ ಕವಿತ್ವದಲ್ಲಿ
ಮಕ್ಕಳ ತೊದಲು ಮಾತುಗಳಲ್ಲಿ ದೇವರು ನೆಲೆಸಿರುವನು
ಇವುಗಳೇ ದೇವರು ಎಂದು ನೆನೆಸಿದರೆ
ನಿನ್ನ ಸೇವೆ ದೇವರಿಗೆ ಒಪ್ಪುವುದು !



www.sriharikhoday.com

ವಿಶ್ವಾಸವನ್ನು ನೆನೆಸುವುದೆಲ್ಲಿರುವುದೋ ಅಲ್ಲಿ ದೇವರು
ಒಳ್ಳೆಯದನ್ನು ಮಾಡಬೇಕೆಂಬ ಭಾವನೆ ಎಲ್ಲಿರುವುದೋ ದೇವರು ಅಲ್ಲೇ
ನಮ್ಮ ಸಂಸ್ಕೃತಿ ಇತಿಹಾಸಗಳಿರುವುದೆಲ್ಲೋ ಆ ಬೀಡಲ್ಲೇ ದೇವರು
ಜೊತೆ ಸಂಬಂಧಗಳು ಎಲ್ಲಿದೆಯೋ ದೇವರು ಅಲ್ಲೆ ನೆಲೆಸುವನು !

**– ಶ್ರೀ ಹರಿ.**

**25–12–2014**

## 837

ಅರೆ ಮನಸ್ಸಿನಿಂದ ಗೋಡೆಗೆ ಮೊಳೆ ಹೊಡೆಯುವ
ಪ್ರಯತ್ನ ಬೆರಳಿಗೆ ನೋವಾಗುವುದು
ಒಂದು ರೆಕ್ಕೆಯಿಂದ ಯಾವ ಹಕ್ಕಿಯೂ ಹಾರುವುದಿಲ್ಲ

ಅರೆ ಮನಸ್ಸಿನಿಂದ ಕೆಲಸ ಕೆಲಸವಲ್ಲ
ತಮ್ಮ ಮನಸ್ಸಿನಲ್ಲಿ ತುಂಬುತನ ಬೆಳೆಸಿಕೊಳ್ಳದಿದ್ದರೆ
ಜೀವನದಲ್ಲಿ ತೃಪ್ತಿಯ ಅನುಭವಿಸಲಾರ !

ನಮ್ಮ ಮನದಲ್ಲಿ ಒಂದು ಕಡೆ ಕಷ್ಟದ ಪಟ್ಟಿ ಮಾಡಿದರೆ
ಅದೇ ಸಮಯದಲ್ಲಿ ಸುಖದ ಪಟ್ಟಿಯನ್ನು ಮಾಡಿದರೆ
ಹೆಜ್ಜೆ ಹೆಜ್ಜೆಗೂ ಪ್ರಕೃತಿ ಸುಖ ಬೆಳೆಯಲಾರಂಭಿಸುವುದು !

ನಾನು ಬೇರೆ ನೀನು ಬೇರೆ ಎಂಬ
ಅರ್ಥವಿಲ್ಲದ ಮನೋದೃಷ್ಟಿಕೋನ ಇದ್ದಲ್ಲಿ
ಜೀವನದಲ್ಲಿ ಒಂಟಿತನ ಅನುಭವಿಸುವನು !

ಒಂದು ಕಣ್ಣಿನಿಂದ ಎಲ್ಲಿ ಸರಿ ನೋಟವಿಲ್ಲವೋ ಅಲ್ಲಿ
ಜೊತೆ ಸೇರಿ ಎಲ್ಲರ ನೋಟ ನಮ್ಮ ನೋಟವಾಗಿ
ಆ ನೋಟದಲ್ಲಿ ವಿಶ್ವಾಸದ ವಿಶ್ವವನ್ನು ನೋಡೋಣ

ಹಗುರ ಮನಸ್ಸಿನಿಂದ ನಮ್ಮ ಕನಸುಗಳನ್ನು ನೋಡಿದರೆ
ನಮ್ಮ ಕನಸು ನನಸಾಗುವುದು
ನಮ್ಮ ಸಂಸಾರದಲ್ಲಿ ಸುಖ ತರುವ ಪೂಜೆಯೇ ದುಡಿಮೆ !

**25-12-2014** — **- ಶ್ರೀ ಹರಿ.**



## 838

ಮನದಲ್ಲಿ ಗುಂಪು ಕಟ್ಟುತ್ತಿರುವ ನೆನಪುಗಳು
ಒಂದಲ್ಲಾ . .ಎರಡಲ್ಲಾ . ಎಣಿಕೆ ಇಲ್ಲದ ನೆನಪುಗಳ ಗುಂಪುಗಳು !

ಪ್ರೀತಿಸುವ ಗುಂಪುಗಳು . .ದ್ವೇಷಿಸುವ ಗುಂಪುಗಳು . . ದೋಷಿಸುವ ಗುಂಪುಗಳು
ಸಂಬಂಧಗಳನ್ನು ಬೆಳೆಸುವ ಗುಂಪುಗಳು .
ನಾನು ದೊಡ್ಡವ . . ನೀನು ಚಿಕ್ಕವ ಎಂದು ಕೂಗಾಡುವ ಗುಂಪುಗಳು

ಅಪೇಕ್ಷೆಗಳ ಗುಂಪುಗಳು .. . ಸಾಧನೆಯ ಗುಂಪುಗಳು
ಕೊನೆಗಾಣದ ದೈವತ್ವವನ್ನು ಬೆಳೆಸುವ ಗುಂಪುಗಳು
ಪ್ರೀತಿ-ಪ್ರೇಮ ರಸಿಕತೆಯ ತುಂಬಿಕೊಂಡಿರುವ ಗುಂಪುಗಳು

ತ್ಯಾಗವನ್ನೊಳಗೊಂಡ ಮನಸ್ಸಿನ ಗುಂಪುಗಳು
ಧ್ವಂಸಿಸುವ ಕೆಟ್ಟ ಬುದ್ಧಿಯುಳ್ಳ ಗುಂಪುಗಳು
ನಮ್ಮ ಗಮನಕ್ಕೆ ಬರದೆ ಬಚ್ಚಿಟ್ಟುಕೊಂಡಿರುವ ಮನೋಗುಂಪುಗಳು

ನೆನಪುಗಳು ನಮ್ಮ ಅರಿವಿಲ್ಲದೆ ಗುಂಪು ಕಟ್ಟಿಕೊಂಡು
ನಮ್ಮ ಜೊತೆಯೇ ಜೀವಿಸುತ್ತಿರುವ ನಾನು ಎಂಬ ಮನೋರಾಜ್ಯದ ಸೈನಿಕರು
ಆ ನೆನಪುಗಳು ತಪ್ಪನ್ನು ಮಾಡುತ್ತಲೇ ಇವೆ !

www.sriharikhoday.com

ನಾನೇನು ತಪ್ಪು ಮಾಡಿದೆ . .?
ನಾ ಒಳಗಿದ್ದನ್ನು ಹೊರಗೆ ಬಂದು ಹೇಳಿದೆ
ನನ್ನದೇನು ತಪ್ಪು . . ? ಎಂದು ಧೈರ್ಯವಾಗಿ ಹೇಳುವ ಮನೋ ಗುಂಪುಗಳು

ಏನೇ ತಪ್ಪು ಮಾಡಿದರೂ ಆ ಮನದ ಗುಂಪು ನಮ್ಮಲ್ಲಿರುವ ಕಾರಣ
ಅದು ತಪ್ಪು ಮಾಡಿದಾಗ ಅದನ್ನು ಕ್ಷಮಿಸಿದರೆ ನಿರೀಕ್ಷಿಸದ ನೆನಪುಗಳು
ನಮ್ಮ ಮನಸ್ಸಿನ ನಡತೆ ನೋಡಿ ಸರಿ ಹೋಗುವ ಮಾರ್ಗದಲ್ಲಿ
ಮಾರ್ಪಾಟಾಗುವುದು !

ನಮ್ಮನ್ನು ನಾವೇ ಕ್ಷಮಿಸಬೇಕು
ನನ್ನಲ್ಲಿ ನನ್ನನ್ನು ನಾವೇ ಕ್ಷಮಿಸಬೇಕು
ಕ್ಷಮೆಯ ಆಕಾಶ ಸರಿಯಿಲ್ಲದ್ದನ್ನೆಲ್ಲಾ ನುಂಗಿ ಸರಿಯನ್ನು ಮಾತ್ರ
ಉಳಿಸುವುದು !

ನಮಗೆ ತಪ್ಪು ಏನೆಂದು ತಿಳಿದರೂ ನಾವು ಮಾಡಿದ ಕ್ರಿಯೆಗಳಿಗೆ
ನಾವೇ ಕ್ಷಮಿಸಿದರೆ ನಮ್ಮನ್ನು ನಾವೇ ವಿಕಾಸಗೊಂಡಿರುವ
ಮಾನವ ಎಂದು ನಿರ್ಧಾರಕ್ಕೆ ಬರಬಹುದು !

**– ಶ್ರೀ ಹರಿ.**

**26–12–2014**



# 839

ಹೇ ದೇವಾ . .ದೇವಾ . . .
ಕರುಣೆಯುಳ್ಳ ದೇವಾ ನಿನ್ನ ಕರುಣೆ ಕಂಡು
ನಾ ಕರಗಿ ಹೋದೆ

ನಮ್ಮ ತಾಯ್ನಾಡಿನ ನುಡಿಗಳ
ಆ ಶಕ್ತಿಯನ್ನು ನಾನು ಸೇವಿಸಿರುವೆ
ದೇವಾ .. .ಹೇ . .ದೇವಾ . .!

ಕಲ್ಲಿನಂತೆ ಕಂಡರೂ ಮೃದುವಾಗಿರುವ ನಿನ್ನ ಮುಗ್ಧತನ
ಬುದ್ಧಿವುಳ್ಳ ವಿದ್ಯಾವಂತರು ಜೊತೆ ಸೇರಿ ಮುಗ್ಧತೆಯಿಂದ ನೆನೆಯುತ್ತ
ನಿನ್ನ ಮೇಲೆ ಹಾಡುಗಳ ಕಟ್ಟುತ್ತಿರುವರು !

ಕಲ್ಲಾಗಿ ನಿಂತಿರುವ ನೀನು
ಮೃದುವಾದ ಮಾಗಿದ ಹಣ್ಣಿನಂತೆ ಮನವುಳ್ಳ ನೀನು
ಹೇ ದೇವಾ . .ದೇವಾ .. .

ಪ್ರಕೃತಿಯ ಎಲ್ಲದರಲ್ಲಿ ಕಾಣದೆ ವಾಸಿಸುತ್ತಿರುವ ನೀ
ನನ್ನ ಮನಸ್ಸಿನಲ್ಲಿ ವಾಸವಾಗಿರುವೆ ಎಂಬ ಅನುಭವ ಭಾಸವಾಗುತ್ತಿದೆ
ಹೇ ದೇವಾ. .ದೇವಾ.
ನಿನ್ನ ಕರುಣೆಯ ಕಂಡು ನಾ ಕರಗಿಹೋದೆ

**26–12–2014** **– ಶ್ರೀ ಹರಿ.**

www.sriharikhoday.com

## 840

ಹೊಸ ಕಾಲದ ಗತಿಗೆ ಮನೋಧೋರಣೆ
ಹೊಸದರಲ್ಲಿ ಹೊಸತನ್ನು ಹುಡುಕುತ್ತಿರುವ ವೈವಿಧ್ಯತೆ
ದಿನವೂ ಸೂರ್ಯನು ಹೊಸದರಂತೆ ಹಳೆಯದರ ಜೊತೆಗೆ
ಹೊಸದನ್ನು ಬಯಸುತ್ತಿರುವ ಮಾನವನ ಮನಸ್ಸು!

ಕಾವ್ಯಗಳು ಮನಕ್ಕೆ ಸಂಚಿಲ್ಲದ ಮಿಂಚಿನ ಪ್ರಕಾಶ
ಹೊರತೋರಿಸುವ ಹೊಸ ಹೊಸ ಬಣ್ಣಗಳೂ
ಬರೆಯುವ ಅಕ್ಷರಗಳು ಕವನಗಳಾದರೆ
ಪ್ರೀತಿ-ಪ್ರೇಮದಲ್ಲಿ ಅಡಗಿರುವ ರಹಸ್ಯಗಳು

ಕೊನೆಬರದ ಕವನಗಳು, ಯಾರೂ, ಬರೆಯದೆ
ತಾನೇ ಮನದಲ್ಲಿ ಹುಟ್ಟುತ್ತಿದೆ

ಪದ ಪದಗಳಲ್ಲಿ ಬದಲುತ್ತಿರುವ ದೃಷ್ಟಿಕೋನಗಳು
ಪದ ಪದದಲ್ಲಿ ಹೊಸದನ್ನು ಅನುಭವಿಸುವ ಆಳವಾದ ಬಯಕೆ
ಬಯಕೆ ಬಯಕೆಗಳ ಆಸೆಗಳು ಒಂದು ಕಾವ್ಯವಾದರೆ
ಪ್ರೀತಿ-ಪ್ರೇಮಗಳು ಗುರಿಯನ್ನು ಸಾಧಿಸಿದ ಮೇಲೆ
ಕವನವಾಗುವುದು !

ಹುರುಪನ್ನು ಏಳಿಸುವ ಪ್ರೀತಿಯ ಕದ್ದು ಮಾತುಗಳು
ಕೊನೆಯನ್ನೇ ಕಾಣದಂತೆ ದಿಗಂತದ ಕಡೆ ಪ್ರೇಮಿಗಳ ಯಾನ



ಮನವೇ, ಬೆಲೆ ಕಟ್ಟಲಾಗದ ದೋಣಿಯಾಗಿ
ಅದರಲ್ಲಿ ನಾವಿಬ್ಬರೂ ಕುಳಿತು ಪಯಣಿಸುತ್ತಿದ್ದರೆ

ನಮ್ಮ ಗುಣಗಳನ್ನು ಶೀಲವಾದ ಗುಣದ ಸಮುದ್ರವಾಗಿ
ಬಲುದೂರ ಜೊತೆಗೇ ಸಿಕ್ಕಿದೆ ಎಂಬ ಹೆಮ್ಮೆ ಪಡುತ್ತ
ಒಬ್ಬರನ್ನೊಬ್ಬರ ಹೃದಯ ಸಾಮ್ರಾಜ್ಯವನ್ನು ಗೆದ್ದಂತಿದೆ

ನಾವು ಮರೆತಿದ್ದರೂ ಜೊತೆಗೆ ಸಾಗಿ ಬರುತ್ತಿರುವ ಗುಲಾಬಿ
ಹೂವು
ಅದರ ಪರಿಮಳ ಪ್ರೀತಿಯಲ್ಲಿ ಚೆಲುವನ್ನು ಹೆಚ್ಚಿಸುತ್ತಿವೆ!

**– ಶ್ರೀ ಹರಿ.**

**27-12-2014**

www.sriharikhoday.com

## 841

ಫಲಬೆಳೆಸುವ ಉದ್ಯಾನವದಲ್ಲಿ ಅಂದು ಕಂಡ
ನನ್ನವನು ಮತ್ತೆ ಬಂದಿರುವನು !

ಅವನ ಮುಖದ ಸೌಂದರ್ಯ ನಾ ಕಂಡಾಗಲೆಲ್ಲ
ಹೆಚ್ಚಾಗಿ ತುಟಿಯ ಮುಗುಳ್ನಗೆ ಹರಿಸಿ
ನಮ್ಮ ಪ್ರೇಮದ ಆರಂಭ ಎನ್ನುತಿಹನು !

ಹೆಣ್ಣಿನ ಕಣ್ಣಂಚಿನ ಕುಡಿನೋಟದ ಅಸ್ತ್ರವ ನೋಡಿ
ತನ್ನನ್ನು ತಾನೇ ಮರೆತು ಅದರ ಜೊತೆಗೆ
ನನ್ನನ್ನು ನಾವೇ ಮರೆತು ಅದರಲ್ಲಿ ಶರಣಾಗಿಹೆನು !

ನನ್ನ ಶಯ್ಯನಾಗೃಹದಲ್ಲಿ ಅವನ ನೆನೆದು
ನಾ ಕುಳಿತಿರುವಾಗ ಅವನು ಹೇಳಿದ ಪ್ರೇಮಕಥೆ
ನಾನು ನೀನೇ ಹೇಳಬೇಕೆಂದಿರುವೆ ಸಖಿ !

ಅನೇಕ ಭಾವನೆಯುಳ್ಳ ಅವರು ಒಂದು ಮುಖದಲ್ಲಿ
ವ್ಯಕ್ತವಾಗುವ ಭಾವನೆ
ಮಾತು ಮಾತುಗಳಲ್ಲಿ ಮೈ ಮರೆತು ರೆಕ್ಕೆ ಅಗಲಿಸಿರುವ
ನವಿಲಿನಂತೆ
ನನ್ನ ನೋಡುತ್ತಾ ನನ್ನ ಮನದಲ್ಲಿ ಪ್ರೀತಿ ಅರಳುತ್ತಲೇ ಇದೆ !



ಹೂವಿನ ದಳಗಳನ್ನು ಹೋಲಿಸುವಂತಹ ತುಟಿಗಳೂ
ಅವಳ ತೋಳಪ್ಪಿನಲ್ಲಿ ಕಾಣದ ಹರುಷದ ಭಾಗ್ಯ
ನಮ್ಮಿಬ್ಬರಲ್ಲಿ ಜೊತೆ ಸೇರಿದೆ !

ಚಂದಿರನ ಹಂದರದಲ್ಲಿ ನನ್ನ ತೋಳಪ್ಪಿನ ಸೊಬಗಿನಲ್ಲಿ
ಪರಸ್ಪರ ಸಂಬಂಧದಲ್ಲಿ ದೂರ ತಿಳಿಯದೆ ಹತ್ತಿರ ಬರುತ್ತಿರುವ
ಹತ್ತಿರದಲ್ಲಿ
ಪ್ರೇಮದ ಮೂರ್ಚೆ ಅನುಭವಿಸುತ್ತಿರುವೆನು !

**– ಶ್ರೀ ಹರಿ.**

**27–12–2014**

www.sriharikhoday.com

# 842

ಪ್ರಕೃತಿಯಲ್ಲಿ ಕ್ಷಣ ಕ್ಷಣದಲ್ಲಿ ಕಣಕಣಗಳಲ್ಲಿ ಸುಖ ಸಂತಸವನ್ನು
ಹಂಚುತ್ತಿದೆ
ಅಕ್ಷರಗಳು ಅರ್ಥದ ಸುಖ ನೀಡಲು ಪದಗಳಾಗುತ್ತಿವೆ
ಪದಗಳು ಅರ್ಥಗರ್ಭಿತವಾದ ಸಂತಸವನ್ನು
ಓದುಗರಿಗೆ ಹಂಚುತ್ತ ಸುಖ ನೀಡುತ್ತಿದೆ !

ಸುಖ ಸಂತಸಗಳೇ ಜೀವನದ ಹೆದ್ದಾರಿಯಾಗಿ
ಆ ಹೆದ್ದಾರಿಯ ನಡುಗೆ ದೇಹಕ್ಕೆ ಸಂತಸ ತರುತ್ತಿದೆ
ಸುಖ ನೀಡಲು ಮೊಗ್ಗು ಅರಳಿ ಸುಗಂಧವ ನೀಡುತ್ತಿದೆ

ಮಾತುಗಳಲ್ಲಿ ಹೋಲಿಕೆಗಳು . .ನೀ ಸುಂದರವಾಗಿರುವೆ
ನೀ ಅಂದವಾಗಿರುವೆ ಎಂಬ ಮಾತುಗಳು ಕೇಳುವವರಿಗೆ ಎಲ್ಲಿಲ್ಲದ
ಸುಖ ಹರಡಿ
ಜೊತೆ ಬೆರೆಯುವ ಭಾವನೆ ಸುಖದ ತೋರಣವನ್ನು
ಕಟ್ಟಿಕೊಳ್ಳುತ್ತಿದೆ !

ಅನೇಕ ರೀತಿಯ ಸುಖಗಳು ಮನದಲ್ಲಿ ಬಚ್ಚಿಟ್ಟುಕೊಂಡು
ಸುಖ ನೀಡಲು ಮನದಾಚೆ ಬಂದು
ನಾ ಸುಖ ಸಂತಸ ನೀಡಿರುವೆ ಎಂದು ಸುಖ ಪಡುತ್ತ
ತನ್ನನ್ನೇ ಮರೆತು ಮತ್ತೆ ಮನದ ಕತ್ತಲಲ್ಲಿ ಬಚ್ಚಿಟ್ಟುಕೊಳ್ಳುತ್ತಿದೆ !



ದೇವರ ಜೊತೆ ಬೆರೆಯುವ ಸುಖ
ತನ್ನ ಕಾಂತೆಯ ಜೊತೆಗೆ ಬೆರೆಯುವ ಸುಖ
ತನ್ನ ಅಂತರಂಗದ ಭಾವ

ಗೂಡು ಕಟ್ಟಿದಾದ ಮೇಲೆ ಪಕ್ಷಿಗೆ ಬರುತ್ತಿರುವ ಸುಖ
ಎದೆಯಲ್ಲಿ ಯೌವ್ವನದ ಅರ್ಥ ತುಂಬಿಕೊಂಡಿರುವ ಸುಖ
ತುಟಿಗಳು ಗಲ್ಲಕ್ಕೆ ಮುತ್ತು ಕೊಡಬೇಕೆಂಬ ಮನೋ ಆಳದ ಸುಖ

ಸುಖ ಬೇಕೆಂಬ ಭಾವನೆಯಲ್ಲಿ ಮುಳುಗಿರುವ ಮಾನವ
ಕಾಲದ ಆಳದಲ್ಲಿ ಮುಳುಗಿ ಈಜಾಡಿ
ಮತ್ತೆ ಮೇಲೆ ಬಂದು ಗಾಳಿ ಪಡೆಯುವ ಸುಖದಂತೆ

ಪ್ರಕೃತಿಯು ಎಲ್ಲದರಲ್ಲಿ ಸುಖವನ್ನೇ ಚಿತ್ರಿಸಿ ಕಳಿಸಿರುವ ಕಾರಣ
ಬೆರೆತಿರುವ ಸುಖ ಎಲ್ಲದರಲ್ಲಿ ಬೆರೆಯುವ ಗುಣವಿರುವ ಕಾರಣ
ಬೇರೆಯವರಿಗೆ ಸುಖ ನೀಡಿ ಅವರ ಸುಖದಲ್ಲಿ ಬೆರೆತು

ನಾವು ಪಡೆಯುವ ಸುಖ, ಗಳಿಕೆಯಾದ ಸುಖದಿಂದ
ನಮ್ಮ ಸುಖವನ್ನು ದೇವರ ಜೊತೆಗೆ ಹಂಚಿಕೊಳ್ಳುವ ಸುಖ
ವಿಶ್ವದ ತಕ್ಕಡಿಯಲ್ಲಿ ಪ್ರಕೃತಿ ಒಂದು ಭಾಗವಾದರೆ

ಪ್ರತಿಯಾಗಿ ಮತ್ತೊಂದು ಕಡೆ ತೂಕವಿಲ್ಲದ ದೇವರು
ವಿಶ್ವದ ಚಮತ್ಕಾರ
ವಿಶ್ವದ ರಹಸ್ಯ ಪ್ರೀತಿಯನ್ನು ತೆಗೆದುಕೊಳ್ಳುವುದು

ಆ ಪ್ರೀತಿಯಲ್ಲಿ ಬೆರೆತು ಮತ್ತೆ ಬೇರೆಯವರಿಗೆ ಹಂಚಿ ನೀಡುವುದು
ಮೂಡುತ್ತಿರುವ ಸೂರ್ಯ ತನ್ನ ಮುಪ್ಪನ್ನೇ ಮರೆತು
ಇಂದಿನ ಸೂರ್ಯನ ಸುಖದಿಂದ ನಾಳೆಯನ್ನು ಹುಟ್ಟಿಸುತ್ತಿರುವನು!

**– ಶ್ರೀ ಹರಿ.**

**29–12–2014**

www.sriharikhoday.com

## 843

ದೇವಾ. .ದೇವರೇ ನಿನ್ನನ್ನು ಅರ್ಥೈಸಿಕೊಂಡಿರುವೆ
ಓ ದೇವನೇ ನಿನ್ನ ಊರಿಗೆ ನನ್ನ ಮನ ಬರುತ್ತಿದೆ

ಬೆಟ್ಟದ ಮೇಲಿರುವ ದೇಗುಲದಲ್ಲಿನ ದೇವರಂತೆ
ಜೊತೆ ಜೊತೆಯಿಂದ ಸಂಸಾರದ ಜೊತೆಯಲ್ಲಿ
ತಂಗಿಯ ಅಣ್ಣ ತಂಗಿಯ ಮಕ್ಕಳನ್ನು
ನಿನ್ನ ಮೇಲಿರುವ ನಂಬಿಕೆ ಅವರನ್ನು ಸಲಹುತ್ತಿದೆ!

ನಡೆದು ಹೋಗಿರುವುದು . .ನಡೆಯುತ್ತಿರುವುದು
ನಮ್ಮ ಸಂಸಾರದ ನಡಿಗೆ ಮಕ್ಕಳ ಆಟವಾದಂತಿದೆ
ಜೀವನದುದ್ದಕ್ಕೂ ಸುಖವನ್ನು ಹೊರಹೊಮ್ಮಿಸುವ ದಾರಿ
ತೋರಿಸು !

ಸ್ವಂತದವರು ಯಾರೂ ಇಲ್ಲವೆಂಬ ಸಮಯದಲ್ಲಿ
ನಿನ್ನ ಬಿಟ್ಟರೆ ಯಾರನ್ನು ನಂಬಲಿ ಓ ದೇವರೇ
ನಾ ನಿನ್ನ ನೆನೆದಾಗ ನಿನ್ನ ಮನ ಕರಗಿ
ನನ್ನ ಕಡೆ ಹರಿಯುವುದಲ್ಲವೇ ದೇವಾ . .!

ಅರಿಶಿನ ಕುಂಕುಮ ಗಂಧಾದಿಗಳು ತಾವಾಗೇ
ಚಿಮ್ಮುತ್ತಾ ಮೇಲೆ ಬೀಳುತ್ತಿದೆ



ನಿನ್ನ ನೆನಪುಗಳು ಸದ್ದಾಗಿ ಓಂಕಾರ ನಾದವಾಗಿ
ಹೆಜ್ಜೆ ಹೆಜ್ಜೆಗೂ ಜೊತೆ ಬರುತ್ತಿವೆ !

ನಿನ್ನ ಕರುಣೆಯ ಹಳದಿಯ ಬಣ್ಣ ನನ್ನ ಕೆನ್ನೆಗೆ ನಿನ್ನ ಕೈ ಮುಟ್ಟಿದಂತಿದೆ
ಓ ದೇವಾ ನೀನು ನೆರಳ ಮುಂದೆ
ಸಾವಿಲ್ಲದೆ ಬೆಳಕಾಗಿರುವ ನೀನು
ನಿನ್ನ ನೆರಳು ನನ್ನನ್ನು ಕಾಯುವ ನೆರಳಾಗಿ ಜೊತೆ ಜೊತೆಗಿದೆ !

– ಶ್ರೀ ಹರಿ.

29–12–2014



www.sriharikhoday.com

## 844

ಎದೆ ತುಂಬಿ ಬೇಡುವೆನು ನಾನು
ಇಂದು ನೀನು ನೀಡಿರುವ ವರವನ್ನು ಪಡೆದಿಹೆನು
ನಾನು ನಿನ್ನನ್ನು ತುಂಬಿಕೊಂಡಿರುವ ಭಾವನೆ
ನೀ ನನ್ನ ಜೀವನಕ್ಕೆ ನೀಡಿರುವ ಬಹುಮಾನ !

ನನಗೆ ನೀ ನೀಡಿರುವ ವರ ಯಾರಿಗೂ ತಿಳಿಯದೆ
ನನ್ನ ಎದೆಯಲ್ಲೇ ತುಂಬಿ ಕೊಂಡಿರುವೆನು, ವರವಾಗಿ ನೀಡಿರುವ
ಈ ಮಗುವನ್ನು ಬೇರೆಯವರು ನೋಡಿ ಮುದ್ದಾಡುತ್ತಿರುವುದ
ಕಂಡರೆ
ನೀ ಬಂದು ನನ್ನ ಕಂದನನ್ನು ಮುತ್ತಿಡುವಂತಿದೆ !

ನನ್ನ ನಾಲಿಗೆ ನುಡಿಯದೆ ನನ್ನ ಮನದ ಆಸೆಯನ್ನು ನೀ ಕೇಳಿ
ನೀಡಿದೆ
ನನ್ನ ಕಷ್ಟದ ಭಾರ ನೀ ಎತ್ತಿಕೊಂಡು ಹಗುರನ್ನು ತರಿಸಿದೆ
ಭಕ್ತಿಯಿಂದ ಮನ ತುಂಬಿ ಬೇಡುತ್ತಿರುವೆನು ಎಂದೆಂದಿಗೂ
ಜೊತೆಯಿರು
ಹೇ ಪಂಡರಿಯ ಒಡೆಯ ಶ್ರೀ ಹರಿ ವಿಠ್ಠಲ !

**– ಶ್ರೀ ಹರಿ.**

**29–12–2014**



www.sriharikhoday.com

## 845

ನಾನು ಎಂಬ ಅರಿವಿನಿಂದ
ನಾನು ದೇವರ ಜೊತೆ ಇರುವೆ ಎನ್ನುತ
ನವಮಾಸ ಗರ್ಭದಲ್ಲಿ ಗರ್ಭ ಕಲಿಸಿದ ನಾನು ನನ್ನದು
ಗರ್ಭದಾಚೆ ಬಂದು ನಾ ಕಂಡೆ ಪ್ರಪಂಚದ ಮೈದಾನದಲ್ಲಿ

ಬೇಕು ಬೇಡದ ರೋಧನ . .
ಓದಿದೆ ಅನೇಕ ಲೇಖನ . . .
ಕೇಳಿದೆ ಅನೇಕ ಮಾತುಗಳ ವ್ಯಾಖ್ಯಾನ
ಮಾನವನೆ ಕಟ್ಟಿರುವ ಭಯ ತರಿಸುವ ಶಾಸನ

ಅರಿಯಲಿಲ್ಲ ಯವುದಕ್ಕೆ ನಾ ನೀಡಲಿ ಸ್ಪಂದನ
ಗರ್ಭದಲ್ಲಿ ಕಲಿತ ನಾನು ನನ್ನದರ ಜೊತೆಗೆ
ಬೆಳೆಯುತ್ತಿದೆ ನನ್ನ ಮೇಲೆ ಅಭಿಮಾನ
ಮಾತು ಮಾತುಗಳಲ್ಲಿ ಇಣುಕಿ ನೋಡುತ್ತಿದೆ ಅನುಮಾನ

ನನ್ನ ಮನ ಕಲಿಯುತ್ತಿದೆ ಅರ್ಥಹೀನ ದೊಡ್ಡಸ್ತನ
ಹೋಲಿಕೆ ನಿದರ್ಶನಗಳನ್ನು ಮರೆತುಹೋಗುವ ಕಿವಿಯಿಂದ ಕೇಳಿ
ಸ್ವಯಂ ಪ್ರಚೋದಿತ ಪ್ರವಚನ ಹೆಚ್ಚಾಗಿ
ಶತಮಾನಗಳು ಮಾನವನ ಜೀವನದಲ್ಲಿ ಉರುಳಿ ಹೋಗುತ್ತಿದೆ !

ದಿಕ್ಕು – ದೆಸೆಗಳು ಸರಿಯಿಲ್ಲದ ಕಾರಣ
ಕಟುಕುತನ ಕಲಿತು ತನ್ನ ಬುದ್ಧಿಯಲ್ಲಿ ಕುರುಡುತನ ಹೆಚ್ಚಾಗಿ
ಎಲ್ಲರ ಅಭಿಮಾನವನ್ನು ಕಳೆದುಕೊಂಡು
ಸಮಾನ ಭಾವನೆಯ ಹಾಳೆ ತಪ್ಪಿಕೊಂಡಿರುವ ಮನ

ಸ್ವಂತವಾಗಿದ್ದ ನಮ್ಮ ಮನಸ್ಸು ಬೇರೆಯವರ ಮಾತಿಗೆ ಮನವನ್ನು
ಅಡಮಾನ ಇಟ್ಟು

ಬೇಡದ ಬಂಧನದಲ್ಲಿ ಪತನ ಸ್ಥಿತಿಗೆ
ಜಾತಿಹೀನ ಸ್ಥಿತಿಯಲ್ಲಿ ಜಗತ್ತನ್ನು ನಿರ್ಗಮ ಮಾಡುವ ಸ್ಥಿತಿಗೆ
ಮಾನವರು ಒಬ್ಬರ ಹಿಂದೆ ಒಬ್ಬರು ಇಳಿಯುತ್ತಲೇ ಇದ್ದಾರೆ !

**– ಶ್ರೀ ಹರಿ.**

**30–12–2014**



## 846

ಬಳ್ಳಿಯಂತೆ ಬೆಳೆಯುತ್ತಿರುವ ಮಾನವ ಅನೇಕ ಪುಷ್ಪಗಳ
ಅರಳಿಸುತ್ತ

ವೇದಗಳನ್ನೇ ಸೃಷ್ಟಿಸಿರುವ ಮಾನವ
ಭವಿಷ್ಯದಲ್ಲಿ ಭವಿಷ್ಯವನ್ನೇ ತಿಳ್ಕೊಂಡು ಹೋಗುವ ಮಾನವ
ಹಿಂದಿರುವ ಚರಿತ್ರೆಯನ್ನು ವರ್ತಮಾನದಲ್ಲಿ ಹೇಳಬಲ್ಲ ಮಾನವ !

ಪಂಚಭೂತಗಳ ಅರ್ಥ ತಿಳಿದುಕೊಂಡಿರುವ ಮಾನವ
ಪಂಚೇಂದ್ರಿಯಗಳನ್ನು ಗೆಲ್ಲಬಲ್ಲ ಮಾನವ
ಕಣ್ತೆರೆದು ಸ್ವಪ್ನಗಳನ್ನು ಕಾಣುವ ಮಾನವ
ಎಲ್ಲಾ ಭಯಗಳನ್ನು ಮೀರಿ ತಲೆ ಎತ್ತಿ ನಡೆಯುತ್ತಿರುವ ಮಾನವ

ದೈವತ್ವದ ಜೊತೆಗೆ ಬೆರೆಯಬಲ್ಲ ಮಾನವ
ವಿಜ್ಞಾನದಲ್ಲಿ ದೈವತ್ವವನ್ನು ಕಾಣಬಲ್ಲ ಮಾನವ
ದೈವಸೃಷ್ಟಿಯಾಗಿ ಮಾನವ ಹುಟ್ಟಿರುವುದಕ್ಕೆ
ಈ ವಿಶ್ವದಲ್ಲಿ ಒಂದು ಕಾರಣವಿದೆ

ತನ್ನ ಸೃಷ್ಟಿಯಲ್ಲಿ ವಿನಾಶ ಮಾಡುವ ದುಷ್ಟ ಶಕ್ತಿಗಳಿಗೆ ದಮನ
ಮಾಡಲು

ಯೋಗ್ಯವನ್ನು ದೇವರು ಪರಿಗಣಿಸಿ
ಸೃಷ್ಟಿಯನ್ನೇ ಸುಖವಾಗಿಡಲು ದೇವರು ಹುಟ್ಟಿಸಿರಬೇಕು ಎಂದು
ಎಲ್ಲಾ ಜನಗಳ ಮನದ ಭಾವನೆಯಲ್ಲಿ ಬೆರೆತರೆ ವಿಶ್ವವೇ
ಸುಖಿಯಾಗಿರುತ್ತದೆ !

**30–12–2014** **– ಶ್ರೀ ಹರಿ.**



www.sriharikhoday.com

## 847

ಎದೆ ತುಂಬಿ ಹಾರೈಸುವೆನು ಈ ವರುಷಕ್ಕೆ
ಕಾಲ ತುಂಬಿಕೊಂಡಿರುವ ಈ ವರ್ಷ ಹರಸುವೆನು
ಕಾಲಕ್ಕೆ ಕಣ್ಣೀರು ಬರದೆ ಸುಖ ಅನುಭವಿಸಲೆಂದು

ಹೇ ಕಾಲವೇ . .ಈ ಕಾಲಗರ್ಭಿತ ವರ್ಷವೆ
ಅನೇಕಾನೇಕ ಒಳ್ಳೆ ಅರ್ಥವುಳ್ಳ ಘಟನೆಗಳು ನಿನ್ನ ಮಕ್ಕಳಾಗಿ
ಹುಟ್ಟುತ್ತದೆ
ಆ ಮಕ್ಕಳು ನೀ ಹುಟ್ಟಿಸಿರುವಂತಹ ಮಕ್ಕಳನ್ನು ಸಲಹುವಂತಹ
ಮಕ್ಕಳಾಗಿರುತ್ತದೆ !

ಗಾಂಭೀರ್ಯವುಳ್ಳ ಹೊಸ ಮನಸ್ಸನ್ನು ಆಲೋಚಿಸುವ
ದ್ವೇಷವಿಲ್ಲದ ದೈವತ್ವದ ಜೊತೆಗೆ ಬೆರೆತುಕೊಳ್ಳುವ ಮಕ್ಕಳು
ನಿನ್ನ ಮಕ್ಕಳು ಎನಿಸಿಕೊಳ್ಳುತ್ತದೆ !

ಅನುದಿನಗಳಿಂದ ಚಿಂತಿಸುತ್ತಿರುವ ಬೆಳೆಯುತ್ತಿರುವ ನಿನ್ನ ಮಕ್ಕಳು
ಸುಖ ಬರಲೆಂದು ನಿನ್ನಲ್ಲಿ ಇಚ್ಛೆಗಳು ಹರಿದು ಹಿಂಡಾಗಿ
ಹುಟ್ಟುತ್ತಿದೆ!
ನಿನ್ನ ಕಣ್ಣೀರು ಕಷ್ಟದ ಕಣ್ಣೀರಾಗದೆ ಸುಖ ತರುವ ಆನಂದದ
ಕಣ್ಣೀರಾಗುತ್ತದೆ !

ಫಲದಾಯಕವಾದ ಭಾವನೆಗಳು ಕಾರ್ಯರೂಪಕ್ಕೆ ಬರುವಂತಹ
ಇಚ್ಛೆಗಳು
ಅಸೂಯೆಯನ್ನು ಬಿಡಿಸುವ ಹೊಸ ಮನಸ್ಸುಗಳು



ಜೊತೆ ಜೊತೆ ಜೀವಿಸುವ ಮನಸ್ಸುಳ್ಳ ಇಚ್ಛೆಗಳು ಎಲ್ಲರಲ್ಲಿ ತುಂಬಿ
ಸುಖ ತೆಗೆದುಕೊಳ್ಳುವ ಆನಂದ ಪಡೆಯುವ
ಪಡೆಯುವ ಆನಂದದಿಂದ ಬೇರೆಯವರಿಗೆ ಸುಖ ನೀಡುವ
ಯೋಗ್ಯ ಉದ್ದೇಶಗಳು
ಈ ಜಗತ್ತಿನಲ್ಲಿ ಸಮಯ ಇರುವ ಒಂದು ವರುಷದಲ್ಲಿ
ತಾಂಡವವಾಡುತ್ತದೆ

**– ಶ್ರೀ ಹರಿ.**

**01-01-2015**

www.sriharikhoday.com

## 848

ಕೋಟಿದೆಸೆವುಳ್ಳ  ದೇವರೇ . ..
ದಿಕ್ಕುಗಳ ಹುಟ್ಟಿಸುವ ದೇವರೇ. .
ಕಾಲ  ಸರಿದರೂ ಕುಮಾರಭಾವನೆಯುಳ್ಳ ದೇವರೇ . ..
ಕೋಟಿ ದೆಸೆಗಳ ಕಷ್ಟಗಳು ನಿವಾರಿಸುವ ಬಿಂದುವೆ. . . !

ಸೂರ್ಯನ ಬೆಳಕಿನಂತಿರುವ ಬೆಳಕಿನ ರೂಪದಲ್ಲಿರುವ ದೇವರೇ ..
ಹೇ ದೆಸೆಗಳುಳ್ಳ ದೇವರೇ. .
ಓಂಕಾರನಾದವನ್ನು ಪ್ರತಿಧ್ವನಿಸುತ
ದಿಕ್ಕುಗಳ ಒಡೆಯನಾದ ದೇವ

ಸ್ವಯಂಪ್ರೇರಿತ ರಚನೆಗಳಾದ ವಿಘ್ನಗಳ ನಿವಾರಿಸುವ ದೇವ
ತಾಯಿ ರೂಪ ಬೆಳೆಸಿದ ನಿನ್ನನ್ನು ಮಗುವಾಗಿ
ತಾಯ್ತನದ ಸುಖ ಪಡೆಯುತ್ತಿರುವ ದೇವ
ಬೆಳೆದಿರುವ ನೀನು ದಿಕ್ಕು - ದೆಸೆಗಳ ಒಡೆಯ
ಈ ಜಗತ್ತನ್ನು ಸರಿರೂಪದಲ್ಲಿ ಬೆಳೆಸು !

**- ಶ್ರೀ ಹರಿ.**

**01-01-2015**



www.sriharikhoday.com

## 849

ಎಲ್ಲವೂ ಮನಸ್ಸಿನಲ್ಲೇ
ವಿಶ್ವವನ್ನೇ ತುಂಬಿಕೊಳ್ಳುವ ಸಾಹಸಿ ಮನಸ್ಸು
ಮೋಡಗಳಿಗೆ ಮಳೆ ಸುರಿಸಲು ಮೋಡಗಳಿಗೆ ಮನಸ್ಸಿರಬೇಕು
ತಾಯಿ ಮಗುವಿಗೆ ಎದೆ ಹಾಲು ಕೊಡಬೇಕಾದರೆ ತಾಯಿಗೆ
ಮನಸ್ಸಿರಬೇಕು !

ಒಂದು ಸಾಧನೆ ಮಾಡಬೇಕಾದರೆ ಆ ಸಾಧನೆಯ ಸಾಹಸಿಗೆ
ಮನಸ್ಸಿರಬೇಕು
ದ್ವೇಷವನ್ನು ಕಟ್ಟಿಕೊಳ್ಳಲು ಮನಸ್ಸು, ದ್ವೇಷವನ್ನು ಬಿಡಲು ಮನಸ್ಸು
ಕಾಣುವ ಕಷ್ಟವನ್ನು ಅರ್ಥಮಾಡಿಕೊಂಡು ಸುಖ ತರಲು
ತನ್ನ ಮನಸ್ಸಿನ ಜೊತೆ ಬೇರೆಯವರ ಮನಸ್ಸನ್ನು ಸೇರಿಸಿಕೊಳ್ಳಬೇಕು

ಜ್ಞಾನ ಪಡೆಯಲು ತಿಳಿದಿರುವ ಜ್ಞಾನವನ್ನು
ಬೇರೆಯವರಿಗೆ ಹೇಳಲು ಮನಸ್ಸಿರಬೇಕು
ಎಲ್ಲಾ ಕ್ರಿಯೆಗಳಿಗೆ ಜೊತೆ ಸೇರಿಸುವ ಕೊಂಡಿ ಮನಸ್ಸು
ಹೆಜ್ಜೆ ಹೆಜ್ಜೆಗೂ ಮನಸ್ಸಿಲ್ಲದಿದ್ದರೆ
ಕಾಲು ಒಂದೆಜ್ಜೆಯನ್ನು ಮುಂದಾಕಲು ಆಗುವುದಿಲ್ಲ.

ಉರಿಯುತ್ತಿರುವ ಬಡತನದ ಹೊಗೆ ಆರಿಸಲು ಮನಸ್ಸಿರಬೇಕು
ದೇವರ ಅನುಭವ ಪಡೆಯಲು ಮನಸ್ಸಿರಬೇಕು
ಊಟ ಮಾಡಲು ಅಡಿಗೆ ಮಾಡಲು ಮನಸ್ಸಿರಬೇಕು
ಸಹಾಯಕನಾಗಬೇಕಾದರೂ ಮನಸ್ಸಿರಬೇಕು !

ಏಕೆ . .ಏತಕ್ಕೆ . .ಏನು ಎಂಬ ಪ್ರಶ್ನೆ ಕೇಳದ ಮನಸ್ಸು
ನಾವು ಅಂದಂತೆಯೆ ನಡೆದುಕೊಳ್ಳುವ ಮನಸ್ಸು ಸೃಷ್ಟಿಯ ಲೀಲೆ
ನಿರಾಳ ಭಾವನೆಗೆ ಮನಸ್ಸು ಬೇಕು

ನೆನಪುಗಳಲ್ಲಿಟ್ಟುಕೊಳ್ಳುವ ಸಂಗತಿಗಳಿಗೆ ಮನಸ್ಸು ಬೇಕು
ಮನೆ ಎದುರು ಭಿಕ್ಷೆ ಬೇಡುವವರು ಬಂದರೆ ಭಿಕ್ಷೆ ನೀಡಲು
ಮನಸ್ಸಿರಬೇಕು
ನಾ ಆರೋಗ್ಯವಾಗಿರಬೇಕೆಂಬ ಮನೋ ನಿರ್ಧಾರಕ್ಕೂ ಮನಸ್ಸು
ಬೇಕು

ನಾನು ನಾಯಕನಾಗಬೇಕು ಎಂಬ ಮಾತಿಗೆ ಮನಸ್ಸು ಬೇಕು
ಆಶ್ಚರ್ಯವೇನೆಂದರೆ ಮನಸ್ಸಿನಿಂದಾದ ನಾಯಕರು
ಮನಸ್ಸಿನ ಗುಣಗಳನ್ನು ಮರೆತುಹೋಗಿ ಸತ್ಯದಿಂದ
ದೂರವಾಗುತ್ತಿದ್ದಾರೆ.
ಈ ಹೊಸ ವರುಷ ಜಗತ್ತಿಗೆ ಕೊಡಲು ಈ ಹೊಸ ವರ್ಷದ
ಕಾಲಕ್ಕೂ ಮನಸ್ಸು ಬೇಕು

**– ಶ್ರೀ ಹರಿ.**

**02-01-2015**



www.sriharikhoday.com

## 850

ಗುಟ್ಟೇ ಒಂದು ವಿಶ್ವ
ಅತಿದೊಡ್ಡ ಗುಟ್ಟು ವಿಶ್ವವನ್ನು ನಿರ್ಮಿಸಿದ ದೇವರು
ಗಡಿಗಳ ಅರ್ಥ ತಿಳಿಯದ ದೈವ ಶಾಸನ
ಅದರ ಗುಣವೇ ಪ್ರಕೃತಿಯ ಗುಣವಾಗಿ ಮಾರ್ಪಾಟಾಗಿದೆ !

ಗಣಿತದ ವಿಶ್ವ. . ಅಕ್ಷರಗಳು
ಅಕ್ಷರಗಳ ವಿಶ್ವ . .ಗಣಿತ
ಸದ್ದಿನಲ್ಲಿ ಹುಟ್ಟಿದ ಶೂನ್ಯವೋ . .ಶೂನ್ಯದಿಂದ ಸದ್ದೋ
ಕೊನೆ ಮೊದಲು ತಿಳಿಯದ ಗಣಿತದ ರಹಸ್ಯ !

ಕೈಯುಜ್ಜಿ ಉಜ್ಜುತ್ತಲೇ ಇದ್ದರೆ ಕೈಬಿಸಿಯಾಗುವಂತೆ
ಮೊದಲು ಕೊನೆಗಳ ಸಂಬಂಧದ ಘರ್ಷಣೆಗಳು
ತರಂಗಗಳನ್ನು ಹುಟ್ಟಿಸುತ್ತಿದೆ
ಆ ತರಂಗಗಳಿಂದ ಗಂಡು ಹೆಣ್ಣುಗಳ ರಚನೆ

ಕಾಲದ ರಚನೆ . .ಆಕಾಶದ ನಿರ್ಮಾಣ
ಹೋಲಿಸಲು ಯಾವುದೂ ಇಲ್ಲದೇ ಇರುವ ಕಾರಣ
ಮೊದಲು ಕೊನೆಗಳಿಗೆ ಅತಿ ಹೆಚ್ಚು ತುಂಬಿಕೊಂಡಿರುವ ಗರ್ವ
ಕಾಣುವವರಿಗೆ ದೈವ ಭಾವನೆಯನ್ನು ಹುಟ್ಟಿಸುತ್ತಿದೆ !

ಎಲ್ಲಾ ಶಾಸ್ತ್ರಗಳನ್ನು ಅಳೆಯುವುದು ಗಣಿತ
ಅಂತರವನ್ನು ಅಳೆಯುವ ಪ್ರಯತ್ನದಲ್ಲಿ
ಕಾಲದ ನಿಸ್ಸಂದೇಹದ ಎದುರಿಗೆ
ನಿರಾಕರಿಸುವ ತರಂಗಗಳು ತರಂಗಗಳ ಆಟದಲ್ಲಿ ಕಾಲದ ಜನನ !

ಕಾಲ ತುಂಬಿಕೊಂಡಿರುವ ತರಂಗಗಳಲ್ಲಿ
ಗಂಡು ಹೆಣ್ಣಿನ ಮಿಲನದಿಂದಾದ ಬುದ್ಧಿ ನೆನಪುಗಳ ಜನನ
ನೆನಪುಗಳು ಮರೆತು . .ನೆನಪಿಲ್ಲದಾಗ ಕಾಲವಿಲ್ಲವಾಗಿ
ಮೊದಲಾದ ಸೊನ್ನೆ . .ಕೊನೆಯದಾದ ಅನಂತ

ಎರಡೂ ಅಂತರ ಕಡಿಮೆಯಾಗಿ ಜೊತೆ ಸೇರಿದಾಗ
ನಾನೇ ದೇವರೆಂಬ ಭಾವ. . . ನಾವೇ ಮೊದಲು . .ಕೊನೆ !

ಒಂದೆಡೆ ಕಾಲದ ಕಾಲ ಇಲ್ಲ ಮತ್ತೊಂದೆಡೆ ಹತ್ತಿರ–ದೂರ ಇಲ್ಲ
ಏನೂ ಇಲ್ಲದಿರುವುದು ಅನಂತದ ಅನುಭವ
ಅದೇ ಮೂಲ ತತ್ವದಿಂದ ಹುಟ್ಟುತ್ತದೆ . ಹುಟ್ಟಿಸುತ್ತಿದೆ
ಬ್ರಹ್ಮಾಂಡಗಳು
ಗಡಿಗಳ ಅರ್ಥ ತಿಳಿಯದೆ ಬ್ರಹ್ಮಾಂಡಗಳು

ಆದಿ . . ಶೂನ್ಯದ ಗುಟ್ಟು ಅರಿಯಲು ಮಾನವನ ಬುದ್ಧಿ ಸಾಲದು
ಮಾನವರಲ್ಲಿ ತನ್ನ ಸರ್ವಸ್ವವನ್ನೂ ಮರೆತರೆ
ಶೂನ್ಯದ ಅನುಭವ ಮಾತ್ರ ಪಡೆಯಬಹುದು
ಶೂನ್ಯದ ಅರ್ಥ ಶೂನ್ಯಕ್ಕೆ ತಿಳಿದಿಲ್ಲ ಅನಂತಕ್ಕೆ ಕೊನೆ ಮೊದಲಿಲ್ಲ

ಬರಿದಾದ ಶಕ್ತಿಯಿಂದ ಬರಿದಾದ ದೇವರ ಶಕ್ತಿಯಿಂದ
ಗಡಿಗಳನ್ನು ಅರಿಯದ ತರಂಗಗಳೇ
ತಮ್ಮದೇ ಆದ ರಾಗ . .ರಾಗದಲ್ಲಿ ಗಮಕ ಪಾಡುತ್ತ
ವಿಶ್ವದ ರಚನೆಯ ಗಣಿತಕ್ಕೆ ಗಣಿತದ ಅಂಕಗಳು

ಹೊಸ ಹೆಸರನ್ನು ಪಡೆಯುತ್ತ
ನಿಜ ಅರ್ಥ ಹೊರತೋರಿಸದೆ ಪ್ರಾರಂಭದ ಶಕ್ತಿ ಗುಟ್ಟಲ್ಲೇ
ಬಚ್ಚಿಕುಳಿತಿದೆ
ವಿಶ್ವದ ರಚನೆ ದೈವತ್ವದ ರಚನೆ ತನ್ನದೇ ಆದ ಗತ್ತಿನಲ್ಲಿ
ಗರ್ವ ಪಡೆಯುತ್ತ. . ಗರ್ವದ ಅರ್ಥ ಮರೆತುಹೋಗಿದೆ

**– ಶ್ರೀ ಹರಿ.**

**03–01–2015**



www.sriharikhoday.com

## 851

ಮನೋ ಪ್ರಭುತ್ವದಲ್ಲಿ ಅನೇಕ ಮನಗಳ ಮನಪ್ರಭುತ್ವ
ಪ್ರತಿಯೊಂದು ಮನಸ್ಸಿಗೆ ಜೀವಂತವಾಗಿರಲು ಹಕ್ಕಿದೆ
ಮನದ ಮನ ಹೇಳಿದಂತೆ ನಡೆದುಕೊಳ್ಳುವ ಪ್ರಭುತ್ವವಿದೆ
ಸತ್ಯದ ಜೊತೆ ಜೊತೆ ಜೊತೆ ನಡೆಯುವ ಹಾದಿಯೇ
ಮನೋಪ್ರಭುತ್ವದ ಹೆದ್ದಾರಿ!

ಹೆದ್ದಾರಿಯಲ್ಲಿ ನಡೆಯುತ್ತಿರುವ ಮನಗಳು
ಹೆಜ್ಜೆಯ ಗುರುತನ್ನು ಬಿಡದೆ
ಇಲ್ಲಿಂದ ಅಲ್ಲಿ. .ಅಲ್ಲಿಂದ ಇಲ್ಲಿ ನಡಿಗೆಯಿಲ್ಲದೆ
ಒಂದು ಕಡೆಯಿಂದ ಮತ್ತೊಂದೆಡೆಗೆ ಕರೆದುಕೊಂಡು
ಹೋಗುತ್ತದೆ!

ಜಗತ್ತಿನ ಎಲ್ಲಾ ಮನಗಳು ಒಂದು ದೊಡ್ಡ ಜಗತ್ತಿನ ಹೆದ್ದಾರಿಯಲ್ಲಿ
ಒಬ್ಬನ್ನೊಬ್ಬರು ನೋಡಿ ಸವಾಲುಗಳ ಹಾಕುತ್ತ ಧಿಕ್ಕರಿಸುತ್ತ
ಒಂದೊಂದು ಶರೀರದಲ್ಲಿ . ನಭೋಮಂಡಲದಲ್ಲಿ ಎಣಿಸಲಾಗದ
ನಕ್ಷತ್ರಗಳಂತೆ
ಮನಗಳು ಕೂಡ ಶರೀರಕ್ಕೆ ಎಚ್ಚರಿಸಲು ಮಿನುಗುತ್ತಲೇ ಇವೆ !

ಶಾಂತಿಯಿಲ್ಲದ ಮನಸ್ಸು ಶಾಂತಿಯ ಅರ್ಥ ತಿಳಿದು
ತಿಳಿಯದೇ ಇರುವಂತಹ ನಟನೆ ಮಾಡುವ ಮನಸ್ಸುಗಳು
ಶರೀರದಲ್ಲಿ ಕೂಡಿ ಜೊತೆಯಾಗಿ
ಮನಸ್ಸೇ ವ್ಯಕ್ತಿ ರೂಪ ಪಡೆಯುತ್ತಿದೆ !

ಮನಸ್ಸಿನ ಮೂಲ ಉದ್ದೇಶ ಸುಖ
ಜೇಬಿನಲ್ಲಿ ಸುಖ ಇಟ್ಟುಕೊಳ್ಳಲಾಗದಿದ್ದರೂ
ಸುಖವನ್ನು ಯಾವ ರೀತಿಯಿಂದಲೂ ಎಣಿಕೆಮಾಡಲಾಗದಿದ್ದರೂ
ಸುಖಬೇಕು. ಸುಖಬೇಕು ಎಂದು ನಿಶ್ಯಬ್ದದಲ್ಲಿ ಕೂಡಿಕೊಳ್ಳುತ್ತಿದೆ !

ಹತೋಟಿಯಿಲ್ಲದ ಮನಸ್ಸು ಬೇರೆಯವರದು ನಮಗೆ ಬೇಕು
ಬೇರೆಯವರಂತೆ ನಾನು ಇರಬೇಕು
ನಾನು ಹೇಳಿದ್ದೇ ನಡೆಯಬೇಕು ನಮ್ಮ ಮನೋ ಅಟ್ಟಹಾಸ
ವ್ಯಕ್ತಿಯಲ್ಲಿ ಕುಳಿತು
ವ್ಯಕ್ತಿಯ ಬಾಯಿಂದ ಮಾತನಾಡಿಸುತ್ತದೆ !

ದೈವತ್ವದಿಂದ ತಾನು ಹುಟ್ಟಿದರೂ ದೈವತ್ವವನ್ನೇ ಲೆಕ್ಕಿಸದೆ
ಹೆದರಿಕೆ ತಿಳಿಯದ ಬೆದರಿಕೆ ಹಾಕುತ್ತ
ಸವಾಲುಗಳನ್ನು ಧಿಕ್ಕರಿಸುತ್ತ
ಶರೀರದಲ್ಲಿ ಉಸಿರಿರುವವರೆಗೂ ಜೀವಂತವಾಗಿರುತ್ತದೆ !

ಶರೀರದ ಒಡೆಯ ಮನಸ್ಸೋ . .
ಶರೀರವೇ ಮನಸ್ಸಿನ ಒಡೆಯನೋ ತಿಳಿಯದೆ
ಶರೀರ ಬೆಳೆದಾದ ಮೇಲೆ ದೈವತ್ವದಲ್ಲಿ ಬೆರೆಯಬೇಕಾದರೆ
ದೈವತ್ವವನ್ನು ಪ್ರಕೃತಿಯಲ್ಲಿ ಕಾಣಬೇಕಾದರೆ

ನಾವು ಹೇಳುವಂತೆ ಮನ ಕೇಳುವಂತೆ ನಮ್ಮ ಮನದಲ್ಲಿ ಕಾಲವನ್ನು
ಬೆರೆಸಿಕೊಂಡು
ಮನಸ್ಸಿಗೆ ಭೇಟಿ ಸಮಯ ಕೊಡಲಾರಂಭಿಸಿದರೆ ಶಾಂತಿ
ರೂಪದಲ್ಲಿರುವ ಶರೀರ
ಸಮಯ ಇದ್ದಾಗ ಮನಸ್ಸಿಗೆ ಭೇಟಿ ನೀಡಲು ಒಪ್ಪಿಕೊಂಡರೆ
ಕೆಲವೇ ಸಮಯದಲ್ಲಿ ಮನಸ್ಸು ಶರೀರದ ಮನಸ್ಸಿನ ಹತೋಟಿಗೆ
ಬರುತ್ತದೆ !

**– ಶ್ರೀ ಹರಿ.**

**05-01-2015**



## 852

ಧೈರ್ಯವಾಗಿ .. ನಿಸ್ಪಕ್ಷಪಾತ . .ಶಾಂತಿಯಿಂದ
ಉರಿಯಬೇಕಾಗಿರುವ ಮನೋ ಶಾಂತಿ
ಬಿನ್ನ ಭಾವನೆಗಳ ಗಾಳಿಗೆ ಸಿಲುಕಿ
ತನ್ನ ನೆಮ್ಮದಿಯನ್ನು ಕಳೆದುಕೊಂಡಿದೆ !

ಎಲ್ಲಾ ಮನಸ್ಸುಗಳಿಗೆ ಸ್ವಾತಂತ್ರ್ಯವನ್ನು ಅನುಭವಿಸುವ ಇಚ್ಛೆ
ತಾನು ನೆನೆಸಿದ ಹಾಗೆಯೇ ನಡೆಯಬೇಕೆಂಬ ಇಚ್ಛೆ
ತಿಳುವಳಿಕೆ ಇಲ್ಲದೆ ಸ್ವಾತಂತ್ರ್ಯ ಪಡೆಯುವುದು
ಅಪಾಯಕಾರಿ ಎಂಬ ಜ್ಞಾನ ಇಲ್ಲದ ಮನಸ್ಸುಗಳು

ಭೂಲೋಕದ ನಡೆ-ನುಡಿ . .ಭೂಲೋಕದ ಚರಿತ್ರೆ
ಭೂಲೋಕದ ಭವಿಷ್ಯವನ್ನು ಆತಂಕಕ್ಕೆ ಒಳಗಾಗಿಸುತ್ತದೆ
ಶುದ್ಧ ಉದ್ದೇಶವಿಲ್ಲದ ಮನಸು, ಮನಸ್ಸಿಗೆ ಭಾಸವಾದರೆ
ಅಪಕಾರಿ ಜೊತೆ ವಿಶ್ವಾಸ ಬೆಳೆಸಿದಂತೆ !

ತನ್ನ ಒಳಗಿನ ಶಾಂತಿಯನ್ನು ಮರೆತು ಹೊಸದರ ಜೊತೆ ಬೆರೆತು
ಸುಖ ಶಾಂತಿಯನ್ನು ಲಾಭವಾಗಿ ಪಡೆಯಬೇಕೆನಿಸುತ್ತದೆ
ಶಾಂತಿ ಒಳಗಡೆಯಿಂದ ಬೆಳೆಯಬೇಕೆ ಹೊರತು
ಹೊರಗಿನಿಂದ ಬರುವ ವಸ್ತುವಲ್ಲ !

www.sriharikhoday.com

ವಿಶ್ವ ವೃಕ್ಷದ ಎಲೆಗಳಾಗಿರುವ ನಾವು
ಎಂದೆಂದಿಗೂ ವಿಶ್ವದ ಪ್ರಜ್ಞೆಯನ್ನು ಮರೆಯಕೂಡದು
ತಪ್ಪಾಗಿ ನಡೆಯುತ್ತಿರುವ ಮನಸ್ಸುಗಳಿಗೆ
ಕಾಣದ ನೋವಿನಿಂದ ನರಳುತ್ತಿರುವ ಮನಸ್ಸುಗಳಿಗೆ

ಪ್ರೀತಿಯಿಂದ ಉಪಚರಿಸಿ ಸರಿಪಡಿಸುವುದು ಮಾನವನ ಕರ್ತವ್ಯ
ಹಸಿರಿಗೆ ಸೂರ್ಯನ ಬೆಳಕಿನ ಮೇಲೆ ವಿಶ್ವಾಸವಿರುವಂತೆ
ಸಮುದ್ರಕ್ಕೆ ಅಲೆಗಳು ಹೊರ ಹೋಗುವುದಿಲ್ಲವೆಂದು
ಜೊತೆಗೆ ಇರುವುದೆಂಬ ವಿಶ್ವಾಸವಿರುವಂತೆ

ನಿಮ್ಮಲ್ಲಿರುವ ನಿಮ್ಮ ಮನಸ್ಸಿನ ಮೇಲೆ ವಿಶ್ವಾಸ ಬೆಳೆಸಿದರೆ
ನಾವು ಹೊಸ ಲೋಕವನ್ನೇ ಸೃಷ್ಟಿ ಮಾಡಿದಂತೆ

**– ಶ್ರೀ ಹರಿ.**

**06–01–2015**



## 853

ಎಲ್ಲವೂ ಹೃದಯದಲ್ಲೆ. .
ಎಲ್ಲವೂ ಮನಸ್ಸಿನಲ್ಲೆ. . .
ಎಲ್ಲಾ ಮನಸ್ಸಿನ ಕಣ್ಣುಗಳು
ಒಂದನ್ನೊಂದು ನೋಡುತ್ತಲೇ ಇವೆ !

ನೋಡುತ್ತಿರುವುದೇನೆಂದು ನಾವು ಅಳೆದರೆ
ಒಡೆದುಹೋಗಿರುವ ಮನೋ ಕನ್ನಡಿಯನ್ನು ನೋಡುತ್ತಿದೆ
ಒಂದೊಂದು ಒಡೆದುಹೋದ ಕನ್ನಡಿಯ ಮನೋನೋಟ
ಬಣ್ಣ ಬಣ್ಣಗಳ ನಿರ್ಧಾರವನ್ನು ಸೂಚಿಸುತ್ತಿದೆ !

ನಗೆಯ ಸುಖ ಮರೆತುಹೋಗಿರುವ ಮನಸ್ಸಿನ ಕಣ್‌ಗಳಿಗೆ
ಅನೇಕ ಭಾನವೆಗಳು
ಒಬ್ಬರನ್ನೊಬ್ಬರು ದೂಷಿಸುವುದು . .
ಮತ್ತೊಬ್ಬರನ್ನು ಹಗುರಾಗಿ ಮಾತನಾಡಿಸುವುದು

ಒಬ್ಬರನ್ನೊಬ್ಬರನ್ನು ಅಪಮಾನಿಸುವುದು
ಈ ದೆಸೆಯ ಮನೋನೋಟದ ಸಾಧನೆ, ತಾನು ಗೆಲುವನ್ನು ಪಡೆದು
ಸಾಧಿಸಿರುವಂತೆ. . ವಿಚಿತ್ರವಾದ ತಮ್ಮದೇ ಆದ ತರ್ಕಶಾಸ್ತ್ರ!



www.sriharikhoday.com

ನಮ್ಮ ಮನಸ್ಸಿನಲ್ಲಿರುವುದು ಒಂದೇ ಮನಸ್ಸು
ಆ ಮನಸ್ಸಿಗೆ ಇರುವುದೊಂದೇ ನೋಟ
ಕನ್ನಡಿಯು ಮತ್ತೊಂದು ಎದುರಿಗಿರುವ ಕನ್ನಡಿಯನ್ನು ನೋಡಿದರೆ
ಕೊನೆ ಕಾಣದ ಕಲ್ಪನಾ ಚಿತ್ರಗಳು ಕಾಣಿಸುವಂತೆ

ಅದು ಇಲ್ಲದಿದ್ದರೂ ಕನ್ನಡಿಯ ಕಲ್ಪನೆಯಂತೆ
ಮನಸ್ಸು ಸ್ವಯಂಕಲ್ಪಿತ ಕಲ್ಪನೆಯ ಪ್ರತಿಬಿಂಬಗಳು
ನಾನಾ ಊಹಾಪೋಹಗಳನ್ನು ಸತ್ಯವೆಂದು
ತಮ್ಮದೇ ಆದ ಕಣ್ಣುಗಳಿಂದ ನೋಡಲಾರಂಭಿಸಿದೆ

ಸ್ಥಿರವಲ್ಲದೆ ಒಡೆದುಹೋದ ಕನ್ನಡಿಯಂತಿರುವ ಮನಸ್ಸು
ಚಿತ್ರ ವಿಚಿತ್ರ ಅನುಭವಗಳು ಮತ್ತೆ ಬಿಂಬ ಪ್ರತಿಬಿಂಬಗಳ ಆಟದಲ್ಲಿ
ಮಾನವನ ಮನಸ್ಸಿನ ಸ್ಥಿರತೆ ಕಳೆದುಕೋಗಿ
ಜೊತೆಗೇ ಇರುವ ಸತ್ಯವನ್ನು ಹೊರಗೆ ತಳ್ಳಿ ಹಾಕುತ್ತಿದ್ದಾನೆ !

**– ಶ್ರೀ ಹರಿ.**

**07-01-2015**



## 854

ದಿನದಿನವೂ ಹೊಸದು . . .ಈ ದಿನ ಹೊಸದು
ಇಂದಿನ ಜೀವನದ ಕವಿತೆಗಳು ಹೊಸದು
ಅರ್ಥಪೂರ್ಣವಾದ ಜೀವನ ದಿನವೂ ಹೊಸ ಜೀವನ
ದಿನವೂ ದೇವರನ್ನು ನೆನೆಸುವುದು ಅದೇ ಹಾಡಾದರೂ . .
ಎಂದಿಗೂ ಅದು ಹೊಸದು . .!

ದಿನವೂ ದೈವಸೃಷ್ಟಿಯಲ್ಲಿ ಹೊಸ ಹೊಸ ಭಾವನೆ ಮೂಡುವುದು
ಹೊಸದು
ಬಂದು ಹೊಸದರಲ್ಲಿ ಹಳತನ್ನು ಕಾಣದೆ ಹೊಸತನವನ್ನು
ಅನುಭವಿಸುವುದು ಲೇಸು
ಕನ್ನಡಿ ಎದುರಿಗೆ ನಾವು ನಕ್ಕರೆ ಕಾಣುವ ನಮ್ಮ ನಗೆ ಯೌವ್ವನಕ್ಕೆ
ಹೊಸದು
ಅಡ್ಡಹಾಕಲಾರದ ಕಣ್ಣೋಟದ ಆಸೆಗೆ ನಗೆ ತುಟಿಯ ಮೇಲೆ
ಹರಿದು ಹೋಗುತ್ತಿರುವ ರೀತಿ ಅದು ನಮ್ಮ ಜೀವನ ಯೌವ್ವನದ
ಲೀಲೆ !

ಕನ್ನಡಿಯ ಪ್ರತಿಬಿಂಬದಲ್ಲಿ ನಮ್ಮ ನೋಟ ನಾವೇ ನೋಡಿ
ಹಿಗ್ಗಿಕೊಂಡು
ಆ ಹಿಗ್ಗೇ ಒಂದು ಜೀವನದ ಅಸ್ತ್ರವಾಗಿ ಯೌವ್ವನದ ಆತುರ
ನಮ್ಮನ್ನು ಅದರ ಜೊತೆಗೆ ಹಾರಿಸಿಕೊಂಡು ಹೋಗುತ್ತದೆ
ಉದಯಿಸುತ್ತಿರುವ ಸೂರ್ಯ-ಚಂದ್ರರು ಜಗತ್ತಿನಲ್ಲಿ ಹೊಸತನ್ನು
ನೋಡಲು



www.sriharikhoday.com

ತಮ್ಮ ಹೊಸತನವನ್ನು ಅನುಭವಿಸಲು ದಿನವೂ ದಿಗಂತಗಳನ್ನು
ಹುಡುಕಿ ಉದಯವಾಗುತ್ತಿದ್ದಾರೆ

ಮಾನವನಲ್ಲಿ ಕರುಣೆ ಹುಟ್ಟಬೇಕಾದರೆ ಕಾಣುವ ಎದುರಲ್ಲಿ
ಬೆರೆತು
ಹೊಸತನ್ನು ಅನುಭವಿಸಿದರೆ ಕರುಣೆ ಚಿಮ್ಮಿ ಉದಯಿಸುತ್ತದೆ
ಜ್ಞಾನದ ಅರಿವಿಗೆ ತಿಳಿಯದ ನೆನಪುಗಳು ಮರೆತು
ಹೊಸತನ್ನು ಅನುಭವಿಸುವ ಸುಖ ದೇವರಿಗೆ ಹೋಲಿಸಬಹುದು

ಆ ಸುಖದ ನೆನಪುಗಳನ್ನು ಮತ್ತೆ ಮತ್ತೆ ನೆನಪಿಸುವುದು
ಹೊಸ ನೆನಪುಗಳಾಗಿ ಅತಿ ಮಧುರವಾದ ಭಾವನೆಯನ್ನು
ಮೂಡಿಸುತ್ತಿದೆ !
ಮೊದಲು ಕೊನೆಯಿರುವಂತೆ ಕೊನೆ ಮತ್ತೆ ಮೊದಲಾಗುವಂತೆ
ಕೊನೆ-ಮೊದಲು ತರಂಗಗಳು ಸುಖದ ದೆಸೆಯಲ್ಲಿ ಮಾತ್ರ
ಪಡೆಯಬಹುದು

ಭೂತ-ಭವಿಷ್ಯ-ವರ್ತಮಾನಗಳಲ್ಲಿ ಹೊಸತು ಜೀವಂತವಾಗಿಯೇ
ಇದೆ
ಭೂತ-ಭವಿಷ್ಯ-ವರ್ತಮಾನಗಳಲ್ಲಿ ಜೊತೆಯಿರುವ ದೇವರು
ಸುಖವನ್ನೇ ನೀಡಲು ನಮ್ಮ ಜೊತೆಗಿದ್ದಾರೆ !

**- ಶ್ರೀ ಹರಿ.**

**07-01-2015**



www.sriharikhoday.com

## 855

ಮನಸ್ಸು ಒಂದೆಡೆ ಇಲ್ಲದೆ ಸರಿಯುತ್ತಲೇ ಇದೆ
ನೋಡುತ್ತಾ ನೋಡುತ್ತಾ ಮೆಲ್ಲಗೆ ದಿಗಂತಗಳು ಸರಿಯುತ್ತಲಿವೆ
ಮನೋಹೆಜ್ಜೆಗಳು ಚರಿತ್ರೆಯನ್ನು ಬಯಸುತ್ತಿದೆ
ಕ್ಷಣ ಕ್ಷಣಕ್ಕೂ ಬದಲುತ್ತಿರುವ ಮರಳುದಿಣ್ಣೆಯಂತೆ
ಮನಸ್ಸಿನ ಭಾವನೆಗಳು ಬದಲುತ್ತಲೇ ಇದೆ !

ಅಪರಿಚಿತ ತತ್ವಗಳು ಪೂರ್ಣ ತತ್ವಗಳಾಗಿ ಮಾರ್ಪಾಟಾಗುತ್ತಿದೆ
ಸುಖದ ಸತ್ಯ ತಿಳಿಯದೆ ತಪ್ಪುಗಳ ಮಾಡುತ್ತ ಸುಖವನ್ನು
ಹುಡುಕುತ್ತಿದೆ
ಮನಸ್ಸಿನ ಮೂಖಾಜ್ಞೆಗಳು ಅಸ್ತಿತ್ವವ ತರಿಸಿ ತಲೆತಗ್ಗಿಸುವಂತೆ
ಮಾಡುತ್ತಿದೆ
ಮಡಕೆ ಚೂರಿನಿಂದ ಮುರಿದಂತಿರುವ ಮುರಿದುಬಿದ್ದ ಭಾವನೆಗಳು
ಸಪ್ಪಳವಿಲ್ಲದಂತೆ ಮನ ಹೆಜ್ಜೆ ಹಾಕುತ್ತಿದೆ !

ಬಂಜೆಯಾದ ಮನಸ್ಸು ವಸಂತನು ಬಂದಾಗ ಶಬ್ದಗಳೇ
ಪ್ರತಿಮೆಯ ರೂಪ ತಾಳಿ
ಬದಲಿದ ಭಾವನೆಗಳಿಂದ ಮಾತಿನ ಧ್ವನಿಯ ರೀತಿ ಬದಲುತ್ತಿದೆ
ಗಂಡಿಗೆ ಹೆಣ್ಣಿನ ಮಾತು . .ಹೆಣ್ಣಿಗೆ ಗಂಡನ ಮಾತು
ಕಲೆಯ ಅರ್ಥದ ರೂಪದಲ್ಲಿ ಇಬ್ಬರ ಮನದ ಬಯಕೆಗಳು
ಧ್ವನಿಯಾಗುತ್ತಿದೆ

ಹುಟ್ಟಿಸಿದವರನ್ನು ಮರೆತಿರುವ ಜೀವ . .ಮರೆವಿಗೆ ಮನಸ್ಸುಗಳೇ
ಕಾರಣವಾಗಿ
ಶೂನ್ಯದ ದರ್ಬಾರಿನ ಮನೋಸಿಂಹಾಸನದ ಮೇಲೆ ಕುಳಿತು
ದರ್ಬಾರು ನಡೆಸುತ್ತಿದೆ
ಯಾರೋ ಯಾರನ್ನೋ ಹುಡುಕುವಂತೆ ಸಂಬಂಧವಿಲ್ಲದ
ಹುಡುಕಾಟದಲ್ಲಿ ತಲೆ ಎತ್ತಿ ಆಕಾಶದಲ್ಲಿ ಹುಡುಕುತ್ತಿದೆ
ಯಾರೋ ಬಿಟ್ಟುಹೋಗಿರುವ ಚರಿತ್ರೆಯನ್ನು
ನನ್ನ ಚರಿತ್ರೆ ಎಂದು ಹೊಗಳಿಕೆ ಬಯಸುತ್ತಿದೆ !

ಭ್ರಮೆಯೋ . . ಭವಿಷ್ಯವೋ . ಭವಿಷ್ಯವೋ . .ಭ್ರಮೆಯೋ
ನಿಜವನ್ನು ತಿಳಿಯಲಾಗದ ಮನಸ್ಸು ಒಂದೆಡೆ ನಿಲ್ಲದೆ ಸರಿಯುತ್ತಾ
ಸರಿಯುತ್ತಾ
ದಿಗಂತಗಳ ಎದುರಿಗೆ ಏಕಾಂಗಿಯಾಗಿ ತಲೆ ಎತ್ತಿ . .
ತಲೆ ತಗ್ಗಿಸಿ ಬರದೇ ಇರುವುದರ ಜೊತೆ
ತಲೆ ಎತ್ತಿ ಅಲ್ಪಕಾಲ ಸುಖ ಪಟ್ಟು
ತಲೆ ತಗ್ಗಿಸಿ ಆಗುತ್ತಿರುವ ದುಃಖವನ್ನು ಯೋಚಿಸುತ್ತಿದೆ!

**– ಶ್ರೀ ಹರಿ.**

**08-01-2015**



www.sriharikhoday.com

# 856

ಅಜ್ಞಾನಕ್ಕೆ ಜ್ಞಾನವೇ ಅಸ್ತ್ರ
ತಾಯಿ ಕೊಟ್ಟ ಅಸ್ತ್ರ ಜನ್ಮತಾ, ನಮಗೇ ತಿಳಿಯದೆ ನೀಡಿರುವ ಅಸ್ತ್ರ
ಕಾಣದೆ ಹುಟ್ಟುವ ಅಜ್ಞಾನಕ್ಕೆ ತಾಯಿ ನೀಡಿರುವ ಜ್ಞಾನವೇ ಅಸ್ತ್ರ

ತೊಂದರೆ ಕೊಡುವ ನಾನಾ ಅಸ್ತ್ರಗಳಿಗೆ
ಎದುರಾಗಿ ಜಯಗಳಿಸಲು ತಾಯಿ ನೀಡಿರುವ ಜ್ಞಾನ ಅಸ್ತ್ರ
ಭೂತ-ಭವಿಷ್ಯ-ವರ್ತಮಾನಗಳ ಜೊತೆ ಸೇರಿ ಬಾಳುವ ರೀತಿ
ಕಲಿಸುವ ಜ್ಞಾನ ಅಸ್ತ್ರ !

ಸಾಧ್ಯ . .ಸಾಧ್ಯ . ನಿಜಕ್ಕೂ ಸಾಧ್ಯ ಎಂದು ಧೈರ್ಯ ನೀಡುವ
ತಾಯಿ ಅಸ್ತ್ರ
ತನ್ನಲ್ಲಿ ಸಾಧಿಸುವ ಶಕ್ತಿ ಇದೆಯೆಂಬ ಬಲವನ್ನು
ಬಲಪಡಿಸಿ ಜಯಗಳಿಸುವ ತಾಯಿ ನೀಡಿರುವ ಅಸ್ತ್ರ !

ಎಂದೂ ಕಳೆದುಹೋಗದ ಎಂದಿಗೂ ಮೊಂಡಾಗದ
ಜೀವಂತಪರಿ ಜೊತೆಕಾಯುವ ಅಸ್ತ್ರ
ತಾಯಿ ನೀಡಿರುವ ಜ್ಞಾನದ ಅಸ್ತ್ರ

ಶಸ್ತ್ರದಿಂದ ದುಃಖ ಸಂಪಾದಿಸದೆ
ತನಗೆ ಸುಖ ಜಯಗೊಳಿಸಿ ಬೇರೆಯವರ ಜೊತೆ ಬೆರೆತು
ಜೊತೆ ಸುಖಪಡಿಸುವ ಅಸ್ತ್ರ ತಾಯಿ ಕೊಟ್ಟಿರುವ ಜ್ಞಾನದ ಅಸ್ತ್ರ !

ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ
ಎತ್ತರದಿ ಕಾಣಬಲ್ಲ ದಿಗಂತಗಳನ್ನು ಸಾಧಿಸಬಲ್ಲ
ತಾಯಿ ವರವಾಗಿ ನೀಡಿರುವ ಜನ್ಮತಾ ನೀಡಿರುವ ಜ್ಞಾನ ಅಸ್ತ್ರ!

**– ಶ್ರೀ ಹರಿ.**

**08-01-2015**



# 857

ರಾಜರಸ್ತೆಯಲ್ಲಿ ನಡೆಯುತ್ತಿರುವ ನನ್ನ ಮನಸ್ಸು
ಎರಡೂ ಕಡೆ ನಿಂತು ಜೊತೆ ನಡೆಯುತ್ತಿರುವ ಜನಗಳು
ನನ್ನನ್ನು ಶ್ಲಾಘಿಸುತ್ತಿದ್ದಾರೆ
ನನ್ನ ಒಳ್ಳೆಯ ಕೆಲಸಗಳಲ್ಲಿ ತಪ್ಪನ್ನು ಹುಡುಕುತ್ತಿದ್ದಾರೆ

ಕನ್ನಡಿಯ ಮೂಕ ಬುದ್ಧಿಯಂತಿರುವ ನನ್ನ ಮನಸ್ಸು
ನಡೆಯುತ್ತಾ, ನಡೆಯುತ್ತಾ ಬೇರೆಯವರ ಮನೋಪ್ರತಿಬಿಂಬಗಳನ್ನು
ನನ್ನ ಮನಸ್ಸು ಗ್ರಹಿಸಿ ನನ್ನ ಮನೋ ಕನ್ನಡಿ
ನನ್ನನ್ನು ನಗುವಂತೆ ಮಾಡುತ್ತಿದೆ!

ಮನೋಬೇಸರವೇ ವಿನೋದವಾಗಿ ಸ್ವೀಕರಿಸಿ
ಚಿಂತೆಗಳನ್ನು ಗೆದ್ದಿರುವ ನನ್ನ ಮನ
ಕೆಟ್ಟ ಮನದ ನೋಟಕ್ಕೆ ಬೇಸರಪಡದೆ ನೋಟವನ್ನೇ ನುಂಗಿ
ದಯಾ ದೃಷ್ಟಿಯನ್ನು ಪ್ರತಿಬಿಂಬಿಸುತ್ತಿದೆ!

ಕೆಟ್ಟವರಾಗಲೀ, ಒಳ್ಳೆಯವಾರಾಗಲೀ ಅವರ ಬೇಡಿಕೆಯನ್ನು
ದೇವರು
ಅಸ್ತು ಎಂದು ಹೇಳುವಂತೆ
ನಿನ್ನ ಈ ರಾಜರಸ್ತೆಯ ನಡಿಗೆ ತನಗೆ ತೋಚಿದಂತೆ
ಅಸ್ತು ಎಂದು ಹೇಳು ಎನ್ನುತ್ತಿದೆ!

www.sriharikhoday.com

ಎದೆಯಲ್ಲಿ ಸದ್ದಿಲ್ಲದೆ ನಿಶ್ಶಬ್ದದಲ್ಲಿ ಕಾಲ
ನನ್ನನ್ನು ಜೋಕಾಲೆ ಆಡಿಸುತ್ತ ಕೆಟ್ಟದ್ದು. .ಒಳ್ಳೆಯದನ್ನು ನಿದ್ರೆಯಲ್ಲಿ
ಮರೆಸಿ

ಬಾನಲ್ಲಿ ಬೆಳಕು ಬಂದಾಗ ಎದ್ದಿರುವ ಎಚ್ಚರ
ಇಂದೇ ಹೊಸದಾಗಿ ದೀಪವನ್ನು ನೋಡಿದಂತೆ ಕಾಣುತ್ತಿದೆ !

ರಾಜರಸ್ತೆಯ ಮಾತು ನೋವಿನಿಂದ ನೋಯಿಸಿಕೊಳ್ಳದೆ
ತಲೆ ಎತ್ತಿ ಸರಿಯಾಗಿ ಮುನ್ನಡೆ ಎಂಬ ಮಾತುಗಳ ಕೇಳಿಸಿಕೊಂಡು
ಬಗ್ಗಲು ಯತ್ನಿಸುತ್ತಿರುವ ಬೆನ್ನು ನೆಟ್ಟಗೆ ಹೊಸ ವಿಮರ್ಷೆಗಳ
ಮನೋವಾತಾವರಣದಲ್ಲಿ
ರಾಜ ರಸ್ತೆಯು ನನ್ನನ್ನು ಕೈಹಿಡಿದು ಮುನ್ನಡೆಸಿಕೊಂಡು
ಹೋಗುತ್ತಿದೆ !

**– ಶ್ರೀ ಹರಿ.**

**09–01–2015**



## 858

ಕಲೆ ಬಾಳಲಿ. . ಹೂವಿನ ಬಣ್ಣಗಳೂ ಬಾಳಲಿ
ಕಲೆಯಲ್ಲಿ ಅಡಗಿರುವ ಸೌಂದರ್ಯ ಬಾಳಲಿ
ಬಾಳಿದವರ ಕಣ್ಣಿನ ನುಡಿಗಳು ಬಾಳಲಿ

ಕನ್ನಡಿ ಕವಿಸ್ತೋಮ ಬಾಳಲಿ
ತಾಯಿ . . ಸರಸ್ವತಿಯ ಆಶೀರ್ವಾದ
ಎಂದೆಂದಿಗೂ ಕುಂದಿಲ್ಲದೆ ಬಾಳಲಿ !

ನಮ್ಮ ಕುಲಮಾತೆಯಾದ ಗೋಮಾತೆ
ಕುಲ ಕಾಪಾಡುತ್ತಿರುವ ತಾಯಂದಿರು
ಕಾಪಾಡುತ್ತಿರುವ ಅವರ ಆಶೀರ್ವಾದ ದಿನೇ ದಿನೇ ಹೆಚ್ಚಾಗಿ
ಬಾಳಲಿ !

ಬದುಕಿನಲ್ಲಿರುವ ಅನೇಕ ಕುಲಬಾಂಧವರ
ಮನಸ್ಸಿನಲ್ಲಿ ಕರುಣೆ ಪ್ರೀತಿ ಹೆಚ್ಚಾಗಿ ಬಾಳಲಿ !

ತಾಯಿಯಂತೆ ಹಾಲುಕೊಟ್ಟು ಸಲಹುವ ನೀ
ಜೊತೆ ಜೊತೆ ಜೀವನದಲ್ಲಿ ನಿನ್ನ ಆಶೀರ್ವಾದವೇ ಒಂದು ಮಗು
ಅದನ್ನು ಕಾಪಾಡಿ ಬೆಳೆಸುತ್ತಿರುವ ಭಾವನೆಗಳು ಹಚ್ಚಲಿ !

ಧಾರಾಕಾರವಾಗಿ ಎಲ್ಲರ ಮನದಲ್ಲಿ
ಎಲ್ಲಾ ಮನೋಚಿಂತನೆಗಳಲ್ಲಿ ಮಿತಿಯಿಲ್ಲದೆ ನಡೆಯುತ ಹರಿಯಲಿ
ಅಜ್ಞಾನಿಗಳಿಗೆ ಜ್ಞಾನಿಗಳಿಗೆ ನಿನ್ನ ಕರುಣೆಯೇ ದೈವ

www.sriharikhoday.com

ಯಾರೂ ನಿರಾಕರಿಸಲಾಗದ ನಿನ್ನನ್ನು ಮನದಲ್ಲೇ ನೆನೆದು
ದರ್ಶನ ಪಡೆದರೆ ಭವಿಷ್ಯ ಕೈ ಹಿಡಿದು ಮುಂದೆ
ಕೊಂಡುಹೋಗುತ್ತಿದೆ

ನಿನ್ನ ನೆನಪುಗಳೇ ಗೋಮಾತೆ ನಮ್ಮನ್ನು ತಲೆ ಬಗ್ಗಿಸಿ
ನಿನ್ನನ್ನು ನಮಿಸುವಂತೆ ಮಾಡುವ
ಮಹಾ ಶಕ್ತಿ ದಿನೇ ದಿನೇ ಹೆಚ್ಚಾಗಿ ಬೆಳೆಯಲಿ !

ನಿನ್ನ ನ್ನು ಅಗಲದೇ ಜೊತೆ ಜೊತೆಯಲ್ಲೇ ಸುತ್ತಿಕೊಂಡಿರುವ
ನನ್ನ ಮನಸ್ಸಿಗೆ ಒಳ್ಳೆಯದಾಗಲಿ ಎಂದು ಹರಸು ಓ ತಾಯೇ

**– ಶ್ರೀ ಹರಿ.**

**09–01–2015**



# 859

ಈ ಶರೀರದಲ್ಲಿ ಜ್ಞಾನ ಒಂದು ಮುಖ್ಯ ಅಂಗವಾಗಬೇಕಿದೆ
ಸಕಾಲ ಜ್ಞಾನದಿಂದ ಉಪಯೋಗಕಿಲ್ಲದಿದ್ದಲ್ಲಿ ತಾಪತ್ರಯದ
ಗೋಳಾಟ !

ಹಗುರಾದ ಮಾತುಗಳನ್ನಾಡುತ್ತ ನವಿರಾದ ಭಾವನೆಗಳನ್ನು
ನಮಿಸುತ್ತ
ಮೂಕನಾಗಿರುವ ಮನಸ್ಸಿನ ಜೊತೆ ಬೆಳೆಸಿಕೊಂಡು
ಚಂದಿರನ ಮೀರಿಸುವ ಸೊಬಗ ಪಡೆದಿರುವ
ಕಾಂತೆಯೊಡನೆ ಕಾಲ ಕಳೆದು ನಮಿಸಿಕೊಂಡಿರುವುದು !

ಮನೋಮಡಿ ಜೀವನವನ್ನು ಬಿಟ್ಟು ಎಲ್ಲರ ಜೊತೆ ಬೆರೆತು
ಒಂದೆಡೆ ಹಿತವಚನಗಳ ಸಾಲು ಮತ್ತೊಂದೆಡೆ
ಹಿತವಚನಗಳ ಸಾಧನೆಗಳಿಗೆ ಅಡ್ಡಿಯಾಗುತ್ತಿರುವ
ಜೊತೆ ಬರದ ಅಹಂಕಾರವನ್ನು ಬೇರೆ ಇಡಿಸಿ

ನೆಲದ ಹಾಸಿಗೆಯ ಮೇಲೆ ನಿದ್ರಾಪರನಾಗಿ ತನ್ನನ್ನೇ ತಾನು ಮರೆತು
ಇದಕ್ಕಿಂತ ಸ್ವರ್ಗ ಇರಲಾರದೆಂದು ಎನಿಸುವ
ನಡೆ . .ನಡೆ ಮುನ್ನಡೆ ಎನ್ನವ ಲೋಕದೆಡೆಗೆ ಬೆರೆತು
ಜ್ಞಾನವನ್ನು ಲಾಭದ ದೃಷ್ಟಿಯಿಂದ ನೋಡದೆ

www.sriharikhoday.com

ಮನೋತರ್ಕದ ಸುಳಿಗೆ ಸಿಗದೆ
ತನ್ನ ಮನೋ ಹಿಡಿತದಲ್ಲಿ ತಾನು ಸೇರಿಕೊಂಡು
ಹಳ್ಳ ದಿಣ್ಣೆಯಲ್ಲಿ ನಿಶೆ ಏರಿಸಿ ನಡೆದುಕೊಂಡು
ಜವಾಬ್ದಾರಿಗಳ ಎಚ್ಚರಿಕೆಯನ್ನು ಎಚ್ಚರಿಸಿ

ಎಲ್ಲಾ ಜಗತ್ತಿನ ಗೋಜಿನಲ್ಲಿ
ಸರಿ ಎನಿಸಿಕೊಳ್ಳುವ ಮನೋವಾತಾವರಣದಲ್ಲಿ
ಶೂನ್ಯದ ಅರ್ಥ ತಿಳಿದಿರುವ
ಜ್ಞಾನವಂತರ ಜೊತೆಗೆ ಕಾಲ ಕಳೆಯೋಣ !

– ಶ್ರೀ ಹರಿ.

12–01–2015



## 860

ಎಲ್ಲದರ ಆದಿಯನ್ನು ಪರಿಚಯಿಸಿರುವ ಹೇ ದೇವಿಯೇ
ಮೊದಲಿನಲ್ಲಿರುವ ಶಕ್ತಿಯನ್ನು ತೋರಿಸಕೊಟ್ಟಿರುವ ದೇವಿ
ಜ್ಞಾನದ ಹಂತಗಳನ್ನು ಸಂಗೀತ ವಾದ್ಯಗಳ ರಹಸ್ಯವನ್ನು
ಬರವಣಿಗೆಯ ಆಟವನ್ನು ಕಲಿಸಿರುವ ಹೇ ತಾಯಿ ದೇವಿಯೇ . .!

ಜನ್ಮಕೊಟ್ಟ ತಾಯಿಗೆ ಸುಖ ತರಿಸುವ
ಭಾಷೆಕ್ರಿಯೆಗಳ ಕಲಿಸಿರುವ ತಾಯಿಯೇ
ವಿಶ್ವದ ರಹಸ್ಯವನ್ನು ಮಾತಿನಲ್ಲಿ ಕಲಿಸುವುದಕ್ಕೆ
ಅಕ್ಷರಗಳ ಸರಮಾಲೆ ಬರೆಸಿ ಕಲಿಸಿದ ತಾಯಿಯೇ !

ಮೂಕನ ನಾಲಿಗೆಯ ಮೇಲೆ ಪೀಠದ ಜೊತೆಗೆ ಅಲಂಕರಿಸಿ
ವಿಶ್ವದ ಜ್ಞಾನವನ್ನು ಬರವಣಿಗೆಯ ರೂಪದಲ್ಲಿ
ಮಾರ್ಪಾಟಾಗಿಸಿ ತೊದಲುವ ನಾಲಿಗೆಗೆ
ಹಾಡಿಸಿದ ಜ್ಞಾನಕ್ಕೆ ಜನುಮ ಕೊಟ್ಟ ತಾಯಿಯೇ . . !

ಕಣ್ಣುಗಳಿಗೆ ಲೌಖಿಕದ ಅರ್ಥ ಮನದಾಳದಲ್ಲಿ ಬೆಳೆಸಿರುವ ದೇವಿಯೇ
ನೆನಸಿದೆಲ್ಲಾ ಕಾವ್ಯರೂಪವಾಗಿ ಮನೋಗೂಡಿನಿಂದ
ಜನ್ಮವೆತ್ತ ಪಕ್ಷಿಯ ಕೂಗಿನ ನವ ಸದ್ದಿನಂತೆ

ಮನದಿಂದ ಕಾವ್ಯಗಳನ್ನು ಹೊರಚೆಲ್ಲಿಸುತ್ತಿರುವ ತಾಯಿಯೇ !
ಸಂದೇಹಗಳೆಲ್ಲ ಮನದಿಂದ ಹೊರಹಾಕಿ

www.sriharikhoday.com

ಜ್ಞಾನದ ಜೊತೆ ಮೂಡಿದ ದೇವಿ
ರಾಗಬದ್ಧವಾಗಿ ನಾಲಿಗೆ . .ಕಂಠದಿಂದ ಹಾಡಿಸಿದ ತಾಯಿ

ಓಂಕಾರ ನಾದದ ಅನುಭವವನ್ನು ನನಗೆ ನೀಡಿ
ದೇವರ ಜೊತೆಗಿರುವ ವಿಶ್ವದ ಜೊತೆ ಬೆಳೆಸಿರುವ ತಾಯಿಯೇ
ಜಗತ್ತಿಗೆ ಒಪ್ಪುವ ಸ್ಥಿತಿಯಲ್ಲಿರುವ ನನಗೆ ಜನರ ಪ್ರೀತಿಯಲ್ಲಿ
ನನ್ನನ್ನು ಬೆರೆಸಿರುವುದಕ್ಕೆ ತಲೆ ಬಗ್ಗಿಸಿ ನಮಿಸಿರುವೆನು ತಾಯೇ !

ಎಲ್ಲಾ ಬಣ್ಣಗಲಿಗೆ ನಿನ್ನ ಆಶೀರ್ವಾದದಿಂದ
ದಿಗಂತದಲ್ಲಿ ಕಾಮನಬಿಲ್ಲು ಕಟ್ಟಿಕೊಳ್ಳುವಂತೆ
ನನ್ನ ಹತ್ತಿರ ಇರುವವರೆಲ್ಲ ಒಳ್ಳೆಯ ಭಾವನೆಯ ಹರಿಸುತ
ನನ್ನ ಹೊಗಳುತ್ತಿರುವುದು ನಿನ್ನ ಆಶೀರ್ವಾದ ತಾಯಿ !

– ಶ್ರೀ ಹರಿ.

12–01–2015



## 861

ತಲ್ಲಣಿಸದಿರು ಮನವೇ ಹೆದರಿಕೆ ಏಕೆ ?
ತಲ್ಲಣಿಸದಿರು ಮನವೇ ಭಯವೇತಕೆ .. ?
ಸ್ಥೈರ್ಯ ತುಂಬಿಕೊಂಡಿರುವ ಮನಕ್ಕೆ ಅಪನಂಬಿಕೆ ಏಕೆ ?
ಜೊತೆ ಜೊತೆಯಿರುವ ಮನವೇ . .ನನ್ನಿಂದ ಅಗಲಿಕೆ ಏಕೆ . .?

ಅಧ್ಯಾಪಕಿ ಆಗಿರುವ ನಿನ್ನ ಎದೆಗಾರಿಕೆ ಮೇಲೆ ನಿನಗೆ ಎಚ್ಚರಿಕೆ ಏಕೆ?
ನನ್ನ ಮೇಲಿರುವ ನಿನ್ನ ಆಳ್ವಿಕೆಗೆ ಹೆದರಿಕೆ ಏಕೆ ?
ನಿನಗೆ ಸರಿ ಅರ್ಥೈಸಿಕೊಳ್ಳದಿರುವ ವಿಚಾರವೇ ಹೆದರಿಕೆ

ನನ್ನ ನಿನ್ನ ಹೊಮದಾಣಿಕೆ ಯಾವ ಶಕ್ತಿಯೂ
ಬೇರ್ಪಡಿಸಲಾಗದೆಂದು ತಿಳಿದು
ಏಕಾಏಕಿ ಹೆದರಿಕೆ ಏಕೆ . .?
ತಲ್ಲಣಿದಿರುವ ಮನವೇ ಹೆದರಿಕೆ ಏಕೆ . .?

ನಾವಿಬ್ಬರೂ ಅರ್ಥೈಸಿಕೊಂಡಿರುವ ಭದ್ರವಾದ ಹೊಂದಿಕೆ
ಜೊತೆಗಿರಲು
ನಮ್ಮಿಬ್ಬರಲ್ಲಿ ಅಗಲಿಕೆ ಇಲ್ಲದಿರುವಾಗ
ನಮ್ಮ ಬಳಿ ಧೈರ್ಯ ಬಳಕೆಯಿರುವಾಗ

ಮರೀಚಿಕೆಯ ಸ್ವಭಾವ ಬಿಟ್ಟು
ನಮ್ಮಿಬ್ಬರ ಜೊತೆ ಬುದ್ಧಿಯ ಶ್ರೀಮಂತಿಕೆ ಜೊತೆಯಿರುವಾಗ
ಜೊತೆ ನಿಧಾನವಾಗಿ ಯೋಚಿಸಿ ನಿನಗೆ ಹೇಳಲಿಕ್ಕೆ
ಬಾಯಿಲ್ಲದಿದ್ದರೂ

www.sriharikhoday.com

ಹೆದರಿಕೆಯನ್ನು ಹೆದರಿಸಲು ನಮ್ಮ ಹೊಣೆಗಾರಿಕೆ ಇರುವಾಗ
ಜೊತೆ ಸೇರಿ ಬೇರೆಯವರ ಹೋಲಿಕೆ ಮಾಡದೆ
ಮನೋನೌಕೆಯನ್ನು ಸುಖತರುವ ಹಾಯಿಯನ್ನು ಕಟ್ಟಿಕೊಂಡು

ಅಂಜಿಕೆ ಹೆದರಿಕೆ ಯಾವ ಕಷ್ಟಗಳನ್ನು ಯೋಚಿಸದೆ
ತಲ್ಲಣಿಸದೆ ಮುಂದೆ ಸಾಗೋಣ
ಜೊತೆ ಜೊತೆ ಯಿರುವ ಮನವೆ

– ಶ್ರೀ ಹರಿ.

12–01–2015



## 862

ಇಂದು ನಿನ್ನ ಜೊತೆಗೆ ದಿವ್ಯಾನಂದ ಕ್ಷಣಗಳು
ನಿನ್ನ ಸತ್ಯದ ದರ್ಶನದಲ್ಲಿ ಬೆರೆತು
ಯಾವ ತತ್ವಗಳೂ ತಿಳಿಯದ ಅನುಭವ
ನಿನ್ನ ಅಮರ ಅನುಭವ ನನ್ನ ಮನೋಕಣ್ಣಿಗೆ ಕಾಣುತ್ತಲೇ ಇದೆ
ವಿಠ್ಠಲ . .!

ಯಾವ ರೀತಿ – ನೀತಿಗಳೂ ತಿಳಿಯದ ದಿಟ್ಟತನದಿಂದ
ನನ್ನ ಮನ ನಿನ್ನ ನೋಡುತ ಈಕಡೆ .. ಆ ಕಡೆಗೆ ಅಲುಗಾಡದೆ
ನಿನ್ನ ಭಕ್ತಿಯ ತೋಳಿನ ಜೊತೆಯಿರುವಂತೆ
ನನ್ನ ಮನದಲ್ಲಿ ನಿನ್ನ ದಿವ್ಯರೂಪವನ್ನೇ ಅನುಭವಿಸುತ್ತಿರುವೆನು
ವಿಠ್ಠಲ . .!

ನನ್ನ ಮನ ನಿನ್ನ ಪ್ರೀತಿಯ ಕಣ್ಣನ್ನು ನೋಡುತ್ತ
ನಿನ್ನಲ್ಲಿ ಪ್ರಯತ್ನವಿಲ್ಲದೆ ಬೆರೆತು ನಿನ್ನ ನೋಟವಲ್ಲದೆ
ನನ್ನ ಕಣ್ಣಿಗೆ ಬೇರೇನೂ ಕಾಣದೆ
ಈ ಶರೀರವೆಂಬ ಗುಡಿಯಲ್ಲಿ ನೀ . . ದೇವನಾಗಿ ನಿಂತಿರುವೆ

ನಿನ್ನ ನೀಡುತ್ತಿರುವ ದರ್ಶನ ಭಾಗ್ಯ ಹರುಷಭರಿತವಾದ ಕ್ಷಣಗಳಾಗಿ
ಮಾತನಾಡದೆ ಜೀವದ ಸತ್ಯ ಜೀವನದ ಕಲೆಯನ್ನು ಕಲಿಸುತ್ತಿರುವ
ವಿಠ್ಠಲ

ನಿನ್ನ ಜೊತೆಗೆ ಕಳೆಯುತ್ತಿರುವ ಈ ದಿವ್ಯ ಕ್ಷಣಗಳು
ನಿನ್ನ ಜೊತೆಗೆ ನನ್ನನ್ನು ಕಾಲವೇ ಬೆರೆಸಿಕೊಂಡಿದೆ ವಿಠ್ಠಲ . .!

14–01–2015 – ಶ್ರೀ ಹರಿ.

www.sriharikhoday.com

## 863

ಜೊತೆ ಜೊತೆಗಿದ್ದರೂ ಕಾಣಿಸಲಾಗುತ್ತಿಲ್ಲ ಸಂಬಂಧ
ಜೊತೆ ಜೊತೆ ಜೀವಿಸುತ್ತಿದ್ದರೂ ತಿಳಿಯುತ್ತಿಲ್ಲ ನಿನ್ನ ಆಶೀರ್ವಾದ
ಜೊತೆ ಜೊತೆ ಜೀವಿಸುತ್ತಿದ್ದರೂ ಜೀವನದ ಸತ್ಯದ ಅರಿವು ಬರಲಿಲ್ಲ
ವಿಠ್ಠಲ . ..!

ಕ್ಷಣ ಕ್ಷಣಗಳಲ್ಲಿ ಬದಲುತ್ತಿರುವ ಭಾವನೆಗಳು
ಭಾವನೆಯ ಆಳದಲ್ಲಿ ನೀನಿರುವ ಸತ್ಯ
ಆ ಸತ್ಯದ ರೂಪ ಕಾಣದೆ ಎದುರಿಗೆ ಕಾಣುತ್ತಿರುವ
ಪಂಡರಿಯ ಒಡೆಯ ನಿನ್ನ ವಿಠ್ಠಲ ಎನ್ನಲೇ . .!

ಯಾವುದೂ ನಿನಗೆ ತಡೆಯಲಾರದ ನಮ್ಮಿಬ್ಬರ ಪಯಣ
ಕೊನೆ ಕಾಣದ ಪಯಣ ಎನ್ನಲೇ
ಚರಾಚರಗಳಲ್ಲಿ ಅಡಗಿರುವೆ ನೀ ಎಂಬ ಮಾತು
ಸತ್ಯ ಅಲ್ಲವೇ ಶ್ರೀ ಹರಿ ವಿಠ್ಠಲ . .!

ನಿಲ್ಲದೆ ಹರಿಯುತ್ತಿರುವ ಚಂದ್ರಭಾಗ ನಿನ್ನ ನಡಿಗೆ ಎನ್ನಲೆ
ನಿನ್ನ ಧರಿಸಿರುವ ಹೂವಿನ ಹಾರದಲ್ಲಿ ಒಂದೊಂದು ಹೂವಲ್ಲೂ ನಿನ್ನ
ರೂಪ ಕಾಣಲೇ .
ನೀ ಜೊತೆಯಿರುವ ಕಾಲದ ಸ್ವಾದದಲ್ಲಿ
ನಿನ್ನ ಸ್ವಾದದ ಆನಂದದಲ್ಲಿ ನಮ್ಮನ್ನು ಮರೆಯುವೆಯಾ ವಿಠ್ಠಲ..!



ನಿನ್ನ ಸೌಂದರ್ಯ ರೂಪದ ಹಿಂದೆ ಕೊನೆಗಾಣದ
ಕೊನೆ ಏನೆಂದು ತಿಳಿಯದ ಸುಖ ಎನ್ನಲೇ ವಿಠ್ಠಲ
ನಿನ್ನ ಜೊತೆ ವಿಶ್ವವೇ ಸೌಂದರ್ಯಮಯವಾಗಿ
ಈ ಜಗವೇ ಹಿರಿದಾಗಿ ಕಾಣುತ್ತಿದೆ ವಿಠ್ಠಲ . . !

ನಿನ್ನ ಜೊತೆ ಬರೀ ಪ್ರೀತಿ . ..ನಿನ್ನ ಜೊತೆ ಎಲ್ಲವೂ ಆನಂದ
ನೀ ಇಲ್ಲದೆ ನಾನು ಏಕಾಂಗಿ ಎನ್ನಲೇ
ನಿನ್ನ ಜೊತೆಯಾಗಿ ನಿನ್ನ ನೆನಪಿನ ವಾದ್ಯಗಳಲ್ಲಿ
ನಿನಗೆ ಹಿತವಾಗುವ ಸಂಗೀತದ ಸದ್ದಾಗಿಬಿಡುವೇ ಹೇ ಶ್ರೀ ಹರಿ
ವಿಠ್ಠಲ . . !

**– ಶ್ರೀ ಹರಿ.**

**15-01-2015**

www.sriharikhoday.com

**864**

ಕಲ್ಲಿನಿಂದ ರೂಪ ತಾಳಿರುವ ವಿಠ್ಠಲನೇ
ನೀ ನೀಡಿರುವ ಆತ್ಮನಿಂದ ಈ ಶರೀರ ನಾ ಪಡೆದಿರುವೆ ವಿಠ್ಠಲ
ವಿಶ್ವಕ್ಕೆ ನೀ ಅಂಗರಕ್ಷಕ ಎನ್ನಲೇ
ಎಲ್ಲಾ ಆತಂಕಗಳನ್ನು ತಪ್ಪಿಸುವ ಅನಾಥರಕ್ಷಕ ಎಂದು ಹೇಳಲೇ . .!

ವಿವೇಕವನ್ನು ಬಳಸಿ ಸಂಜೀವನ ಮಾಡುವ ರೀತಿ ಕಲಿಸುವ
ಅಧ್ಯಾಪಕ ಎನ್ನಲೆ
ನಿನ್ನ ಮೇಲೆ ಇರುವ ಎಲ್ಲಾ ಅನುಮಾನಗಳು ಅಪ್ರಮಾಣಿಕ ಎನ್ನಲೇ
ಅಲೌಖಿಕವಾಗಿರುವ ನಿನ್ನ ಜೀವನ ನಿನ್ನ ಇರುವಿಕೆ ಆಧ್ಯಾತ್ಮಿಕ
ವಾತಾವರಣದಲ್ಲಿ
ಅನೇಕ ಲೌಕಿಕ ಅಲಂಕಾರದಿಂದ ಈ ವಿಶ್ವದ ಉದ್ಧಾರಕ ಎನ್ನಲೇ..!

ನಿನ್ನ ಮೇಲಿನ ಅಪನಂಬಿಕೆ ಎಚ್ಚರ ತಿಳಿಯದ ಜೀವನಡಿಗೆ ಎನ್ನಲೇ . .
ನಮ್ಮ ಜೀವನಕ್ಕೆ ಸಿರಿದೆಸೆ ತೋರಿಸುವ ಉತ್ತರಮುಖಿ ಎನ್ನಲೇ . .
ಎಲ್ಲರದಲ್ಲಿ ಬೆರೆತಿರುವ ಕರುಣಾಜನಕ ಎನ್ನಲೇ. .
ಕ್ರಾಂತಿಕಾರಿಯಾದ ನೀನು ಕ್ಷುಲ್ಲಕ ಮನಸ್ಸುಳ್ಳವರ ಮನೋಕಿಟಕಿ
ತೆರೆಯುವ ರೀತಿ
ಜೀವನ ಸಮಸ್ತ ಕಲೆಗಾರಿಕೆ ಕಲಿತಿರುವ ಗುಣವಾಚಕ ಎನ್ನಲೆ. . !

ನೀ ತೋರಿಸುವ ನಾನಾ ರೂಪಗಳು, ಆ ಬೆಳಕು ನಿನ್ನ ರೂಪ ಎನ್ನಲೆ
ಕತ್ತಲು ನೀ ಬಚ್ಚಿಟ್ಟುಕೊಂಡಿರುವ ರೂಪ ಎನ್ನಲೆ

www.sriharikhoday.com



ಹೇ ವಿಠ್ಠಲ ಹೋಲಿಕೆಗಳು ಮಾಡಲಾಗದ
ಬುದ್ಧಿಯಿಂದ ಅಳೆಯಲಾಗದ ಕನಸು ನಿನ್ನನ್ನು ತಿಳಿಯಲಾದ

ನಿನ್ನ ಬದುಕು ಹೊಸ ಹೊಸದರಲ್ಲಿ ಬೆರೆತು
ಕಲ್ಲಲ್ಲಿ ಬೆರೆತು ವಿಠ್ಠಲನ ರೂಪ ತಾಳಿದಂತೆ
ಅನೇಕ ವಿಶ್ವಗಳೇ ನಿನ್ನ ರೂಪ ಎನ್ನಲೆ
ನಿನ್ನ ತಂತ್ರಗಾರಿಕೆಗೆ ತಲೆಬಗ್ಗಿ ನಮಿಸುವೆನೋ ಹೇ ಶ್ರೀ ಹರಿ ವಿಠ್ಠಲ ..!

**– ಶ್ರೀ ಹರಿ.**

**16-01-2015**

## 865

ನಾವು ನೋಡುತ್ತಲೇ ಇದ್ದೇವೆ
ನೋಡುತ್ತಿರುವ ನೋಟ ನಮ್ಮನ್ನೇ ನೋಡುತ್ತಿದೆ
ಮನವೂ ಕೂಡ ಜೊತೆ ಸೇರಿ ನೋಟವನ್ನು ವಿಮರ್ಶೆ ಮಾಡುತ್ತಿದೆ
ವಿಮರ್ಶೆಗಳಿಗೆ ಕಾರಣವನ್ನು ಹುಡುಕುತ್ತಿದೆ

ಕಾರಣದ ಹಾದಿ ಒತ್ತಡವೋ
ಬೇರೆಯವರ ಒತ್ತಡವೋ . .
ಸ್ವಯಂಕಲ್ಪಿತ ಒತ್ತಡವೋ
ಅರಿತಿದ್ದರೂ ಅರಿಯದೆ ಸುಮ್ಮನಿದೆ ಮನಸ್ಸು !

ನೋಟ ಎಲ್ಲವನ್ನೂ ಗಮನಿಸಿ
ಯಾವ ಕಾರಣಕ್ಕಾಗಿ ನೋಟ ಅಲ್ಲಿ ಹರಿಯಿತೆಂದು ತಿಳಿಯದೆ
ಬರೀ ಬದಲಾವಣೆ ಬಯಸುವ ಮನಸ್ಸಿಗೆ
ನೋಟ ನೋಡಲು ಇಚ್ಛೆಯನ್ನು ಪ್ರಚೋದಿಸುತ್ತಿದೆ !

ಸದ್ದು ಬರುತ್ತಲೇ ಯಾವ ಕಡೆಯಿಂದ ಬಂದುದೆಂದು ನೋಟ ಹರಿಯುತ್ತದೆ
ಮನಸ್ಸೆಂಬ ದೊಡ್ಡದಾದ ಹರಿಯುವ ಕಾಲುವೆ
ಜೊತೆ ನಡೆಯುತ್ತಿರುವ ಮನದ ಬದಲುತ್ತಿರುವ ಹಂತಗಳು
ಏಕಾಗ್ರತೆ ಪಡೆಯಲು ಪ್ರಯತ್ನಿಸುತ್ತ

www.sriharikhoday.com



ನೋಟ ಮನಸ್ಸನ್ನೇ ಸುಮ್ಮನಿರಿಸುವುದು
ನೋಟ ನೋಡುವುದು . . ನೋಡಿ ವೀಕ್ಷಿಸುವುದು
ವೀಕ್ಷಿಸುತ್ತಿರುವುದರ ಜೊತೆ ಬೆರೆಯುವುದು
ಬೆರೆತು ತನ್ನನ್ನೇ ತಾನು ಮರೆಯುವ ನೋಟದ ಶಕ್ತಿ

ಎಲ್ಲರನ್ನೂ ಅರಿಯುವ ದೈವತ್ವವನ್ನು ಅನುಭವಿಸಬಲ್ಲ ನೋಟ
ದೀರ್ಘನೋಟ ಕಾಣುವುದರಲ್ಲಿ ಚೆಲುವು ಚಿಗುರಿ
ಅಳೆಯಲಾಗದ ಅಗಾಧ ಒಳನೋಟ ಅರಿವಿಗೆ ಬರುವುದು !

**– ಶ್ರೀ ಹರಿ.**

**17-01-2015**

## 866

ಸ್ವರೂಪಗಳಿಲ್ಲದ ಸದ್ದು
ನಾವು ಕೇಳದೆ ಇದ್ದರೂ ಕೇಳಿಸುತ್ತಲೇ ಇದೆ
ಕಣ್ಣಿಗೆ ಎಂದೆಂದೂ ಕಾಣದ ಸದ್ದು ಮನದ ಕಣ್ಣಿಗೆ ಕಾಣಿಸುತ್ತಲೇ
ಇದೆ !

ನಮ್ಮ ಮನಸ್ಸು ಜೀವನದ ಮುಖ್ಯ ಹೆದ್ದಾರಿ
ಪಾತ್ರಕ್ಕೆ ತಕ್ಕಂತೆ ಹಿಂದಿನ ತೆರೆಗಳು ಪಾತ್ರಕ್ಕೆ ತಕ್ಕಂತೆ ಕಾಣದೆ
ಇರುವ
ಸರಿ ಸದ್ದುಗಳು ನಾವು ಕೇಳಿಸಿಕೊಳ್ಳುವ ರೀತಿ ಅನೇಕಗಳು . .!

ಆಕಾಂಕ್ಷೆಗಳು ಹಿನ್ನೆಲೆಯ ತೆರೆಗಳ ಎದುರಿಗೆ
ನಮ್ಮ ಮನೋಸದ್ದು ಸದ್ದಿನ ಬಿಂಬ ಪ್ರತಿಬಿಂಬಗಳು
ತೆರೆಗಳ ಹಿಂದೆ ನಿಂತು ಕೇಳಿಸಿಕೊಳ್ಳುತ್ತಲೇ ಇದೆ . . .!

ಮನಸಾರೆ ಮಾತನಾಡುವುದು ಮನಸ್ಸಿನ ಸದ್ದು
ಮನಸ್ಸಿನಲ್ಲೊಂದು . .ಹೊರಗೆ ಮತ್ತೊಂದು
ಹೊಸ ರೀತಿಯ ಮನಸ್ಸಿನ ಸದ್ದು

ತಮ್ಮ ಇರುವಿಕೆಯ ನೆಲೆಯನ್ನು ತಿಳಿಯದೆ
ತಮಗೆ ತೋಚದೆ ಇರುವುದನ್ನು
ಮನಸ್ಸು ಸದ್ದನ್ನು ಮಾಡುತ್ತದೆ

www.sriharikhoday.com



ನಮ್ಮಲ್ಲಿರುವ ಸುಮ್ಮನಿರದ ಮನಸ್ಸು
ಕದ್ದು ಕೇಳುವ ಸದ್ದು ಕೆಲ ಸಮಯ ಒಳ್ಳೆಯದಾಗಿ
ಕೆಲವೊಮ್ಮೆ ಕೆಟ್ಟದಕ್ಕಾಗಿರುತ್ತದೆ !

ಸದ್ದು ಜೀವನದಲ್ಲಿ ಮಹಾನ್ ಶಕ್ತಿ
ಅನೇಕ ರೀತಿಯ ಅರಳುವ ಶಕ್ತಿ
ಸದ್ದು ಒಳ್ಳೆಯದನ್ನೂ ಅರಳಿಸುತ್ತದೆ . . ಕೆಟ್ಟದ್ದನ್ನೂ ಅರಳಿಸುತ್ತದೆ !

**– ಶ್ರೀ ಹರಿ.**

**19-01-2015**

## 867

ಕೇಳುವುದನ್ನೆಲ್ಲ ಮಾನ್ಯತೆ ನೀಡಿ ಕೇಳಬೇಕು
ಮಾನ್ಯತೆ ನೀಡುವಷ್ಟೆ ಮನಸ್ಸಿನ ಪ್ರತಿಕ್ರಿಯೆ ರೂಪುಗೊಳ್ಳುತ್ತದೆ
ಅಡ್ಡವಾಗಿರುವ ಆಲೋಚನೆಯ ತೆರೆ ತೀರ್ಮಾನಗೊಳಿಸುವಂತೆ
ನಾನೆಂಬ ಮನಸ್ಸು ತೀರ್ಮಾನಗೊಳಿಸಿ ಪೂರ್ಣ ರೀತಿಯಲ್ಲಿ
ಒಪ್ಪಿಕೊಳ್ಳುತ್ತದೆ !

ತೀರ್ಮಾನಗಳು ಮನಸ್ಸಿನಲ್ಲಿರುವೆ ಬಾಯಿಯಿಂದ ಬಾಯಿಗೆ
ಶಬ್ದಗಳಾಗಿ ಬರುತ್ತದೆ
ಫಲಿತಾಂಶದ ಆಸಕ್ತಿವುಳ್ಳವರು ನಾವು ನಮ್ಮ ಮಾತೇ
ಗೆಲ್ಲಬೇಕೆಂಬ
ಭಾವನೆಯಿಂದ ನಮ್ಮ ಆಸೆಯ ಗುರಿಯಾಗಿ ಗೆಲ್ಲುವ ಆಸಕ್ತಿ
ಆಸೆಗಳನ್ನು ತುಂಬುತ್ತಿದೆ ಮನಸ್ಸು!

ಸರಿಯಾಗಿ ಕೇಳಿಸಿಕೊಳ್ಳುವ ರೀತಿ ಸರಿಯಿಲ್ಲದ್ದಲ್ಲಿ
ಸಂಗೀತ ನಡೆಯುತ್ತಿದ್ದರೆ ನಾವು ಕೇಳಿಸಿಕೊಳ್ಳುತ್ತಿಲ್ಲ
ಮನಸ್ಸಿನ ಸಂಗೀತ ಕೇಳಿ ಆಲಿಸುವ
ಮನೋಸಾಧನೆ ಸಾಧಿಸಿದಂತೆ ಹರುಷವನ್ನು ವ್ಯಕ್ತಪಡಿಸುತ್ತಾನೆ

ನಮ್ಮ ಮನಸ್ಸು ಸದ್ದಿನ ಆಚೆ ಇರಬೇಕು
ಸದ್ದುಗಳು ಕೆಲವುಸಲ ಮನಸ್ಸಿನ ಚೇಷ್ಟೆಯಾಗಿರುತ್ತದೆ

**– ಶ್ರೀ ಹರಿ.**

**20–01–2015**



www.sriharikhoday.com

## 868

ವಾಸವಾಗಿರುವ ಗೂಡಿನ ಸುಖ ಸ್ವರ್ಗದ ಸುಖ
ಗೂಡು ನನ್ನದು ಎಂದು ಹೇಳುವ ಮನೋಭಾಷೆ
ಗೂಡಿಗೆ ಬೆರಗನ್ನು ನೀಡುತ್ತಿರುವ ಸುಖ !

ನನ್ನನ್ನು ನನ್ನಲ್ಲೇ ಮರೆಸುವ ಗೂಡಿನ ಸುಖ
ಎಲ್ಲಾ ಸುಖದ ಬಯಕೆ ಮರೆಸುವ ಗೂಡು
ಯಾರ ಹಂಗಿಲ್ಲದೆ . .ಯಾವ ಭಯವೂ ಇಲ್ಲದೆ
ನನಗೆ ಒಡೆಯ ಎಂಬ ಘೋಷಣೆಯನ್ನು
ಎಲ್ಲರ ಬಾಯಿಯಲ್ಲಿ ಆಲಿಸುತ ಆಡಿಸುತ್ತಿರುವುದು ಗೂಡು !

ಹೊಸ್ತಿಲಿಗೆ ಬಂದವರು. . ಒಳಗೆ ಬಂದವರು ಹಾರೈಸಿದ ನೋಟ
ನೋಡಿ
ಎಲ್ಲರ ತುಟಿಗಳ ಮೇಲೆ ನಗೆ ಹರಿಸುವ
ಗೂಡಿನ ಒಡೆತನ ತಲೆ ಎತ್ತಿ ನನ್ನ ಗೂಡು
ನನ್ನ ತಾಯಿ ಕಟ್ಟಿದ ಗೂಡು ಎಂಬ ಭಾವನೆ
ವಿಶ್ವದ ಸಿರಿಯನ್ನೇ ಪಡೆದಂತೆ !

ಚಿನ್ನದ ಗೂಡಾಗಲೀ. . .ಬೆಳ್ಳಿಯ ಗೂಡಾಗಲೀ. .
ಹುಲ್ಲಿನ ಗೂಡಾಗಲಿ ಗೂಡು ಜೀವಿಸುವ ಮನೆ
ಅದರಲ್ಲಿ ತುಂಬಿಕೊಂಡಿರುವ ತುಂಬುತನ

ಜೀವನದಲ್ಲಿ ಸ್ವರ್ಗ –ಸುಖ ಪಡೆಯುತ
ಗೂಡಿಗೆ ಮಾನ್ಯತೆ ನೀಡುವ ಭಾವನೆ !

ನೆರೆಹೊರೆಯವರು ಜೊತೆ ಜೀವಿಸುತ್ತಿರುವುದು
ಹೋಲಿಸಲು ಹೋಲಿಕೆ ಇಲ್ಲದ ಮಾನ್ಯತೆ
ಗೂಡಿನ ಹೊರಗೆ ಪಕ್ಷಿ ಹೊರ ಬಂದು ರೆಕ್ಕೆ ಹರಡಿ
ಹಾರಾಡುವಂತೆ
ಸ್ವತಂತ್ರದಿಂದ ಹಾರಾಡುತ್ತ ಸ್ವಾತಂತ್ರ್ಯದಲ್ಲಿ ಜೀವಿಸುವ ಸುಖ
ಗೂಡಿನ ಸುಖ
ಆ ಸುಖ ಕಾಣದೆ ಇರುವ ದೇವರಲ್ಲಿ ಬೆರೆತುಹೋಗಿ
ಕೊನೆ ಕಾಣದ ಸುಖವನ್ನು ಅನುಭವಿಸುತ್ತಿದೆ

**– ಶ್ರೀ ಹರಿ.**

**22–01–2015**



www.sriharikhoday.com

## 869

ಪುಂಡರೀಕ ವರದ ಶ್ರೀ ಪಾಂಡುರಂಗ ವಿಠ್ಠಲ
ಪುಂಡರೀ ಪುತ್ರ ಮಹಾರಾಜ ಜೈ ಜೈ
ಜೈ ಜೈ ರಾಮ . . ಜೈ ಜೈ ಕೃಷ್ಣ ಹರೇ
ವಿಠ್ಠಲ ವಿಠ್ಠಲ ಜೈ ಶ್ರೀ ಹರಿ ವಿಠ್ಠಲ !

ಕೇಳಿ ನಮ್ಮ ರಾಜನ ಕಥೆ
ಕೇಳಿ ಕೇಳಿ ಅವರ ಹಲವು ನಾನಾ ನಾಮಗಳ
ನಮ್ಮ ಸಲಹುತ್ತಿರುವ ತಂದೆ ಶ್ರೀ ಹರಿ ವಿಠ್ಠಲನ
ಕಥೆಯ ಹೇಳುವೆ ಕೇಳು. .ಶ್ರೀ ಹರಿ ವಿಠ್ಠಲನ ಕಥೆ ಹೇಳುವೆ
ಕೇಳು !

ನಾನು ಹೇಳುತ್ತಿರುವ ನುಡಿ ಯಾರ ಬಾಯಿಯಲ್ಲಾದರೂ ಕೇಳು
ಎಲ್ಲರೂ ಒಂದೇ ಹೇಳುವರು . .ಶ್ರೀ ಹರಿ ವಿಠ್ಠಲ
ಅಮ್ಮನ ಕೇಳು . .ಅಕ್ಕನ ಕೇಳು . .ಅಣ್ಣನ ಕೇಳು. ತಂಗಿಯ ಕೇಳು
ಎಲ್ಲರ ಕೇಳು ಜೀವನದ ಕಥೆ ಇದು

ನಮ್ಮ ಸಲಹುತ್ತಿರುವ ತಂದೆಯ ಕಥೆ ಹೇಳುವೆನು ಕೇಳು
ನಮ್ಮ ಜನುಮವನ್ನೇ ಪವಿತ್ರ ಮಾಡುವ ತಂದೆಯ ಕಥೆ ನಮ್ಮ
ರಾಜನ ಕಥೆ
ನೂರು ಸಲ ಹೇಳಿದರೂ ತೀರದು ನೂರು ಸಲ ಕೇಳಿದರೂ
ಸಾಲದು

ಕೊನೆವರೆಗೂ ಹೇಳಿದರೂ ಬೇಸರ ತರದ ಆ ಹೆಸರು
ಜೈ ಜೈ ಶ್ರೀ ಪಾಂಡುರಂಗ ಶ್ರೀಹರಿ ವಿಠ್ಠಲ . .!

ಅವನು ನಮ್ಮ ತಂದೆ,
ಅವನು ನಮ್ಮ ತಾಯಿ, . . ಅಕ್ಕ. .ತಮ್ಮ
ಜೀವನದ ಬಂಧು ಅವನೇ .
ನಮ್ಮ ತಂದೆ ವಿಠ್ಠೋಬಾದ ಕಥೆ ಹೇಳುವೆ
ಶ್ರೀ ಹರಿ ವಿಠ್ಠಲಾ ಪಾಂಡುರಂಗ !

ಎಲ್ಲರ ಜೊತೆಗೆ ಜೀವಿಸುತ್ತಿರುವ ನಮ್ಮ ರಾಜನಿವನು
ದನ ಮೇಸುವನ ಜೊತೆ, ಕುರಿ ಕಾಯುವನ ಜೊತೆ
ಎಣ್ಣೆ ತೆಗೆಯುವ ಗಾಣಿಗನ ಜೊತೆ
ಎಲ್ಲರ ಜೊತೆ . .ಸೂರ್ಯ ಚಂದ್ರರ ಜೊತೆಗೂ ಇರುವವನು
ವಿಠೋಬಾ .

ಇಂಥವನು ನನ್ನ ಜೊತೆಗೂ ಇರುವಾಗ ಬೇರೇನು ಬೇಕು ನನಗೆ
ತುಂಬಿರುವ ನನ್ನ ಜೀವನದಲ್ಲಿ ಏನು ಕೇಳಬೇಕೋ.
ಅರಿಯೆನು ನಾ
ನಮ್ಮ ರಾಜನಿವ . .ಬರೀ. .ರಾಜನಲ್ಲ
ಅವರೇ ದೇವರು ನಮ್ಮ ಶ್ರೀ ಹರಿ ವಿಠ್ಠಲ

ಕೇಳುವುದಕ್ಕೆ ಮನಸ್ಸಿಗೇ ಅಭಾವ
ಅವರ ದರ್ಶನ ಮಾತ್ರದಿಂದ ತುಂಬನ್ನು ತುಂಬಿ ಕಳಿಸುವ
ಪಾಂಡುರಂಗ
ನಾನು ಏನೇನು ಕೇಳಬೇಕೆಂಬ ಆಸೆಯಿಂದ ಬಂದೆ
ನನ್ನ ಕಷ್ಟಗಳ ಸರಮಾಲೆಯನ್ನು ಕೇಳೋಣವೆಂದು ಬಂದೆ

ನಿನ್ನ ದರ್ಶನದಿಂದ ಎಲ್ಲಾ ಮರೆತುಹೋಯಿತು
ಪಾಂಡುರಂಗ ಶ್ರೀಹರಿ ವಿಠ್ಠಲ . .!



ಎಷ್ಟೇ ಕಷ್ಟಬರಲಿ. .ಭಕ್ತರ ಬೇಡಿಕೆಯನ್ನು
ಈಡೇರಿಸಲು ಕೇಳಿಸಿಕೊಳ್ಳುವ ಕಳ್ಳನಿವ ನಿಮ್ಮ ವಿಠ್ಠಲ
ಅವನು ಮಾತುಗಳ ಭಕ್ತಿ ಅಲೆ ಅಲೆಯಾಗಿ
ಮನಸ್ಸಿನ ಸಮುದ್ರದಲ್ಲಿ ಮನೋಸಮುದ್ರದ ಒಡೆಯನಾಗಿರುವವನು
ನಮ್ಮ ದೇವ ಶ್ರೀ ಹರಿ ವಿಠ್ಠಲ . .ಜೈ ಜೈ ಹರಿ ಪಾಂಡುರಂಗ !

**– ಶ್ರೀ ಹರಿ.**

**23–01–2015**



www.sriharikhoday.com

## 870

ಅರಸನ ಆಡಳಿತದಲ್ಲಿ ಆಡಳಿತ ಧರ್ಮ
ಎಲ್ಲಾ ಜೀವನ ರೀತಿಯಲ್ಲಿ ಒಂದು ನಿಯಮವನ್ನು ಪಾಲಿಸುವುದು
ಧರ್ಮ
ಪ್ರಕೃತಿಯ ಜೊತೆಗೆ ಎದುರು ಕಾಣುವ ಸೂರ್ಯ ಚಂದ್ರರು
ದಿಗಂತದಲ್ಲಿ ಬರುವುದು ಕರ್ತವ್ಯ ಧರ್ಮ
ಪ್ರಕೃತಿಯ ಸ್ವಭಾವದ ಜೊತೆಗೆ ನಮ್ಮ ಸ್ವಭಾವವನ್ನು
ಅಡವಳಿಸಿಕೊಳ್ಳುವುದು ಧರ್ಮ !

ಒಂದು ಬಿಲ್ಲು ಗುರಿಯನ್ನು ಮುಟ್ಟಿ ಸಾಧಿಸುವುದು ಧರ್ಮ
ಎಲ್ಲಾ ವಿಷಯಗಳನ್ನು ಅರಿತು ತಾನೇ ವಿಷಯವಾಗಿ
ವಿಷಯದ ಸತ್ಯದಲ್ಲಿ ಬೆರೆತು ನೀಡುವ ತೀರ್ಪು ಧರ್ಮ
ಕಾರ್ಯದಲ್ಲಿ ಎಲ್ಲವನ್ನೂ ಮರೆತು ಕಾರ್ಯನಿರತವಾಗಿ
ಶ್ರದ್ಧೆಯಿಂದ ಮಾಡುವ ಕೆಲಸ ಧರ್ಮ!

ಕಷ್ಟದಿಂದ ನರಳುತ್ತಿರುವುದನ್ನು ಕಂಡು ಮನಸ್ಸು ಅಯ್ಯೋ ಎಂದು
ಮರುಗಿದರೆ ಅದೇ ಧರ್ಮದ ಕೂಗು
ತನ್ನ ಹತ್ತಿರ ಹೆಚ್ಚಾಗಿದ್ದು ಬೇಡಿಕೆಗಾಗಿ ಸಹಾಯ
ಕೇಳಿದರೆ ಸಹಾಯ ಮಾಡುವುದು ಧರ್ಮ
ಯಾರ ಸಹಾಯವೂ ಕೇಳದೆ ತಮ್ಮ ಪಾಡಿಗೆ ತಾವೇ
ಕಷ್ಟಪಡುತ್ತಿರುವುದ ಕಂಡು
ಮನಸ್ಸಿನಲ್ಲಿ ಕರುಣೆ ಹುಟ್ಟಿದರೆ ಆ ಕರುಣೆ ಧರ್ಮ



ನ್ಯಾಯಬದ್ಧವಾಗಿ ತೆರಿಗೆ ವಸೂಲಿ ಮಾಡುವುದು ಧರ್ಮ
ಶೇಖರಿಸಿದ ತೆರಿಗೆ ಸರಿಯಾಗಿ ಉಪಯೋಗಿಸುವುದೇ ಧರ್ಮ
ಕಾರಣವಿಲ್ಲದೆ ಪುಕ್ಕಟ್ಟೆ ಕೇಳುವುದು ಅಧರ್ಮ
ಬಾಯಿಯಲ್ಲಿ ಮಾತನಾಡದೆ ಹೇಳಲು
ಅಂಜಿಕೆ ಇರುವ ಕಾರಣ ಶಿವನಲ್ಲಿ ಬೇಡುವುದು ಧರ್ಮ

ಒಂದು ವಸ್ತುವಿಗೆ ಸರಿಬೆಲೆ ಕೇಳದೆ ಮೋಸ ಮನೋವೃತ್ತಿಯಿಂದ
ಹೆಚ್ಚು ಬೆಲೆ ಕೇಳುವುದು ಅಧರ್ಮ
ಎಲ್ಲಾ ಅರ್ಥಗಳನ್ನು ತಿಳಿದಿರುವ ಪುರುಷ ತನ್ನ ಪುರುಷತ್ವಕ್ಕೆ
ಅರ್ಥದ ಗಳಿಕೆಯನ್ನು ಧರ್ಮ ಅಧರ್ಮಗಳ ಯೋಚಿಸಿ
ಕ್ರಿಯೆ ಮಾಡುವವನು

ಪ್ರಕೃತಿಯ ಬಣ್ಣವಾದ ಕಾಮವನ್ನು ತನ್ನ ಮನೋವ್ಯಥೆಗಳಿಗೆ
ಮೋಕ್ಷ ನೀಡಲು ಕಾಮಿಯಾಗಿ ಸಂತತಿ ಬೆಳೆಸುವುದು ಧರ್ಮ
ಧರ್ಮವೊಂದು ಮಾನವನಿಗೆ ಅವಶ್ಯ ಗುಣ
ಈ ಜಗತ್ತಿನ ಎಲ್ಲಾ ಜಾತಿಗಳ ಪಂಗಡಗಳ ಪುರುಷರಿಗೆ
ಜೀವನದ ರೀತಿ ನಿಯಮ ಪಾಲಿಸುವುದು ಧರ್ಮ

ಧರ್ಮ ಒಂದು ಕ್ರಿಯೆ . .ಒಂದು ಪಂಗಡದ ಹೆಸರಲ್ಲ
ಜನುಮ ಕೊಟ್ಟ ದೇವರ ಶಕ್ತಿಯ ಜೊತೆಗೆ
ತಾನು ಬೆರೆತು ದೇವರನ್ನು ಅನುಭವಿಸಿ
ಸುಖ ಪಡುವುದು ಆನಂದವನ್ನು ಅನುಭವಿಸುವುದು ಜೀವನದ
ಧರ್ಮ

**– ಶ್ರೀ ಹರಿ.**

**24-01-2015**



www.sriharikhoday.com

## 871

ವಿಠ್ಠಲ ನಿನ್ನ ಕರುಣೆ ಸಾಲವಾಗಿ ನೀಡು
ಖಾಲಿಯಾಗಿದ್ದ ನನ್ನ ಮನದಲ್ಲಿ
ನಿನ್ನ ಐಶ್ವರ್ಯ ಮನದಲ್ಲಿ ತುಂಬ ತುಂಬಿಹೋಗಿದೆ
ನೀ ನೀಡಿದ ಐಶ್ವರ್ಯಕ್ಕೆ ನಿನಗೇ ಬಡ್ಡಿ
ನಿನ್ನ ಮೇಲಿರುವ ನನ್ನ ಪ್ರೀತಿಯೇ ನಿನ್ನ ಮೇಲಿರುವ ಬಡ್ಡಿ !

ನೀ ನೀಡಿದ ಕರುಣೆ
ನಾ ಬೇರೆಯವರಿಗೆ ನಿನ್ನ ಕರುಣೆಯನ್ನು ಹಂಚುತ
ಅವರೆಲ್ಲರ ಮನದಲ್ಲಿ ನಿನ್ನ ಮೇಲಿನ
ಭಕುತಿ–ಪ್ರೀತಿ ಪ್ರತಿಬಿಂಬಿಸುತ್ತಿರುವುದ ಕಂಡೆ

ನೀ ನನ್ನ ಮೇಲೆ ಬಡ್ಡಿಯ ಮೇಲೆ ಬಡ್ಡಿ ಹಾಕು
ನಿನ್ನ ಕರುಣೆಯ ಸಾಲ ಅಪಾರವಾದದ್ದು
ನೀ ನನ್ನ ಕೈಗೆ ದೊರಕದೇ ಇದ್ದರೂ
ನಾ ನಿನ್ನನ್ನು ಪೂರ್ಣ ರೀತಿಯಲ್ಲಿ ಪಡೆದೆ.

ನಿನ್ನ ಸುಖ ನಾನು ಅನುಭವಿಸುತ್ತಿರುವೆ
ನಾ ಬೇಡದೆ ಎಲ್ಲವನ್ನೂ ನೀಡುತ್ತಿರುವ ನೀ
ನಿನ್ನ ಸಾಲ ನಾ ತೀರಿಸಲು ಮತ್ತೊಂದು ಜನುಮದ ಆಸೆ
ನೀ ಆಪ್ತವಾಗಿ ನಿನ್ನ ಪ್ರೀತಿಯ ಅಪಾರ ಐಶ್ವರ್ಯ ಸಿಗುತ್ತಿದೆ

www.sriharikhoday.com



ನಿನ್ನ ಅನೇಕ ಕರುಣೆಗಳಲ್ಲಿ
ಮತ್ತೆ ಮತ್ತೆ ಹೊಸದನ್ನು ಅನುಭವಿಸುತ್ತಿರುವೆ
ವಿಠ್ಠಲ ನಿನ್ನ ಕರುಣೆ ಸಾಲವಾಗಿ ನೀಡು
ನಿನ್ನ ಮೇಲೆ ಪ್ರೀತಿ–ಭಕ್ತಿಯನ್ನು ಬಡ್ಡಿಯಾಗಿ ಸ್ವೀಕರಿಸು !

– ಶ್ರೀ ಹರಿ.

**31–01–2015**

# 872

ಕಾಲದ ಗತಿ ಕೆಟ್ಟು ಹೋಗಿದೆ ಎಂದು ಕೆಲವರು ಕುಳಿತು
ಹೇಳುವರು
ಸುಮ್ಮನೆ ಕುಳಿತು ಕಾಲದ ಗತಿಯನ್ನು
ಕೆಡಿಸುತ್ತಿರುವುದು ತಿಳಿದೂ ತಿಳಿಯದೇ ಆಗಿರುವುದು !

ಎಲ್ಲರೂ ತಲೆ ಎತ್ತಿ ನೋಡುತ್ತಿರುವವರೆಂಬ ಅಹಂಕಾರ
ನವಿಲು ತನ್ನನ್ನು ನೋಡಲೆಂದೆ
ಗರಿಯನ್ನು ಹರಡಿಸಿ ಅಹಂಕಾರದಿ ಮೆರೆಯುವುದು !

ಕೆಲವರು ಬರೀ ಕುಳಿತು ಮಾತನಾಡದೆ
ಯಾವ ಜವಾಬು ಕೊಡದೆ ಸುಮ್ಮನಿರುವರು
ಸುಮ್ಮನಿರುವುದು ನಮ್ಮ ಜಾಣ್ಮೆ ಎಂದು ಹೇಳುವರು ಜಾಣರು !

ನನ್ನ ದೊಡ್ಡಸ್ತಿಕೆಗೆ ಒಂದು ರಹಸ್ಯ ಜೊತೆಗಿಟ್ಟುಕೊಂಡು
ರಹಸ್ಯವನ್ನು ನಗ್ನ ಮಾಡದೆ
ತನ್ನಲ್ಲಿ ತಾನೇ ಬಚ್ಚಿಟ್ಟುಕೊಂಡಿರುವರು ಅನೇಕರು

ನಮಗಿರುವುದರಲ್ಲಿ ಸುತ್ತಿಕೊಂಡೇ ಇರುವ
ಜಗದ ಚಕ್ರ ನಮ್ಮ ನಿರ್ಮಲ ಪ್ರೀತಿ-ಪ್ರೇಮಗಳು
ಅದು ಬಚ್ಚಿಟ್ಟುಕೊಳ್ಳಲಾಗದೆ ನಾ ಸೇವಿಸಿರುವ ಮಧು

ಬಚ್ಚಿಟ್ಟುಕೊಳ್ಳಬೇಡ ಬರೀ ತೋರಿಸು ಎಂದು ಹೇಳಲು
ನಮ್ಮಿಬ್ಬರ ಸರಿಸಮಾನ ಭಾವನೆ
ನಮ್ಮಿಬ್ಬರ ಪ್ರೀತಿಯ ರಸಿಕತೆಗೆ ಜಾರಿಸಿದೆ !



ಮಧು ಸೇವಿಸಿದ ಮೇಲೆ ಮರಳಿ ಬೇಕಾಗದೇ ಇರುವ
ನಮ್ಮ ಪ್ರೀತಿಯ ರಹಸ್ಯ ಎಲ್ಲರಿಗೂ ತಿಳಿದು
ನಮ್ಮಿಬ್ಬರ ಮನ ಬೆಳೆಸುತ್ತಿರುವ

ಸುಗಂಧದ ಸ್ವಾದ
ಪ್ರೀತಿ-ಪ್ರೇಮದ ಅರ್ಥಗಳನ್ನು
ಜಗತ್ತಿನಲ್ಲಿ ಗಾಳಿಯಲ್ಲಿ ಬೆರೆತುಹೋಗಿ ತೇಲಾಡುತ್ತಿದೆ !

**– ಶ್ರೀ ಹರಿ.**

**31-01-2015**

www.sriharikhoday.com

## 873

ನಿನ್ನ ಸ್ವಂತ ಆತ್ಮಬಲದಿಂದ
ತನಗೆ ಭಾಸವಾಗುವ ಕಾಲಜ್ಞಾನದ ಭವಿಷ್ಯವನ್ನು ಮುಂದೆ ಕಾಣದೆ
ಊಹಿಸದೆ ಭವಿಷ್ಯವನ್ನು ತಿಳಿಯಬಲ್ಲ ಆತ್ಮಸ್ಮರಣೆಯಿಂದ ಗ್ರಹಿಸಿ

ದೈವಿಕ ದಿವ್ಯ ದೇವಯೋಗ್ಯವಾದ ದೇವರನ್ನು
ಅತಿಸುಂದರ ಎಂದು ಮನ ಪರಿಗಣಿಸಿ
ದೈವತ್ವದ ಅನುಭವ ಪಡೆದರೆ

ದೇವರನ್ನು ಪಡೆಯುವುದು ದೇವತಾ ಶಾಸ್ತ್ರವಾದರೆ
ಈ ಮನೋತರಂಗದಲ್ಲಿ ಅತಿ ಸೌಂದರ್ಯವಾದ ಗುಣವನ್ನು
ಅನುಭವಿಸಿ
ಭೂಮಿಯ ಒಳಗೆ ನೀರನ್ನು ಪತ್ತೆ ಹಚ್ಚುವಂತೆ

ನಮ್ಮ ಮನಸ್ಸಿನಲ್ಲಿ ಪತ್ತೆಯಾಗುವ ವಸ್ತುವೇ ದೇವರು ಅದರ
ಗುಣವೇ ದೈವತ್ವ
ಅದನ್ನು ಜೀವನದಲ್ಲಿ ಅಳವಡಿಸುವ ಶಾಸ್ತ್ರ ದೇವತಾಶಾಸ್ತ್ರ
ಮಾನವನಾಗಿ ಜೀವನ ಪಡೆದಾದ ಮೇಲೆ

ದೈವತ್ವದ ಅನುಭವವನ್ನು ತಪ್ಪಿಸಿಕೊಳ್ಳಲಾರ
ಅಸಾಧಾರಣವಾದ ಪೂರ್ಣದ ಅನುಭವ ಪ್ರಯತ್ನವಲ್ಲದೆ
ದೈವಶಾಸ್ತ್ರದಿಂದ ಮನ ಪರಿಪೂರ್ಣವನ್ನು ಅನುಭವಿಸಲು ಸಾಧ್ಯ !

**2-02-2015**

**- ಶ್ರೀ ಹರಿ.**



www.sriharikhoday.com

## 874

ದೇಹದ ಆತ್ಮನ ಕಿಟಕಿಗಳು ಕಣ್ಣುಗಳು
ಸತ್ಯದಲ್ಲಿ ಬೆರೆತುಹೋಗಿರುವ ಆತ್ಮ
ಅದರ ಕಣ್ಣುಗಳು ಸತ್ಯವನ್ನೇ ನೋಡಿ
ಆನಂದದ ಕಣ್ಣೀರನ್ನು ಹರಿಸಬೇಕು !

ಓಂಕಾರನಾದದಿಂದ ಆಗಿರುವ ಬ್ರಹ್ಮಾಂಡ
ಬ್ರಹ್ಮಾಂಡದಲ್ಲಿ ಕಂಪಿಸುತ್ತಿರುವ ಶಬ್ದ
ಬೆಳಿ ಬೆಳಿ ಎಂದು ಪ್ರಚೋದಿಸುತ್ತಿರುವ ಶಬ್ದ
ಆ ಪವಿತ್ರ ಶಬ್ದಗಳನ್ನು ಕಿವಿಯಿಂದ ಇಂಪಾಗಿ ಕೇಳಿ ಲಾಲಿಸಬೇಕು!

ಸೃಷ್ಟಿ ತನ್ನ ಬೆಳೆಗಳಿಗಾಗಿ ಸ್ವಾದವನ್ನು ಬಯಸಿ
ಪ್ರತಿಯೊಂದರಲ್ಲಿ ಸ್ವಾದ ಬೆರೆಸಿ ಬೆಳೆಸಿ
ಭಕ್ಷಿಸುವ ಅನುಭವದಲ್ಲಿ ಸ್ವಾದವನ್ನು ನಾಸಿಕದ ನಾಡಿಗಳ
ಮಧ್ಯದಲ್ಲಿ
ವಾಸವಾಗಿರುವ ಮೂಗನ್ನು ಸರಿಸ್ವಾದದಲ್ಲಿ

ಜೀವಿಸಿರುವ ಪರಿಸರದಲ್ಲಿ ಬೆಳೆದು ಜೀವಿಸಬೇಕು
ಬೆಳೆಯುವುದರ ಜೊತೆಗೆ ಆರೋಗ್ಯ
ಆರೋಗ್ಯವಾಗಿ ಜೀವಿಸಲು ಹೊಟ್ಟೆಗೆ ಊಟ
ರುಚಿಕರವಾಗಿ ಎಲ್ಲವನ್ನೂ ಸಂತಸ ನೀಡುವ

ಎಲ್ಲರ ಒಪ್ಪಿಗೆಯ ಪಡೆದಿರುವ ರುಚಿ
ಆ ರುಚಿಯ ಅನುಭವ ಹೇಳುವ ನಾಲಗೆ
ರುಚಿಯ ಜೊತೆಗೆ ಅಕ್ಷರಗಳ ಭಕ್ಷ್ಯವನ್ನು ನೀಡುತ್ತಿರುವ
ರಚಿಗಳ ಅರ್ಥಗರ್ಭಿತ ಮಾತುಗಳನ್ನೇ ಆಡಬೇಕು

ಎಲ್ಲವನ್ನೂ ಒಂದಕ್ಕೊಂದು ಕಾಪಾಡುವ ಬಾಯಿಯಂತೆ
ಅರ್ಥಗಳನ್ನು ಹೊರಚೆಲ್ಲುವ ಶಕ್ತಿಯುಳ್ಳ ಬಾಯಿಯನ್ನು
ಪ್ರೀತಿ–ದ್ವೇಷವನ್ನು ತರಿಸಬಲ್ಲ ಬಾಯಿಯನ್ನು
ವಿದೇಶದ ಸ್ವಾಧೀನದಲ್ಲಿರುವ ಬಾಯಿಯನ್ನು

ಆತ್ಮನ ಶಕ್ತಿಯುಳ್ಳ ಬಾಯಿ ಜೊತೆಗಿರುವ ನಾಲಿಗೆಯನ್ನು
ಪ್ರಕೃತಿಯ ಧರ್ಮವಾದ ಸ್ವರವನ್ನು ಉಪಯೋಗಿಸಿ
ಇರುವ ಸತ್ಯದ ಆದೇಶಗಳನ್ನು ಆತ್ಮನ ಆದೇಶ ಎಂದು ತಿಳಿಯುತ
ನಾಲಿಗೆಯೇ .. ಬಾಯಿಯನ್ನು ಪ್ರೀತಿ–ಪ್ರೇಮಗಳನ್ನು ಅರಳಿಸುವಂತೆ
ಕಂಪಿಸು !

– ಶ್ರೀಹರಿ.

03–02–2015



# 875

ಸುಮ್ಮನೆ ಇರದೆ ಇರುವ ಬ್ರಹ್ಮಾಂಡ
ಸುಮ್ಮನಿರದೆ ನಮ್ಮ ಜೊತೆ ತೇಲುತ್ತಿರುವ ಕಾಲ
ಒಂದೆಡೆ ಯಾವುದೂ ಸುಮ್ಮನೆ ಇರದೆ
ಕ್ಷಣ ಕ್ಷಣಗಳಲ್ಲಿ ಬದಲಾವಣೆ

ಸುಮ್ಮನಿರದೆ ಬೆಳೆಯುತ್ತಲೇ ಇದೆ
ಸುಮ್ಮನೆ ಇರದೆ ತನ್ನಲ್ಲೇ ತಾನು ಕಳೆದುಕೊಳ್ಳುತ್ತಿದೆ !
ಸುಮ್ಮನೆ ಇರದೆ ಇತಿಹಾಸ ಬೆಳೆಯುತ್ತಲೇ ಇದೆ !
ಎಲ್ಲದರಲ್ಲಿ ಬೇಡಿಕೆಗಳೂ ಬೆಳೆಯುತ್ತಲೇ ಇದೆ !

ಲಾಭವನ್ನು ಪಡೆಯುತ್ತಲೇ ಇದೆ
ನಷ್ಟವನ್ನೂ ಅನುಭವಿಸುತ್ತಲೇ ಇದೆ
ಕಾಲದ ಸರಿ ಉಪಯೋಗವೇ ಫಲ
ಕಾಲದ ದುರುಪಯೋಗವೇ ಕಾಣದ ಮನದ ಛಲ !

ಬಣ್ಣ ಬಣ್ಣಗಳ ಹೂಗಳು ಅರಳುತ್ತಲೇ ಇದೆ
ಸಾಲು ಸಾಲು ದುಂಬಿಗಳು ಹುಟ್ಟುತ್ತಲೇ ಇವೆ
ಅಣು ಅಣುಗಳಲ್ಲಿ ಅನುಭವ ಹರಿಯುತ್ತಲೇ ಇದೆ
ಕೊನೆಗಾಣದ ಪ್ರಗತಿ ಹೊಸತನ್ನು ಬೇಡುತ್ತಲೇ ಇದೆ !



www.sriharikhoday.com

ಭಾವನೆಗಳಿಗೆ ಗಡಿ ಇಲ್ಲದೆ ಊಹಾಪೋಹಗಳ ತರಂಗಗಳು
ಹೊಸ ಹೊಸ ಬಣ್ಣಗಳನ್ನು ಬಿಡಿಸುತ್ತಲೇ ಇದೆ
ಸೂರ್ಯ ತಾನು ಎಲ್ಲಿಂದ ಬಂದೆನೆಂಬ ಅರಿವಿಲ್ಲದೆ
ನಾವು ಎಲ್ಲಿಂದ ಬಂದೆವೆಂದು ತಮಗೇ ತಿಳಿಯದೆ

ನಾವು ಎಲ್ಲಿ ಹೋಗುವುದು ಎಂದು ತೋಚದೆ
ನಾವು ಬರೀ ಕಾಲದ ಫಲವಾಗಿ ಹಣ್ಣಾಗಿ ಬೆಳೆದು
ಸಮಯಗಳಿಗೆ ಉಣ್ಣಲು ಹಣ್ಣಾಗಿ
ಕಾಲ ಹಣ್ಣನ್ನು ಉಂಡು ಬೀಜವನ್ನು ಬೆಳೆಯಲು ಬಿಟ್ಟು

ಬೀಜ ಚಿಗುರಿ ಒಂದು ಹೊಸ ಇತಿಹಾಸವನ್ನು ಬೆಳೆಸುತ್ತಲಿದೆ
ನಾವು ಹುಟ್ಟಿಲ್ಲ . . ಎಂದಿಗೂ ಸಾಯುವುದಿಲ್ಲ
ಎಂದೆಂದಿಗೂ ಬೆಳೆಯುತ್ತಲೇ ಇರುವೆವು ಎನ್ನುತ್ತಿದೆ

**– ಶ್ರೀ ಹರಿ.**

**04-02-2015**



# 876

ಕರುಳಿನ ಗಂಟು
ಸುಖದಲ್ಲಿ ಜೊತೆ ಕಷ್ಟದಲ್ಲಿಯೂ ಜೊತೆ . .

ಸುಖ ತರುವ ಕಣ್ಣೀರು
ಕಷ್ಟಗಳಿಗೆ ಕಣ್ಣೀರು
ಪ್ರೀತಿ-ಪ್ರೇಮಗಳ ಗಳಿಕೆಗಳಿಗೆ ಕಣ್ಣೀರು
ಪ್ರೀತಿ-ಪ್ರೇಮದ ವಿರಹಕ್ಕೆ ಕಣ್ಣೀರು

ಸಂತತಿಯ ಜೊತೆಗೆ ಕಣ್ಣೀರು
ನೆಂಟರಿಷ್ಟರ ಜೊತೆಗೆ ಕಣ್ಣೀರು
ಜೊತೆಯಿರುವವರ ಜೊತೆ,
ಜೊತೆ ತರಿಸುವ ಕಣ್ಣೀರು

ಹೆಚ್ಚಿನ ಮಳೆ ತರಿಸುವ ಕಣ್ಣೀರು
ಕ್ಷಾಮ ತರಿಸುವ ಕಣ್ಣೀರು
ತಾಯಿ ಎದೆಹಾಲು ಮಗುವಿಗೆ ನೀಡುವಾಗ
ತಾಯಿಯ ಕರುಳಿನ ಆನಂದದ ಕಣ್ಣೀರು !

ತನ್ನ ಕೂಸು ಪ್ರಭಾವಶಾಲಿ ಆಗಿರಲು ತಾಯಿ ಕಣ್ಣೀರು
ಎಲ್ಲಾ ಭಾವನೆಗಳ ಗುಟ್ಟು ತಿಳಿದಿರುವ ಕಣ್ಣೀರು

www.sriharikhoday.com

ಗುರು- ಶಿಷ್ಯರ ಒಳಗಿರುವ ಕಣ್ಣೀರು
ಹುಲ್ಲಿಲ್ಲದೆ ಹಸುವಿನ ಗೋಳಿನ ಕಣ್ಣೀರು !

ಭಿಕ್ಷುಕನಿಗೆ ಭಿಕ್ಷೆ ಸಿಗದೆ ಸಂಕಟದ ಕಣ್ಣೀರು
ಗೆಲುವು ಸೋಲಿನ ಕಣ್ಣೀರು
ಪ್ರಪಂಚದ ಕಷ್ಟಗಳನ್ನು ನೋಡುತ್ತಿರುವ ಆಕಾಶ
ಮೋಡಗಳೆಂಬ ಭಾವನೆಯಿಂದ ದುಃಖ ಸುರಿಸುತ್ತಿರುವ ಮಳೆ
ಕಣ್ಣೀರು

**- ಶ್ರೀ ಹರಿ.**

**05-02-2015**



# 877

ಅಹಂಕಾರ ಬೆಳೆಯುವ ಗಿಡಕ್ಕೆ ಹತ್ತುವ ರೋಗ ತಾತ್ಸಾರ
ತಾತ್ಸಾರದಿಂದ ಕಾಣುವುದೆಲ್ಲ ಧಿಕ್ಕಾರ
ಸತ್ಯಕ್ಕೆ ನಕಾರ ಅಹಂಕಾರ
ಊರ ಜನರ ನಿಷ್ಠೂರ ಅವನ ಅಹಂಕಾರದ ಉಬ್ಬರ !

ಮನ ಕಳೆದುಕೊಂಡಿದೆ ಎಚ್ಚರ
ಹೆಜ್ಜೆ ಹೆಜ್ಜೆಗೂ ಅಹಂಕಾರ ಎಚ್ಚರಿಸುವುದು ಮತ್ಸರ
ಲೆಕ್ಕ ತಿಳಿಯದ ಬೇರೆಯವರ ಬೇಸರ ಅಹಂಕಾರ
ಮನದ ಮೇಲೆ ಕುಳಿತು ಅಹಂಕಾರವನ್ನು ಮುನ್ನಡೆಸುವ ಸವಾರ !

ಮರೆತಿರುವನು ಎಲ್ಲಾ ಲೌಕಿಕ ಆಚಾರ
ಮರೆತುಹೋಗುವುದು ಜೀವನದ ಆಕಾರ
ನೀಡುವನು ಸಮಾಜಕ್ಕೆ ಎತ್ತಲಾಗದ ಭಾರ
ಹತ್ತಿರದಲ್ಲಿರುವುದೆಲ್ಲ ಮಾಡುವನು ದೂರ

ಹೆಜ್ಜೆ ಹೆಜ್ಜೆಗೂ ಮಾತಿನಲ್ಲಿ ನಿಷ್ಠೂರ
ವಿಸ್ತಾರವನ್ನರಿಯದ ಮನ
ಬೇಡುತ್ತಿರುವನು ಹೆಜ್ಜೆ ಹೆಜ್ಜೆಗೂ ಸತ್ಕಾರ
ಅಹಂಕಾರವನ್ನು ತಿಳಿಯದೆ ಮಡಕೆ ಮಾಡುವನು ಕುಂಬಾರ

www.sriharikhoday.com

ಮನದ ಪವಿತ್ರ ದ್ವಾರದಲ್ಲಿ ಭಾವನೆಗಳನ್ನು ಸ್ವೀಕರಿಸುವನು
ಪವಿತ್ರ ಮನೋಭಾವನೆಯಿಂದ ಭಾವನೆಯನ್ನು ಬೀಳ್ಕೊಡುವನು
ಅಹಂಕಾರವನ್ನು ಬಿಟ್ಟರೆ ಮನೋಬಾಗಿಲಿಗೆ
ಬರುವನು ಆತುರದಿಂದ ಈಶ್ವರ ಇದೇ ಸತ್ಯದ ಝೇಂಕಾರ !

ಬಂಗಾರವಾದ ಭಾವನೆಗಳ ಮನ ಬೆಳೆಸಬೇಕು ಭಂಡಾರ
ಅಂತಹ ಮನೋಗಿಡ ಅಹಂಕಾರ ಇಲ್ಲದೆ ಬೆಳೆಸಿದರೆ
ಮರೆತು ಹೋಗಿರುವ ಮನೋ ಎಚ್ಚರಕ್ಕೆ ಸಹನೆಯನ್ನು ಕಲಿತು
ಬೆವರ ಸುರಿಸದೆ ದೊರಕುವುದು ಅವರಿಗೆ ಹೊಸ ಹೊಸ
ವಿಚಾರ!

**- ಶ್ರೀ ಹರಿ.**

**06-02-2015**



## 878

ದೇವರಿಂದ ನಾವು ಪಡೆದಿರುವುದೆಲ್ಲ ಸಮುದ್ರ ಗಾತ್ರ
ಸಮುದ್ರ ನೀಡುವುದು ಮತ್ತೆ ಅಲೆಗಳನ್ನು ದಡ ಹಿಂದೆ
ನೀಡುವುದು
ಪ್ರೀತಿ-ಪ್ರೇಮ ಅಗಾಧ ಸಮುದ್ರ ಎಂದಿಗೂ ಅದರ ಆಳವನ್ನು
ಅಳೆಯಲಾಗದ ಆಳ
ಪ್ರೀತಿಯನ್ನು ನಾವು ಮೆಚ್ಚಿಕೊಂಡರೆ ಮತ್ತೊಬ್ಬರಿಂದ ಪ್ರೀತಿಯ
ಲಾಭ !

ವಿಶ್ವದ ಇರುವಿಕೆಯೇ ಒಂದು ವ್ಯಾಪಾರ
ಕೊಡುವುದು ಕೊಟ್ಟರೆ ತೆಗೆದುಕೊಳ್ಳುವುದು ಹತ್ತಿರದಿಂದಲೇ
ಪಡೆಯುವುದು
ಬೆಳಕು ಬೆಳಕನ್ನು ನೀಡಿ ಕತ್ತಲೆಯನ್ನು ಹಿಂದೆ ಪಡೆಯುವುದು
ವಿಶ್ವಜೀವ ಪ್ರಾಣ ನೀಡುವುದು ಮತ್ತೆ ಹಿಂದೆ ತೆಗೆದುಕೊಳ್ಳುವುದು !

ಕೊಡುವವನು ಸಂತಸದಿಂದ ನೀಡಿದರೆ
ಹಿಂತಿರುಗಿ ನಾವು ಪಡೆಯುವ ಕಾಲದಲ್ಲಿ
ಎಂದೂ ಮರೆಯಲಾಗದ ಸುಖದ ಅನುಭವ
ಅನುಭವ , ಅನುಭವಕ್ಕೆ ಲೇವಾದೇವಿಗಳ ದಲ್ಲಾಳಿ ಪಡೆಯದ ದಲ್ಲಾಳಿ
ಅನುಭವ !

ಜಗತ್ತಿನಲ್ಲಿ ಎಲ್ಲವೂ ಅನುಭವಿಸುತ್ತಲೇ ಇದೆ
ಸುಖದ ಅನುಭವ . . ದುಃಖದ ಅನುಭವ . .ದೊರೆತನದ
ಅನುಭವ.. .

www.sriharikhoday.com

ಹೆದರಿಕೆಯ ಅನುಭವ ಅವತ್ತಿನ ಅನುಭವ . .ತೇರ್ಗಡೆ ಗಳಿಸಿದ
ಸುಖದ ಅನುಭವ
ಕ್ಷಣ ಕ್ಷಣದಲ್ಲಿ ಅನೇಕ ರೀತಿಯ ಸಮುದ್ರದ ಅನುಭವ !

ಪ್ರೀತಿಯ ಸಮುದ್ರ . .ಪ್ರೇಮದ ಸಮುದ್ರ
ರಸಿಕತೆಯಲ್ಲಿ ಒಂದು ಸಮುದ್ರ. . ಜೀವಂತರಾಗಿರುವ ಆಸೆಯ
ಸಮುದ್ರ
ಆರೋಗ್ಯದ ಸಮುದ್ರ. . ಜ್ಞಾನದ ಸಮುದ್ರ. .
ಸೌಂದರ್ಯದ ಸಮುದ್ರ

ತಮ್ಮ ತಮ್ಮ ರೀತಿ-ನೀತಿಗಳ ಸಮುದ್ರ
ಹೊಂದಾಣಿಕೆಯ ಸಮುದ್ರ
ಹೊಂದಿರುವುದಕ್ಕಿಂತ ಹೆಚ್ಚು ಪಡೆಯುವ ಆಸೆಯ ಸಮುದ್ರ
ಬಯಕೆಯ ಸಮುದ್ರ . .ಸಾಮರ್ಥ್ಯದ ಸಮುದ್ರ

ನಮ್ಮನ್ನು ನಾವೇ ಮರೆತು ಸಮುದ್ರ ರೂಪ ಮನದಲ್ಲಿ ತಾಳಿಕೊಂಡರೆ
ಲೇವಾದೇವಿ ಕಲಿಸಿರುವ ದೇವರು ಕಲಿಸಿರುವ ವ್ಯಾಪಾರ
ಶುಲ್ಕವಿಲ್ಲದ ದಲ್ಲಾಳಿ ವ್ಯಾಪಾರ

ಅನುಭವಗಳ ಲೇವಾದೇವಿ ನೀಡುವುದು ಕೊಡುವುದು
ಕೊಡುವುದು . .ನೀಡುವುದು
ಕೊಡುವುದಕ್ಕಿಂತ ಹೆಚ್ಚು ಲಾಭ ಪಡೆಯುವ ವ್ಯಾಪಾರ
ನಮ್ಮ ಮನೋಗುಣದ ವ್ಯಾಪಾರ

ಪರಿಸರದ ಲಾಭದಿಂದ ವ್ಯಾಪಾರ
ನಮ್ಮ ಸಮುದ್ರದ ಭಾವನೆಯಿಂದಲೇ ಪರಿಸರ
ವಿಶ್ವದ ವ್ಯಾಪಾರಕ್ಕೆ ದಲ್ಲಾಳಿಯ ಶುಲ್ಕ ಕೇಳದಿಹ ಭಾವನೆಗೆ
ಜಯವೋ ಜಯ . .ಜಯವೋ . . ಜಯ !

– **ಶ್ರೀ ಹರಿ.**

**07-02-2015**



# 879

ಬೆಳಕೆ ಎದ್ದೇಳು
ನಿದ್ರೆಯ ಕಣ್ಣಿನ ಕತ್ತಲೆಯ ಬಿಟ್ಟು
ಬೆಳಕೆ ಎದ್ದೇಳು
ಬಹಳ ಜವಾಬ್ದಾರಿಯಿರುವ ನಿನಗೆ
ಬೆಳಕಾಗಿದೆ ಜಗವೆ ಎದ್ದೇಳು !

ಕಾಲ ನಿನ್ನ ಕ್ರಿಯೆಗಳಲ್ಲಿ ಬೆರೆಯಲು
ಬೆಳಕು ಬೆಳೆದಂತೆ ಕಾಲ ಬೆಳೆದು
ಒಳ-ಹೊರಗೆ ನಿನ್ನ ಜೊತೆಗೆ ನೆರಳು ಹಿಂಬಾಲಿಸಲು
ಪಂಡಿತರು ನಿನ್ನ ತತ್ವವನ್ನು ಅರಿಯಲಾಗದೆ
ನಿಜಕ್ಕೂ ನಿನ್ನ ಮೇಲೆ ಸಂದೇಹವಿಲ್ಲದೆ

ದಿನಚರಿಯ ಚಲನೆ ವೇಗವಾಗಿ ಬೆಳೆದು
ಮೌನವಾಗಿ ಕಾಣದೆ ಹೋಗಿದೆ
ಫಲ ಅಪೇಕ್ಷೆಗಳಿಲ್ಲದೆ ಸುಮ್ಮನೆ ಮೈ ಮರೆತು ದುಡಿಯುತ
ಚಿರಶಾಂತಿಯಿಂದ ಜೀವಿಸುವ
ಬೆಳಕೆ ಎದ್ದೇಳು. . . !

ಹುಟ್ಟಿರುವವರು ಎನಿತು . ದೇಹಬಿಟ್ಟವರು ಎನಿತು
ಹುಟ್ಟು ಸಾವಿನ ವೀಕ್ಷಕನಾಗಿರುವ ನಿನಗೆ
ಹುಟ್ಟು ಸಾವು ಒಂದಾಗಿದೆ ಬೆಳಕೆ

www.sriharikhoday.com

ನಿನ್ನ ಹುಟ್ಟನ್ನು ಯಾರೂ ನೆನೆಯುವವರಿಲ್ಲ
ನಿನ್ನ ಸಾವನ್ನು ಕೂಡ ನೆನೆಯುವವರಿಲ್ಲ. !

ಏಕೆಂದರೆ ಸಾವನ್ನು ಅರಿತಿರುವ ನೀನು
ಸಾವಿನ ನಿದ್ದೆಯಿಂದ ಹೊಸ ಬೆಳಕನ್ನು ನೋಡುವಂತೆ
ಪುನರಪಿ ಜನನಂ . .ಪುನರಪಿ ಮರಣಂ ಎನ್ನುವ ಶಂಕರನ
ನುಡಿಗಳಂತೆ
ಬೆಳಕೇ ಎದ್ದೇಳು ಹೊಸದಾಗಿ ಹುಟ್ಟಿರುವುದರಲ್ಲಿ ಜೀವ
ತುಂಬಲು
ಬೆಳಕೇ ಬೇಗ ಎದ್ದೇಳು . .!

**– ಶ್ರೀ ಹರಿ.**

**09–02–2015**



www.sriharikhoday.com

## 880

ಹಳೆಯದನ್ನು ಮರೆಯುವ ಜನಗಳ ಮನದ ಶಕ್ತಿ
ಕ್ಷಣ ಕ್ಷಣಗಳಲ್ಲಿ ಮನಸ್ಸಿಗೆ ಬೇಕಾದ ಯುಕ್ತಿ
ಎಚ್ಚರದಿಂದ ಕೆಲಸ ಮಾಡುವವರಲ್ಲಿನ ಭಕ್ತಿ
ತೃಪ್ತಿಕರವಾಗಿ ಕೆಲಸ ಮಾಡುವ ಆಸಕ್ತಿ
ಒಂದು ದೇಶದ ಕ್ರಾಂತಿ !

ಅತಿಮಿತಿಗಳಿಲ್ಲದ ಸಾಧನೆಯ ಜನಜಾಗೃತಿ
ತಮ್ಮದೇ ಆದ ಸಾಧನೆಯ ರೀತಿ ಸಾಧನೆ ಜೀವನದ ಸಂಸ್ಕೃತಿ
ದಿನಚರಿಯ ಕೆಲಸಗಳೇ ಆಗಿದೆ ಜೀವನ ಸಂಗಾತಿ
ಹೆಜ್ಜೆ ಹೆಜ್ಜೆಗಳು ಎಲ್ಲರಲ್ಲಿ ಮನ ಬೆರೆಯುವ ಸಹಾನುಭೂತಿ
ಜನ ಜಾಗೃತಿಯ ಆರತಿ !

ಜೀವನದ ರೀತಿ–ನೀತಿಗಳೇ ತಂದಿದೆ ದೇಶಕ್ಕೆ ಖ್ಯಾತಿ
ಸಂಸಾರ ಜೀವನದಲ್ಲಿ ಜಾಗೃತಿಯಿಂದ ಜೀವನಡೆಸುತ್ತಿರುವಳು
ಅರ್ಧಾಂಗಿಯಾದ ಒಡತಿ
ಪ್ರೀತಿಯ ರೀತಿಯೇ ಬೇರೆ ರೂಪದಲ್ಲಿರುವ ಆಕೃತಿ
ತಮ್ಮ ಜೀವನದ ನಡಿಗೆ ಕೊಡುತ್ತಿದೆ ಪ್ರಕೃತಿಗೆ ವಿಶ್ರಾಂತಿ !

ದೇಶವೇ ಮಾರ್ಪಾಡಾಗಿದೆ ದೈವರೂಪದ ಮೂರ್ತಿ
ಕೆಲಸ ಕೆಲಸ ಎಂಬ ಪ್ರೀತಿ ದ್ವೇಷವನ್ನು ಮರೆಸಿ
ಜೀವನದ ರೀತಿಯೇ ಒಂದು ಜೀವನದ ಹೆದ್ದಾರಿಯಾಗಿ

ಎಲ್ಲಾ ದೇಶದವರ ಜೊತೆಗೆ ಸ್ನೇಹಭಾವದಿಂದ ಪ್ರೀತಿಯನ್ನು
ಹಂಚುತ್ತ
ಎಡವದೇ ಕ್ರಾಂತಿಕಾರಿಯಾದ ಜೀವನ ಹೆಜ್ಜೆಗಳು
ಪ್ರತಿಧ್ವನಿಸುತ್ತಿದೆ ಜಾಗೃತಿ . .ಜಾಗೃತಿ ಎಂದು !

**– ಶ್ರೀ ಹರಿ.**

**12–02–2015**



**881**

ಆನಂದ ಒಂದು ಕೋಟೆ
ಆನಂದದ ಕೋಟೆ ಬಾಗಿಲು ಎಂದೂ ಮುಚ್ಚಿರುತ್ತದೆ
ಕೋಟೆ ಒಳಗೆ ಬರುವರು .. ಯಾರು
ಯಾವುದು ಬರುವುದು .. ಕೇಳದೆ ಪ್ರಶ್ನೆ ಮಾಡದೆ
ಕೋಟೆ ತನಗೆ ತಾನು ಅರಿತುಕೊಳ್ಳುವುದು !

ವ್ಯಕ್ತಿತ್ವವನ್ನು ಮರೆತರೆ ಮಾತ್ರ
ಕೋಟೆಯ ಬಾಗಿಲು ತಾನಾಗಿಯೇ ತಾನು ತೆರೆಯುವುದು
ಕೋಟೆಯ ಹೆಬ್ಬಾಗಿಲು ತರೆದಾದ ಮೇಲೆ ಮೈತ್ರಿಯ ಸ್ವಾಗತ
ಕ್ಷಣದಲ್ಲಿಯೇ ಮೈತ್ರಿಯ ಸುಖದ ಅನುಭವ

ಸುಖದ ವಿಶ್ಲೇಷಣೆ ವ್ಯಕ್ತಿ ವ್ಯಕ್ತಿಗೂ ಬದಲುವಂತೆ
ಸುಖದ ವಿಶ್ಲೇಷಣೆ ಕಾಲ ಕಾಲಕ್ಕೂ ಬದಲುವಂತೆ
ಸುಖ ಒಂದು ಅನುಭವವಾಗಿ ಅನುಭವದಲ್ಲಿ ತನ್ನನ್ನು ತಾನೇ
ಮರೆತು
ಮರೆತಿರುವ ಸಮಯಗಳೇ ಆನಂದ !

ದಿಗಂತವನ್ನು ನೋಡುತ್ತಾ ನೋಡುತ್ತಾ ದಿಗಂತದಲ್ಲಿ ಬೆರೆತ
ಆನಂದ
ಬಣ್ಣ ಬಣ್ಣಗಳನ್ನು ನೋಡುತ್ತಾ ನೋಡುತ್ತಾ ಬಣ್ಣಗಳಲ್ಲಿ ಬೆರೆತ
ಆನಂದ

www.sriharikhoday.com

ಎದುರಿಗೆ ಕಾಣಬರುತ್ತಿರುವ ವಿಷಯಗಳಲ್ಲಿ ಬೆರೆತು ಬರುವ
ಆನಂದ
ಬೆರೆತಾದ ಮೇಲೆ ತನ್ನನ್ನು ತಾನೇ ಕಳೆದುಕೊಂಡು ಬೆರೆತ್ತಿರುವ
ಆನಂದ

ವ್ಯಕ್ತಿತ್ವ ಕೋಟೆ ಆಚೆ ಇರುವ ಕಾರಣವಾಗಿ
ದೀರ್ಘಕಾಲದ ಅನುಭವ ತನ್ನ ಇರುವಿಕೆಗೆ ಗೋಚರವಾಗುವುದು
ಗೋಚರವಾಗುತ್ತಿರುವ ವೇಳೆಯಲ್ಲಿ ವಿಶ್ವವೇ ಕಿರಿದಾಗಿ
ವಿಶ್ವದ ಶಕ್ತಿಯಾದ ದೇವರ ಜೊತೆಗೆ ಕಷ್ಟವಿಲ್ಲದೆ ಬೆರೆಯುತ

ಮನೋಸಾಹಸದ ಸಹನೆ ಎಲ್ಲದರಲ್ಲಿ ಇರುವ ಕಾರಣ
ಎಲ್ಲವೂ ಆನಂದದಲ್ಲಿ ತುಂಬಿಹೋಗಿರುವ ಕಾರಣವಾಗಿ
ದೇವರಲ್ಲಿ ಬೆರೆತಿರುವ ಇರುವಿಕೆಯ ಅನುಭವ
ಬೆರೆಯುವುದು ಬೆರೆತಿರುವುದು ವಿಶ್ವದ ಒಂದು ಗುಣವಾಗಿರುವ
ಕಾರಣ
ಕಾಣುವ ಎಲ್ಲದರಲ್ಲಿ ದೇವರನ್ನು ನೋಡಬಹುದು
ಎಲ್ಲದರಲ್ಲಿ ದೇವರನ್ನು ಅನುಭವಿಸಬಹುದು
ವ್ಯಕ್ತಿತ್ವ ಕಳೆದುಕೊಂಡಿರುವ ನಾವುಗಳು
ಕೋಟೆ ಆಚೆ ಇರುವ ವ್ಯಕ್ತಿತ್ವಕ್ಕೆ ದೂರ ಇರುವ ಕಾರಣ

ಆಚೆ ಇರುವ ವ್ಯಕ್ತಿತ್ವ ನಾವು ಕೋಟೆ ಹೊರಗೆ ಬರದೆ
ಕಾದು ಕಾದು ಓಡಿಹೋಗಿರುವ ಕಾರಣ
ಪ್ರಕೃತಿಗೆ ವ್ಯಕ್ತಿತ್ವ ಇಲ್ಲದ ಗೋಚರ
ಆ ಗೋಚರವೇ ದೇವರ ಅರಿವು
ಆ ಅರಿವೇ ಕೊನೆಗಾಣದ ಕೊನೆ ಬರದ ಆನಂದ !

**– ಶ್ರೀ ಹರಿ.**

**12–02–2015**



## 882

ಅಂಜಿಕೆ ಇಲ್ಲದ ಆಕಾಶ ಗರ್ಭದಿಂದ
ಹೊಸ ಹೊಸ ಅವತಾರಗಳು
ಸೂರ್ಯನ ಅವತಾರ . .ಚಂದಿರನ ಅವತಾರ
ನಭೋಮಂಡಲದ ಅವತಾರಗಳು

ಪ್ರಗತಿಗೆ ಅಡ್ಡವಾಗಿರುವ ಅಂಜಿಕೆ
ಅಪನಂಬಿಕೆಯಿಂದ ಹೊರಬರುವ ಅಂಜಿಕೆ
ಬೇರೆಯವರ ಜೊತೆ ಸೇರುವ ಅಂಜಿಕೆ
ಪ್ರೀತಿಸುವವರ ಜೊತೆ ಸೇರಲು ಅಂಜಿಕೆ
ಅಂಜಿಕೆ ಇಲ್ಲದ ವಿಶ್ವ ಕಾಣುವ ಕಣ್ಣಿನ ಮರೀಚಿಕೆ

ನಿರಾಳ ಭಾವನೆಯ ಕೋರಿಕೆ
ಬೇಕಿದೆ ಹೊಂದಿಕೆಯ ಬಳಕೆ
ಅಪನಂಬಿಕೆಯೇ ಹಾಯಿ ಇಲ್ಲದ ನೌಕೆ
ಬಣ್ಣದ ಕುಡಿಕೆಯಲ್ಲಿರುವ ಬಣ್ಣ
ಟೀಕೆಗಳನ್ನು ಲೆಕ್ಕಿಸದೆ ಕುಂಚ ಬರೆಯುವಂತೆ

ಭಯವಿಲ್ಲದ ಮನೋಶಂಕೆ ವಿಶ್ವವನ್ನು ಹುಟ್ಟಿಸುವ ಸಿರಿವಂತಿಕೆ
ಯಾವ ಹರಕೆ ಇಲ್ಲದೆ . .ಯಾವ ಹಂಬಲಿಕೆ ಇಲ್ಲದೆ
ಯಾವ ಹೋಲಿಕೆ ಇಲ್ಲದ ಅವತಾರವೇ
ವಿಶ್ವದ ಅವತಾರ !

www.shriharikhoday.com

ರೆಕ್ಕೆ ಇಲ್ಲದ ಮನಸ್ಸು ಒಂದೆಡೆ ನಿಲ್ಲದೆ
ಭತ್ತವನ್ನು ಒನಕೆಯಿಂದ ಕುಟ್ಟುವಂತೆ
ಭತ್ತ ಅಂಜಿಕೆಯ ಪದರಗಳನ್ನು ತೆರೆದು
ಕಾಣದೇ ಇರುವ ಅಕ್ಕಿ ಕಾಣುವಂತೆ
ವಿಶ್ವದಲ್ಲಿ ಕಾಣುವುದೆಲ್ಲ ಹೆದರಿಕೆಯಿಲ್ಲದೆ ಚಿಗುರಿ

ಬಣ್ಣ ಬಣ್ಣಗಳಿಂದ ಯಾರ ಸುಖಕ್ಕೂ ಧಕ್ಕೆ ಕೋರದೆ
ಬರೀ ತೆಗಳಿಕೆ ಮಾತಲ್ಲದೆ ತನ್ನ ರೂಪದ ಮೇಲೆ ತನ್ನ ಆಳ್ವಿಕೆ
ತಮ್ಮ ಸ್ವರೂಪದ ಮೇಲೆ ತಮ್ಮ ಆಳ್ವಿಕೆ
ತಮ್ಮ ಗಾತ್ರದೊಡನೆ ತನ್ನ ಸ್ವಯಂಪ್ರೇರಿತ ಆಳ್ವಿಕೆ

ಆಕಾಶದಿಂದ ಯಾವ ರೀತಿಯ ಅಂಜಿಕೆ ಇಲ್ಲದೆ ವಿಶ್ವ ಬಂದಂತೆ
ಭಾವನೆಗಳು ಕೂಡ ಒಂದು ಮನದ ಮನೋ ಆಕಾಶದ
ಅವತಾರಗಳು
ಅಪನಂಬಿಕೆಯನ್ನು ನಮ್ಮ ಮನದಲ್ಲಿ ಮುಳುಗಿಸಿ
ಮನೋಸಜ್ಜನಿಕೆಯ ಕ್ಷೇತ್ರದ ಬಯಲಿನಿಂದ
ಎಲ್ಲಾ ಮನೋ ಅನಿಸಿಕೆಗಳನ್ನೆಲ್ಲ ಮನದಲ್ಲಿ ಬಳಕೆ ಮಾಡಿದರೆ

ನಮ್ಮ ಹರಕೆ ಅಂಜಿಕೆಯನ್ನು ಮೀರಿಸಿ
ನಿರಾಳ ಭಾವನೆಯ ಆಕಾಶದ ಬಯಲಲ್ಲಿ ರೂಪಗೊಂಡು
ಜೊತೆಯಾಗುವುದು
ಆಸೆಯಿಂದ ದೂರವಿರುವ ಅನಿಸಿಕೆ
ಕಾರ್ಯರೂಪದಲ್ಲಿ ಮಾರ್ಪಾಟಾಗಿ ಜೊತೆ ಅವತರಿಸುವುದು
ವಿಶ್ವದ ನಿಯಮ
ಇದು ಬರೀ ಮಾತಲ್ಲ. .ಇದು ಜೀವನದ ಗಣಿತ !

**- ಶ್ರೀ ಹರಿ.**

**16-02-2015**



## 883

ಹೋಗುತ್ತಿರುವುದು ಹೋಗುತ್ತಲೇ ಇದೆ
ಬರುವುದು ತನ್ನ ಪಾಡಿಗೆ ತಾನೇ ಬರುತ್ತಲಿದೆ
ಉಳಿಯುವುದು ಉಳಿಯುತ್ತಲೇ ಇದೆ
ಮನವು ಗಮನಿಸದೆ ತನ್ನ ಪಾಡಿಗೆ ತಾನು ಬೇರೆಯಾಗುತ್ತಲಿದೆ !

ಎದೆಯಿಂದ ಮನಸ್ಸಿಗೆ ಅಪರಾಧ ನಿಂದನೆಗಳ ಭಯ
ಕಾಯಿದೆಯಿಲ್ಲದ ಮನಸ್ಸು ಗಾದೆಗಳ ಹೇಳುತ್ತಲಿದೆ
ತನಗೆ ಅಡ್ಡವಾಗಿರುವುದು ಏನೆಂದು ತಿಳಿಯದ ಅಡ್ಡ
ಮನಸ್ಸೇ ಮನಸ್ಸಿನ ಪರದೆಯಾಗಿ ತನ್ನ ಫಾಯಿದೆಗೆ

ಬದಲಾವಣೆಯ ಸರಣಿ ಹಿಡಿದು ಕಟ್ಟುವುದು ಮನ ಹೊಸ
ಕಾಯಿದೆ
ಕ್ಷಣ ಕ್ಷಣಕ್ಕೂ ಗಳಿಕೆಯ ಫಾಯಿದೆ ಯೋಚಿಸುವ ಮನಸ್ಸು
ಗುರಿ ಏನೆಂದು ತಿಳಿಯದೆ
ಗುರಿಯನ್ನು ಸಾಧಿಸಿರುವೆ ಎಂಬ ಎದೆಗಾರಿಗೆ !

ಬದುಕಿನ ಜೊತೆ ಮನಸ್ಸು ಬೆರೆತರೆ
ಮನಸ್ಸಿನ ಜೊತೆ ಬದುಕು ಬೆರೆತರೆ
ಒಬ್ಬೊಬ್ಬರಲ್ಲಿ ವೈರತ್ವ ಇಲ್ಲದಿದ್ದರೆ
ನಿರ್ಮಲ ಪ್ರೀತಿ ತುಂಬಿಕೊಂಡಿರುವ ಇಬ್ಬನಿ



www.sriharikhoday.com

ಎಲ್ಲದರಲ್ಲಿ ಪ್ರೀತಿಯನ್ನು ತುಂಬಿಸುವ ಯೋಗ್ಯತೆ ಬಂದು
ತುಂಬಿಸುವ ಯೋಗ್ಯತೆ ನಮ್ಮ ಮೇಲೆಯೇ
ಪ್ರತಿಬಿಂಬಗಳು ಹಿಂದೆ ಬರುವುದು
ನಮ್ಮ ಫಲವಾಗಿ ಹೋಗುವುದೆಲ್ಲ ಮತ್ತೆ ನಮ್ಮೆಡೆಗೆ ಬರಲು
ಎಂದು

ಬೇರೆಯಿಂದ ಬಂದದ್ದು ಮತ್ತೆ ಬಂದ ಜಾಗದೆಡೆಗೆ
ಹೋಗುವುದೆಂಬ ತತ್ವ
ಈ ಹೋಗು ಬರುವ ತೂಗಲ್ಲಿ
ನಮ್ಮ ಯೋಗ್ಯತೆ ಸರಿ ಎನ್ನುವಷ್ಟು ಉಳಿದುಕೊಳ್ಳುವುದು

ಮನಸ್ಸು ಶರೀರ ಕ್ರಿಯೆಗಳ ಛಾಯಿದೆ
ಹೋಗುವುದು ಹೋಗುತ್ತಲೇ ಇದೆ
ಬರುವುದು ಬರುತ್ತಲೇ ಇರುತ್ತದೆ
ಉಳಿಯುವುದು ಉಳಿಯುತ್ತಲೇ ಇರುತ್ತದೆ

ಮನವು ಗಮನದಲ್ಲಿ ಗಮನವ ಇಟ್ಟುಕೊಂಡರೆ
ಬೇಡದ ಕಸ ಬೇರೆಯಾಗುತ್ತಲಿರುತ್ತದೆ
ಮನಸ್ಸು ಸಾಧನೆಯ ಬಿಲ್ಲು
ಮನಸ್ಸಿನ ಉದ್ದೇಶ ಗುರಿಯನ್ನು ಸಾಧಿಸುವ ಬಾಣ !

**– ಶ್ರೀ ಹರಿ.**

**17–02–2015**



# 884

ಸಹಜವಾದ ಗುಣ ಗಿಡದ ಗುಣ
ತನ್ನ ಪಾಡಿಗೆ ತಾನೇ ಬೆಳೆಯುವ ಗುಣ
ತನ್ನ ಬೆಳವಣಿಗೆಯನ್ನು ತಾನೇ ಬೆಳೆಸಿಕೊಳ್ಳುವ ಗುಣ
ಬೇರೆಯವರ ಜೊತೆ ತನ್ನ ಜೊತೆ ಮಾಡಿ ಬೆರೆಯುವ ಗುಣ

ಮಾತನಾಡಲು ತಿಳಿಯದ ಮಾತನಾಡಲು ಆಸೆಪಡದ ಗಿಡದ
ಗುಣ

ತೃಣ ತಪ್ಪು ಮಾಡದ ಗುಣ ಗಿಡದ ಗುಣ
ತನ್ನ ಬಾಳು ಈ ಧರೆಗೆ ಅರ್ಪಿಸಿದೆ ತನ್ನ ಪ್ರಾಣ
ಹುಟ್ಟಿನಿಂದ ಜಗತ್ತಿನ ಸೇವೆ ಮಾಡುವೆ ಎಂದು
ಮನದಿಂದ ಕಟ್ಟಿಕೊಂಡಿದೆ ಕಂಕಣ ಎಂದಿಗೂ ನೆರಳು ಕೊಡುವ
ಕರುಣೆ

ಇಚ್ಛೆ ಬಂದಾಗಲೆಲ್ಲ ನಮಗೆ ತೋರಿಸುವುದು ಸೂರ್ಯನ ಕಿರಣ
ಪದೇ ಪದೇ ನೋಡುವಾಗ ಕಾಣುವುದು ತರುಣ
ಪ್ರಾಣಿಗಳು ಗಿಡದ ತಾಯ್ತನವನ್ನು ಕಂಡು ಗಿಡದ ನೆರಳಲ್ಲಿ ಕುಳಿತು
ಮುಟ್ಟುವುದು ಗಿಡದ ಚರಣ

ವಿಶ್ವದ ಅತಿ ಮುಖ್ಯ ನಿರ್ಮಾಣ ಜಗತ್ತಿಗೇ ಒಂದು ಭೂಷಣ
ಹೋಲಿಕೆಗೆಲ್ಲ ನೀಡುವುದು ತನ್ನ ಭಾವನೆಯ ನಿರ್ಮಾಣ

www.sriharikhoday.com

ವಾಯುಗುಣದಂತೆ ಗಾಳಿಗೆ ತನ್ನ ಎಲೆ ಅಲ್ಲಾಡಿಸುತ
ಗಾಳಿ ಜೊತೆಗೇ ಆಗಿದೆ ಗಿಡ ಮಿಶ್ರಣ !

ಒಂದು ಅಂಗಣಕ್ಕೆ ಗಿಡ ಒಂದು ಆಭರಣ
ಕ್ಷಣ ಕ್ಷಣದಲ್ಲಿ ಮಾಡುತ್ತಿರುವುದು ಅಂಗಳದ ಗಾಳಿಯ ಶುದ್ಧೀಕರಣ
ಕ್ಷಣ ಕ್ಷಣದಲ್ಲಿಯೂ ತಾನು ಜೀವಿಸಿ ಸುಖ ಪಡುತ್ತ
ತಾನು ಜೀವಿಸಿ ಸುಖವನ್ನೇ ನೀಡುತ್ತ

ನೋಡಿದಾಗಲೆಲ್ಲ ಹತ್ತಿರ ಕರೆಸಿಕೊಂಡು
ಜೊತೆಯಾಗುವುದು ನಮ್ಮ ಜೊತೆ ಪ್ರೀತಿಯ ಕಡಿವಾಣ
ಸಹಜವಾದ ಗುಣ ಗಿಡದ ಗುಣ
ತನ್ನ ಪಾಡಿಗೆ ತಾನೇ ಬೆಳೆಯುವಂತಹ ಗುಣ ಗಿಡದ ಗುಣ

**– ಶ್ರೀ ಹರಿ.**

**18 –02–2015**



# 885

ಬೇಡದೆ ಇರುವುದು ಭಾರ
ಬೇಕಿರುವುದು ಬಲು ಹಗುರ
ಇದೇ ಜೀವನದ ಸಾರ
ಸತ್ಯದ ಅರಿವನ್ನು ಕಲಿಸುವ ದ್ವಾರ !

ಮರೆಸುವುದು . .ನೆನಪು ತರಿಸುವುದು ಇಬ್ಬರಲ್ಲಿರುವ ಅಂತರ
ಪ್ರೀತಿಯಿಂದ ಮಾಡುವುದೆಲ್ಲ ಹಗುರ
ಇದು ಮಾಡಬಲ್ಲೆ ನಾ ಎಂಬ ಮನೋ ಆಧಾರ
ಕ್ಷಣದಲ್ಲಿ ಕೆಲಸದಲ್ಲಿ ತೊಡಗಿ

ಅಸುರ ಭಾವನೆಯನ್ನು ಬಿಟ್ಟು
ಮನ ತಗೆದುಕೊಳ್ಳುವುದು ಕೆಲಸ ಮಾಡುವ ನಿರ್ಧಾರ
ಘೋರ ಕೆಲಸವೆಂದು ಮರೆತು
ಕೆಲಸ ಕೈಗೊಂಡು ಆಗುವನು ಶೂರ !

ತಮ್ಮಲ್ಲೇ ನಂಬಿಕೆ ಹೆಚ್ಚಿ ಮಾಡುವೆನೆಂಬ ಧೈರ್ಯ ಅಪಾರ
ಮಾಡಿ ಮುಗಿಸಬೇಕೆಂಬ ಆತುರ
ಇದು ಜೀವನದ ಝೇಂಕಾರ
ಅಸುರ ಭಾವನೆಗೆ ಧಿಕ್ಕಾರ

www.sriharikhoday.com

ಕೆಲಸದಲ್ಲಿ ಬೆರೆತು ನಾ ಮಾಡಿದೆನೆಂಬ ವಿಸ್ತಾರವನ್ನು ಮರೆತು
ಕೃಷಿ ಕೆಲಸ ಜೀವನಕ್ಕೆ ಒಂದು ಶೃಂಗಾರ
ತೃಪ್ತಿ ತರುವುದು ಸುಖಿಯಾಗುವುದು ಸಂಸಾರ
ಅಘೋರ ಶಕ್ತಿಯ ಜೊತೆಗೆ ಬೆರೆತು

ಧೈರ್ಯ ಕನಿಕರಗಳ ತುಂಬಿಕೊಂಡು
ಹಂತ ಹಂತದಲ್ಲಿ ಜೀವನದ ಮಧುರ
ಬೆರೆಸುವುದು ಸಾಧನೆಗಳ ಸಾಗರ !

ಬೇಡದಲ್ಲಿರುವ ಅಂಜಿಕೆಯನ್ನು . .ಬೇಸರದಲ್ಲಿರುವ ಹಗುರನ್ನು
ಆಗುವುದಿಲ್ಲ ಎಂಬ ಭಾರಗಳಿಗೆ
ಸಂತಸ ಎಂಬ ಸಂತೋಷವು ಸವಾರನಾಗಿ
ಕುದುರೆಯನ್ನು ಓಡಿಸುವಂತೆ ತಾತ್ಸಾರವನ್ನು ಧಿಕ್ಕರಿಸಿ

ಎಲ್ಲಾ ಕಷ್ಟಗಳಿಗೆ ವಿಶ್ವದಲ್ಲಿ ಸರಿ ಉತ್ತರ ಇರುವಂತೆ
ಎಲ್ಲಾ ವಿವರಗಳನ್ನು ವಿಸ್ತರಿಸುತ್ತ ವಿಸ್ತರಿಸುತ್ತಾ
ಬೇಡದ್ದು ಹಗುರಾಗಿ ಬೇಕಿರುವುದರ ಜೊತೆಗೆ ಸೇರಿಕೊಂಡು

ನಮ್ಮಲ್ಲಿ ನಾನು ಇಲ್ಲದಿರುವಾಗ
ಬೇಡದ್ದು ಹಗುರ .. ಬೇಕಿರುವುದೂ ಹಗುರ
ಜೊತೆ ಆಗುವೆವು ಜೊತೆಗಿರುವ ಗಂಭೀರ ಮನೋಸಾಗರ . !

**– ಶ್ರೀ ಹರಿ.**

**19–02–2015**



www.sriharikhoday.com

## 886

ನಾವು ಯಾರೆಂದು ನಮಗೇ ತಿಳಿಯದೆ
ನಮಗೆ ಗೊತ್ತಿರುವುದು ಸರಿಯೋ .. ತಪ್ಪೋ . .ತಿಳಿಯದೆ
ಮಾತಿನ ಎದೆಗಾರಿಕೆ ಕ್ಷುಲ್ಲಕ ಪದಗಳನ್ನು ಉಪಯೋಗಿಸುತ್ತ
ತಾನೇ ಬಲ್ಲವನೆಂದು ತಿಳಿದುಕೊಂಡಿರುವನು !

ನಾವು ಯಾರು . . ? ಎಲ್ಲಿಂದ ಬಂದಿರುವೆವು
ನಾವು ಯಾರು . .. ? ಎಲ್ಲಿಗೆ ಹೋಗುವೆವು . . .?
ಜನ್ಮ ಪಡೆದ ನಾವುಗಳು
ನಮ್ಮ ಜೀವನ ಒಂದು ಗಾದೆಯಾಗಿದೆ

ಮಾತು ಮಾತಿನ ಹಿಂದೆ ನಿಂದನೆಗಳು
ಮಾತು ಮಾತಿನ ಮುಂದೆ ತನ್ನದೇ ಆದ ಕಾಯಿದೆ
ನಾನು . .ನಾನು . ಎಂಬ ಅಹಂಕಾರದ ಪರದೆ
ಸರಿ ದೃಷ್ಟಿಯನ್ನು ಕಾಣದೇ ಹೋಗಿ
ಆತ್ಮನಿಂದನೆಯು ಕ್ಷಣ ಕ್ಷಣದಲ್ಲಿ ಕೊಲೆಯಾಗುತ್ತಿದೆ !

ಬಿಲ್ಲಿನ ವಿದ್ಯೆ ತಿಳಿಯದ ಮಲ್ಲಗುರಿಯನ್ನು ಮುಟ್ಟಲಾಗದಂತೆ
ತನ್ನ ಸುತ್ತಲಿನವರ ಜೊತೆಗೆ ಬೆರೆಯದೆ
ಜೊತೆಯಿದ್ದರೂ ಮರೆತಿರುವಂತೆ
ಹಿರಿಮೆಯ ಗಳಿಕೆಗೆ ವಿನಯವನ್ನೇ ಮರೆತು

ನಾನು ಯಾರೆಂದು ನನಗೆ ಗೊತ್ತಿದೆ
ಗೊತ್ತಿರುವುದು . . ಬೇಕಾಗಿರುವುದೆಲ್ಲ
ನನಗೆ ತಿಳಿದಿದೆ ಎಂಬ ಅಹಂಕಾರ
ತನಗೇ ಮಾರಕವಾಗುತ್ತಿದೆ !

ವಿನಯ ವಿಧೇಯತೆಗಳ ಮರೆತಿರುವ ಸಮಾಜ ಮುಖಂಡರು
ತನ್ನ ಸಮಾಜದ ಸ್ವತ್ತು ಬೇರೆ
ಸಮಾಜ ಜಾತಿಗಳಿವೆ ಎಂದು ಮರೆತಿರುವರು
ಎದುರಿಗಿಲ್ಲದವರನ್ನು ಹಗುರವಾಗಿ ಮಾತನಾಡುತ್ತ

ತನ್ನ ಬೆಳವಣಿಗೆಗೆ ತಾನೇ ಅಡ್ಡವಾಗಿರುವ
ಸಮಾಜ ಹಿರಿಯರು ಎನಿಸಿಕೊಂಡಿರುವ ಗಣ್ಯಾಧಿಗಣ್ಯ ವ್ಯಕ್ತಿಗಳು
ಬೇರೆಯವರ ಜೊತೆಗೆ ಬೆರೆಯುವುದು ತಿಳಿಯದೆ
ಬೇರೆಯವರು ತನ್ನ ಜೊತೆಗೆ ಬೆರೆತಿಲ್ಲವೆಂದು ನಿಂದಿಸುತ್ತಲಿದ್ದಾರೆ !

ನಾನು ಯಾರು ..? ಎಲ್ಲಿಂದ ಬಂದೆನೆಂದು ತಿಳಿಯದೆ
ನಾ ಯಾರು ..? ಎಲ್ಲಿ ಹೋಗುವೆನೆಂದು ಅರಿಯದೆ
ಮೋಡಗಳಂತೆ ಬಂದು ಕರಗಿ ಹೋಗುತ್ತಿರುವ ಜೀವ
ರೂಪವನ್ನು ಬದಲಾಯಿಸುವ ಜೀವದ ಅರ್ಥ

ಪ್ರಮುಖವಾಗಿ ತಿಳಿಯದೆ
ನಮಗೆಲ್ಲವೂ ಗೊತ್ತು . . ನನ್ನ ಬಿಟ್ಟರೆ ಯಾರಿಹರು
ಎನ್ನುವ ಮಾತುಗಳು
ನಮ್ಮಲ್ಲಿರುವ ಆತ್ಮಕ್ಕೆ ಒಂದು ನಿಂದನೆ !

– **ಶ್ರೀ ಹರಿ.**

**20–02–2015**



www.sriharikhoday.com

# 887

ಬೇರೆಯವರ ಪ್ರಗತಿ ನಮ್ಮ ಪ್ರಗತಿ
ಅದು ಜೊತೆ ಜೀವಿಸುವ ಆತ್ಮದ ಕಾಂತಿ
ದೇವರು ಹುಟ್ಟಿನಿಂದ ಕಲಿಸಿರುವ ಜೀವನಕೃತಿ

ಬೇರೆಯವರದು ನಮ್ಮದು ಒಂದೇ ಎನ್ನುವ ಭಾವನೆ ಆತ್ಮದ ದಿವ್ಯಜ್ಯೋತಿ
ಅದೇ ಎಲ್ಲರಿಗೂ ತೋರಿಸುವ. . . , ತೋರಿಸಿ ಹೊರಚೆಲ್ಲುವ ಪ್ರೀತಿ
ತರಿಸುವುದು ಮನೆಯ ಹೊಸ್ತಿಲಿಗೆ ಪ್ರಖ್ಯಾತಿ !

ಮನಸ್ಸಿಗೆ ತನ್ನ ತಪ್ಪನ್ನು ತಾನು ಅರಿಯದೇ ಇರಿವುದು ಭ್ರಾಂತಿ
ಜಗತ್ತಿನ ಉನ್ನತಿಗೆ ಬೇರೆಯವರ ಪ್ರಗತಿ
ನಮ್ಮ ಪ್ರಗತಿ ಎಂಬ ಮನೋ ನಿಯತಿ ಆಗಬೇಕಾಗಿದೆ ಬಾಳಿನ ಪದ್ಧತಿ !

ಪ್ರಕೃತಿ ಬಯಸುವ ಸಂಸ್ಕೃತಿ, ದೇವರಿಗೆ ಸುಖ ನೀಡುವ ಜೀವನ ರೀತಿ
ಜನ್ಮ ಕೊಟ್ಟ ದೇವರಿಗೆ ಕಾಣಿಕೆಯಾಗಿ ಕೊಡಬೇಕಾಗಿದೆ ಬೇರೆಯರಿಗೆ
ದ್ವೇಷವಿಲ್ಲದ ನಮ್ಮ ಮನೋ ಪ್ರಗತಿ !

ತನ್ನ ಮನೋ ಅನಿಸಿಕೆಗಳನ್ನೆಲ್ಲ ಹಂಚುವ ಸಾಹಿತಿ
ಇತಿಮಿತಿಗಳ ಗಡಿಗಳ ತಿಳಿಯದೆ ಜನಜಾಗೃತಿಯ ಹೆದ್ದಾರಿಯಲ್ಲಿ
ರಾಜಠೀವಿಯಲಿ ಮನಸ್ಸಿನ ರಾಜನೀತಿಯನ್ನು ಪಾಲಿಸುತ

ಜೊತೆ ಜೀವಿಸುವ ಹಂಡತಿಯ ಸಂಬಂಧ
ಕಷ್ಟ ಸುಖದಲ್ಲಿ ಜೊತೆಗಿರುವ ಗೆಳೆಯ ಗೆಳತಿಯರ
ನೀತಿ ಯತಿಯ ನೀತಿ

ಬೇರೆಯವರ ಪ್ರಗತಿಯಲ್ಲಿ ನಾವು ಬೆರೆಯೋಣ
ನಮ್ಮ ಪ್ರಗತಿಯಲ್ಲಿ ಅವರನ್ನು ಬೆರೆಸಿಕೊಳ್ಳೋಣ
ಕಷ್ಟಪಡದೆ ಮನಕ್ಕೆ ತರಿಸೋಣ ಜೀವನ ಜಾಗೃತಿ

ಬಚ್ಚಿಟ್ಟುಕೊಂಡಿರುವ ಸತ್ಯದ ಜ್ಯೋತಿಯನ್ನು
ಎಲ್ಲರ ಮನಸ್ಸಿನಲ್ಲಿ ಅರಳಿಸೋಣ
ಜೊತೆಗೆ ಬೇರೆಯವರ ಪ್ರಗತಿಗೆ

ನಮ್ಮ ಪ್ರಗತಿ ಎಂದೂ ಒತ್ತಡವಿಲ್ಲದೆ
ಮನಸ್ಸು ಜೋಗುತಿ ಹೇಳುವಂತೆ ಏಕತಾನವ ನುಡಿಯುತ
ಮನಸ್ಸಿಗೆ ಜ್ಞಾನದ ಜಾಗೃತಿಯನ್ನು ಎಚ್ಚರಿಸೋಣ !

**- ಶ್ರೀಹರಿ**

**21-02-2015**



# 888

ದಿನವೂ ದಿಗಂತದಲ್ಲಿ ಬೆಳಗುವ ಸೂರ್ಯ
ದಿನವೂ ದಿಗಂತದಲ್ಲಿ ಬೆಳಗುವ ಚಂದಿರ
ನಮ್ಮ ಸ್ವಪ್ನಗಳ ಗೂಡಿನ ಬೆಳಕಿಕೆ
ಬೆಳಕನ್ನು ಬೆಳಗಿಸುತ್ತಿರುವವರು

ನಮ್ಮ ಸ್ವಪ್ನಗಳು ಸುಳ್ಳಲ್ಲ
ನಮ್ಮ ಭಾವನೆಗಳು ನಕಲಿ ಅಲ್ಲ
ಎಲ್ಲರೂ ಜೊತೆ ಸೇರಿ ಮಾಡುವ ಸಂಕಲ್ಪ
ನಮ್ಮೆಲ್ಲರ ಮನೋಸಂಕಲ್ಪ

ಎಲ್ಲರಿಗೂ ಮಾದರಿಯಾಗಿ
ನಮ್ಮ ಕನಸುಗಳೆಲ್ಲ ಕಾರ್ಯರೂಪಕವಾಗಿ
ನಮ್ಮ ಸುಂದರ ಸ್ವಪ್ನಗಳಿಗೆ
ಸೂರ್ಯ ಚಂದ್ರರು ಸಹಾಯ ಮಾಡಲು ಮರಳಿ ಮರಳಿ
ಬರುತ್ತಾರೆ !

ಧೈರ್ಯ ಇಲ್ಲದಿರುವುದು ಒಂದು ಅಪರಾಧ
ಧೈರ್ಯ ತುಂಬಿಕೊಂಡರೆ ಬರುವುದು ದೇವರ ಪ್ರಸಾದ
ಗುರಿ ತಿಳಿಯದ ಸಂವಾದಗಳು
ಆಗುವುದು ಬೇಕಿಲ್ಲದ ವಿವಾದ !

www.sriharikhoday.com

ಎಲ್ಲರ ಒಪ್ಪಿಗೆಯ ಮನಸ್ಸು
ದೈವ ಸ್ವರೂಪಿಯಾದ ದಿಗಂತದಲ್ಲಿ
ಸೂರ್ಯ ಚಂದಿರರು ಕೆಳಗಿಳಿದು
ನೀಡುವರು ಮನಕ್ಕೆ ಸಂತಸ ನೀಡುವ ಆಶೀರ್ವಾದ

**–ಶ್ರೀ ಹರಿ.**

**23–02–2015**



## 889

ಬೇರೆಯವರ ಒಳ್ಳೆಯದಕ್ಕೆ ಯೋಚಿಸಿ
ಬೇರೆಯವರ ಬೆಳವಣಿಗೆಯ ಮನೋಕೃತಿ
ಬರೆಯುವುದು ಪ್ರಕೃತಿ . . !

ಪ್ರಕೃತಿ ತನಗೋಸ್ಕರ ಏನೂ ಬೆಳೆದು ತಿನ್ನದೆ
ಬೆಳೆದುದೆಲ್ಲಾ ಬೇರೆಯವರಿಗೆ ಅರ್ಪಿಸಿ
ಸಂತಸ ಪಡೆಯುವಂತೆ

ನಮ್ಮ ಬೆಳವಣಿಗೆಯ ಹಿಂದೆ
ಬೆಳೆಯ ರುಚಿಯನ್ನು ಅನುಭವಿಸಲು
ಇಚ್ಛೆ ಪಡೆದಿದ್ದರೆ

ತಾನಾಗಿಯೇ ತಾನು ಬಂದು ಸೇರಿಕೊಳ್ಳುವುದು
ದೈವಶಕ್ತಿಯಾದ ದೇವರು
ದೈವಶಕ್ತಿಯುಳ್ಳ ಬ್ರಹ್ಮಾಂಡವೇ ಜೊತೆಯಾಗುವುದು

ಪ್ರಕೃತಿ ಬರೀ ಪ್ರೀತಿ–ಪ್ರೇಮವಲ್ಲ
ಪ್ರೀತಿ–ಪ್ರೇಮಗಳ ವಿಧಿಯ ಸಂಚಲ್ಲಿ
ತನ್ನನ್ನೇ ಮರೆತಿರುವ ಪ್ರಕೃತಿ

ನಾ ಮಧು ಸೇವಿಸಿ
ನನ್ನನ್ನೇ ಮರೆಯುವ ಕಲೆ
ಪ್ರಕೃತಿಯಿಂದ ಕಲಿತೆ !

www.sriharikhoday.com

ತನ್ನ ಮೇಲೆ ಇರುವ ಗೌರವ
ತಾನೇ ಬೆಳೆಸಿಕೊಳ್ಳುವ ಪ್ರಕೃತಿಯ ಪಾತ್ರ ನೋಡಿ
ನಾನು ನನ್ನದು ಎಂಬ ಕೆಟ್ಟದ್ದನ್ನು ಮರೆಯಲು

ಮರೆತಾದ ಮೇಲೆ
ಪ್ರೀತಿಯನ್ನು ಕೊಡುವುದು ಪ್ರೇಮವನ್ನು ಸಂಪಾದಿಸುವುದು ಕಲೆ
ಇದು ಪ್ರಕೃತಿಯ ನೆಲೆ . .ನೀತಿ !

ಯಾವ ಅಪೇಕ್ಷೆ ಇಲ್ಲದೆ
ಪ್ರೀತಿ-ಪ್ರೇಮಗಳ ತುರಿಯಾಸ್ಥಿತಿ
ಈಶನ ಕಲೆ . .ಅ ಕಲೆಯಲ್ಲಿ ನಾವು ಬೆರೆತರೆ

ಬೆರೆತುಕೊಂಡು ಹೇಳಿದ ಮೇಲೆ
ಪ್ರಕೃತಿಯ ವಾತಾವರಣದಲ್ಲಿ ಈಜಾಡುತ್ತ
ನನ್ನ ಶರೀರದಲ್ಲಿರುವ ಕಣಕಣಗಳು

ಪ್ರಕೃತಿಯ ಅನುಭವ ಪಡೆಯುತ್ತ
ನನ್ನ ಕಾಂತೆಯ ಜೊತೆಗೆ ನಾ ಪ್ರೀತಿ ಹರಿಸುತ್ತಿದ್ದರೆ
ಹಿಂದಿರುಗಿ ಅವಳಿಂದ ಪ್ರೇಮ ನನ್ನ ಮೇಲೆ ಹರಿದುಬರುತ್ತಿದೆ !

ಇದೇ ಪ್ರಕೃತಿಯ ರಹಸ್ಯ
ನಾ ಕುಡಿದು ನನ್ನನ್ನೇ ನಾ ಮರೆಯುವ ಆಸೆ
ನನ್ನ ಕಾಂತೆ ಜೊತೆ ಏಕಾಂತದ ರಹಸ್ಯ ಪ್ರಕೃತಿಯ ಧರ್ಮ !

**- ಶ್ರೀ ಹರಿ.**

**26-02-2015**



## 890

ಸುಖಪಡುವ ಸುಖಿ ನಾನು
ಸುಖ ನೀಡುವ ಸುಖಿ ನಾನು
ಅಗಲೀಕರಿಸಲಾಗದ ನನ್ನ ಸುಖ
ನಿರ್ಭಯವಾಗಿ ಜೊತೆ ಜೊತೆಗೇ ಇದೆ!

ಸುಖದ ಜೊತೆ ಬರುವ ಭಾವನೆಗಳು
ಹೊಸ ಹೊಸ ಸುಖವನ್ನೇ ಅಪೇಕ್ಷಿಸುತ್ತಿದೆ
ಮಾತು ಮಾತುಗಳಲ್ಲಿ ನಂಬಿಕೆ
ಮನೋನಿರ್ಣಯಗಳಲ್ಲಿ ಆತ್ಮ ವಿಶ್ವಾಸ !

ಅಗಲಿರುವುದನ್ನು ಜೊತೆ ಸೇರಿಸಿಕೊಳ್ಳುವ
ಸುಖದ ತರಂಗಗಳು
ತಪ್ಪನ್ನು ಮನ್ನಿಸುವ ಮನೋಭಾವನೆ
ಸುಖಪಡುತ್ತಿರುವ ಭಾವನೆ !

ಯಾವುದು ಸರಿ ಯಾವುದು ತಪ್ಪು
ನಿರ್ಣಯ ನೀಡಲು
ಶಕ್ತಿದಾಯಕ ವಸ್ತು ಸುಖ
ಕಾಣುವುದೆಲ್ಲ ಸುಖವಾಗಿ ಕಾಣಿಸುವುದು ಸುಖ !

ಕನಸುಗಳ ಆದಿ ಸುಖದ ಅನುಭವ
ಸುಖ ಅನುಭವಿಸುತ್ತಾ . . ಅನುಭವಿಸುತ್ತಾ

www.sriharikhoday.com

ಅಂತರವನ್ನು ಮರೆಸಿ
ಪ್ರಸನ್ನತೆಯ ವಾತಾವರಣದಲ್ಲಿ

ತೊಡಿಸಿಕೊಂಡಿರುವ ವಸ್ತ್ರಗಳಲ್ಲಿ
ನಮ್ಮ ಮಿನುಗುವ ರೂಪವನ್ನು
ಹೊರ ಚೆಲ್ಲಿಸುವುದೇ ಸುಖ !

ಪ್ರಾರ್ಥನೆ .. ನಮಾಜ್ ಮಾಡುವಾಗ
ಮನಸ್ಸು ದೇವರಲ್ಲಿ ಬೆರೆತಿರುವ ಸುಖ
ದೇವರನ್ನು ಪೂಜಿಸುವಾಗ ಮನದಲ್ಲಿ ಭಕ್ತಿ ಹೆಚ್ಚಿಸಿ
ದೇವರೇ ಜೊತೆಗಿರುವ ಭಾವನೆಯೇ ಸುಖ !

ಸೂರ್ಯನು ತನ್ನ ಬೆಳಕಿನಿಂದ
ಬೆಳೆಯುತ್ತಿರುವ ಹಸಿರನ್ನು ನೋಡಿ ಪಡುತ್ತಿರುವ ಸುಖ
ಬೆಳೆದು ನಿಂತ ಮಗನನ್ನು ಕಂಡು ತಾಯಿ ಪಡುವ ಸುಖ
ತಾತ ತಾತನಾದಾಗ ಪಡುವ ಸುಖವೇ ಸುಖ

ಎಲ್ಲಾ ಜೀವನದ ಕ್ರಿಯೆ-ಪ್ರಕ್ರಿಯೆಗಳ
ಹೊಸ್ತಿಲುಗಳಿಗೆ ತೋರಣವೇ ಸುಖ
ತೆರೆದ ಮನಸುಳ್ಳ ಸುಖ
ಶುಭವನ್ನೇ ಕೋರುವ ಸುಖ

ದೇವರು ಹುಟ್ಟಿನಿಂದ ನಮಗೆ ಸುಖ ನೀಡಿದರೂ
ನಾನು ಬೇರೆಯವರಿಗಿಂತ ಸುಖವಾಗಿರುವೆನು
ಎಂಬ ಮಾತು ಹೊರಬರದೆ
ಚಿಂತೆಗಳ ಕಂತುಗಳಲ್ಲಿ ಮಾನವ ಕಳೆದುಹೋಗಿರುವನು

– ಶ್ರೀ ಹರಿ.

27-02-2015



## 891

ಒಂದು ಕಾಸೂ ಬೇಡದ ಸವಿಮಾತುಗಳು
ಒಂದು ಕಾಸೂ ಬೇಡದ ಪ್ರೀತಿಯ ಮಾತುಗಳು
ಒಂದು ಕಾಸೂ ಬೇಡದ ಸತ್ಯದ ಮಾತುಗಳು
ಒಂದು ಕಾಸೂ ಬೇಡದ ಕಣ್ಣೋಟದ ಮಾತುಗಳು !

ಅಳುತಾ . . . ಅಳುತ್ತಾ ಬೇರೆಯವರ ಕಣ್ಣಲ್ಲಿ
ಕಣ್ಣೀರು ತರಿಸುವ ಮಾತುಗಳು
ಗೋಳನ್ನು ನೋಡಲಾಗದೆ ದುಃಖದಿಂದ ಹೇಳುವ ಮಾತುಗಳು
ಬಾಳನ್ನೇ ಸರಿ ಪಡಿಸುವ ಹಿತ ಮಾತುಗಳು !

ಜೀವನದಲ್ಲಿ ಅಡಗಿರುವ ತಿರುಳುಳ್ಳ ವಚನದ ಮಾತುಗಳು
ದಯಾ-ದಾಕ್ಷಿಣ್ಯಗಳನ್ನು ತುಂಬಿರುವ ಹಿರಿಕರ ಮಾತುಗಳು
ಕಾಸು ಬೇಡದ ಮಾತುಗಳು !

ದುಃಖಿತನಿಗೆ ಮುಗುಳುನಗೆ ಬೀರುತ್ತ
ನೆರಳು ನೀಡುವ ಮಾತುಗಳು ಕಾಸಿಲ್ಲದ ಮಾತುಗಳು
ತಪ್ಪಿತಸ್ಥನಿಗೆ ತಿಳಿಹೇಳಿ ಧೈರ್ಯವನ್ನು ತುಂಬಿ
ಹಿತವಚನವನ್ನು ಹೇಳುವ ಮಾತುಗಳು ಕಾಸಿಲ್ಲದ ಮಾತುಗಳು !

ಮೇಲು- ಕೀಳು ತಿಳಿಯದೆ
ನನ್ನ ಆಳು- ಕಾಳು ಎಂದು ನೆನೆಯದೆ

www.srikharikhoday.com

ಜೀವಿಸಲು ದೆಸೆ ತೋರಿಸುವ ಮಾತುಗಳು
ಕಾಸು ಬೇಡದ ಮಾತುಗಳು !

ಕತ್ತಲಲ್ಲಿ ಮಿಂಚುವ ಮಿಂಚುಹುಳುವಿನಂತೆ
ಒಂದೆಡೆ ನಿಲ್ಲದ ಮನಸ್ಸು
ಹಾದಿ ತಪ್ಪಿ ಹೋಗಿರುವ ಮನಸ್ಸಿಗೆ

ಒಂಟಿ ಬಾಳಿನ ಕಷ್ಟದಲ್ಲಿ ಸಿಲುಕಿರುವ ಆತನಿಗೆ
ಹಿತವಚನ ನೀಡಿ ಸಹಾಯಕ ಮಾತುಗಳಿಗೆ
ಕಾಸು ಬೇಕಿಲ್ಲದ ಮಾತುಗಳು ಕಾಸು ಬೇಡದ ಮಾತುಗಳು
ಕಾಸನ್ನು ಲೆಕ್ಕಿಸದೆ ಪವಿತ್ರ ಭಾವನೆಗಳು

ಕಾಸೂ ಬೇಡದ ಕಾಸಿಗೆ ಕೈಚಾಚದೆ
ಜವಾಬ್ದಾರಿಗೆ ಸೆರೆಯಾಗಿರುವವರ ಜೊತೆ ಮಾತನಾಡಲು
ಅವನಿಗೆ ಹಿತವಚನ ನೀಡುವ ಮಾತುಗಳು
ಕಾಸುಗಳನ್ನು ಮರೆತಿರುವ ಮಾತುಗಳು

**- ಶ್ರೀ ಹರಿ.**

**28-02-2015**



## 892

ಕಳೆದುಹೋಗುತ್ತಿರುವ ಹಳೇ ಸಂಜೆ ಜೊತೆ ಬರುವುದಿಲ್ಲ
ಕಳೆದುಹೋಗುತ್ತಿರುವ ಕಾಲ ಎಂದೆಂದಿಗೂ ಜೊತೆಗಿಲ್ಲ
ಕಷ್ಟ ಎಂದೆಂದಿಗೂ ಜೊತೆ ಪೀಡಿಸುವುದಿಲ್ಲ
ಕರಗಿ ಹೋಗುವ ಭ್ರಾಂತಿಗಳು ನಿನ್ನ ಜೊತೆಗಿರುವೆನು ಎಂದು
ಹೇಳುವುದಿಲ್ಲ !

ಜಗತ್ತಿನಲ್ಲಿರುವ ದಿಗಂತಗಳು ಎಂದಿಗೂ
ನಮ್ಮ ಜೊತೆ ಜೊತೆ ಬಿಡುವುದಿಲ್ಲ!

ಬೆಲ್ಲದಂತಹ ಮಾತುಗಳು ದಿನವೂ ಆಡಲಾಗುವುದಿಲ್ಲ
ಜೀವನಪರ್ಯಂತ ಜಗಳಗಳು ಮಾಡಲಾಗುವುದಿಲ್ಲ
ಪ್ರೀತಿ ತಿಳಿಯದ ದ್ವೇಶ ಎಂದೂ ಏನನ್ನೂ ಸಾಧಿಸಲಾಗುವುದಿಲ್ಲ
ಮಲ್ಲನ ಮುಷ್ಟಿಬಲ ಒಂದೇ ರೀತಿ ಇರುವುದಿಲ್ಲ !

ಕಹಳೆಯನ್ನು ನಿಲ್ಲಿಸದೆ ಊದಲಾಗುವುದಿಲ್ಲ
ಸಮಾಜದ ಗಣ್ಯಾಧಿಗಣ್ಯ ವ್ಯಕ್ತಿಗಳು ಪ್ರತಿಷ್ಠೆಗಳನ್ನು ಬಿಟ್ಟು
ಅಸಾಧ್ಯವೆಂಬ ಮಾತು ಇಲ್ಲವೇ ಇಲ್ಲ!

**- ಶ್ರೀ ಹರಿ.**

**28-02-2015**

www.sriharikhoday.com

## 893

ಎಲ್ಲವನ್ನು ಆಕರ್ಷಿಸುವುದು ಸೌಂದರ್ಯ
ಅಡಗಿರುವ ಗುಣಗಳನ್ನು ಹೊರಚೆಲ್ಲುವ ಸೌಂದರ್ಯ
ದ್ವೇಷವನ್ನು ಮರೆಸುವ ಸೌಂದರ್ಯ
ಪ್ರೀತಿಯನ್ನು ಗಳಿಸಿಕೊಳ್ಳುವ ಸಾಮರ್ಥ್ಯದ ಸೌಂದರ್ಯ !

ಅಜ್ಞಾನವನ್ನು ಜೊತೆ ಮಾಡಿಕೊಳ್ಳುವ ಜ್ಞಾನ ಸೌಂದರ್ಯ
ಎಲ್ಲಾ ಕ್ರಿಯೆಗಳಲ್ಲಿ ಬದ್ಧತೆಯನ್ನು ಬೆಳಗಿಸುವ ಸೌಂದರ್ಯ
ಎಲ್ಲಾ ರೂಪದಲ್ಲಿ ಬೆಳಗಿಸಬಲ್ಲ ಸೌಂದರ್ಯ
ಮಾನವ ಕುಲದ ಐಶ್ವರ್ಯ ಸೂರ್ಯನಂತಿರುವ ಸೌಂದರ್ಯ !

ಅಂಜದೆ ನೀಡುವ ಔದಾರ್ಯ ಸೌಂದರ್ಯ
ಮಾತನಾಡದೆ ಕ್ರಿಯೆಗಳನ್ನು ಮುನ್ನಡೆಸುವ ಔದಾರ್ಯ
ಯಾವ ಸಂಚುಗಳಿಲ್ಲದೆ ಮಿನುಗುವ ಗಾಂಭೀರ್ಯ
ಸತ್ಯದ ತಾತ್ಪರ್ಯ ಸೌಂದರ್ಯ !

ಪ್ರಕೃತಿಯ ಎಲ್ಲಾ ಸೃಷ್ಟಿಯಲ್ಲಿ ಸದ್ದಿಲ್ಲದೆ ನಡೆಸುತ್ತಿರುವ
ಕಾರ್ಯ ಮಾತನಾಡದೇ ಜೊತೆಜೊತೆಗಿರುವ ಸೌಂದರ್ಯ
ಮಾನವನಿಗೆ ಮಾತನಾಡದ ವೈಢೂರ್ಯ
ಹೆದರದೇ ಶೌರ್ಯವನ್ನು ತೋರಿಸುವ ಕಾರ್ಯ ಸೌಂದರ್ಯ !



ತಾನು ಬೆಳೆಯುವುದಕ್ಕೆ ಯಾವ ಸೌಕರ್ಯವನ್ನೂ ಬೇಡದೆ
ಹುಟ್ಟಿನಿಂದ ಜೊತೆ ಜೊತೆಗೆ ಬೆಳೆಯುವ ಮನೋಸ್ಥೈರ್ಯ
ಎಲ್ಲಾ ರೂಪದಲ್ಲಿ ಎಲ್ಲಾ ಗುಣಗಳಲ್ಲಿ
ಎಲ್ಲಾ ಪ್ರಕೃತಿಯ ವ್ಯಕ್ತಿತ್ವದಲ್ಲಿ

ಲೌಕಿಕ ಜೀವನದಲ್ಲಿರುವ ಸೌಂದರ್ಯ
ತ್ಯಾಗಿಗಳ ಭಾವನೆಯಲ್ಲಿರುವ ಸೌಂದರ್ಯ
ರಸಿಕತೆಯಲ್ಲಿರುವ ಸೌಂದರ್ಯ
ನೋಡಿದಾಗಲೆಲ್ಲ ಹೊಸ ಹೊಸ ರೀತಿ ಮಿನುಗಬಲ್ಲ
ಸೌಂದರ್ಯ

ಕಲ್ಲಾಗಲೀ. ಮಣ್ಣಾಗಲೀ.. ಚಿಟ್ಟೆಯಾಗಲೀ. . ಹೂವಾಗಲೀ
ಪರ್ವತವಾಗಲೀ. .ಬೆಟ್ಟವಾಗಲೀ. . ನದಿಯಾಗಲೀ .
ಸಮುದ್ರವಾಗಲಿ

ಎಲ್ಲಾ ಇರುವಿಕೆಯಲ್ಲಿ ಅಡಗಿಕೊಂಡಿರುವ
ಮಹಾನ್ ದೈವಶಕ್ತಿ ಸೌಂದರ್ಯ !

– ಶ್ರೀ ಹರಿ.

**03-03-2015**

www.sriharikhoday.com

## 894

ಮನಸ್ಸಿನ ಸಮತೋಲನೆಯೇ ಜೀವನದ ಬುನಾದಿ
ಸಮತೋಲನವೇ ವಿಶ್ವದ ಬುನಾದಿ
ಸಮತೋಲನೆಯ ವಿಷಯಗಳು ಕುಳ್ಳರಿಸುವುದು
ನೆಮ್ಮದಿಯ ಗಾದಿ

ಸಮತೋಲನದ ಭಾವನೆಗಳುಳ್ಳ ಮನುಷ್ಯನಿಗೆ ಗೌರವಿಸುವರು
ಅನೇಕ ಮಂದಿ

ಸಮತೋಲನದ ತತ್ವಗಳೇ ಸತ್ಯವನ್ನು
ಎತ್ತಿಹಿಡಿಯಲು ಆಗುವುದು ವಾದಿ
ನೆಮ್ಮದಿಯ ಜೀವನಕ್ಕೆ ಒಂದೇ ಹಾದಿ

ಖರೀದಿಸಲಾದ ಸಮತೋಲನ
ಬೇರೆಯವರಿಂದ ಪಡೆಯಲಾಗದ ಸಮತೋಲನ
ನಮ್ಮ ಸ್ವಂತ ಪ್ರಜ್ಞೆಯಿಂದ ಗಳಿಸಿಕೊಳ್ಳಬಹುದು
ಅಪರೂಪದ ಅವಕಾಶಗಳು ಅಪರೂಪದ ಸಾಧನೆಗಳು

ಸಮತೋಲನೆಯನ್ನು ತಪ್ಪಿಸುವುದು ಅಡ್ಡಹಾದಿ
ಜೀವಂತ ನಮ್ಮೊಳಗಿರುವ ಭೇದನದಿಗೆ ನಾವು ನೀಡುವ ಸ್ವಾತಂತ್ರ್ಯ
ಜೊತೆಗಿರುವ ಹಿಮ ನಮ್ಮನ್ನು ಆವರಿಸಿದಾಗ
ಪಡುವ ಸಂತಸದಂತೆ ನಾವು ಸಂತಸಪಡಬೇಕು

ಮನಸ್ಸಿನ ಸಮತೋಲನೆಯಿಂದ ಎಲ್ಲರಿಗೂ
ಆದರ್ಶವಾದಿಯಾಗಲು ಮನಕ್ಕೆ ಬೇಕು
ಸಮತೋಲನದ ಭಾವನೆಗಳು !

ಬುನಾದಿಯೆಂದರೆ ಸಮತೋಲನದ ಇರುವಿಕೆ
ಮಾನವನ ಪ್ರಗತಿಗೆ ಬೇಕಾದ ಅಪರೂಪದ ಅವಕಾಶಗಳಿಗೆ
ಕೆಲಸ ಮಾಡಲು ನಿರ್ಣಯದ ಜೊತೆ ಸೇರಿಸಿಕೊಳ್ಳಬೇಕಾದರೆ
ಮಾನವನಿಗೆ ಅತಿ ಅವಶ್ಯ ಮನಸ್ಸಿನ ಸಮತೋಲನೆಯ
ಭಾವನೆಗಳು !

**– ಶ್ರೀ ಹರಿ.**

**04–03–2015**

www.sriharikhoday.com

## 895

ನನ್ನಲ್ಲಿರುವ ನನ್ನನ್ನು ನಾನು ಎನ್ನುವುದು ನೋಡುತ್ತಲೇ ಇದೆ
ನನ್ನಲ್ಲಿರುವ ನನ್ನದು ನನಗೇ ನೋಡುತ್ತಿದೆ
ನನ್ನ ಕಣ್ಣುಗಳು ಹೂವನ್ನೇ ನೋಡುತ್ತಿದೆ
ಹೂವು ತನ್ನ ಕಣ್ಣಿನಿಂದ ಜಗತ್ತನ್ನೇ ನೋಡುತ್ತಿದೆ !

ಕಾವ್ಯ ತನ್ನಲ್ಲಿರುವ ಸೌಂದರ್ಯವನ್ನು ನೋಡುತ್ತ
ತಾನೇ ಹಿಗ್ಗನ್ನು ಅನುಭವಿಸುತ್ತಿದೆ
ಇಬ್ಬರ ನೋಟದಲ್ಲಿ ಅನ್ಯೋನ್ಯವಾಗಿ
ಸೃಷ್ಟಿಯು ತನ್ನ ಸ್ಥಿತಿಯನ್ನು ಅನುಭವಿಸುತ್ತಿದೆ !

ನೋಡುತ್ತಾ ನೋಡುತ್ತಾ ತಮ್ಮಲ್ಲಿರುವುದನ್ನು
ಮರೆತಿರುವ ಅನುಭವ
ಒಂದು ಮಹಾನ್ ಶಕ್ತಿಯ ಅರಿವು ಅನುಭವವಾಗುತ್ತಿದೆ
ಈರ್ವರ ನೋಟಕ್ಕೆ ಅಡ್ಡವಾಗಿರುವ ನಾನು ನನ್ನದೆಂಬ ಪರದೆ
ಇಲ್ಲವಾಗಿದೆ !

ಹಿಂದೂ ತಿಳಿಯದ ಮುಂದೂ ತಿಳಿಯದ ಕಾಲದ ಜೊತೆ
ಇಲ್ಲವಾಗಿದೆ
ಲೌಕಿಕವನ್ನು ಮರೆತಿರುವ ಗಾದೆಗಳು ಹೆದರುತ್ತಿದೆ
ಯಾವ ಬಾಧೆಯೂ ಇಲ್ಲದ ಅನುಭವ
ನಮ್ಮ ಅರಿವಿನ ಪ್ರವೃತ್ತಿಯನ್ನು ನೋಡುತ್ತಲೇ ಇದೆ !



ಖಂಡ ಖಂಡವಾದ ಅಖಂಡವನ್ನು ಒಂದಾಗಿಸಿದೆ
ಅಭಿಪ್ರಾಯಗಳಿರುವ ಬೇದಗಳು ಜೊತೆ ಒಂದಾಗಿ ಸೇರಿದೆ
ನಿಂದನೆಗಳು ಬಾಯ್ಮುಚ್ಚಿ ಸುಮ್ಮನೆ ಬಾಯಿ ಕಟ್ಟಿಕೊಂಡು ಕುಳಿತಿದೆ
ಸತ್ಯ ಕಲ್ಲೆದೆಯ ಶಕ್ತಿಯಾಗಿ ಸತ್ಯದ ಕಾಯಿದೆಯನ್ನು ಕಾಪಾಡುತ್ತಿದೆ !

**– ಶ್ರೀ ಹರಿ.**

**05–03–2015**

www.sriharikhoday.com

## 896

ಕೋಟಿ ಕೋಟಿ ಕಣಗಳುಳ್ಳ ಈ ಶರೀರ
ಒಂದೊಂದು ಕಣವು ಒಂದೊಂದು ಬ್ರಹ್ಮಾಂಡ
ಬ್ರಹ್ಮಾಂಡದ ಪ್ರತಿರೂಪವಾದ ಈ ಶರೀರ
ಅಂಗ ಅಂಗಾಗಗಳ ಶಕ್ತಿಯನ್ನು ಪ್ರತಿಬಿಂಬಿಸುತ್ತಿವೆ!

ಎಲ್ಲವೂ ಜೊತೆ ಜೀವಿಸುತ್ತಿರುವ ಈ ಶರೀರದ ಕಣಗಳು
ದ್ವೇಷವಿಲ್ಲದೆ ಜೊತೆ ಜೀವಿನದ ಬಾಳು
ಬದುಕುತ್ತಿರುವ ಈ ಕಣಗಳು
ದ್ವೇಷವಿಲ್ಲದ ಪರಿಸ್ಥಿತಿಯೇ ವಿಶ್ವ!

ಹೊಂದಿಕೆಯ ಜೀವನದ ಅರ್ಥದಲ್ಲಿ ಜೀವಿಸುತ
ತಮ್ಮ ಹೊಂದಿಕೆಯಿಂದ ಈ ಶರೀರವನ್ನು ರೂಪಿಸಿದ
ನಮ್ಮಲ್ಲಿರುವ ಕಣಗಳು

ಬದುಕು ..ಹುಟ್ಟು ಹುಟ್ಟು ..ಬದುಕು
ಜೊತೆ ಜೊತೆಯಿರುವ ನಾವು ಆಕಸ್ಮಿಕ
ಸಾವಿನ ಅರ್ಥ ತಿಳಿಯದ ವಿಶ್ವಕ್ಕೆ
ಬೆಳವಣಿಗೆ ಬೆಳೆಯುವುದು ಮಾತ್ರ ತಿಳಿಸು

ಸಾವಿನ ಹೆದರಿಕೆಯ ನೆರಳು ಅರಿಯದೆ
ತಮ್ಮ ಇರುವಿಕೆ ಬದಲಾಯಿಸಿದಾಗಲೆಲ್ಲ



ಕಾಲವನ್ನು ಉಪಯೋಗಿಸಿಕೊಂಡು
ಕೊನೆಯಿಲ್ಲದ ಬಾಳಿನ ಜೊತೆಗೆ ಬೆರೆತು ಜೀವಿಸುತ್ತಿದೆ!

ವಿಶ್ವದಲ್ಲಿ ಬೆರೆತು ಕಳೆದು ಹೋಗುವ ವಿಧಾನ
ವಿಶ್ವದಲ್ಲಿ ಅಣುಅಣುಗಳು ಬೆರೆತು ಹೊರಬರುವ ವಿಧಾನ
ಅಸೂಯೆ ದ್ವೇಷಗಳು ಕಣಕಣಗಳಲ್ಲಿ ಇಲ್ಲದಿರುವ ಕಾರಣ
ನಮ್ಮಲ್ಲಿರುವ ಲಕ್ಷಾಂತರ ರೂಪು ರೂಪವುಳ್ಳ ಕಣಗಳು

ಹೊಂದಿಕೆಯಿಂದ ಜೀವಿಸುತ್ತಿರುವ ರೀತಿ
ದ್ವೇಶ ಅಸೂಯೆಗಳ ತಿಳಿಯದ ಜೀವನ ನೀತಿ
ನಕಾರಾತ್ಮಕ ದೇಹದ ಭಾಷೆ ತಿಳಿಯದ ಕಣಕಣಗಳು
ಸಹನೆ ಇಲ್ಲದ ಈ ದೇಹದಲ್ಲಿ ಅಡಗಿರುವ ಮನಸ್ಸು

ನಮ್ಮ ಶರೀರದ ಕಣಕಣಗಳಲ್ಲಿ ಇಲ್ಲವಾಗಿ
ಬುದ್ಧಿಯೆಂಬ ರಚನಾತ್ಮಕ ಕ್ರಿಯೆಯಲ್ಲಿ
ಬೇರು ಬಿಡದಂತಹ ..ಹೋಲಿಕೆಯಲ್ಲಿ ಇರುವಂತ
ನಾನು ನನ್ನದು ಎಂಬ ಭಾವನೆ ಕತ್ತಲಾಗಿ

ಪ್ರಜ್ಞೆಯ ಬೆಳಕಲ್ಲಿ ಇರುವ ಸತ್ಯವೂ ಕಾಣದ
ತಳದಲ್ಲಿ ಆಳ ಹುಡುಕುತ್ತಾ
ದಿಗಂತದಲ್ಲಿ ದಿಗಂತಗಳ ಹುಡುಕುತ್ತ
ಕಣಕಣಗಳು ಬೇಡದ ಕ್ರಿಯೆಯನ್ನು ಮಾಡುತ್ತಿವೆ!

ತಾವೇ ಸೃಷ್ಟಿಸಿಕೊಂಡಿರುವ ಕಾಲದಲ್ಲಿ
ತಾನೇ ಕೊನೆಯನ್ನು ತರಿಸಿಕೊಂಡು
ಹೊಸ ರೂಪ ಬರಲಾವಣೆಗಳಿಗೆ ಸಾವೆಂದು ಕರೆಯುತ
ಕಣ ಕಣಗಳು ತಾನೇ ಕಟ್ಟಿಕೊಂಡಿರುವ ಗೂಡಿನಿಂದ

ಹೊಸ ಗೂಡು ಕಟ್ಟಲು ಕಣಕಣಗಳ ಗೂಡು ಬಿಟ್ಟು
ಹೊಸಗೂಡಿಗೆ ಜನ್ಮ ಎನ್ನುತ ಪ್ರೀತಿ ಪ್ರೇಮವನ್ನು ಹರಿಸುತ



www.sriharikhoday.com

ಯಾರ ದಾಕ್ಷಿಣ್ಯವಿಲ್ಲದೆ ಯಾರ ಬೇಡಿಕೆಯಿಲ್ಲದೆ
ತಮ್ಮ ಬೆಳವಣಿಗೆಗೆ ಹೊಸ ಗೂಡನ್ನು ಉಪಯೋಗಿಸುತ್ತಿದೆ
ಕೊನೆಯೇನೆಂದು ತಿಳಿಯದ ಕಣಕಣಗಳ ಗೂಡು
ಕೊನೆಯಾರ್ಥಗಳ ತಿಳಿಯದ ಕಣಕಣಗಳ ಗೂಡು
ಎಲ್ಲದರಲ್ಲಿ ನಾವುಗಳ . . . ಎಲ್ಲವೂ ನಾವುಗಳೆಂಬ
ಜೊತೆ ಸಂಬಂಧ ಬ್ರಹ್ಮನೇ ಹೆದರಿ ಬೆದರಿ

ನಮ್ಮ ಶರೀರದ ಕಣಕಣಗಳ ಆಜ್ಞೆಯನ್ನು ಪಾಲಿಸುತ
ತಮ್ಮ ಅರಿವೇ ಗುರುವೆಂದು ಭಾವಿಸಿ . . ನಮಿಸಿ
ತಮಗೆ ತಿಳಿದಿರುವ ಅರ್ಥಗಳನ್ನು ಕಾಪಾಡಿಕೊಂಡು
ಕಣಕಣಗಳಲೆಲ್ಲಾ ವಿಶ್ವವು ಅಡಗಿದೆ ವಿಶ್ವವಾಗುತ್ತಲೆ ಇದೆ

ಎಣಿಕೆಯಿಲ್ಲದ ಸ್ಥಿತಿ ಶೂನ್ಯದಲ್ಲಿ ಬೆರೆತು
ಶೂನ್ಯದಿಂದ ಹೊರಬಂದು ಮತ್ತೆ ಬೆರೆತು
ಅನೇಕ ತರಂಗಗಳ ರೂಪ ಪಡೆಯುತ ಕಣಕಣಗಳಲ್ಲಿರುವ
ಅಸಾಧಾರಣ ಶಕ್ತಿ ಪ್ರೀತಿ ಎಂಬ ಹೊಂದಿಕೆಯಿಂದ ಹೆದರಿಸುತ್ತಿದೆ!

**– ಶ್ರೀ ಹರಿ.**

**07 – 03 – 2015**



## 897

ಪ್ರೀತಿಯ ಅಲೆ ಹುಟ್ಟಿಸುವ ಪ್ರೇಮದ ಸಮುದ್ರ
ಪ್ರೀತಿ ಪ್ರೇಮಗಳ ದಡವನ್ನು ಬಡೆಯುತ್ತ
ತಮ್ಮ ಕ್ರಿಯೆಗಳಲ್ಲಿ. .
ತಾವೇ ತಮ್ಮಲ್ಲಿ ಕರಗಿಹೋಗಿ
ತನ್ನಲ್ಲಿ ಅಡಗಿರುವ ಭಾವನೆ ಹೊರತೋರಿಸುತ್ತಿದೆ !

ರಹಸ್ಯವಾಗಿ ಮನದಲ್ಲಿಟ್ಟುಕೊಂಡು
ತನ್ನಲ್ಲಿ ತಾನೇ ರಹಸ್ಯಗಳ ಮೆಲುಕು ಹಾಕುತ್ತ
ಎಂದೂ ನಿಂತುಹೋಗದ ಪ್ರೀತಿಯ ಶಕ್ತಿ
ಸಂತೋಷದಿಂದ ಏನೂ ಮಾಡದೆ
ವರ್ತಮಾನದ ಸುಖ ಭವಿಷ್ಯದಲ್ಲಿಯೂ ಆಶಿಸುತ್ತಿದೆ !

ಬೇಡದ್ದು ದೊರಕದ ಪ್ರೀತಿಯ ಅಲೆಗಳು
ತನ್ನ ಮೇಲೆ ತಾನೇ ಕೋಪಿಸಿಕೊಂಡು
ಕೋಪದ ತಾಪವನ್ನು ಬದಲಿಸಿಕೊಂಡು
ಕಷ್ಟದ ಕಣ್ಣೀರನ್ನು ಸುಖದ ಕಣ್ಣೀರಾಗಿಸಬಲ್ಲ
ಪ್ರೀತಿ ಪ್ರೇಮದ ಜೊತೆ ಸ್ನೇಹತನವನ್ನು ಹೆಚ್ಚಾಗಿಸುತ್ತಿದೆ !

www.sriharikhoday.com

ತುಂಟತನ ಸಹಜ ಗುಣ ಕೋಪ-ತಾಪಗಳು ಪ್ರೀತಿಯ
ನಿಯಮಗಳು
ಪ್ರಕೃತಿಯಲ್ಲಿ ಎಂದೂ ಕಣಕಣಗಳಲ್ಲಿ ಅಡಗಿರುವ
ಪ್ರೀತಿ-ಪ್ರೇಮಗಳು
ಸಮುದ್ರವಿಲ್ಲದೆ ಅಲೆಯಿಲ್ಲ..ಅಲೆಯಿಲ್ಲದೆ ಸಮುದ್ರವಿಲ್ಲ
ಪ್ರೀತಿ-ಪ್ರೇಮವಿಲ್ಲದ ಸ್ನೇಹ ಭಾವನೆ
ಪ್ರೀತಿ ಪ್ರೇಮಗಳಿಲ್ಲದೆ ಪ್ರಕೃತಿ ಇಲ್ಲವೇ ಇಲ್ಲ!

**- ಶ್ರೀ ಹರಿ.**

**10-03-2015**



## 898

ಪ್ರಕೃತಿಯೇ ನನ್ನ ಆಪ್ತ ಸ್ನೇಹಿತ
ಚದುರಿ ಹೋಗದ ಭಾವನೆಗಳಿಲ್ಲದ ಪ್ರಕೃತಿ ನನ್ನ ಗೆಳೆಯ..!
ಕಾಲದ ಜೊತೆಗಿರುವ ನನ್ನ ಗೆಳೆಯ
ಶತೃತ್ವ ಏನೆಂದು ತಿಳಿಯದವನೇ ನನ್ನ ಗೆಳೆಯ ಪ್ರಕೃತಿ ಗೆಳೆಯ!

ಹುಟ್ಟಿನಿಂದಲೂ ನನ್ನ ಜೊತೆ ಜೊತೆ ಇರುವ ಗೆಳೆಯ
ನಾಳಿನ ಬೆಳಕಿಗೆ ಭರವಸೆ ನೀಡಬಲ್ಲ ಗೆಳೆಯ
ಪ್ರೀತಿ-ಒಲುಮೆಗಳ ಅರ್ಥ ತಿಳಿಸಿದ ಗೆಳೆಯ!

ವಿನಯ ಸಂಚುಗಳಿಗೆ ಆಪ್ತನಾಗಿರುವ ನನ್ನ ಗೆಳೆಯ
ಹುಟ್ಟಿನಿಂದ ಜೊತೆ ಬಂದಿರುವ ಗೆಳೆಯ ದೇಗುಲದಂತಿರುವ
ಗೆಳೆಯ
ಗುಡಿ ಒಳಗೂ ಗೆಳೆಯ ..ಗುಡಿಯಾಚೆಯೂ ಗೆಳೆಯ

ಕ್ಷಣ ಮಾತ್ರದಲ್ಲೇ ಬೇಡಿಕೆಯನ್ನು ಬದಲಿಸುವ ಗೆಳೆಯ
ಜನ್ಮದಿಂದ ಕೊನೆಯವರೆಗೂ ಜೊತೆಯಿರುವೆ ಎಂದು
ಭರವಸೆ ನೀಡುವ ಗೆಳೆಯ

ಹಗಲು-ಇರುಳು..ಸ್ವಪ್ನದಲ್ಲಿ ..ಎಚ್ಚರದಲ್ಲಿ
ನಿದ್ರೆಯಲ್ಲಿ ಜೊತೆಗಿರುವ ಗೆಳೆಯ
ನನ್ನ ಗೆಳೆಯ ಪ್ರಕೃತಿಯ ರೂಪದಲ್ಲಿರುವ ಗೆಳೆಯ

www.sriharikhoday.com

ನನಗೆ ಸುಮ್ಮನಿರದೆ ನನ್ನ ಜೊತೆಗೆ ಕೆಲಸದಲ್ಲಿ ಬಳಸಿಕೊಳ್ಳುವ
ಗೆಳೆಯ !
ಕವಿಗಳಿಗೆ ಸತ್ಯದ ಅರಿವನ್ನು ತೋರಿಸುವ ಗೆಳೆಯ
ಲೋಕದಲ್ಲಿರುವ ಎಲ್ಲರ ಪ್ರಿಯ ಗೆಳೆಯ

ಸರಿ-ತಪ್ಪುಗಳ ಮಧ್ಯೆ ಜೀವನದ ರಾಜರಸ್ತೆಯ
ನಡಿಗೆ ತೋರಿಸುವ ಗೆಳೆಯ
ಉತ್ಸಾಹ ನವಚೇತನ . ಮರೆವು .. ನೆನಪು . .ಕ್ರಿಯೆ

ಎಲ್ಲಾ ವಿಶ್ವದ ಇರುವಿಕೆಯ ಜೊತೆಗೆ
ನನ್ನನ್ನು ಬೆರೆಸಿಕೊಂಡಿರುವ ಗೆಳೆಯ
ಪರರ ಜೀವನ ಕೃತಿಯನ್ನು ಬರೆಯುವವನೇ ಪ್ರಕೃತಿ ಗೆಳೆಯ !

**- ಶ್ರೀ ಹರಿ.**

**11 -03-2015**



# 899

ಕ್ಷಣ ಕ್ಷಣಗಳು ಕಾಲದ ನೆನಪಿನ ಗರಡಿಯಲ್ಲಿ
ಈ ರೀತಿಯ ವ್ಯಾಯಾಮ ಸರಿ
ಆ ರೀತಿಯ ವ್ಯಾಯಾಮ ಸರಿಯಿಲ್ಲ
ಮನೋ ಆರೋಗ್ಯಕ್ಕೆ ಮನದ ಗರಡಿಯಲ್ಲಿ
ವ್ಯಾಯಾಮ ಇಲ್ಲದ್ದಲ್ಲಿ ಮನೋ ಆರೋಗ್ಯಕ್ಕೆ ಸರಿ
ಹೋಗುವುದಿಲ್ಲ !

ಈ ಕಾಲ . .ಆ ಕಾಲ . . ಇಂದು. .ನಾಳೆ ಎಂಬ ನೆನಪಿನ
ಪಟ್ಟುಗಳಲ್ಲಿ
ಮನಸ್ಸು ಕಸರತ್ತು ಮಾಡುತ್ತಲೇ ಇದೆ
ಮನುಕುಲದಲ್ಲಿ ಜನ್ಮತಾ ಬರುವ ಈ ಮನೋಗರಡಿಯಲ್ಲಿ
ಕಪ್ಪಾಗಿರುವ ನೆರಳನ್ನು ಬಿಳಿ ಮಾಡಿಸುತ್ತ
ಕಪ್ಪು-ನೆರಳು ಕೆಟ್ಟದ್ದು ಮನಸ್ಸಿನ ಬಿಳಿ ನೆರಳು ಒಳ್ಳೆಯದೆಂಬ

ಭಾಷೆಯ ವಾಡಿಕೆ ಲೀಲಾಜಾಲವಾಗಿ ಯಾವ ಆತಂಕವಿಲ್ಲದೆ
ನಡೆಯುತ್ತಲೇ ಇದೆ
ಹಗಲಲ್ಲಿ ಕಸರತ್ತು ರಾತ್ರಿಯ ಹೊತ್ತೂ ಕಸರತ್ತು ಸ್ವಪ್ನಗಳಲ್ಲಿ
ಕಸರತ್ತು
ದ್ವೇಷ ಅಸೂಯೆಗಳು ಕಸರತ್ತಿನ ಪಟುಗಳಾಗಿ
ನಮ್ಮಲ್ಲಿಯೇ ಬೇರೆ ಬೇರೆ ಭಾವನೆಗಳು ಜೊತೆ ಸೇರಲಾಗದೆ
ದ್ವೇಷದಿಂದ ದ್ವೇಷದ ಕಸರತ್ತು ಮಾಡುತ್ತಲೇ ಇದ್ದಾರೆ !

www.sriharikhoday.com

ಬರೀ ಅಹಂಕಾರದ ಮಾಂಸವನ್ನು ಬೆಳೆಸುವ ಬದಲು
ಗುಣಗಳನ್ನು ಬೆಳೆಸುವ ಕಸರತ್ತು ಮರೆತುಹೋಗಿ
ನನ್ನ ಮಾತೇ ಗರಡಿ ಕೇಳಬೇಕು
ನಾನು . . ನಾನಿಲ್ಲದಿರೆ ಗರಡಿಯೇ ಇಲ್ಲವೆಂಬ
ಅವಿವೇಕದ ಮಾತುಗಳು ಹಾಸ್ಯಾಸ್ಪದವಾಗಿದೆ !

ಜೀವಿಸಲು ಅತಿ ಅವಶ್ಯ ವಸ್ತು ಮನಸ್ಸು
ಜೀವಿಸಿ ಹರುಷದಿಂದಿರಲು ಬೇಕು ಮನಸ್ಸು
ಮನಸ್ಸಿನಿಂದ ಬರುವ ಭಾವನೆಗಳು
ಒಳ್ಳೆ ಮನಸ್ಸಿನಿಂದ ಒಳ್ಳೆಯ ಭಾವನೆ
ಕೆಟ್ಟ ಮನಸ್ಸಿನಿಂದ ಕೆಟ್ಟ ಭಾವನೆ

ಒಂದೇ ಮನಸ್ಸು ಅನೇಕ ಅನೇಕ ರೂಪಗಳನ್ನು
ಬಯಸಿ ಮನಸ್ಸಿನ ಸೃಷ್ಟಿಕೋನಗಳೇ ಹೊಸ ಹೊಸ
ಮನಸ್ಸನ್ನು ಸೃಷ್ಟಿ ಮಾಡಿಸುತ್ತಿದೆ
ಶಾಂತಿಯಿಲ್ಲದ ಮನಸ್ಸು ಶಾಂತಿ ಏನೆಂದು ತಿಳಿಯಲು ಕಸರತ್ತು
ಮಾಡದೆ
ಬಲವಿಲ್ಲದ ಕಸರತ್ತು . ಜಗಳಗಳು . ದ್ವೇಷಗಳು ಕಪ್ಪು ಮನಸ್ಸಿನ
ನೆರಳುಗಳು

ಮನುಕುಲ ಜೊತೆ ಜೀವಿಸಲು ಹುಟ್ಟಿಸಿರುವ ಸೃಷ್ಟಿಗೆ
ತನ್ನ ಇರುವಿಕೆಗೆ ಆಪತ್ತು ಬರುವ ಸಮಯಗಳು ಅತಿಯಾಗುತ್ತಿದೆ
ಬಣ್ಣ ತಿಳಿಯದ ಮನಸ್ಸು ಬಣ್ಣವಿಲ್ಲದ ಮನಸ್ಸು
ಕೆಂಪಾಗಿರುವ ಆಂಗ್ಲರ ಜೊತೆಗೆ ಕಪ್ಪಾಗಿರುವ ದ್ರಾವಿಡ ಜನಾಂಗದ
ಮೇಲೆ
ಬೇರ್ಪಡಿಸಿಕೊಂಡು ದ್ವೇಷ ಬೆಳೆಸುತ್ತಿದೆ !

ಕಲ್ಮಶವಿಲ್ಲದ ತಾಯಿಗರ್ಭ
ಆ ಗರ್ಭದಲ್ಲಿ ನಾನು ಈ ಜನಾಂಗ ಆ ಜನಾಂಗ
ಎಂದು ಹೇಳುತ್ತ ಪರಸ್ಪರ ದ್ವೇಷ ಬೆಳೆಸುತ್ತಿರುವ



ಸತ್ಯವಿಲ್ಲದ ಮನೋ ವಿಭಾಗ !
ವಿಚಾರಶೀಲತೆ ಪಡೆಯುವುದು ಅವಶ್ಯಕ !

ಸರಿಪಡಿಸಲು ಈ ದಿನವೇ ಸಕಾಲ ಎನ್ನುತ
ಅತಿ ಕುತೂಹಲದಿಂದ ಮನುಕುಲದ ಏಳಿಗೆಗೆ
ಅಶ್ವಬಲದ ತಾಕತ್ತಿನಿಂದ ಭೂತ . .ಭವಿಷ್ಯ ವರ್ತಮಾನಗಳ
ಜೊತೆ ಸೇರಿಸಿಕೊಂಡು ವಿಚಾರಶೀಲರಾಗುವುದು ಅತಿ ಅವಶ್ಯ

ಮನೋಗರಡಿ ಬರೀ ಮಾಂಸಖಂಡಗಳನ್ನು ದ್ವೇಷಗಳನ್ನು
ಬಳಸುವುದಕ್ಕಲ್ಲ
ಸತ್ಯವನ್ನು ಅರಿತು ಜೀವನ ನಡೆಸುವ ತಾಕತ್ತು ಗಳಿಸಿಕೊಳ್ಳಬೇಕು
ಗರಡಿಗೆ ಹೋಗದೆ ನಮ್ಮಲ್ಲಿರುವ ಗರಡಿಯಲ್ಲಿ
ಆರೋಗ್ಯ ಹಿತಕರವಾದ ವ್ಯಾಯಾಮ ಮಾಡುತ್ತಲೇ ಇರಬೇಕು
ಬೇಡದ್ದನ್ನು ಗರಡಿಯಲ್ಲಿ ಸೇರಿಸಿಕೊಳ್ಳಕೂಡದು !

**– ಶ್ರೀ ಹರಿ.**

**13 – 03 – 2015**

www.sriharikhoday.com

## 900

ನನ್ನದು ಎನ್ನುವುದು
ಅತಿಯಾದ ಹೆಚ್ಚಿಹ ಸುಖ ತರಿಸುವುದು
ನನ್ನದು ನನ್ನದು ಎನ್ನುವುದು
ತರಿಸುವುದು ಪ್ರೀತಿಗಳ ಮುತ್ತು
ಇದೇ ಪ್ರೀತಿಯನ್ನು ತುಂಬಿಸುವ ಜಗತ್ತು !

ಸುತ್ತಾ–ಮುತ್ತ ನೋಡಿದಾಗ ನಮ್ಮದೆಂದು
ಹೇಳಿಕೊಳ್ಳುವ ವಸ್ತುವೇ ನಮ್ಮ ಸಂಪತ್ತು
ಪ್ರೀತಿಯಿಲ್ಲದ ಜೀವನ ನನ್ನದು ನಮ್ಮದಾಗುವ
ಜೀವನ ರೀತಿ ಸರಿಪಡಿಸದಿದ್ದರೆ
ಬರುವುದು ಜೀವಿಸಲು ಕುತ್ತು !

ನನ್ನದು ಎನ್ನುವುದು ನಮ್ಮದು ಎನ್ನುವುದಕ್ಕೆ ಲಗತ್ತು
ಪ್ರೀತಿ ಕೊಡುವುದು ಕಳೆದುಹೋಗುವುದಿಲ್ಲ
ನಮ್ಮ ಪ್ರೀತಿ ಅವರ ಮನದಲ್ಲಿ ಇರುವುದು ಅಮಾನತ್ತು
ಬಡ್ಡಿ ಸಹಿತ ದೊರಕುವ ಪ್ರೀತಿಯ ಮುತ್ತುಗಳು
ಇಳಿಹೊತ್ತಿನಲ್ಲಿ ನೆನಸಿಕೊಳ್ಳುವುದು ಸರಿಹೊತ್ತು !

ವಿಶ್ವದಲ್ಲಿ ನನ್ನ ಸಂಪತ್ತು ಇರುವಂತೆ
ಮನದಲ್ಲಿ ಅನೇಕ ಪ್ರೀತಿಯ
ವೃಕ್ಷಗಳನ್ನು ಬೆಳೆಸುತ್ತಲಿರಬೇಕು



www.sriharikhoday.com

ಆ ವೃಕ್ಷಗಳು–ಜಲವನ್ನು ಕೊಡುವ ಸುಖ ಸ್ಥಿರ ಸಂಪತ್ತಾಗಿ
ಎತ್ತುಗಳು ನೇಗಿಲ ಮುಂದೆ ಹೋಗುವಂತೆ

ಜೀವನದ ನೇಗಿಲಿಗೆ ನನ್ನದು ನನ್ನದೆಂಬ ಮನೋಭಾವನೆ
ಮತ್ತೆ ಮತ್ತೆ ಮೆಲುಕು ಹಾಕುತ್ತ ಸುಖಪಡುತ್ತ
ತೆರೆದ ಮನಸ್ಸಿನಿಂದ ಸ್ವೀಕರಿಸುತ
ನನ್ನದು ಎಂಬುದು ನೆರಳಾಗಿ
ಅಹಂಕಾರವಿಲ್ಲದ ನನ್ನದು ನಮ್ಮದಾಗುತ್ತ

ಯಾವ ಅಹಂಕಾರದ ದೌಲತ್ತು ತೋರಿಸದೆ
ನಿಜವಾದ ನಾನು ನನ್ನದು ಅರಿವಾಗಿ
ನನ್ನದು ವಿಶ್ವವನ್ನೇ ವ್ಯಾಪಿಸಿಕೊಂಡು
ಹರಿದಾಡುವ ಮನಸ್ಸು ಮೌನದಿ ತೃಪ್ತಿ ಪಡೆಯುತ್ತ
ಪರ್ವತ ತುದಿಗಳು ಆಕಾಶ ನನ್ನದೆಂದು ಎಚ್ಚರದಿ ಬೆಳೆಯುತ್ತಿರಲು

ಎತ್ತರ ಬೆಳೆದು ಆಕಾಶಕ್ಕೆ ಮುತ್ತ ನೀಡುತ್ತ
ಇದು ನನ್ನ ಮುತ್ತು ಎಂದು ಆಕಾಶಕ್ಕೆ ಹೇಳುತ್ತ
ಪ್ರೀತಿಯನ್ನು ವ್ಯಕ್ತಪಡಿಸುತ್ತ
ಆ ಸುಖ ಹೆಚ್ಚಿ ಪರ್ವತ ಬೆಳೆಯಲು
ಮೇಲೆ ಬೆಳೆಯದೆ ಸ್ಥಬ್ದರಾಗಿ ನಿಂತಿದೆ !

ವಿಚಿತ್ರ ರೂಪಗಳಾಗಿರುವ ಪ್ರಕೃತಿ
ಪೂರ್ಣವನ್ನು ಪ್ರೀತಿಯ ರೂಪ ಬಯಸುತ
ಪರಿಪೂರ್ಣತೆಯ ಒಲವನ್ನು ಮಗುವಿಗೆ ತಾಯಿ ಮುತ್ತಿಡುವಂತೆ
ಪರಿಪೂರ್ಣವಾದ ಸುಖ ಒಲವಿನಿಂದ
ನನ್ನದೆಂದು ಹೇಳುವ ಸುಖ

ವಿಶ್ವವೇ ಸೃಷ್ಟಿಸಿರುವ ಈ ವಿಶ್ವಶಕ್ತಿ
ನಿತ್ಯ ಆರಾಧಕರಾಗಿ ನೆರಳು ಬೆಳಕಿಗೆ ಪ್ರೀತಿಸುವಂತೆ
ಬೆಳಕು ನೆರಳನ್ನು ಪ್ರೀತಿಸುವಂತೆ

ಅಗೋಚರವಾದ ಪ್ರೀತಿ
ಜೀವನ ವಿಧಾನದಲ್ಲಿ ವ್ಯಕ್ತಪಡಿಸುತ

ಕಾಯಕಕ್ಕೆ ನೆರಳಾಗಿ ಆಶ್ರಯ ನೀಡುತ್ತಿದೆ
ಕಾಲಚಕ್ರ ವಿಶ್ವ ನನ್ನದೆಂದು ತಿರುಗುತ್ತಿದ್ದರೆ
ಪ್ರೀತಿಯುಳ್ಳ ವಿಶ್ವ
ಕಾಲ ನನ್ನದೆಂದು ಜೊತೆ ಜೊತೆ ಮುತ್ತಿಡುತ್ತ
ಸುಖ ವ್ಯಕ್ತಪಡಿಸುತ್ತಿದೆ !

**– ಶ್ರೀ ಹರಿ .**

**14 –03 –2015**



# 901

ಜೀವನದ ಅನುಭವಗಳು ಉರುಳಿ ಹೋಗುತ್ತಿದೆ
ಹೊರಕಾಣಿಸದೆ ನೆನಪಾಗಿರುವ ಅನುಭವಗಳು
ಕಾಲದ ಜೊತೆಗೆ ಓಡುತ್ತಿದೆ, ಜೀವನದ ರಸ್ತೆಯ ಮೈಲುಗಲ್ಲುಗಳು !

ಬೆರಳು ತೋರಿಸಿದರೆ ಬರದ ಇರುಳು
ಏನನ್ನೂ ತೋರಿಸದೆ ಕರಗಿಹೋಗುವ ತಾಯಿಯ ಕರುಳು
ಬೆಳೆಯುತ್ತಿರುವ ಮಗುವನ್ನು ಆಡಿಸುತ್ತಿರುವುದು ದಯಾಳು !

ಸತ್ಯದ ನೆರಳಾಗಿರುವ ಜೀವನದ ಅನುಭವಗಳು
ಕೆಲಸಲ ತರಿಸುವುದು ಅಳು ನೀಡುವುದು ಒಂಟಿ ಬಾಳು
ಕನಿಕರಗೊಂಡ ಕಾಲ ತರಿಸುವುದು ಮುಗುಳುನಗು

ಮರೆಸುವುದು ಊಟದ ತಂಗಳು
ಎದುರು ಬಂದು ನಿಲ್ಲುವರು ಸಾಲು ಸಾಲಾಗಿ ಆಳು–ಕಾಳುಗಳು
ಬೆಚ್ಚಿ ಬೀಳಿಸಿ ಬೇರೆಯವರಿಗೆ ನೀನು ಕಲಿಸುವೆ ಹೊಸ ಬಾಳು

ಒಂದಾಗಿಸುವೆ ಎರಡು ಮನಸ್ಸಿನ ಸೀಳು
ಬೆಳಕಿನಲ್ಲಿ ಏಳು ಬಣ್ಣಗಳಿರುವಂತೆ
ನಾನಾ ಬಣ್ಣಗಳು ಸೇರಿ ಬಿಳಿ ಬಣ್ಣವಾಗುವಂತೆ

www.sriharikhoday.com

ಎಲ್ಲಾ ಅನುಭವಗಳು ನೆನಪುಗಳಾಗಿ
ನಾ ಮಾಡುವ ಕೆಲಸದ ಫಲ ಫಲದಲ್ಲಿ ನಾನೊಬ್ಬನೇ ಇರದೆ
ಜೊತೆ ಹಂಚಿ ಜೀವಿಸುವ ಜೀನವ

ಹೊಸ ಜೀವನದ ರಸ್ತೆಗಳು ಹೆದ್ದಾರಿಯಾಗಿ
ಹಗಲು-ಇರುಳು ಎಲ್ಲರ ಪ್ರೀತಿಗೆ ಪಾತ್ರನಾಗಿ
ಎಲ್ಲರ ಕಣ್ಣುಗಳಲ್ಲಿ ತಾನೇ ಅಮೂಲ್ಯ ವಸ್ತುಗಳಾಗಿರುವಂತೆ

ಅನುಭವಗಳ ನೆನಪುಗಳೇ ಏಳು-ಬೀಳನ್ನು ಮರೆಸಿ
ಪ್ರೀತಿಯಿಂದ ಎಲ್ಲರ ಕರುಳಿನ ಭಾಷೆ
ಮಾತನಾಡದೆ ಸುಮ್ಮನೆ ಕೇಳಿಸಿಕೊಳ್ಳುವ ಬಾಳು

ತಾನು ನಡೆಸಿದ ನಮ್ಮ ಬಾಳಿನ ಭಾಗ್ಯವು ತಾನಾಗಿ
ಗೋಳನ್ನು ಮರೆಸಿ, ಕೆರಳಿದ ಮುಗುಳ್ನಗೆ
ಎಲ್ಲರ ತುಟಿಯಲ್ಲಿ ಮಿನುಗುವುದು.

**- ಶ್ರೀ ಹರಿ.**

**16-03-2015**



# 902

ನಿನ್ನ ಮನಸ್ಸಿನ ಬರವಣಿಗೆಯನ್ನು
ನೀನೇ ಓದು . . .
ನಿನ್ನ ಮನಸ್ಸಿನ ಬರವಣಿಗೆಯಲ್ಲಿ
ನಿನ್ನ ಮನಸ್ಸಿನ ಬಿಂದು . . !

ಎಲ್ಲದಕ್ಕೂ ಹೌದು ಹೌದು ಎನ್ನದೆ
ಬಿರುದು ಪಡೆಯುವ ಅಭಿಲಾಷೆ ಬಿಟ್ಟು
ಹಿರಿಯ ಕಿರಿಯದರ ಅರ್ಥ ತಿಳಿದು
ಬರವಣಿಗೆಯಲ್ಲಿ ಬೇಡದ ಪದಗಳು
ಇದು ಅದು ಎಂಬುದ ಸೇರಿಸಬೇಡ !

ನೋಡಬೇಕು ಭಾವನೆಗಳನ್ನು ಕಾದು
ಅಭಿಪ್ರಾಯಗಳನ್ನು ಕಂಡುಕೊಳ್ಳಬೇಕು ನಿಂದು
ಆಗಲೇ ಆಗುವುದು ನಿನ್ನ ಬರವಣಿಗೆ ಅಬಾದು
ಭಯದಿಂದ ಬರವಣಿಗೆ ಮಾಡಬೇಡ ಕಡಿದು !

ಹಿಂದಿನದು ಹಿಂದಿಗೆ . .
ಇಂದು ಧೈರ್ಯಗುಂದದೆ ಬರವಣಿಗೆಯ ಮುನ್ನಡೆಸು
ಅದು ಎಂದು ಮರೆತು
ಹೇಳುವುದನ್ನೆಲ್ಲ ತೆರೆದ ಕಿವಿಯಿಂದ ಕೇಳಿ
ಹೇಳುತ್ತಿರು ಹೌದು .. ಹೌದು ಎಂದು



www.sriharikhoday.com

ನಿನ್ನ ಮನದ ಬರವಣಿಗೆ ಒಂದು ಬಿಂದುವಾಗಿ ನೆನೆಸಿಕೊಂಡು
ಯಾವ ರೀತಿಯ ಕಡಿದು ಮಾಡದೆ
ಮುಂದಿನ ಭಾವನೆಯನ್ನು ಮುನ್ನಡೆಸಿಕೊಂಡು
ಜನಗಳ ಅಭಿಪ್ರಾಯಗಳನ್ನು ಹೇಳಲು
ಸುಮ್ಮನಿನೆ ಕಾದು ನೋಡು . . . !

**– ಶ್ರೀ ಹರಿ.**

**16–03–2015**



## 903

ಕಾಲದ ಗತಿ ಸರಿಯಿಲ್ಲ ಎನ್ನುವವನನ್ನು
ನೋಡಿ ನಾಚಿಕೆ ನನ್ನ ಜೊತೆ ಸೇರಿಕೊಂಡಿದೆ

ತಲೆ ತಗ್ಗಿಸಿ ನನ್ನಲ್ಲಿದ್ದ ನಾನು ಹೆದರಿ ಓಡಿಹೋಗಿದೆ
ಜೀವನ ಮುದಿಯನ್ನು ಅನುಭವಿಸಿ ಒಡಲನ್ನ ಬಗ್ಗಿಸಿದೆ
ಕಾಲಗತಿ ಎನ್ನುವುದ ಕೇಳಿ !

ತುಂಬಿಕೊಂಡಿರುವ ಜೀವನದ ಜೀವ
ಹೆದರಿಕೆ ತಿಳಿಯದ ಜೀವ ಹೆದರಿ
ಭಯದಿಂದ ಸರಿಯಿಲ್ಲದ ಕಾಲಕ್ಕೆ ಹೆದರಿ

ಸಂದೇಹದ ಜೀವನ ಸಾಗರದಲ್ಲಿ
ಹೆದರಿಕೆಯ ಅಲೆಗಳನ್ನು ಏರಿಳಿಸುತ್ತಿದೆ
ಸಮುದ್ರ ನೆಮ್ಮದಿಯನ್ನು ಕಳೆದುಕೊಂಡಿದೆ !

ತನ್ನ ಬಾಧೆಗಳನ್ನು ದೇವರ ಜೊತೆ ಮಾತನಾಡಲು
ದೇವರಿಂದಾದ ಜಗತ್ತು ಭಯಗ್ರಸ್ಥರಾದ ನಾವು
ಹೆದರಿಕೆ ತರುವ ಕಾಲದ ಹೆದರಿಕೆಗೆ

ನನ್ನವಳು ಸಿತಾರು ನುಡಿಸುತ್ತಿರುವುದ ಕೇಳಿ
ಸಿತಾರಿನ ಸದ್ದು ಹೆದರಿಸುವ ಕಾಲವನ್ನು ನುಂಗಿ
ಕಾಂತೆಯ ಜೊತೆಗೆ ನಿಶೆಯ ಬಟ್ಟಲನ್ನು ಸೇವಿಸುತ್ತಿದ್ದರೆ



www.sriharikhoday.com

ಪವಿತ್ರ ಭಾವನೆಗಳು ತನಗೆ ಸಂತಸ ತರುವ ಮೋಡಗಳಾಗಿ
ತಲೆ ಎತ್ತಿ ಜಗತ್ತನ್ನು ನೋಡುತ್ತಿದ್ದರೆ
ಕೆಟ್ಟಕಾಲ ನಮ್ಮ ನೆರಳಾಗಿ

ನನ್ನನ್ನು ಹಿಂಬಾಲಿಸಿದೆ ಹೆದರಿ ಹೆದರಿ
ಹೆದರಿಕೆ ಇಲ್ಲದ್ದನ್ನು ಸೃಷ್ಟಿಸುವುದು ಎಂಬ ಮಾತು
ಹೆದರಿಕೆ ಇಲ್ಲದ ಭಾವನೆಗಳು ಸತ್ಯ ಎಂದು

ದೇವರು ಹೇಳುತ್ತಿರಲು
ನಾಚಿಕೆಯಿಂದ ತಲೆ ತಗ್ಗಿಸಿದ ನಾನು
ನನ್ನಲ್ಲಿದ್ದ ನಾಚಿಕೆ ಓಡಿಹೋಗಿ

ಸಿತಾರಿನ ಸದ್ದಲ್ಲಿ ನಾನೇ ಕಳೆದುಹೋಗಿರುವೆನು
ನನ್ನ ಜೊತೆ ದೇವರು . . . ನನ್ನ ಜೊತೆ ಕಾಂತೆ
ನನ್ನ ಜೊತೆ ನಿಶೆಯ ಬಟ್ಟಲು

– ಶ್ರೀ ಹರಿ.

16–03–2015



www.sriharikhoday.com

# 904

ನಿನ್ನ ಜೊತೆ ಒಂದು ವರುಷವಾಯಿತು
ಋತುಗಳು ಬಂದಂತೆ ಬಂದಿರುವೆ
ಸೊರಗಿಹೋಗಿದ್ದ ನನ್ನ ಮನದಲ್ಲಿ
ಹರುಷದ ಮಳೆಯನ್ನು ಸುರಿಸಿರುವೆ !

ಮಳೆಯು ನೀರನ್ನು ಹರಿಸುವಂತೆ
ನಿನ್ನ ನನ್ನ ಮನದಲ್ಲಿ
ಕಳೆದುಹೋಗಿದ್ದ ಸುಖವನ್ನು
ಮತ್ತೆ ಹರಿಸಿರುವೆ !

ತುಂಬಿಹೋಗಿದೆ ನನ್ನ ಮನದಲ್ಲಿ ಈಗ
ನನ್ನ ನೆನಪು ನಿನಗೆ ಬರುತ್ತಿರಲಿಲ್ಲವೇ . . ?
ನಾ ಸಿತಾರು ನುಡಿಸಿದರೆ ನಿನ್ನ ಸದ್ದು ಬರಲಿಲ್ಲ
ನೀ ಇಲ್ಲದೆ ಹೂ ಬಳ್ಳಿಗಳು ಬತ್ತಿಹೋಗಿದೆ !

ಕಷ್ಟದಿಂದ ಅರಳಿದ ಹೂವಲ್ಲಿ ಸ್ವಾದ ಕಾಣದೆ
ನಿನ್ನನ್ನು ಹುಡುಕಲು ಹೋಗಿದೆ ಅಳುತ್ತಿರುವ ನಿಶೆಯ ಬಟ್ಟಲು
ಶೋಕಿಸುತ್ತಿರುವ ನಮ್ಮ ಜೊತೆಯ ಗಿಡದ ನೆರಳು
ತನ್ನ ತಂಪನ್ನು ಕಳೆದುಕೊಂಡಿದೆ !

ನಾ ಸುಖಿಯೇ . .ಜೊತೆ ನೆರಳಲ್ಲಿ ಸಿತಾರವ ಮಿಡಿಯೋಣ
ನಿಶೆಯ ಬಟ್ಟಲನ್ನು ಮುತ್ತಿಟ್ಟು ಹರುಷದಿ ಸ್ವೀಕರಿಸೋಣ
ಕಳೆದು ಹೋಗಿರುವ ಕಷ್ಟದ ಕಾಲವನ್ನು ಮರೆತು
ನಾವಿಬ್ಬರು ದೇವರ ಜೊತೆ ಬೆರೆಯೋಣ !

– ಶ್ರೀ ಹರಿ.

17–03–2015



## 905.

ಹೊಟ್ಟೆ ಹಸಿವಿನ ತಳಮಳ
ದಿನವೂ ಕತ್ತಲು ಬೆಳಕಿನ ಜೊತೆ ಜಗಳ
ಎಣ್ಣೆ ಇಲ್ಲದೆ ಉರಿಯುವುದಿಲ್ಲ ದೀಪ ಎನ್ನುತ್ತಿದೆ

ಬಡತನ ನನ್ನ ಭಾರ
ನನ್ನ ಮೇಲಿರುವ ನಿನ್ನ ಪ್ರೀತಿಯ ಭಾರ
ಹೆಚ್ಚಾಗಿ ಹೊಟ್ಟೆಯನ್ನು ಬಡಿಯುತ್ತಿದೆ

ಬಡವನ ಬಿಡುವಿಲ್ಲದ ನಮ್ಮ ಜೊತೆ ಪ್ರೀತಿಯ ಸಂಬಂಧ
ನನಗೂ ನಿನಗೂ . .
ನಮ್ಮ ಜೀವಕ್ಕೇ ಉಸಿರಾಡಿಸುತ್ತಿದೆ

ಸುಖ ಏನೆಂದು ತಿಳಯದ ನಮ್ಮ ಜೊತೆ ಪ್ರೀತಿ
ನೀ ನನ್ನವಳೆಂಬ ನನ್ನ ಸಿರಿತನ ನಾ ನಿನ್ನವನೆಂದು
ಹೇಳುವ ಸಿರಿತನದ ಹೇಳಿಕೆ ನಮ್ಮ ಬಡತನವನ್ನು ಮರೆಸುತ್ತಿದೆ !

ಸಿರಿತನ ನನ್ನನ್ನು – ನಿನ್ನನ್ನು ನಮ್ಮ ಮನದ ಕನ್ನಡಿಯಲ್ಲಿ ತೋರಿಸಿ
ನೀ ದೂರವಿದ್ದರೂ ನಿನ್ನ ಮುಖ
ನನ್ನ ಜೊತೆ ಕನ್ನಡಿಯಲ್ಲಿ ಕಾಣಿಸುತ್ತಿದೆ

www.sriharikhoday.com

ನಮ್ಮ ಪ್ರೀತಿಯನ್ನು ಪರೀಕ್ಷಿಸುತ್ತಿರುವ ಪ್ರಕೃತಿ
ಎಲ್ಲದರಲ್ಲಿ ಪ್ರೀತಿಯನ್ನು ಕಾಣುವ ಪ್ರಕೃತಿ
ಕೆಟ್ಟದ್ದನ್ನು ಅಪೇಕ್ಷಿಸದೇ ಇರುವ ಪ್ರಕೃತಿ

ನಮ್ಮಿಬ್ಬರ ಮೇಲೆ ಒಂದಲ್ಲಾ ಒಂದು ದಿನ
ನಮ್ಮಿಬ್ಬರ ಪ್ರೀತಿಗೆ ಒಪ್ಪಿ
ಜೀವನದಲ್ಲಿ ತುಂಬನ್ನು ತರಿಸುವ ಭರವಸೆ

ನಾವಿಬ್ಬರೂ ದೂರವಿರುವ ಕಾರಣ
ನನ್ನ ಮನೋ ಕನ್ನಡಿಯಲ್ಲಿ ನೀ ಕಾಣುತ್ತಿರುವೆ
ನಿನ್ನ ಮನೋ ಕನ್ನಡಿಯಲ್ಲಿ ನನ್ನ ಮುಖ ಕಾಣಿಸುತ್ತಿದೆ !

ಕೃಪಾಕರನಾದ ದೇವರು ನನ್ನ ಮನೆತನ
ಈ ಗುಡಿಸಲಿನಲ್ಲಿ ನಿನ್ನನ್ನು ನನ್ನ ಅರ್ಧಾಂಗಿಯಾಗಿ
ನನ್ನ ಗುಡಿಸಲು ಕರೆಸಿಕೊಳ್ಳುವುದು ಸತ್ಯ !

**– ಶ್ರೀ ಹರಿ.**

**18–03–2015**



## 906

ಪರಿಪೂರ್ಣ ಆನಂದದಿಂದ
ಹೊಸ ಹೊಸತರ ಬಣ್ಣಗಳ ಆನಂದ
ಅಂದ-ಚೆಂದಗಳ ನೋಡುವ ಆನಂದ
ಜೊತೆ ಬೆರೆತು ಕಾಲ ಕಳೆಯುವ ಆನಂದ !

ಕೊನೆಗಾಣದ ಅಪೇಕ್ಷೆಗಳ ಸುಖದ ಆನಂದ
ಕಷ್ಟಗಳ ಬದಿಗೊತ್ತುವ ಆನಂದ
ಸೂರ್ಯನು ತನ್ನ ಪ್ರಕಾರದಿಂದ
ತಾನೇ ಪಡೆದುಕೊಳ್ಳುವ ಆನಂದ

ಹೂವು ತನ್ನ ಬಣ್ಣಗಳ ಹೊರ ತೋರಿಸುವ
ಹೂವಿನ ಸುಖದ ಆನಂದ
ಪುಷ್ಪವು ತನ್ನ ಸ್ವಾದವನ್ನು ಮೊದಲು ಆಘ್ರಾಣಿಸಿ
ಹೊರ ಚೆಲ್ಲುವ ಆನಂದ!

ರತಿಯು ಮನ್ಮಥನ ಜೊತೆ ಬೆರೆತು ಕಾಲ ಕಳೆಯುವ ಆನಂದ
ಹಸಿದ ಹೊಟ್ಟೆಗೆ ಕೂಳು ನೀಡುವ ಆನಂದ
ಹೊಸ ವರುಷಗಳು ಕಾಲಕ್ಕೆ ನೀಡುವ ಆನಂದ
ಸ್ನೇಹಿತರ ಜೊತೆಗೆ ಮನಮಿಡಿಯುವ ನಗು ಮಾತುಗಳ ಆನಂದ

www.sriharikhoday.com

ತಾಯಿ ತನ್ನ ಕಂದನ ಅಪ್ಪುತ ಮುತ್ತ ನೀಡುವ ಆನಂದ
ನನಗೆ ದೇವರ ಜೊತೆಗೆ ಆನಂದ
ಆನಂದದ ಆಸೆಗಳು ನಿಶೆಯ ಬಟ್ಟಲು ತರಿಸುವ ಆನಂದ
ಪೂರ್ಣ ಆನಂದ ನೀಡುವ ನನ್ನ ಕಾಂತೆಯ ಜೊತೆಯ ಆನಂದ

ಬೆಟ್ಟದ ಮೇಲೆ ಸೂರ್ಯನು ಮುಳುಗುವ ಮೊದಲು
ಸೂರ್ಯನು ಹೊರಚೆಲ್ಲುವ ಬಣ್ಣ ಬಣ್ಣಗಳ ಆನಂದ
ಗಿಡವು ತನ್ನ ಫಲದ ಬಾರವನ್ನು ಹೊತ್ತುಕೊಳ್ಳುವ ಆನಂದ
ಆಸರೆಯಿಲ್ಲದವನಿಗೆ ಗುಡಿಸಲು ನೆರಳಿನ ಆನಂದ

ಶಿಷ್ಯನಿಗೆ ಗುರುವಿನ ಪಾದದ ಸ್ಪರ್ಶದ ಆನಂದ
ವಿಶ್ವವೇ ಆನಂದ . . ಕಣಕಣಗಳಲ್ಲಿರುವ ಆನಂದ
ಆನಂದವನ್ನು ಕಣಕಣಗಳಲ್ಲಿ ಗುರುತಿಸಿದರೆ
ಮುದಿತನಕ್ಕೆ ಯೌವ್ವನದ ಸುಖದ ಅನುಭವಾನಂದ !

**– ಶ್ರೀ ಹರಿ.**

**19–03–2015**



www.sriharikhoday.com

## 907

ಆನಂದದ ಹಾದಿಗಳು ಅನೇಕ ತರಹದ ದಾರಿಗಳು
ವಿಶ್ವವೇ ಆನಂದದ ದಾರಿಯನ್ನು ಹುಡುಕುತ್ತಿದೆ
ಹೊಸ ಹೊಸ ಹಾದಿಯನ್ನು ಹುಡುಕುತ್ತಿದೆ

ಶಾರೀರಿಕ ಸಂಬಂಧದ ಆನಂದ ಗಳಿಕೆಯ ಆನಂದ
ತ್ಯಾಗದ ಆನಂದ ಹೊಸ ಹೊಸ ಆನಂದದ ಹಾದಿಗಳನ್ನು
ಪ್ರಕೃತಿಯೇ ರೂಪಿಸಿ ಪ್ರಕೃತಿಯೇ ಹುಡುಕುತ್ತಿದೆ !

ಹೊಸ ಹಾದಿಯಲ್ಲಿ ಹೊಸ ಹೊಸ ಅನುಭವಗಳ ಆನಂದ
ಶಾರೀರಿಕ ಕ್ರಿಯೆ ಇಲ್ಲದೆ ಮನೋಕ್ರಿಯೆಗಳ ಆನಂದ
ಸುಮ್ಮನಿರದ ಮನಸ್ಸು ಸುಮ್ಮನಿರುವುದೇ ಆನಂದ

ಹಿಂದಿನ ಕೆಟ್ಟ ಭಾವನೆಯನ್ನು ಮರೆಸುವ ಆನಂದ
ಪ್ರೀತಿಯನ್ನು ನಾನಾ ರೀತಿಯಲ್ಲಿ ಪ್ರತಿಬಿಂಬಿಸುವುದು ಆನಂದ
ಮನ ತನ್ನ ಪರಿವಾರವ ಬಿಟ್ಟು

ಏಕಾಂಗಿಯಾಗಿ ಧ್ಯಾನದಲ್ಲಿ ಪಡೆಯುವ ಆನಂದ
ಆನಂದಗಳು ತರಂಗಗಳಾಗಿ ಶೂನ್ಯದಲ್ಲಿ ಬೆರೆಯುವ ಆನಂದ
ತರಂಗಗಳಾಗಿ ಕಾಲದ ಜೊತೆ ಹೊಸ ಹೊಸ ತರಂಗಗಳು

ಉದ್ಭವವಾಗಿ ಶೂನ್ಯವಾಗುವ ಆನಂದ
ಶೂನ್ಯದಿಂದ ತರಂಗಗಳು . .ತರಂಗದಿಂದ ಶೂನ್ಯದಲ್ಲಿ ಬೆರೆತು
ತಾನು ಎಂಬುವುದ ಮರೆತಾಗ ದೈವಿಕ ತರಂಗಗಳು

ದೈವಿಕ ಶಕ್ತಿಯ ಸಂಪತ್ತಾಗಿರುವ ಸಮಯಗಳು
ವಿಶ್ವದಲ್ಲಿ ಕಾಲವನ್ನು ಮರೆಸಿ
ಹುಟ್ಟೇ ತಿಳಿಯದ ಆನಂದ

ಹಾದಿಯಲ್ಲೂ ಆನಂದ . .ಬೆರೆತು ಬೆರೆತು ಕಳೆದುಹೋದರೂ
ಆನಂದ

ಪವಿತ್ರದ ಆನಂದದ ತರಂಗಗಳು
ಆಧಾರವಿಲ್ಲದೆ ವಿಶ್ವದಲ್ಲಿ ಬೆಳಕನ್ನು ಜ್ಯೋತಿಯಾಗಿ ಬೆಳಗಿಸುತ್ತಿದೆ !

**– ಶ್ರೀ ಹರಿ.**

**20–03–2015**



# 908

ಉದಯದ ಬೆಳಕು ದಿಗಂತವನ್ನು ಬೆಳೆಸುತ್ತಿದೆ
ದಿಗಂತಗಳು ಜೀವನ ಚೈತನ್ಯವನ್ನು ಬೆಳೆಸುತ್ತಿದೆ
ಚೈತನ್ಯ ತುಂಬಿದ ಜೀವ ಗಗನಾಕಾರ ಮೋಡವನ್ನು ಪ್ರೀತಿಯಿಂದ
ಚುಂಬಿಸುತ್ತಿದೆ !

ನಮ್ಮವ ನಿಮ್ಮವ ಎಂಬ ಪ್ರೀತಿ ನೆರಳಾಗಿ
ನಮ್ಮನ್ನು ಜೊತೆ ಹಿಂಬಾಲಿಸುತ್ತಿದೆ
ಅಪ್ಪಿನಲ್ಲಿ ಮಗುವಿನ ಮೇಲೆ ತಾಯಿಯ ಪ್ರೀತಿ ಉದಯ

ಪ್ರೀತಿಯಿಂದ ಕಾಂತೆಯ ತೋಳಿನ ಅಪ್ಪಿನಲ್ಲಿ ಪ್ರೀತಿ–ಪ್ರೇಮದ
ಉದಯ

ಕಷ್ಟಗಳಲ್ಲಿ ಸುಖದ ಉದಯ
ಬೆಳೆಯುತ್ತಿರುವ ಭಂಡಾರಗಳಲ್ಲಿ ಹೊಸ ಹೊಸ ಆನಂದಗಳ
ಉದಯ

ಮಿನುಗುತ್ತಿರುವ ಜಗತ್ತಿನಲ್ಲಿತ್ಯಾಗದ ಉದಯ
ಗುರುಗಳ ಚರಣದ ಆಶೀರ್ವಾದದಿಂದ ಜ್ಞಾನದ ಉದಯ
ತುಂತುರು ತುಂತುರು ಹನಿಗಳ ಬೆಳಕಿನಿಂದ ಕಾಮನಬಿಲ್ಲಿನ ಉದಯ
ತಾಯಿ ಗರ್ಭ ಕಟ್ಟುತ್ತಲೇ ಗರ್ಭದಲ್ಲಿ ಜೀವನದ ಹೊಸ ಜನ್ಮದ
ಉದಯ

www.sriharikhoday.com

ಕಷ್ಟದಲ್ಲಿ ಭಾಗಿಯಾಗುವವರ ಜೊತೆ ಸ್ನೇಹ ಸಂಬಂಧದ ಉದಯ
ಇದ್ದೂ ಇಲ್ಲದೆ, ಇಲ್ಲದೆ ತಾನೇ ಕಳೆದುಹೋಗಿ ನಿರಾಕಾರದ ಜೊತೆ ಬೆರೆತು

ನಗುವ ಪ್ರಯತ್ನವಿಲ್ಲದ ದೈವತ್ವದ ಚಿಂತೆ ಉದಯ

ಕ್ಷಮೆ . . ಕರುಣೆಯ ಉದಯ
ಬರೀ ಬೆಳಕಿನ ಜೊತೆ ಬಣ್ಣ ಬಣ್ಣಗಳ ಉದಯ
ಎಲ್ಲ ಜೀವನಗಳ ಪ್ರಶ್ನೆಯ ಮುಂದೆ ಉತ್ತರದ ಉದಯ

ಕಷ್ಟಗಳ ಜೊತೆ ಕಣ್ಣೀರ ಉದಯ ಸುಖದ ಜೊತೆ ಕಣ್ಣೀರಿನ ಉದಯ

ಉದಯಗಳೆ ಜೀವನದ ದೈವ ಬಿಂದು
ಉದಯಗಳು ಸುಮ್ಮನಿರದೆ ದಿಗಂತಗಳನ್ನು ಹುಡುಕುತ್ತಲಿವೆ !

**– ಶ್ರೀ ಹರಿ.**

**23-03-2015**



## 909

ಸದಾ ಎಚ್ಚರವಿಲ್ಲದ ಮನಸ್ಸು
ತೆರೆಯಾಗಿರುವ ಮನಸ್ಸು ಬಿಂಬವಿಲ್ಲದೆ ಪ್ರತಿಬಿಂಬಿಸುತ್ತಿದೆ
ಬಿಂಬವಿಲ್ಲದೆ ತಾನೇ ಇಷ್ಟದಂತೆ ದುಡುಕಿ
ತನಗೆ ಬೇಕಾದ್ದನ್ನು ಹೆದರಿಕೆಯಿಲ್ಲದೆ ಪ್ರತಿಬಿಂಬಿಸುತ್ತಿದೆ !

ಬಿಂಬಗಳಿಲ್ಲದ ಪ್ರತಿಬಿಂಬಗಳ ಸೃಷ್ಟಿ
ಬಿಂಬವೇ ಇಲ್ಲದೆ ಹೊಸ ಹೊಸ ಬಣ್ಣಗಳ ಪ್ರತಿಬಿಂಬಗಳು
ಅರ್ಥಬಾರದ ಪ್ರತಿಬಿಂಬಗಳು
ಗೋಳು ದುಃಖ ತರಿಸುವ ಪ್ರತಿಬಿಂಬಗಳು !

ಬಿಂಬಗಳ ಆದಿಯ ತಿಳಿಯದ ತೆರೆ
ತನ್ನನ್ನು ತಾನೇ ತೆರೆ ಪ್ರತಿಬಿಂಬಿಸುತ್ತಿದೆ
ಸಮಸ್ಯೆಗಳ ಸರಿಪಡಿಸುವೆನೆಂಬ ಜಂಭ
ನಮ್ಮ ದೇಹವನ್ನು ಗುಲಾಮನನ್ನಾಗಿ ಮಾಡಿಕೊಂಡು

ಬಿಂಬಿಸುತ್ತಿರುವ ಪ್ರತಿಬಿಂಬದ ತೆರೆ
ಇಷ್ಟ ಬಂದಾಗಲೆಲ್ಲ ಪ್ರತಿಬಿಂಬಿಸುತ್ತ
ಇಲ್ಲದ್ದನ್ನು ಕಲ್ಪಿಸಿ ದ್ವೇಷಿಸುತ್ತ
ಸತ್ಯದ ಅರ್ಥ ತಿಳಿಯದ ಪ್ರತಿಬಿಂಬಗಳು

www.sriharikhoday.com

ಬದುಕುವ ಬಾಳನ್ನೇ ಹಾಳು ಮಾಡುತ್ತಿದೆ
ಬಿಂಬವಿಲ್ಲದ ಮನ್ಸಿನ ಪ್ರತಿಬಿಂಬಗಳು
ಮನಸ್ಸಿಗೆ ಎಚ್ಚರಿಸುವ ಕಾಲ ಬಂದಿದೆ
ಬಿಂಬ ಇಲ್ಲದ ಪ್ರತಿಬಿಂಬಗಳೇ

ಪ್ರತಿಬಿಂಬಗಳನ್ನು ಹಿಂತಿರುಗಿಸುವ ಕಾಲ ಬಂದಿದೆ
ನೀ ಬರಿ ತೆರೆಯಾಗಿರು
ನಮ್ಮ ಪ್ರತಿಬಿಂಬವನ್ನು ಪ್ರತಿಬಿಂಬ ಮಾಡುವ ಕೆಲಸ ಮಾತ್ರ
ಬಿಂಬ ಮನೋಬಿಂಬವೆಂಬ ಮನೋರಾಜ್ಯದ ಹೇಳಿಕೆ

ಎಚ್ಚರವಿಲ್ಲದ ಮನಸ್ಸು ಬರೀ ತೆರೆಮಾತ್ರ
ಸತ್ಯವನ್ನು ಮಾತ್ರ ಪ್ರತಿಬಿಂಬಿಸುವ ಹಾದಿ ಹಿಡಿದರೆ
ನಮ್ಮ ಮನಸ್ಸಿನ ಸಾಧನೆಗೆ ಮನಸ್ಸು
ಉಪಕರಣವಾಗಿ ಉಪಯೋಗಿಸುಕೊಂಡು

ತೆರೆ ಸಾಧನೆಯ ಉಪಯುಕ್ತವಾಗಿ ನಮ್ಮ ಜೀವನದ
ಆಪ್ತ ಸಾಧನೆಯಾಗಿ ಹಾಜರಾತಿ ಹಾಕದ ಸೂರ್ಯ
ಪ್ರತಿಬಿಂಬಿಸುತ್ತಿದ್ದರೂ ನಮ್ಮ ಮನೋಮನಗಳಿಗೆ
ತೂಂದರೆ ನೀಡದೆ ಸತ್ಯದ ಹಾದಿಯಲ್ಲಿರುವ ಮನಸ್ಸಿಗೆ

ತಾನು ಕಲ್ಮಶ ಬೆರೆಸಲು ಜೊತೆ ಸೇರದೆ
ಬರೀ ಪ್ರತಿಬಿಂಬವಾಗಿ ಜಗತ್ತನ್ನು ಕಾಪಾಡುವಂತೆ
ನಮ್ಮ ಮನಸ್ಸಿನ ಪ್ರತಿಬಿಂಬ
ನಮ್ಮ ಮನೋಬಿಂಬವನ್ನು ಮಾತ್ರ ಮನೋತೆರೆಯಲ್ಲಿ ತೋರಿಸುತ್ತ

ದ್ವೇಷ ಅಸೂಯೆಗಳನ್ನು ತಿಳಿಯದೇ ಇರುವ ಮನೋಬಿಂಬ
ಎಲ್ಲರ ಜೊತೆ ಬೆರೆತು
ಉಯ್ಯಾಲೆ ಯಾವ ಆಧಾರವಿಲ್ಲದೆ ಹಿಂತಿರುಗಿ ಬರುವಂತೆ
ಅರ್ಥವನ್ನೇ ಪ್ರತಿಬಿಂಬಿಸುತ್ತ



ಕಾಮನಬಿಲ್ಲು ಬಣ್ಣಗಳನ್ನು ಹೊರಸೂಸುವಂತೆ
ಮನಸ್ಸು ಮನಸ್ಸಾಗಿಯೇ ಉಳಿದು
ತನ್ನ ತೆರೆಯ ಮೇಲೆ ಸತ್ಯವನ್ನೇ ಪ್ರತಿಬಿಂಬವೆಂಬ ಎಚ್ಚರ
ಮನಸ್ಸನ್ನು ಎಚ್ಚರಿಸುವ ಕಾಲ ಬಂದಿದೆ !

**– ಶ್ರೀ ಹರಿ.**

**23-03-2015**

www.sriharikhoday.com

## 910

ಕೋಳಿ ಕೂಗಿನ ಕೂಗು
ದಿನದ ತೆರೆಯನ್ನು ಸರಿಸುತ್ತಿದೆ

ರಾತ್ರಿಯ ಕತ್ತಲಲ್ಲಿದ್ದ ಬೆಳಕನ್ನು
ಕಷ್ಟಗಳಿಂದ ಒದಗುವ ಹಗುರನ್ನು
ದಿನವೆಲ್ಲಾ ಮಧುರವಾಗಿರಲು

ದಿನವೂ ಜಗತ್ತಿನ ಸೇವೆ ಮಾಡಲು
ಹಗಲು-ಎಚ್ಚರದ ಮನದಿಂದ
ಸೇವೆಗಾಗಿ ತೆರೆದಿರುವ ತೋಳಿನಿಂದ ಕಾದಿದೆ !

ಬೆಳಕನ್ನು ಕಂಡ ಕಣ್ಣು
ಸುಂದರ ಸೌಂದರ್ಯವನ್ನು ನೋಡುತ
ಸೌಂದರ್ಯದಿಂದ ಮಿನುಗುತ್ತಿರುವ ಬೆಳಗನ್ನು ನೋಡುತ್ತ

ಎಲ್ಲರ ಕಣ್ಣಲ್ಲಿ .. ಮನದಲ್ಲಿ
ಪ್ರೀತಿ-ಪ್ರೇಮಗಳನ್ನು ಹರಿಸುತ್ತ
ದೂರವಾಗಿದ್ದನ್ನು ಹತ್ತಿರ ತರಿಸುತ್ತ

ಹಿಂದಿನ ದಿನ ಮರೆಸಿ
ಈ ದಿನ ಬಂದಿರುವ ಹೊಸದನ್ನು ಜೊತೆ ಮಾಡಿಕೊಂಡು
ಬೆಳಕು ಕಣ್ಣನ್ನು ನಮಿಸುತ್ತ ಕಣ್ಣು ಬೆಳಕನ್ನು ನಮಿಸುತ್ತಿದೆ !



ಕೋಳಿಯ ಕೂಗು ದಿನದ ಕೆಲಸಕ್ಕೆ ಮೌಲ್ಯ ನೀಡುತ್ತ
ಕುಳಿತಿರುವವನಿಗೆ ಕೆಲಸವನ್ನು ಮುಗಿಸಲು
ಕಷ್ಟವನ್ನು ನೀಡುತ್ತ

ದುಡಿ ದುಡಿ ಎಂದು ಹೇಳಿದ ಕೋಳಿಯ ಕೂಗು
ಹೋಳುಗಳ ಬಲವನ್ನು ಹೆಚ್ಚಿಸಿಕೊಂಡು
ಬೆವರಿನ ತೊಟ್ಟುಗಳು ಬೆಲೆವುಳ್ಳ ಮಾಣಿಕ್ಯಗಳಾಗಿ

ಭೂಮಿಯು ಎಲ್ಲರ ಜೊತೆ ಸಂಬಂಧಗಳನ್ನು ಬೆಳೆಸುತ್ತ
ಬೆಳಕಿನಿಂದಾದ ಎಚ್ಚರದ ಸ್ಥಿತಿ
ವಿಶ್ವವನ್ನೇ ಆದರಿಸಿಕೊಳ್ಳುವ ಶಕ್ತಿಯಾಗಿ

ಪದಗಳು ಇಲ್ಲದ ಕೂಗು
ಜಗವ ಸಲಹುವ ತಾಯಿಯ ಕೂಗಾಗಿ
ಹಿಂದನ್ನು ಕಾಣದೆ ಮುನ್ನಡೆಗೆ ಹೆಜ್ಜೆ ಹಾಕಿಸುತ್ತಿದೆ !

ಕೋಳಿ ಕೂಗಿನ ಕೂಗು
ದಿನವೂ ದಿನದ ತೆರೆಯನ್ನು ಸರಿಸುತ್ತಿದೆ

**- ಶ್ರೀ ಹರಿ.**

**24-03-2015**

www.sriharikhoday.com

## 911

ಹೇ ಸೊನ್ನೆಯೇ ನಿನ್ನ ಜೊತೆ ಯಾರೂ ಇಲ್ಲವೆಂದು
ದುಃಖದಿಂದ ಏಕೆ ಒಂಟಿಯಾಗಿ ಅಳುತ್ತಿರುವೆ
ಜೊತೆ ಯಾರೂ ಇಲ್ಲದೆ ಅನಾಥನಾಗಿರುವೆಯಾ . .
ಜನ್ಮ ಕೊಟ್ಟ ತಾಯಿಯೂ ಇಲ್ಲ. . ನಿನ್ನ ಹುಟ್ಟಿಸಿದ ತಂದೆಯೂ ಇಲ್ಲ.

ವಿಶ್ವದ ಸೃಷ್ಟಿಯಲ್ಲಿ ಯಾವ ಪ್ರಧಾನ್ಯವೂ ಇಲ್ಲದೆ
ನಿನಗೆ ನೆರಳೂ ಇಲ್ಲದೆ ಎಲ್ಲಿ ಕಳೆದುಹೋಗಿರುವೆ ?

ಎಡಬಲ ತಿಳಿಯದಿರುವ ನೀನು
ಮೇಲೆ ಕೆಳಗೆ ತಿಳಯದಿರುವ ನೀನು
ವಿಶ್ವವನ್ನೇ ಆದರಿಸುವ ಶಕ್ತಿಶಾಲಿ ನೀನು
ವಿಶ್ವದ ಸೃಷ್ಟಿಗೆ ಗಣಿಕೆ ಮಾಡುವ ಅವಶ್ಯಕ ವಸ್ತು ನೀನು !

ನೀನು ನಿನ್ನ ತಪ್ಪುಗಳ ಅರಿತರೆ
ನಿನ್ನ ಮಿಗಿಲಾಗಿಸುವ ಅತಿ ದೊಡ್ಡ ಪ್ರಮಾಣವಾಗಿ
ನಿನ್ನನ್ನು ಸೃಷ್ಟಿಸಿರುವ ಅಡಿಯನ್ನು ಏಕೆ ಮರೆತಿರುವೆ
ಒಂದಾಗಿರುವ ದೈವಶಕ್ತಿಯನ್ನು ಬಲಬಾಗದಲ್ಲಿ ಒಂದನ್ನು ಜೊತೆ ಮಾಡಿಕೊಂಡರೆ



ನಿನ್ನ ಮೌಲ್ಯವು ಹೆಚ್ಚಾಗುತ್ತ
ನೀ ಆ ಒಂದಾದ ದೈವಶಕ್ತಿಯನ್ನು ನೀ ಬೆರೆಯದಿದ್ದರೆ
ನಿನ್ನ ಇರುವಿಕೆ ಕಡಿಮೆ ಆಗುತ್ತಾ. . ಆಗುತ್ತಾ. .
ನಿನ್ನನ್ನೇ ನೀನು ಮರೆತು ಕಂಗಾಲಾಗುವೆ !

ನೀ ಒಂದು ದೈವತ್ವದಲ್ಲಿ ನಂಬಿ ಬೆಳೆದರೆ
ಹೆಜ್ಜೆ ಹೆಜ್ಜೆಗೂ ಒಂದಾದ ದೇವರಲ್ಲಿ ನಂಬಿಕೆ ಇಟ್ಟರೆ
ಏನೂ ಇಲ್ಲದ ನೀನು ಒಂದರ ಜೊತೆಗೆ ಒಂದಾಗಿ
ಒಂದು ಹತ್ತಾಗಿ . .ಹತ್ತು ನೂರಾಗಿ ಲಕ್ಷ ಕೋಟಿಯಾಗಿ, ಅಭೂತ ನಿರ್ಭೂತಗಳಾಗಿ

ಬ್ರಹ್ಮಾಂಡವನ್ನೇ ಆವರಿಸಕೊಂಡು ಬ್ರಹ್ಮಾಂಡವಾಗಿ
ಎಣಿಕೆಯ ವಸ್ತುವಾಗಿ ಎಲ್ಲವನ್ನು ಬೆಳೆಸುವ ಜೊತೆಗೆ
ಕೂಡಿಸುವುದು ಕಳೆಯುವುದು ಅತಿ ಅವಶ್ಯಕವಾಗಿರುವ ವಸ್ತುವಾಗಿ
ನೀನೇ ಗಣನೀಯ ವಸ್ತುವಾದ ಗಣಿತವಾಗಿ ನಿನ್ನ ಶಾಶ್ವತ ಜನ್ಮ ನೀಡಿದ ದೇವರು

ನಿನಗೆ ಭಾಗ್ಯವಂತರನ್ನಾಗಿ ಮಾಡಿ ಹಗಲು-ರಾತ್ರಿ ದೇವರ
ಜೊತೆಗೇ ನಿಂತು
ಜೀವಿಸುತ ದೇವರನ್ನು ಹೆಚ್ಚಿಸುವ ಸಮಯಗಳಲ್ಲಿ ನೀ ಮೌಲ್ಯವನ್ನು
ಹೆಚ್ಚಾಗಿಸುವ ಭಾಗ್ಯವಂತನಾಗಿ ಅಗಣಿತ ತಾರೆಗಳನ್ನು
ಜನ್ಮ ನೀಡುವ ಶೂನ್ಯ ಆಗಿರುವ ನಿನಗೆ ನಮೋ ನಮಃ

ಆದಿಯಾಗಿರುವ ದೇವರಿಂದ ನೀ ಶೂನ್ಯದ ಅರ್ಥ ತಿಳಿದು
ಬೆರೆತುಹೋಗಿ ದೈವತ್ವದ ಆಶೀರ್ವಾದ ಶೂನ್ಯದ ಹಾದಿಯಲ್ಲಿ
ಕಾಲವನ್ನು ಬೆರೆಸಿಕೊಂಡು ಹೊಸ ಹೊಸ ತರಂಗಗಳಾಗಿ
ತರಂಗಗಳಿಂದ ಸೃಷ್ಟಿ ರೂಪಕೊಂಡು

www.sriharikhoday.com

ದೈವತ್ವಕ್ಕೆ ಹೆಮ್ಮೆ ತರುವ ಶೂನ್ಯದಲ್ಲಿ ಬೆರೆತು
ವಿಶ್ವವನ್ನೇ ರುಂಡಾಕಾರವಾಗಿ ಬೆಳೆಸಿ
ಬ್ರಹ್ಮಾಂಡ ಚಾಲನೆಯ ಸುತ್ತುಸುತ್ತಾಗುವ
ವೃತ್ತಾಕಾರ ಸೊನ್ನೆಯಾಗಿರುವ ಕಾರಣ

ವಿಶ್ವವನ್ನೇ ಸುತ್ತಾಗಿಸುವಂತೆ ಮಾಡಿರುವೆ
ದೈವತ್ವದಲ್ಲಿ ಬೆರೆತಿರುವ ಕಾರಣ
ರಾತ್ರಿ ಹಗಲಿನ ಸಮಯಗಳು
ನಿನ್ನ ಮೇಲೆ ಒತ್ತಡ ತರಲಾಗದೆ

ನೀ ಕಾಲವನ್ನೇ ಆಟದ ಪಗಡೆಯಾಗಿ
ಒಂದಾಗಿರುವ ದೈವತ್ವದ ಜೊತೆಗೆ
ಭಾಗ್ಯ ಪಡೆದ ಭಾಗ್ಯವಂತನಿಗೆ
ನಮೋ ನಮಃ

ಭೂತ ಭವಿಷ್ಯಗಳ ಮಾಪಕನಾದ ನೀನು
ದೇವರಲ್ಲಿ ದೇವರ ಜೊತೆಯಾಗಿ ಬೆರೆತರೆ
ನಿನ್ನ ಜೊತೆ ಆದಿ ಮೂಲದ ಶಕ್ತಿಯ ರಹಸ್ಯಗಳನ್ನು
ನೀ ವರವಾಗಿ ಪಡೆದಿರುವೆ

ನಿನ್ನನ್ನು ನಂಬಿದವರು ಸೊನ್ನೆಯಿಂದ
ಭಾಗ್ಯವಂತರಾಗಿರುವರು ನಮೋ ನಮಃ

ನೀ ಸುಖದ ಮಾಪಕ
ನೀ ಕಷ್ಟದ ಮಾಪಕ
ನೀ ಹತ್ತಿರ, ದೂರದ ಮಾಪಕ
ನೀ ಆಯಸ್ಸಿನ ಮಾಪಕ

ಶೂನ್ಯದ ದರ್ಶನ ಮಾಡಿರುವ ಭಾಗ್ಯವಂತ
ಎಲ್ಲಾ ಶಾಸ್ತ್ರಗಳಿಗೆ ಆಧಾರ ಮಾಪಕವಾಗಿರುವ ನೀನು



ಕಾಲಕ್ಕೆ ಗಣಿಕೆಗಳ ರೂಪ ಕೊಟ್ಟಿರುವ ನಿನಗೆ
ವಿಶ್ವವೇ ತಲೆಬಗ್ಗಿಸಿ ನಯ ವಿನಯಗಳಿಂದ ಕ್ಷಣ ಕ್ಷಣದಲ್ಲಿಯೂ

ವಿಶ್ವದ ಶಕ್ತಿಯಲ್ಲಿ ಜೊತೆ ಬೆರೆತಿರುವ ನೀನು
ನಿನ್ನ ರೀತಿ . . ನೀತಿ
ನಿನ್ನ ಜೊತೆ ಎಲ್ಲಾ ವಿಶ್ವದ ಶಾಸ್ತ್ರಗಳು
ಇಂದು ಆಧಾರವಾಗಿದೆ

ನಿನ್ನ ಜೊತೆ ಯಾರೂ ಇಲ್ಲವೆಂದು ಹೇಳಬೇಡ
ದುಃಖದಿಂದ ಅಳಬೇಡ
ವಿಶ್ವವೇ ನಿನ್ನ ಜೊತೆಯಾಗಿದೆ
ನಂಬಿಕೆಯು ನಿನ್ನನ್ನು ಹುಟ್ಟಿಸಿದ ತಾಯಿ-ತಂದೆಯರು

ಸೃಷ್ಟಿಕರ್ತನ ನೆರಳಿನಲ್ಲಿಯೇ ಜೀವಿಸುತ್ತಿರುವ ಭಾಗ್ಯಶಾಲಿಯನ್ನು
ನೆನೆಯುತ ಅಭಾವವಿಲ್ಲದ ಬದುಕಲ್ಲಿ ನಿನ್ನದೇ ಆದ
ಭಾವನಾ ಪ್ರಪಂಚದಲ್ಲಿ ಜೊತೆಯಾಗಿ ಬೆಳೆಯುತ್ತಿರುವ ನಿನಗೆ
ನಮೋ ನಮಃ !

**-ಶ್ರೀ ಹರಿ.**

**25-03-2015**

www.sriharikhoday.com

## 912

ಸೊಬಗಿನ ಕಣ್ಣುಗಳಿಂದ ವಿಶ್ವ ತನ್ನ ಸೊಬಗನ್ನು ನೋಡುತ್ತಿದೆ
ಸೊಬಗನ್ನು ನೋಡಿ ಸೊಬಗಿನ ಜೊತೆ ಜೊತೆಯಾಗಿ
ದೇವರ ಸೃಷ್ಟಿಯಾದ ಕಣ್ಣುಗಳಿಂದ
ವಿಶ್ವದ ಸೊಬಗನ್ನೇ ನೋಡುತ್ತಿದೆ !

ತನ್ನ ಕಾಂತೆಯ ಕಣ್ಣುಗಳ ಜೊತೆ ಸೇರಿ
ನಮ್ಮ ಕಣ್ಣುಗಳು ದೇವರನ್ನು ನೋಡುತ್ತಿದೆ
ಪ್ರಕೃತಿಯ ಸೃಷ್ಟಿಕರ್ತ ದೇವರು
ಹೂವುಗಳಾಗಿ ತನ್ನ ಸೊಬಗನ್ನು ಬಣ್ಣ ಬಣ್ಣಗಳ
ರೂಪಗಳಿಂದ ಸೃಷ್ಟಿಗೇ ತೋರಿಸುತ್ತಿದ್ದಾನೆ !

ಸಿತಾರಲ್ಲಿ ಅಡಗಿರುವ ಅನೇಕ ಸದ್ದುಗಳು
ನಿಶ್ಶಬ್ದ ತಿಳಿದಿರುವ ಕಿವಿಗಳಿಗೆ
ಸದ್ದನ್ನು ಹೊರತರಿಸಿ ನಿಶಬ್ಧಕ್ಕೆ
ಸದ್ದಿನ ಸೊಬಗನ್ನು ತೋರಿಸುತ್ತಿದೆ !

ಬೆರೆಯುವುದೇ ವಿಶ್ವದ ನಿಯಮ
ಬೆರೆತು ತನ್ನದೆಂಬುದನ್ನು ಮರೆತು
ಕಳೆದುಹೋಗುವುದು ಸೃಷ್ಟಿಯ ನಿಯಮ
ಶಬ್ದ ನಿಶ್ಶಬ್ದವಾಗುತ್ತಿದೆ .. ನಿಶ್ಶಬ್ದ ಶಬ್ದವಾಗುತ್ತಿದೆ



ವಿಶ್ವದಲ್ಲಿ ಎಲ್ಲದರಲ್ಲಿ ಸ್ವಾತಂತ್ರ್ಯವಿರುವ ಕಾರಣ
ತಾನು ಎಂಬ ಸ್ವಾತಂತ್ರ್ಯ
ಬೇರೆಯವರ ಸ್ವಾತಂತ್ರ್ಯವನ್ನು ಮರೆತು
ಎರಡರ ಸ್ವಾತಂತ್ರ್ಯ ಒಂದಾದ ಮೇಲೆ

ಜೊತೆ ಒಂದಾಗಿ ಜೊತೆ ಸಂಬಂಧದ ಆನಂದ
ಆನಂದದ ಸೊಬಗನ್ನು ಅನುಭವಿಸುತ್ತ
ಕಾಲವೇ ಕಳೆದುಹೋಗಿರುವ ಅನುಭವ
ನೋಡುತ್ತಾ ನೋಡುತ್ತಾ ಸೌಂದರ್ಯದ ಸೊಬಗು

ನೀ ಇಲ್ಲದೆ ಕಳೆದುಹೋಗಿರುವ ಸತ್ಯ
ನಿಶಬ್ಧ ಸದ್ದುಗಳಲ್ಲಿ ಬೆರೆತು ಶಬ್ದವಾಗುತ್ತ
ಶಬ್ದವೇ ನಿಶ್ಶಬ್ದವಾಗುತ್ತ ಜೊತೆ ಅನುಭವಗಳಲ್ಲಿ
ದೇವರನ್ನು ಅನುಭವಿಸುತ್ತ ತಾನೇ ದೇವನಾಗುತ್ತ

ನಮ್ಮದು.. ನಿಮ್ಮದು ಮರೆಸುವ ನಿಶೆಯ ಬಟ್ಟಲು ಜೊತೆ
ಅಮಲು ಅಮಲಾಗದೆ ಸುಖದ ಅನುಭವವಾಗಿ
ಆ ಸುಖದ ಅನುಭವ ಆನಂದದ ಅನುಭವವಾಗಿ
ಎಲ್ಲದರಲ್ಲಿ ವಾತ್ಸಲ್ಯಗಳನ್ನು ತುಂಬುತ್ತ

ತಾನೇ ವಿಶ್ವವಾಗಿ ಕಣಕಣಗಳಲ್ಲಿ ಅಡಗಿರುವ ವಿಶ್ವ
ವಿಶ್ವದಲ್ಲಿ ಅಡಗಿರುವ ಒಂದು ಕಡೆ ವಿಶ್ವವೇ ಒಂದು ಕಡೆ
ಎಲ್ಲವೂ ನಾನೇ ಎಂದು ಹೇಳುವ ವಿಶ್ವ
ನಾನೇ ವಿಶ್ವವೆಂದು ಹೇಳುವ ಕಣಗಳು

ವಿಚಿತ್ರ ವಿಚಿತ್ರ ಅನುಭವಗಳು ದೇವರ ಅನುಭವಗಳಾಗಿ
ಮನೋಪಾವಿತ್ರ್ಯತೆ ಮನದಲ್ಲಿ ಹರಿಸಿ
ಹರಿಯುವ ಆ ಹೊಳೆ ಸಾಗರದ ಹೊಳೆಯಾಗಿ
ಸಾಗರಗಳು ತಮ್ಮ ತೃಪ್ತಿಯನ್ನು ತೋರಿಸಲು ಅಲೆ ಅಲೆಗಳಾಗಿ

www.sriharikhoday.com

ತುಂಬಿದ ದಡವನ್ನು ಮುತ್ತಿಡುತ್ತ
ಎಲ್ಲದರ ಸೊಬಗಿನಲ್ಲಿ ಸೌಂದರ್ಯವನ್ನು ಕಾಣುತ
ಎಲ್ಲಾ ರೀತಿಯ ಆನಂದಗಳು ದೈವ ಎಂಬುದರಲ್ಲಿ ಬೆರೆತಾಗ
ತಮ್ಮನ್ನು ತಾವೇ ಮರೆತು ಕ್ರಿಯಾಶೀಲರಾಗುವುದೇ ಸೊಬಗು

ಸೊಬಗಿನ ಸೃಷ್ಟಿಗಳೇ ದೇವರ ದೃಷ್ಟಿ
ವಿಶ್ವದ ಸೃಷ್ಟಿಯಲ್ಲಿ ಹುಟ್ಟುಸಾವುಗಳು ಇರುವ ಕಣ್ಣುಗಳಲ್ಲಿ
ದೇವರೆಂಬ ಸೊಬಗನ್ನೇ ನೋಡುತ್ತಿದೆ
ನೋಡುವ ರೀತಿ ತಿಳಿಯದೆ

ನಮ್ಮೊಲ್ಲಡಗಿರುವ ದೈವತ್ವ ನಮಗೇ ಕಾಣದಾಗಿಹುದು
ಸೊಬಗಿನ ಕಣ್ಣುಗಳಿಂದ ವಿಶ್ವದ ಸೊಬಗನ್ನು ನೋಡುತ್ತಿದೆ
ದೇವರ ಸೊಬಗನ್ನು ಒಳಗಣ್ಣುಗಳು ನೋಡದಾಗಿರುವ ಕಾರಣ
ಮನಸ್ಸಿನಲ್ಲಿ ಬೆಳಕಿಲ್ಲದೆ ಕತ್ತಲು ಬೆಳೆಯುತ್ತಿದೆ !

= **ಶ್ರೀ ಹರಿ.**

**26-03-2015**



## 913

ಬಡತನ ನಿರಂತರವಾಗಿ ಕಟ್ಟಿಕೊಂಡಿರುವ
ತನ್ನ ಜೋಳಿಗೆ
ಬಡತನಕ್ಕೆ ನಗೆಯನ್ನು ಮರೆಸಿ

ಹೊಟ್ಟೆಗೆ . .ಬಟ್ಟೆಗೆ ಎಂಬ ಚಿಂತನೆ
ಹಗಲು- ರಾತ್ರಿ ಆಗಿರುವುದು
ಬಡತನದ ಜೊತೆ ಬೆಸುಗೆ !

ಭೂತಾಯಿಯೇ ಹಾಸಿಗೆ
ಒಳಗೆ ಹೊರಗೆ ಒಂದಾಗಿರುವ ದಿನನಿತ್ಯದ ಬೆಳವಣಿಗೆ
ಬಡತನದ ನಡಿಗೆ !

ಕಷ್ಟಗಳಿಗೆ ಯಾರೂ ಜೊತೆಯಾಗದ ಹಗೆ
ಮುಖದ ಮೇಲೆ ಎಂದೂ ಕಾಣದ ನಗೆ
ಅಪ್ಪುಗೆಯ ಅರ್ಥ ತಿಳಿಯದ ಬಡತನ

ಯಾರೂ ಜೊತೆ ಸೇರಿಸಿಕೊಳ್ಳಲು ಬಯಸದ ಸೇವೆಗೆ
ಸಾಲು ಸಾಲು ವರುಷಗಳು ಕಳೆದರೂ
ಕಾಣಲಿಲ್ಲ ಶುಭಗಳಿಗೆ !

www.sriharikhoday.com

ನೀರು ತುಂಬಿಕ್ಕೊಣವೆಂದರೆ ಜೊತೆಗಿಲ್ಲ ಗಡಿಗೆ
ಜೀವನ ಮುಂದೆಳೆಯುತ್ತಿದೆ ಕುತ್ತಿಗೆಗೆ ಹಗ್ಗ ಹಾಕಿ
ಕಷ್ಟವನ್ನರಿಯದ ದೊಡ್ಡವರು ಕುಳಿತಿರುವರು ಗಲ್ಲಾಪೆಟ್ಟಿಗೆ ಜೊತೆಗೆ

ಕಾಸು ಹೊರಬರಲು ಹಣಕ್ಕೆ ತಿಳಿಯಲಿಲ್ಲ
ಬಡತನದ ಧರ್ಮದ ನಡಿಗೆ

ಇದೇ ರೀತಿ ನಡೆಯುತ್ತಿದೆ ಜೊತೆ ಸಂಬಂಧಗಳ ಕಳೆದುಕೊಂಡು
ಅಂದಿಗೆ . .ಇಂದಿಗೆ . ಸಂಬಂಧಗಳು ಸಡಿಲವಾಗಿ
ಬರುತ್ತಿರುವುದು ಹೇಳುತ್ತಿರುವುದು ಬಾಯಿಂದ ಉಫೇ ಉಫೇ !

ಕಷ್ಟಗಳ ಪಟ್ಟಿಯ ಬರವಣಿಗೆ
ಕಣ್ಣೀರೇ ಶಾಯಿಯಾಗಿ ಕಷ್ಟಗಳ ಪ್ರಶ್ನೆಗಳ ಪಟ್ಟಿ
ಕಾದು ಕಾದು ನಿಂತಿದೆ ಉತ್ತರಗಳಿಗೆ !

ಬಡತನ ತಾನಾಗಿ ಆಗಿರುವುದೋ
ತಾನೇ ಮಾಡಿಕೊಂಡಿರುವುದೋ
ಬೇರೆಯವರು ಮಾಡಿರುವುದೋ . .?

ಕಾಲದ ದ್ವೇಶವೋ ಒಂದೂ ಅರಿಯದೆ
ತಲೆಬಗ್ಗಿಸಿ ಸುಮ್ಮನೆ ಹೊರಗೆ ಜೋಳುಗೆ ಹಿಡಿದು
ದಕ್ಕಿದ ನಾಲ್ಕಡಿ ಅಕ್ಕಿಗೆ ತೆರೆದ ಕಣ್ಣುಗಳು ನೋಡುತ್ತಿದೆ !

ಬಡತನದ ಕಷ್ಟ ಸೂರ್ಯ ನೋಡುತ್ತಲೇ ಇದ್ದಾನೆ
ನೆರಳು ಜೊತೆಗೆ ಹಿಂದೆ ಬರುತ್ತಲೇ ಇದೆ
ಅದೇ ಗಾಳಿ ಬೀಸುತ್ತಲೇ ಇದೆ

ಬಡತನ ಚಾಲನೆ ಇಲ್ಲದೆ ಎಲ್ಲವೂ ವೇಗವಾಗಿ ಚಲಿಸುತ್ತಲೇ ಇದೆ
ಸುಖದ ಅಮೃತದ ಘಳಿಗೆಗೆ ಕಾದಿರುವ ಬಡತನ
ಶುಭ ಘಳಿಗೆಗೆ ಕಾದಿರುವ ಬಡತನ



www.sriharikhoday.com

ಅಂದಿಗೂ ಹೀಗೆ . .ಇಂದಿಗೂ ಹೀಗೆ ..
ಮುಂದೆಗೂ ಹೀಗೆ ಎಂದು
ನಮ್ಮ ಮನ ಸುಮ್ಮನಿದ್ದರೂ

ಯಾವ ಬೆಳವಣಿಗೆಯೂ ಕಾಣದೆ
ಕಾಲವನ್ನು ಸವಿಯುತ್ತ ಹಗಲು ರಾತ್ರಿಗಳ ಎಣಿಕೆ ತಿಳಿಯದೆ
ಭೂತಾಯಿಯ ಹಾಸಿಗೆಯ ಮೇಲೆ ಸ್ವಪ್ನಗಳೂ ಕಾಣದೆ

ಮನೋದೀವಟಿಕೆಯ ಬೆಳಕು ಹೊರಬರದೆ
ಸುಖದಿಂದ ಬಾಳಿ ಬದುಕುತ್ತಿರುವರು
ಬಡತನವನ್ನು ಜೊತೆ ಸೇರಿಸದೆ ಹಾಕಿರುವರು ಹೊರಗೆ !

**– ಶ್ರೀ ಹರಿ.**

**27–03–2015**

## 914

ಬೇರೆಯವರ ಬದುಕಿನ ಕತ್ತಲಿಗೆ
ನಾವು ಕಾಮನಬಿಲ್ಲನ್ನು ಕಟ್ಟೋಣ
ಕಣಕಣಗಳಲ್ಲಿರುವ ಬೇರೆಯವರ ಕಷ್ಟಗಳನ್ನು
ತೃಣವಿಲ್ಲದೆ ಆಳಿಸೋಣ !

ಒಳ್ಳೆಯದನ್ನು ಮಾಡುವುದು ನಮ್ಮ ಹುಟ್ಟುಗುಣವಾಗಿ
ಒಳ್ಳೆಯದು ಮಾಡುವುದು ಜನ್ಮಕ್ಕೆ ಭೂಷಣವೆಂದು
ಒಳ್ಳೆಯದು ಮಾಡುವುದೇ ಜೀವನದ ಒಂದು
ಉಪಕರಣವಾಗಿ ಎಲ್ಲರದಲ್ಲಿ ಪ್ರೀತಿಯನ್ನು ಅರಳಿಸೋಣ !

ಬೇರೆಯವರು ನಮ್ಮನ್ನು ನೆನೆದಾಗಲೆಲ್ಲ
ನಮ್ಮಲ್ಲಿ ಅವರ ಪ್ರೀತಿಯ ತೋರಣವನ್ನು ನೋಡಿ
ಜೊತೆ ಬೆರೆಯೋಣ
ವಿಶ್ವವೆಲ್ಲ ಹರಡಿಕೊಂಡಿರುವ ತಾರಾಗಣ

ಕಾಲವನ್ನು ಮರೆತು ತರುಣ ಭಾಷೆಯಲ್ಲಿ
ವಿಶ್ವವನ್ನೇ ವಶೀಕರಣ ಮಾಡಿಕೊಂಡು
ಪ್ರೀತಿಯ ವ್ಯಕ್ತಪಡಿಸುತ್ತಿರುವ ವಿಧಾನ ಕಿರಣವಾಗಿ
ಪ್ರೀತಿಯನ್ನು ಹರಿಸಲು ಕ್ಷಣವೂ ತಡಮಾಡದೆ

www.sriharikhoday.com



ಇರುವಿಕೆಯಲ್ಲಿ ಪ್ರಾಣ ಇರುವಂತೆ
ಕ್ಷಣ ಕ್ಷಣದಲ್ಲಿಯೂ ಪ್ರೀತಿಯ ಕಂಕಣ ಕಟ್ಟಿದ ಭಾಷೆಗಳು
ಪ್ರೀತಿಯನ್ನು ತೋರಿಸುವುದಕ್ಕೆ ಯಾವ ಕಡಿವಾಣವಿಲ್ಲದೆ
ಪ್ರೀತಿ ತುಂಬಿಕೊಂಡಿರುವ ಜೀವನ ನಿರೂಪಣೆ

ದೈವದತ್ತವಾಗಿ ಸುಖದ ಮನದ ಔತಣ
ಕ್ಷಣ ಕ್ಷಣದಲ್ಲಿಯೂ ಜರುಗುತ್ತಿದ್ದರೆ
ಪ್ರೀತಿ ಅತೀ ಮಧುರ . .
ಪ್ರೀತಿ ಅತೀ ಹಗುರ !

ಇಹಪರಗಳೆಲ್ಲವ ಅರಿತಿರುವ ಆಧಾರ
ಚಿರವಾಗಿ ದೇವರ ಜೊತೆ ವಾಸಿಸುತ್ತಿರುವ
ದೇವರ ಚರಣಗಳಲ್ಲಿ ಭಕ್ತಿಯ ಜೊತೆಗೆ ನಮಿಸಿದರೆ
ಪ್ರಕೃತಿಯನ್ನು ತಮ್ಮದಾಗಿಸಿಕೊಂಡು ಪ್ರೀತಿ – ವಾತ್ಸಲ್ಯದ ಜೊತೆ

ಹೊಂದುತ ನಿರ್ಮಾಣವಾಗಿ ಸಣ್ಣದಾದ ಪ್ರೀತಿ
ಕ್ರಮೇಣ ಪರ್ವತೋಪಾದಿಯಲ್ಲಿ ಬೆಳೆದು
ಜೀವನದ ಹೆಜ್ಜೆಗಳು ನಿಲ್ಲದೆ ಸತ್ಯದ
ಪ್ರಯಾಣ ಮುನ್ನಡೆಯುತ್ತಲೇ ಇದೆ

ಮೋಡ ಕವಿದ ಬೇರೆಯವರ ಮನದ ಕಷ್ಟದಲ್ಲಿ
ಅವಿತುಕೊಂಡಿರುವ ಕತ್ತಲಲ್ಲಿ ಕಾಮನಬಿಲ್ಲನ್ನು ತರಿಸೋಣ !

**– ಶ್ರೀ ಹರಿ.**

**28–03–2015**

## 915

ಪ್ರೀತಿಯ ದೀಪ ಎಲ್ಲರ ಮನದಲ್ಲಿಯೂ ಎಂದಿಗೂ ಬೆಳಗುತ್ತಿದೆ
ಕೋಪದ ತಾಪಗಳನ್ನು ಮರೆಸುವ ಪ್ರೀತಿ
ಕೋಪವನ್ನೇ ನಿರ್ಮೂಲ ಮಾಡುವ ಪ್ರೀತಿಯ ದೀಪದ ಬೆಳಕು

ಪ್ರೀತಿಯಿಂದ ಅಂತರಾಳವನ್ನು ಕಟ್ಟುವ ಪ್ರೀತಿಯ ಮಾತುಗಳು
ಶಿಷ್ಯನಿಗೆ ಗುರುವಿನ ಹರುಷದ ಮನದಲ್ಲಿರುವ ಪ್ರೀತಿ
ಮಾತಿನ ಲೇಪವಾಗಿ ಪ್ರೀತಿಯ ಪ್ರಜ್ವಲವನ್ನು ಹೆಚ್ಚಿಸುತ್ತಿದೆ !

ದಯೆಯ ಆದಿಯಲ್ಲಿರುವ ಪ್ರೀತಿ
ತಾಯ್ತನದಲ್ಲಿರುವ ಪ್ರೀತಿಯನ್ನು ಕಲಿಸುವ ಪ್ರೀತಿ
ನೆಂಟರಿಷ್ಟರು ಜೊತೆ ಮಾಡುವ ಪ್ರೀತಿ

ನೆರಳಾಗಿ ಜೊತೆಗಿರುವ ಅರ್ಧಾಂಗಿಯ ಪ್ರೀತಿ
ಶಿಷ್ಯನ ಮೇಲೆ ಗುರುಗಳಿಗಿರುವ ಪ್ರೀತಿ
ಜೀವನದಲ್ಲಿ ಎಂದೆಂದಿಗೂ ಜೊತೆ ಇರುವ ಪ್ರೀತಿ !

ಜೊತೆಯನ್ನು ಸಮರ್ಥಿಸುವ ಜೊತೆ ಪ್ರೀತಿ
ದುಡಿಯುವ ರೈತರಿಗೆ ಮಳೆಬರದೆ
ರೈತನ ಕಷ್ಟವ ನೋಡಿ ಅರಿತ ಮೋಡಗಳು



ಕೆಳಗಿಳಿದು ಮಳೆಸುರಿಸುವ ಮಳೆಯ ಪ್ರೀತಿ
ಪ್ರೀತಿಯಿಂದ ಪರಾಕು ಹೇಳುವ ಜನನಾಯಕನ
ಮೇಲೆ ಜನಗಳಿಗಿರುವ ಪ್ರೀತಿ

ಧ್ವಜ ಮೇಲೆತ್ತಿ ನಾಯಕನ ಜೊತೆ
ಜಯ ಘೋಷಿಸುವ ಜನತೆಯ ಪ್ರೀತಿ !

ರಂಗ ಮಂಟಪದಲ್ಲಿ ನಟನೆಗೆ ದೊರಕುವ ಚಪ್ಪಾಳೆಯ ಸದ್ದು
ಜನಗಳ ಅಂತರಾಳದಲ್ಲಿ ನಟನೆ ಮೇಲಿರುವ ಪ್ರೀತಿ

ತಾಯಿಯಲ್ಲಿ ಎಲ್ಲಾ ಮಕ್ಕಳ ಸಮಭಾವನೆಯ ಪ್ರೀತಿಯ ರೀತಿ
ಪ್ರೀತಿ ಒಂದು ದೇವರ ರೂಪ ತಾಳಿ
ದೀಪವೊಂದು ಮತ್ತೊಂದು ಬೆಳಕನ್ನು ಹಚ್ಚುತ್ತಾ ಹಚ್ಚುತ್ತಾ

ಸಂಬಂಧದ ಒಂದು ಸತ್ಯದ ಹಂಚಿಕೆ
ತಾತ್ಸಾರವಿಲ್ಲದೆ ಕೈಯಲ್ಲಿ ಎತ್ತಿಕೊಳ್ಳಲಾಗದ
ಪ್ರಯತ್ನಗಳಿಲ್ಲದೆ ಜೊತೆ ಜೊತೆ ಬರುವ ಪ್ರೀತಿ

ನಾವೆಲ್ಲ ಇಂದಿನಿಂದ ಎಲ್ಲರ ಮನದಲ್ಲಿ ಪ್ರೀತಿಯನ್ನು ಬೆಳಗಿಸೋಣ
ಎಷ್ಟು ಹಂಚಿದರೂ ಕಮ್ಮಿಯಾಗದ ಪ್ರೀತಿ
ಅಕ್ಷಯ ಪಾತ್ರೆಯಾಗಿ ಬೇರೆಯವರ ಮನದ ರೂಪದಲ್ಲಿ

ಪ್ರೀತಿ ಜೊತೆ ಸೇರಿ
ಸುಮ್ಮನಿರುವ ಸಮುದ್ರದಿಂದ ಅಲೆಗಳು ಹೊರಬರುವಂತೆ
ನಮ್ಮ ಪ್ರೀತಿಯ ಮನೋಸಾಗರದಿಂದ ಪ್ರೀತಿ ಅಲೆಯಾಗಿ
ಹೊರಬಂದು

ಬೇಡುವ ದಡಗಳಿಗೆ ಸೇರಿ ನೊರೆ ನೊರೆಯಾಗಿ ಪ್ರೀತಿಯನ್ನು ಹಂಚಿ
ಎಲ್ಲರ ಜೊತೆ ಸೌಹಾರ್ಧದಿಂದ ಅಭಿಮಾನವನ್ನು ಹಂಚಿಸುತ್ತ
ಅತಿ ಮೌಲ್ಯವಾದ ಪ್ರೀತಿಯನ್ನು ಮನದ ಆಳದಲ್ಲಿ ಬೆಳಗುತ್ತಿರುವುದ
ನೋಡಿ

www.sriharikhoday.com

ದ್ವೇಷ ಅಸೂಯೆಗಳನ್ನು ತಳ್ಳಿ ಹಾಕಿ
ದೇಹದ ಮೇಲೆ ಸೌಂದರ್ಯವನ್ನು ಮಿನುಗಿಸುತ್ತ
ಜೀವನದಲ್ಲಿ ಜೊತೆಗೆ ಪ್ರೀತಿ-ಪ್ರೇಮಗಳನ್ನು ಬೆಳೆಸಿಕೊಂಡು
ಜಗತ್ತಿನ ಎಲ್ಲಾ ಕಷ್ಟಗಳಿಗೆ ಸಿದ್ಧೌಷಧವಾಗಿರುವ
ಪ್ರೀತಿಯ ಬೆಳಕನ್ನು ಜೊತೆಯಲ್ಲೆಲ್ಲಾ ಸೇರಿಸಿ
ಒಂದು ಹೊಸ ಊರು . .ಹೊಸ ನಾಡು

ಹೊಸ ದೇಶ . .ಹೊಸ ಪ್ರಪಂಚವನ್ನೇ
ಪ್ರೀತಿಯ ಆಧಾರ ಮೇಲೆ ನಿರ್ಮಾಣ ಮಾಡಲು
ದ್ವೇಷವಿಲ್ಲದ ಭಾವನೆ ವಿಶ್ವಕ್ಕೇ ಆರೋಗ್ಯಕರ

ಪ್ರೀತಿಯ ವಾತಾವರಣವನ್ನು ಬೆಳೆಸೋಣ
ಆನಂದ ಬಾಷ್ಪವನ್ನು ಆನಂದದಿಂದ ಸುರಿಸೋಣ
ಸಿರಿತನದ ಸುಖದಲ್ಲಿ ಬಡತನದ ಸುಖದಲ್ಲಿ

ಎರಡರಲ್ಲಿ ಒಂದೇ ಪ್ರೀತಿಯಿರುವ ಕಾರಣ
ಎಲ್ಲರ ಮನದಲ್ಲಿ ಪ್ರೀತಿಯ ದೀಪದ ಬೆಳಕನ್ನು ಬೆಳಗಿಸೋಣ
ಆನಂದದಿಂದ ಜೊತೆ ಸೇರಿ ಬದುಕೋಣ !

**- ಶ್ರೀ ಹರಿ.**

**29-03-2015**



## 916

ಜೊತೆ ಜೀವಿಸುವುದೇ ಜೀವನ
ಎಲ್ಲರ ಜೊತೆ ಬಾಳುವುದೇ ಜೀವನ
ಎಲ್ಲರಲ್ಲಿ ಬೆರೆತು ಜೀವನವನ್ನು ಕಲಿಯುವುದೇ ಪಾವನ !

ಪ್ರೀತಿಯ ಅಧೀನ ಜೊತೆ ಜೀವನ
ಕ್ಷಣ ಕ್ಷಣದಲ್ಲಿಯೂ ಜೊತೆ ಜೀವನದಲ್ಲಿ ಕಾಣುವೆವು ನೂತನ
ಜೀವಿಸಿ ಹರುಷದಿಂದ ದೊರಕುವ ಬಂಧನ
ಕರೆಸುವುದು ಮಮಕಾರ ತುಂಬಿದ ಆಲಿಂಗನ !

ಅಲ್ಪತನವನ್ನು ಕಳೆದು ಅಂತರಾಳದಲ್ಲಿ ಬೆಳೆಸಬೇಕು
ಜೊತೆ ಜೊತೆ ಅಭಿಮಾನ
ಜಾಣತನ ಬೇಡದ ಜೊತೆ ಜೀವನವೇ ದೊಡ್ಡತನ
ಸಿರಿತನ ಬಡತನ ಮರೆತು ಜೀವಿಸುವುದೇ ಮಾನವನ ಹಿರಿತನ !

ಮೌನದಲ್ಲಿ ಮಾನದಿಂದ ಬಾಳಿ ಸಮಾನ ಮಾನ್ಯತೆಗಳನ್ನು ನೀಡುತ
ಬೇರೆಯವರಲ್ಲಿ ವಿಶ್ವಾಸ ಬೆಳೆಸಿ
ಅವರು ತಮ್ಮಲ್ಲಿ ವಿಶ್ವಾಸ ಬೆಳೆಸಿಕೊಂಡರೆ
ಬೇರೆಯವರ ಜೀವನಕ್ಕೆ ಆದೆವು ನಾವು ಉಪಮಾನ !

ಯಾವುದೂ ಉದಾಸೀನವಿಲ್ಲದೆ
ದಿನವೂ ಜನುಮದಿನಗಳಾಗಿ ಅನುಮಾನಗಳನ್ನು ಬದಿಗೊತ್ತಿ

www.sriharikhoday.com

ಅನೇಕ ವಿಷಯಗಳನ್ನು ಸ್ವಾಭಿಮಾನದಿಂದ ಬಣ್ಣಬಣ್ಣಗಳನ್ನು ನೋಡಿ
ರೋಮಾಂಚನ ರೀತಿಯಲ್ಲಿ ಗ್ರಹಿಸಿಕೊಂಡು
ಎಲ್ಲರ ಜೊತೆ ಮನದ ನಿದರ್ಶನ
ತೊಂದರೆಗಳನ್ನೆಲ್ಲ ದೂರ ಇಟ್ಟು
ಶುದ್ಧವಾದ ಮನಸ್ಸಿನಿಂದ ದಿಗ್ಬಂಧನವನ್ನು
ಕಷ್ಟಗಳಿಗೆ ಅಡ್ಡವಾಗಿಸಿ

ಪ್ರೀತಿ-ವಿಶ್ವಾಸಗಳಿಂದ ಜೊತೆ ಜೀವಿಸುತ
ಯಾರೂ ಮಾಪನ ಮಾಡಲಾಗದಷ್ಟು ಪ್ರಗತಿಯನ್ನು ಸಾಧಿಸಿ
ಎಲ್ಲದರಲ್ಲಿಯೂ ಶೋಧನಾ ರೂಪದ
ಮಾನಸಿಕ ವಿಜ್ಞಾನವನ್ನು ಉಪಯೋಗಿಸುತ

ನಾವು ಬೇರೆಯವರಿಗೆ ಸ್ವಾಧೀನವಾಗೋಣ
ಮನತೊಟ್ಟ ಕೆಲಸವನ್ನು ಸಮಾಧಾನದಿಂದ ಸಾಧಿಸೋಣ
ಜೊತೆ ಕಾಲ ಕಳೆಯುತ ಇತಿಹಾಸ ಲೇಖನವನ್ನು ಬರೆಯುತ

ಅನುದಿನವೂ ಜೊತೆ ಜೀವನವನ್ನು ಸುಖ ಜೀವನವನ್ನಾಗಿ
ಪರಿವರ್ತಿಸಿ
ಎಲ್ಲರ ಜೊತೆಗೆ ಬಾಳಿ ಬದುಕಿ ತೋರಿಸುತ
ಜೀವನ ಕಳೆಯುತ
ಜೀವನದ ಸುಖ ಅನುಭವಿಸುತ ಪಾವನರಾಗೋಣ !

**– ಶ್ರೀ ಹರಿ.**

**01-04-2015**



# 917.

ಶತ್ರುಗಳು ಹೊರಗಿಲ್ಲ
ಎಲ್ಲರಿಗೂ ಎಲ್ಲಾ ಶತ್ರುಗಳು ಮನದಲ್ಲೇ ವಾಸಮಾಡಿಕೊಂಡು
ಎಂದಿಗೂ ಆಗುವುದಿಲ್ಲ ಖಾಲಿ !

ಸದ್ದಿಲ್ಲದೆ ತೆಗೆದುಕೊಳ್ಳುತ್ತಿರುವರು ನಮ್ಮನ್ನೇ ಬಲಿ ಆಗಿರುವುದು
ಜೀವನ ಶೈಲಿ
ನಮ್ಮ ನಡೆ ನುಡಿಗಳು ಶತ್ರುಗಳು ವಾಸವಾಗುತ್ತಿರುವ ಕಾರಣವಾಗಿ
ನಗೆಯಾಗಿ ನಮ್ಮನ್ನು ಮಾಡುತ್ತಿರುವವರು ಗೇಲಿ !

ಜೋಕಾಲಿ ಆಡುವ ಬದಲು
ಜನರು ಆಡುತ್ತಿರುವವರು . ಆಡಿ ನಮ್ಮನ್ನು
ಸ್ವೀಕರಿಸುತ್ತಿರುವರು ನಮ್ಮ ನರಬಲಿ

ಮನಕ್ಕೆ ಧೈರ್ಯ ನೀಡಿ
ಮನವನ್ನು ಶಕ್ತಿಶಾಲಿಯನ್ನಾಗಿ ಮಾರ್ಪಡಿಸಿದರೆ
ಸುತ್ತಿರುವ ಗಲಿಬಿಲಿಯೆಲ್ಲಾ ಖಾಲಿಯಾಗಿ

ನಮ್ಮ ಜನ್ಮಕುಂಡಲಿಯನ್ನು ಬದಲಾಯಿಸಿದಂತೆ
ಕೀರ್ತಿಶಾಲಿಯಾಗುವ ಮಾರ್ಗದಲ್ಲಿ
ಅದೃಷ್ಟಶಾಲಿಯಾಗಿ ಮಾರ್ಪಡಿಸಿಕೊಂಡು

ಮನದ ಶತ್ರುತ್ವವನ್ನು ಕೈಕೊಡಲಿಯಿಂದ ಕತ್ತರಿಸಿ
ನಮ್ಮ ಜೀವನ ರಸ್ತೆಗೆ ಬರೆಯೋಣ
ಹೊಸ ಮೈಲಿಗಲ್ಲು !

www.sriharikhoday.com

ಖಾಲಿಯಾಗಿರುವ ಮನಸ್ಸು ತೃಪ್ತಿಯಿಂದ ಅಂಬಲಿ ಕುಡಿದು
ನಕಲಿ ಜೀವನವನ್ನು ಬಿಟ್ಟು
ಪ್ರೀತಿಯನ್ನು ಎಲ್ಲರ ಮನದಲ್ಲಿ ವಸೂಲಿ ಮಾಡುತ್ತ

ಪಕ್ಷಿಗಳ ಚಿಲಿಪಿಲಿ ಜೊತೆಗೆ ಸೇರಿಕೊಂಡು ಸಂತಸದಿ ಶತ್ರುಗಳಿಲ್ಲದ ಜೀವನ

ಶತ್ರುಗಳೆಲ್ಲ ನಮ್ಮ ಮನದ ಆಪ್ತರನ್ನಾಗಿ ಮಾಡಿಕೊಂಡು
ಹೊಸದಾಗಿ ಕಟ್ಟೋಣ ಪ್ರೀತಿಸುವ ಸ್ನೇಹಿತರ ಮಂಡಲಿ

ಹೊರಗಿರುವ ಶತ್ರುಗಳನ್ನು ಮನದಲ್ಲಿರುವ ಶತ್ರುತ್ವವನ್ನು
ಮಂಡಲಿಯ ಸದಸ್ಯರನ್ನಾಗಿ ಮಾಡಿಕೊಂಡು
ಮಾಡೋಣ ಶತ್ರುತ್ವಕ್ಕೆ ಬಲಿ !

**– ಶ್ರೀ ಹರಿ.**

**02–04–2015**



# 918

ತಾನು ಏನೆಂದು ಅರಿಯದ ಪ್ರಕೃತಿ
ಸಾಧನೆಯೇ ಗುರಿಯಾಗಿರುವ ಪ್ರಕೃತಿ
ಅರಿವೇ ಇಲ್ಲದೆ ಎಲ್ಲವನ್ನು ತಿಳಿದಿರುವ ಪ್ರಕೃತಿ

ಊಹಾಪೋಹಗಳ ಅರಿಯದ ಸತ್ಯದಲ್ಲಿ ಬೆರೆತು
ತಾನೇ ಸತ್ಯವಾಗಿ ಉಳಿದಿರುವ ಪ್ರಕೃತಿ
ವಿಶ್ವಕ್ಕೆ ತನ್ನ ಸ್ವಭಾವದಲ್ಲೇ ಪ್ರಗತಿಯ ತೇಲಿಸುತ್ತ

ಎಲ್ಲರ ಜೊತೆಗೆ ಸಂಗಾತಿಯಾಗಿ
ತನ್ನ ಅಂತರಾಳದಲ್ಲಿರುವ ಅಂತರ್ಜ್ಯೋತಿಯ ಜೊತೆಗೆ
ಕಾಣದ ಜ್ಯೋತಿ ಪ್ರಕೃತಿ !

ಎಲ್ಲದರಲ್ಲಿ ಗರ್ಭವ ತರಿಸುವ ಗರ್ಭವತಿ ಪ್ರಕೃತಿ
ಎಲ್ಲ ಋತುಗಳಿಗೆ ಮತಿ ನೀಡುವ ಋತುಮತಿ
ವಿಶ್ವದ ಜೊತೆಗಾತಿ ಪ್ರಕೃತಿ !

ದಾಖಲಾತಿ ಮಾಡಲಾಗದ ಪ್ರಕೃತಿ
ಕಾಲ ಸವೆದರೂ ತಾನು ಇರುವುದು ಯಥಾಸ್ಥಿತಿ
ಹಸ್ತಪ್ರತಿ ಬಿಡದೆ ಎಂದಿಗೂ ತಾರುಣ್ಯ ವ್ಯವಸ್ಥೆಯಲ್ಲಿ

www.srikharikhoday.com

ತನ್ನ ಇರುವಿಕೆಯ ಸಾಗಲ್ಲಿ ತಾನೇ ತಾರುಣ್ಯ ಪ್ರೀತಿಯಾಗಿ
ಸಮಯಕ್ಕೆ ಸರಿಯಾಗಿ ಋತುಗಳ ಜೊತೆಗೆ
ಹಾಕುತ್ತಿರುವಳು ಹಾಜರಾತಿ !

ತನ್ನದೇ ಆದ ರಾಜನೀತಿ
ಆಳುವವರು ಯಾರೂ ಇಲ್ಲದೆ
ಹಿಂದೆ ಮುಂದೆ ತಿಳಿಯದ . .ಯಾವ ಫಾಯಿದೆಯೂ ಪಡೆಯದ

ಹಾಸ್ಯಗಳಿಗೆ ಯಾವ ಗಾದೆಗೂ ಸಿಲುಕದೆ
ಹೂವಿನಿಂದ ಚಿಟ್ಟೆಗೆ . .ಬೀಜದಿಂದ ಗಿಡಕ್ಕೆ
ಗಿಡದಿಂದ ಫಲಕ್ಕೆ

ಸೂರ್ಯ ಉದಯಾಸ್ತಮಗಳಿಗೆ ಜೊತೆಯಾಗಿ
ತಾನು ವರ್ತಮಾನದಲ್ಲಿ ಇದ್ದು ವಾಸಿಸುತ್ತಿರುವ
ಸಕಾಲದಲ್ಲಿ ಉಪಸ್ಥಿತಿಯಾಗುವ ಪ್ರಖ್ಯಾತಿ ಪ್ರಕೃತಿ !

ಅಹಂಕಾರ ಬರಕೂಡದೆಂದು
ತಾನು ಸೃಷ್ಟಿಸಿರುವ ಎಲ್ಲದರಲ್ಲಿಯೂ
ಅರಿವನ್ನು ಸೆಳೆದು ಹೊರಹಾಕಿ

ಸೂರ್ಯನಿಗೆ ಕ್ಷಣ ಕ್ಷಣದಲ್ಲಿ ತನ್ನ ಹುಟ್ಟನ್ನು ಮರೆಸಿ
ಸಮುದ್ರಕ್ಕೆ ತನ್ನ ಆಳವನ್ನೇ ತಿಳಿಸದೇ
ನದಿಗೆ ಎಲ್ಲಿ ಹೋಗುತ್ತಿರುವನೆಂದು ಅರಿವಿಲ್ಲದೆ

ಮೋಡಗಳಿಗೆ ಕರಗುವ ದೆಸೆ ತಿಳಿಯದೆ
ಸಹಾನುಭೂತಿಯ ಸಮಸ್ಥಿತಿಯಿಂದ ಯಾವ ಅವನತಿ ಕಾಣದೆ
ಎಲ್ಲರಲ್ಲಿ ಅರ್ಥದ ಗರ್ಭಧಾರಣೆ ಮಾಡಿಸಿ

ಬಣ್ಣಗಳ ಜೊತೆಗೆ ಜೊತೆಗಾತಿ
ಸ್ವಾದದ ಜೊತೆಗೆ ಜೊತೆಗಾತಿ
ಇದು ಹೊಸ ಹೊಸ ರೀತಿಯ ಗಡಿಯ ಅನುಭವ ನೀಡಿ



ಎಲ್ಲವನ್ನು ಯಥಾಸ್ಥಿತಿಯ ಗತಿಯಲ್ಲಿ
ತನ್ನ ಹಸ್ತಪ್ರತಿಯಾಗಿಸುತ್ತ ದಾಖಲಾತಿ ಹಾಕುತ್ತ
ಯುಗಗಳು ಕಳೆದರೂ ಉಪಸ್ಮಿತವಾಗುತ್ತ
ತನ್ನ ಅಂತರಾಳದ ಜ್ಯೋತಿಯಲ್ಲಿ ತಾನೇ ಜ್ಯೋತಿಯಾಗಿ
ಬೆಳಗುತ್ತಿರುವಳು ನಮ್ಮಗಳಲ್ಲಿ ತಾರುಣ್ಯ ಪ್ರೀತಿಯ
ಸಮಸ್ಥಿತಿಯ ಜೊತೆಗಾತಿ ಪ್ರಕೃತಿ !

**– ಶ್ರೀ ಹರಿ.**

**03-04-2015**

## 919

ನನಗೆ ಹೆದರಿಕೆ ಇದೆ ಎಂದರೆ
ನನಗೆ ನಾನೇ ಅಪಾಯಕಾರಿ
ಬೇರೆಯವರಿಗೂ ಅಪಾಯಕಾರಿ
ಈ ಸೂಕ್ಷ್ಮವನ್ನು ಇಂದು ಅರಿ

ಮನೋ ಕ್ರೂರತ್ವ
ಸುಮ್ಮನಿರದೆ ಎಲ್ಲೆಡೆಯು ಜಾರಿ
ಸಾರಿ . . ಸಾರಿ ಎಂದು ಮಾತು ಮಾತಲ್ಲಿ
ಬೆಳೆಸುವುದು ಹೊಸ ವೈರಿ !

ಬುಗುರಿಯಂತೆ ತಿರುಗುತ್ತಿರುವ ನಮ್ಮ ಮನಸ್ಸು
ಮನಸ್ಸಿನ ಜೊತೆ ಮತ್ತೊಂದು ಮನಸ್ಸು
ಹಗಲು-ರಾತ್ರಿ ನಡೆಸುತ್ತಿದೆ ಪಿತೂರಿ
ಕೊನೆಗೆ ಪಡೆಯುವುದು ಜನಗಳ ಛೀಮಾರಿ . .!

ಸತ್ಯವಾಗಿ ಮನಸ್ಸಿನ ಮೇಲೆ ನಾವು ಮಾಡಬೇಕು ಸವಾರಿ
ಎಲ್ಲರಲ್ಲಿ ಆಗಬೇಕು ನಾವು ಮಾದರಿ
ಜನ್ಮತಾಃ ಬೆಳೆದಿರುವ ಮನಸ್ಸು ಉದಾರಿ
ನಮ್ಮ ಅಹಂಕಾರದಿಂದ ಮನಸ್ಸಿನ ಹಾದಿ ತಪ್ಪಿಸಿ



ದಿನಚರಿಯಲ್ಲಿ ನಾವು ಅನುಭವಿಸುತ್ತಿರುವೆವು
ಕೆಟ್ಟ ಮನಸ್ಸಿನ ಗುಲಾಮಗಿರಿ
ಸಮಯ ಬಂದಿದೆ ಮನಸ್ಸನ್ನು ಮಾಡೋಣ ಕ್ರಾಂತಿಕಾರಿ
ಮನಸ್ಸನ್ನು ಗೆದ್ದಿರುವ ಸಂತಸವೇ ಜಯಭೇರಿ !

ನಮ್ಮ ಮನಸ್ಸಿಗೆ ನಾವೇ ಆಗೋಣ ರಾಯಭಾರಿ
ಸೀಳು ಬಾರಿಯನ್ನು ಬಿಟ್ಟು ದಿನಚರಿಯ ದಾರಿಯಲ್ಲಿ ನಡೆಯೋಣ

ದೇವರು ತೋರಿಸಿರುವ ಹೆದ್ದಾರಿ
ಭಕ್ತಿಯಿಂದ ತಲೆಬಗ್ಗಿಸಿ
ಸೂತ್ರಧಾರಿಯಾದ ದೇವರನ್ನು ನಂಬಿ
ಸಂತಸದಿಂದ ಹೊಸ ದಿನಚರಿಯ ಹಜ್ಜೆ ಹಾಕೋಣ

ನಮ್ಮ ಮನಸ್ಸಿನಲ್ಲಿ ನಡೆಸೋಣ ಹೆದರಿಕೆಯಿಲ್ಲದ ದಿನಚರಿ
ಬೇರೆಯವರಿಗೆ ಅಪಾಯಕಾರಿ ಆಗದೆ
ಇಂದಿನಿಂದ ಆಗೋಣ ಬೇರೆಯವರಿಗೆ ಉಪಕಾರಿ
ಇದೇ ದೇವರು ಕೊಟ್ಟಿರುವ ನಮಗೆ ಜೀವನದ ರಹದಾರಿ !

**– ಶ್ರೀ ಹರಿ.**

**04-04-2015**

www.sriharikhoday.com

# 920.

ಆತ್ಮದ ಸಂತೋಷ ಶ್ರಮದ ಫಲ
ಶ್ರಮವಿಲ್ಲದ ಫಲ ಫಲವಲ್ಲ
ಶ್ರಮಜೀವಿಗೆ ಹಗಲೇ ಚಾಪೆಯ ಮೇಲೆ
ಹೊಸ ಕನಸು ಬೀಳುತ್ತದೆ !

ಹೆದರದೆ ಕೆಲಸದಲ್ಲಿ ಜೊತೆ ಸೇರಿಕೊಳ್ಳುವುದು
ಪ್ರಜ್ವಲ ಭಾವನೆ . . .
ಶ್ರಮದಲ್ಲಿ ಕಷ್ಟವನ್ನು ಮರೆಯುವುದು ಆತ್ಮಬಲ . .!

ಮನೋಜಾಲಕ್ಕೆ ಏಕತೆ ಕಲಿಸದೇ ಇದ್ದರೆ
ತನ್ನ ಘನತೆ . .ತನ್ನ ದಕ್ಷತೆ . ಬರೀ ಚಪಲವಾಗಿ
ಜನದ ಬಲ ಕೋಮಲತೆ ಕಳೆದುಕೊಂಡು
ಕಾಲಬಲದ ಶಕ್ತಿ ಶೀತಲವಾಗುತ್ತದೆ !

ಹಗಲು ರಾತ್ರಿ ಪ್ರತಿಫಲವನ್ನು ಬಯಸುತ್ತಿರುವ ಜೀವಿ
ತಮ್ಮ ಭಾವನೆಗಳಲ್ಲಿ ದಕ್ಷತೆ ಕಳೆದುಕೊಂಡು
ಹದವಿಲ್ಲದೆ ಊಹಾಪೋಹಗಳ ಸಂತೆಯಲ್ಲಿ
ಸಫಲತೆ ಕೋಳಿಜಗಳಗಳ ಕತೆಯಾಗಿ ಮನೋಜಾಗ್ರತೆ
ಕಳೆದುಹೋಗುವುದು !



www.sriharikhoday.com

ಮನಸ್ಸು ಕೋಮಲವಾಗಿ ಶ್ರಮ ಶಾರೀರಿಕವಾಗಿ
ಕೆಲಸ ಮಾಡುವುದೇ ಜೀವನದ ಚಪಲವಾಗಿ
ಕೆಲಸದ ಕ್ರಿಯೆಗಳೇ ದೇಗುಲ ಎಂದು ನಂಬುತ
ಪಾವಿತ್ರತೆಯ ಜೀವನದ ನವ ಕವಿತೆ ಬರೆದು

ಶ್ರಮಕ್ಕೆ ಫಲ ಗುರಿಯಾಗದೆ
ಶ್ರಮ ಶ್ರಮವಾಗಿ ನೆಲದ ಮೇಲೆ ಮಲಗಿ
ಹೊಸ ಸ್ವಪ್ನಗಳನ್ನು ಮುಂದಿನ ತನ್ನ ಕೆಲಸವೆಂದು ಆಯೋಜಿಸುತ್ತ
ದ್ವೇಶವಿಲ್ಲದ ಕಣ್‌ರೆಪ್ಪೆಗಳ ಬಾರದ ನಿದ್ರೆ

ಚಾಪೆಯ ಮೇಲೆ ಹಗಲಲ್ಲೇ ಕನಸು
ಮನದಲ್ಲಿ ಪ್ರತಿಬಿಂಬವಾಗುತ್ತಿದೆ !

ಆತ್ಮನ ಸಂತೋಷಕ್ಕೆ ಕ್ರಮವೇ ಕಾರಣ
ಶ್ರಮಜೀವಿಯಾದ ಪ್ರಕೃತಿಗೆ ನಾವು ಜೊತೆ ಸೇರಿಕೊಂಡರೆ
ಎಲ್ಲಾ ದಿಗಂತದಲ್ಲಿ ಕಾತುರತೆ ಗಂಭೀರವಾಗಿ
ಫಲ ಸಫಲತೆಯ ಸಂತೋಷವನ್ನು ಹರಿಸುತ್ತದೆ

**– ಶ್ರೀ ಹರಿ.**

**09-04-2015**

## 921.

ನನ್ನ ಮನಸ್ಸಿನಲ್ಲಿ ನಾನು ಇಲ್ಲದ ಹೊತ್ತು
ನನ್ನ ಪ್ರಾಯಕ್ಕೆ ನಾನು ಇಲ್ಲ ಎನ್ನುವುದು ಗೊತ್ತು !

ತಾನೇ ಹಿಗ್ಗುತ್ತ ಹಿಗ್ಗುತ ಪ್ರಾಯ
ಹೊಸದರ ಜೊತೆಗೆ ಮಾಡಿಕೊಳ್ಳುವುದು ಲಗತ್ತು
ಪ್ರೀತಿ-ಪ್ರೇಮಗಳೇ ಸೌಭಾಗ್ಯವೆಂದು ಹೇಳುತ್ತಿರುವ
ಪ್ರಾಯದ ಯೌವ್ವನ

ಹೆಸರಿಡಲು ತಿಳಿಯದೆ ಹೇಳುವುದು
ನನಗೆ ಪ್ರೀತಿ-ಪ್ರೇಮಗಳ ಸಂಪತ್ತು !
ಜೊತೆ ಎಣಿಸುತ್ತಿರುವ ಎಣಿಕೆಯಿಲ್ಲದ ಆಣಿಮುತ್ತು
ಸಂತಸದ ಫಲವತ್ತಿನಲ್ಲಿ ಜಗವನ್ನೇ ಮರೆಸಿತ್ತು !

ಪ್ರಯತ್ನವಿಲ್ಲದೆ ರಸನಿಮಿಷಗಳ ನೆನಪುಗಳು
ಆಯಿತು ನನ್ನ ದತ್ತು
ಮತ್ತೆ ಮತ್ತೆ ನಾನಿಲ್ಲದ ಮನಸ್ಸಿನಲ್ಲಿ
ಯೌವ್ವನದ ಕೂಗಿನ ಪ್ರತಿಧ್ವನಿ ನನ್ನ ಎಚ್ಚರಿಸುತ್ತಾ !

ಕಣ್ತೆರೆದು ನೋಡಿದರೆ ನನಗೇ ತಿಳಿಯದೆ
ನನ್ನ ಮನಸ್ಸಿನಲ್ಲಿ ನಡೆಯುತ್ತಿದೆ ಪ್ರಾಯದ ದೌಲತ್ತು



ನಾನೇನು ಕಮ್ಮಿ ಇಲ್ಲ ನಿನ್ನನ್ನು ಮೀರಿಸಬಲ್ಲೆನೆಂಬ
ತೋರಿಕೆಯ ತಾಕತ್ತು

ನನ್ನ ಮನಸ್ಸಿನಲ್ಲೇ ನಾನು ಪರಿವರ್ತನವನ್ನು ಅವಲಂಬಿಸಿ
ಸೃಷ್ಟಿ ಮಾಡಿಕೊಂಡಿರುವೆ ನನ್ನ ಮನಸ್ಸಿನಲ್ಲಿ ಒಂದು ಜಗತ್ತು !

ಕಾಲದ ಅನುಭವವಾದ ಮೇಲೆ ಪ್ರಕೃತಿಯನ್ನು ಕಣ್ತೆರೆದು
ನೋಡಿದಾಗ

ಕಾಣಿತು ನನಗೆ ಯೌವ್ವನದ ಗಮ್ಮತ್ತು
ಅರಿವಾಯಿತು ಅರಿವಿನಿಂದ ಅನುಭವಿಸಿ ಇಳಿಹೊತ್ತಿನಲ್ಲಿ
ಮನದಲ್ಲಿ ಹೊಸ ಜೀವನದ ಯುಗದ ಪ್ರಾರಂಭದ ಹೊತ್ತು

ನಾ ಕರೆಸಿಕೊಂಡೆ ಕಾಂತೆಯನು
ಈ ಇಳಿಹೊತ್ತಿನಲಿ ಮುತ್ತು ನೀಡುವ ಸಿಹಿಹೊತ್ತು
ನಿನಗೋಸ್ಕರ ಕಾದಿದೆ ಎಂದು ಕರೆದೆ
ಪ್ರಕೃತಿಯ ಲೀಲೆಗಳ ನೆರಳು

ಪ್ರಕೃತಿ ಜೊತೆಗಿರುವ ದೇವರನ್ನು ಜೊತೆ ಕರೆಸಿಕೊಂಡು ಒಂದು
ಪ್ರಕೃತಿ ಹೇಳಿತು ಈ ಇಳಿ ಹೊತ್ತಿನಲ್ಲಿ
ಶುರು ಮಾಡೋಣ ಇಂದಿನಿಂದ ಜೀವನದ ಬಾಬತ್ತು
ನಮಗೋಸ್ಕರವಾಗಿಯೇ ಕಲ್ಪಿತವಾಗಿರುವ ಹೊತ್ತು

ನನ್ನ ಮನಸ್ಸಿನಲ್ಲಿಯೇ ನಾನು ಇಲ್ಲದ ಹೊತ್ತು
ನನ್ನ ಪ್ರಾಯದಲ್ಲಿ ನಾನೇ ಎಲ್ಲದರಲ್ಲಿ ಬೆರೆತು
ಆಣಿಮುತ್ತುಗಳಂತಿರುವ ಮುತ್ತುಗಳಿಗೆ
ಕಾಲ ನಮ್ಮ ಜೊತೆಗೇ ಕಳೆಯಿತು !

**- ಶ್ರೀ ಹರಿ.**

**10-04-2015**

www.sriharikhoday.com

## 922

ಪ್ರೀತಿ ಒದಗಿಸುವ ಶಕ್ತಿ
ಸರಿ ನ್ಯಾಯ ಒದಗಿಸುವ ಶಕ್ತಿ
ಇದೇ ಜೀವನದ ಜೊತೆ ಜೀವಿಸುವ ಶಕ್ತಿ !

ಸರಿ ಪ್ರೀತಿಯನ್ನು ನಾವು ಮನದಲ್ಲಿ ಉತ್ಪತ್ತಿ ಮಾಡುತ್ತಿದ್ದರೆ
ತನ್ನನ್ನೇ ತಾನು ದೇವರ ಜೊತೆಗೆ ಜಾರಿಸಿ
ಜಾರುತ್ತಾ. .ಜಾರುತ್ತಾ ದೇವರ ಜೊತೆ
ನಂಬಿಕೆ ಹೆಚ್ಚಾಗಿ ಭಕ್ತಿ ಉದ್ಭವಿಸುತ್ತದೆ !

ಭಕ್ತಿ ದೇವರಿಗೆ ನಮ್ಮನ್ನು ಜೊತೆ ಬೆರೆಸಿ ಜೊತೆಯಾಗಿಸಿ
ದೇವರಲ್ಲಿ ಬೆರೆಯುವುದು ಸಹಜವಾಗಿ
ಭಕ್ತಿಯಿಂದ ನ್ಯಾಯವಾಗಿರುವ ಫಲಗಳು ಹಿಂಬಾಲಿಸುತ್ತದೆ
ಜೊತೆಗಿರುವ ದೇವರ ಜೊತೆ

ಪ್ರೀತಿ-ಮೋಹಗಳ ಪರಿಸರ ಮನದಲ್ಲಿ ಮೂಡುತ
ದೇವರ ಪಾದಗಳೇ ನಮ್ಮ ಜೀವನದ ಗತಿಯಾಗಿ
ಜೊತೆಗಿದ್ದ ಪ್ರೀತಿಯ ಶಕ್ತಿ ನಮ್ಮ ಜೀವನದ ಒಂದು ನಾದವಾಗಿ
ಸರಿಯಿಲ್ಲದನ್ನು ಸರಿಪಡಿಸುವ ನನ್ನ ಮನೋ ಹೆಜ್ಜೆಗಳ ತಾಳವಾಗಿ

ಪ್ರೀತಿ-ಪ್ರೇಮಗಳನ್ನು ನಿರಂತರ ಬೆಳಗಿಸುವ ವಿಶ್ವದ ನಾದ
ಜೊತೆ ಜೀವನದ ವಾತಾವರಣವನ್ನು



ಹೊಸ ದೃಷ್ಟಿಕೋನದಿಂದ ನೋಡುವ ಯೋಗ್ಯತೆ
ನಮಗೋಸ್ಕರ ವಾತಾವರಣವೇ ಬದಲಾರಂಭಿಸಿದೆ !

ಪ್ರೀತಿ-ಪ್ರೇಮಗಳ ಬದುಕೇ ನಮ್ಮ ಬದುಕಾಗಿ
ತೇಲಾಡುವ ಶಾಂತಿಯ ತಿಳುವಳಿಕೆ ಗೋಚರವಾಗಿ
ಪರರ ಉಪಕಾರಿಯಾಗುತ್ತ
ಬೇಸರವೆನ್ನುವ ಮಾತು ಕಾಣದೇ ಕರಗಿಹೋಗಿ

ಎಲ್ಲರ ಜೊತೆ ನೋಡು- ಗೆದ್ದಿರುವ ಅನುಭವ
ನನ್ನ ಮೂಲದ ಜೊತೆ ನನ್ನ ಭಾವನೆ ಯೋಗ್ಯವೆನಿಸುತ್ತದೆ
ಎಲ್ಲರ ಜೊತೆ ಜೀವನ ಶಾಂತಿಕಾರ ದಿಗಂತದಲ್ಲಿ
ಜೊತೆಗಿದ್ದೂ ಜೊತೆ ಬೆರೆಯುವಲ್ಲಿ

ಪ್ರೀತಿಯೇ ಮಹಾನ್ ಶಕ್ತಿ ಹೆತ್ತ ತಾಯಿಯಿಂದ ಕಲಿತ ಶಕ್ತಿ
ಸರಿ ನ್ಯಾಯ ಒದಗಿಸುವ ಶಕ್ತಿ
ದೇವರೆಡೆಗೆ ಜಾರಿಸುವ ಉಪಯೋಗಿಯಾಗಿ
ಜೀವನದ ಸೊಗಸನ್ನು ಹಿಂಬಾಲಿಸುತ್ತಿದೆ !

**- ಶ್ರೀ ಹರಿ.**

**14-04-2015**

www.sriharikhoday.com

## 923.

ಪ್ರೀತಿ ಪ್ರೇಮಗಳು ಮಾನವನಲ್ಲಿ ದೈವಿಕ ಕ್ರಿಯೆಗಳು
ಮಾನವನಲ್ಲಿ ಹುಟ್ಟಿನಿಂದ ತಾಯಿ ಕಲಿಸುವ ಜೀವನದ
ನಿಯಮಗಳು !

ಎಂದೆಂದಿಗೂ ಮನದಲ್ಲಿ ಒಂದು ಛಾಯೆಯಾಗಿ ಉಳಿದು
ಮನ ಬೇಡಿದಾಗಲೆಲ್ಲ ಅಸೂಯೆಗಳಿಲ್ಲದೆ
ಪ್ರತಿಕ್ರಿಯೆ ಮಾಡುವ ವಿಶ್ವಕ್ರಿಯೆ ಪ್ರೀತಿ-ಪ್ರೇಮಗಳು
ಮಾನವನ ಬಾಳಿನಲ್ಲಿ ಇದೊಂದು ಅಪಾರ ಕ್ರಿಯೆ

ದೂರ ಹೋಗಿರುವವರಿಗೆ ಹತ್ತಿರ ತರಿಸುವ ಕರೆಯೋಲೆ
ಶಕ್ತಿ ಕಳೆದುಕೊಂಡಿರುವ ಮನಸ್ಸಿಗೆ
ನಿರ್ಧರಿಸುವ ಪ್ರತಿಕ್ರಿಯೆಯನ್ನು ತೋರಿಸುವ
ದೈವಿಕ ಕ್ರಿಯೆ ಪ್ರೀತಿ-ಪ್ರೇಮಗಳು !

ಯುಕ್ತಿ ತಿಳಿಯದ ಪ್ರೀತಿ-ಪ್ರೇಮ
ಅಸೂಯೆ ತಿಳಿಯದ ಪ್ರೀತಿ-ಪ್ರೇಮ
ಎಲ್ಲದರಲ್ಲಿ ಜೀವಿಸುವ ಕಲೆ ಕಲಿಸುವ ಪ್ರೀತಿ-ಪ್ರೇಮ
ಸಂತತಿಯನ್ನು ಬೆಳೆಸುವ ಪ್ರೀತಿ-ಪ್ರೇಮ

ಮಾನವನಲ್ಲಾಗಲೀ. ಪ್ರಾಣಿಯಲ್ಲಾಗಲೀ ಪ್ರಕೃತಿಯ ಶಕ್ತಿಯ
ಯುಕ್ತಿ ಪ್ರೀತಿ-ಪ್ರೇಮ



ನಿರಾಸೆಯ ಅರ್ಥ ತಿಳಿಯದ ಪ್ರೀತಿ-ಪ್ರೇಮ
ಕಣ್ಣಿದ್ದು ಕನಸು ಕಾಣದವರಿಗೆ ಬುದ್ಧಿ ಕಲಿಸುವ ಪ್ರೀತಿ-ಪ್ರೇಮ

ಏಕಾಂತದಲ್ಲಿ ವಿಶ್ರಮಿಸುವಾಗ ಸಂತೋಷದ ಜೊತೆಗೆ
ಸೇರಿಕೊಳ್ಳುವ ಪ್ರೀತಿ-ಪ್ರೇಮ ಸಂಭಾವನೆಗೆ ಭೂಷಣ
ಪ್ರೀತಿ-ಪ್ರೇಮ
ಕಲಿಸಿದ ದಕ್ಷತೆಗೆ ಅತಿ ಅವಶ್ಯಕ ಪ್ರೀತಿ-ಪ್ರೇಮ
ಎಲ್ಲಾ ಶಾಂತಿಯ ಆಧಾರ ಪ್ರೀತಿ-ಪ್ರೇಮ

ಎಲ್ಲಾ ತರಹದ ಹೆದರಿಕೆ ಬೆದರಿಕೆಗಳನ್ನು ದೂರಗೊಳಿಸುವುದು
ಪ್ರೀತಿ-ಪ್ರೇಮ
ನಿರ್ದಯನಿಗೆ ದಾನಿಯನ್ನಾಗಿ ಮಾಡಿಸುವುದು ಪ್ರೀತಿ-ಪ್ರೇಮ
ಜೀವ ಜೀವಿಸಲು ಆಧಾರ ಪ್ರೀತಿ-ಪ್ರೇಮ
ದೇವರಲ್ಲಿ ಬೆರೆಸಬೇಕಾದರೂ ಅವಶ್ಯಕ ಪ್ರೀತಿ-ಪ್ರೇಮ

ಕಾಂತೆಯ ಜೊತೆಗೆ ದೈವಿಕ ಭಾವನೆ ಅನುಭವಿಸಲು
ಜೊತೆ ಜೊತೆ ಜೊತೆಗಾರ ಪ್ರೀತಿ-ಪ್ರೇಮ
ಪ್ರೀತಿ-ಪ್ರೇಮಗಳೇ ಬಳ್ಳಿಯಿಂದ ಹೂವು ಅರಳಿಸುತ್ತದೆ
ಪ್ರೀತಿ-ಪ್ರೇಮಗಳಿಂದಲೇ ಹೂವು ದುಂಬಿಯನ್ನು ಕರೆಸುತ್ತದೆ

ಪ್ರೀತಿ-ಪ್ರೇಮದಿಂದಲೇ ದಿನವೂ ಸೂರ್ಯನ ಉದಯವಾಗುತ್ತಿದೆ
ಪ್ರೀತಿ-ಪ್ರೇಮಗಳಿಂದಲೇ ಉಸಿರು - ನಿಟ್ಟುಸಿರಿನ ಗೆಳೆತನ
ಜೊತೆ ಜೊತೆಗೆ ನಿರಂತರವಾಗಿ ಜೀವಿಸುತ್ತಿದೆ !

**- ಶ್ರೀ ಹರಿ.**

**16-04-2015**

www.sriharikhoday.com

## 924

ಹುಚ್ಚು ಜಗತ್ತಿನಲ್ಲಿ ಹುಚ್ಚನಾಗಿ ಹುಚ್ಚುಚ್ಚಾಗಿ
ನನ್ನಲ್ಲಿ ನಾನೇ ಬೆರೆಯುವುದು ಕಳೆದು ಹೋಗಿರುವ ನಾನು
ಎಲ್ಲವನ್ನು ಮರೆತು ದೇವರನ್ನು ಬೆರೆಸಿಕೊಂಡರೆ
ಹುಚ್ಚು ಜಗತ್ತು ನಮಗೆ ಹುಚ್ಚನೆಂದು ಹೇಳುತ್ತಿದೆ !

ನನ್ನ ಒಂಟಿ ಬಾಳಿನಲ್ಲಿ ನಾನು ಹುಚ್ಚನಾಗಿ ಒಬ್ಬನೇ ಇದ್ದಾಗ
ಹುಚ್ಚನ ಜೊತೆ ಬೆರೆತುಕೊಂಡ ನನ್ನ ಕಾಂತೆ
ಅವಳು ಹುಚ್ಚಿಯಾಗಿ ದೇವರಲ್ಲಿ ಬೆರೆತಿರುವುದ ನಾ ಕಂಡು
ನಮ್ಮಿಬ್ಬರ ಜೊತೆ ಸರಿಯಿದೆ ಎಂದು ಹೇಳಿತು ನಿಶೆಯ ಬಟ್ಟಲು !

ಸುಖದಲ್ಲಿ ಬೆರೆತ ನಾವುಗಳು
ಸುಖದಲ್ಲಿ ಬೆರೆತ ನಮ್ಮ ಜೊತೆ ಹುಚ್ಚನಾದ
ದೇವರೂ ಕೂಡ ನಮ್ಮ ಜೊತೆ ಸೇರಿಕೊಂಡು ಸುಖ
ಪಡುತ್ತಿದ್ದಾನೆ
ಸೃಷ್ಟಿಸಿರುವ ದೇವರೇ ಜಗತ್ತನ್ನು ಮರೆತಿರುವ ಕಾರಣ

ಮರೆಯುವುದೇ ಒಂದು ಸತ್ಯದ ದರ್ಶನ
ನಮ್ಮ ನೆನಪುಗಳೇ ಇಲ್ಲದ ಜಗತ್ತಿನ ಅನುಭವ
ನೆನಪುಗಳ ನೆರಳು ಇಲ್ಲದ ನನ್ನ ಇರುವಿಕೆ
ದೇವರರಿರುವ ದೇವರ ದೇವಸ್ಥಾನ !



ಜಗತ್ತಿನಲ್ಲಿ ನನ್ನಲ್ಲಿ ನೆನಪಿಲ್ಲದೆ ಇರುವ ಕಾರಣ
ನನಗೆ ಹುಚ್ಚನೆಂದು ಕರೆಯುತ್ತಿದ್ದಾರೆ
ನನ್ನ ಕಾಂತೆಗೂ ಹುಚ್ಚಿ ಎಂದು ಕರೆಯುತ್ತಿದ್ದಾರೆ
ನಮ್ಮ ಮೇಲೆ ಕಲ್ಲನ್ನು ಎಸೆಯುತ್ತಿದ್ದಾರೆ

ನಮ್ಮ ಜೊತೆ ಜೀವನದಲ್ಲಿ ಉಸಿರೂ
ನಿಟ್ಟುಸಿರೂ ಆಗಿರುವ ಅವಳು ಜೊತೆಗಿರುವ ದೇವರು
ದೇವರ ಹುಚ್ಚಿರುವ ನನಗೆ ಜೊತೆಯಾಗಿರುವ ಎಲ್ಲರೂ
ಹುಚ್ಚ ಹುಚ್ಚನೆಂದು ಹೀಯಾಳಿಸುತ್ತಿದ್ದಾರೆ

ಹುಚ್ಚೆಂಬ ಪ್ರಶ್ನೆಗೆ ಉತ್ತರ ನೆನಪಿಲ್ಲದ ಸತ್ಯದ ಜೊತೆ
ನಮ್ಮನ್ನೇ ನಾವು ನೆನಪುಗಳ ಮರೆತಿರುವ ಇರುವಿಕೆ
ಮರೆತ ಸ್ಥಿತಿಯಲ್ಲಿ ಬರುತ್ತಿರುವ ಸುಖದ ಆನಂದ
ಸುಖದ ಆನಂದದಿಂದ ಏಕಾಗ್ರತೆಯ ಮೂಲ

ದೇವರು ಜೊತೆಗಿರುವ ಸುಖವೇ ಏಕಾಗ್ರತೆ
ದಯಾಕರುಣನಾದ ದೇವರು ನನಗೆ ಬಾಳಲು ಕಲಿಸಿದ್ದಾನೆ
ಬೇರೆ ಯಾವ ಧರ್ಮವೂ ನನಗೆ ಬೇಕಿಲ್ಲ ಶಿಖರದೆತ್ತರ ಇರುವ
ನಮ್ಮಗಳ ಭಾವನೆಯಲ್ಲಿ
ನಮ್ಮ ಯೋಗ್ಯತೆಗೆ ಹೀಯಾಳಿಸುತ್ತಿರುವವರು ನಮಗೆ ಕಾಣಿಸುತ್ತಿಲ್ಲ

ಹುಚ್ಚು ಜಗತ್ತಿನಲ್ಲಿ ಹುಚ್ಚುಚ್ಚಾಗಿ ನಮ್ಮ ನೆನಪುಗಳು ಕಾಣದೇ ಆಗಿ
ನೆನಪಿಲ್ಲದ ನನ್ನಲ್ಲೇ ಬೆರೆತುಕೊಂಡಿರುವೆನು
ನೆನಪುಗಳಿಲ್ಲದೆ ಖಾಲಿಯಾಗಿರುವ ನನ್ನ ಮನಸ್ಸಿಗೆ
ನಮ್ಮ ಜೊತೆ ಬಾವಿಸುತ ದೇವ ಖಾಲಿ ಮನದಲ್ಲಿ
ತುಂಬಿಕೊಂಡಿರುವನು.

**– ಶ್ರೀ ಹರಿ.**

**17–04–2015**



www.sriharikhoday.com

## 925

ನನ್ನನ್ನು ನಾನೇ ಅರಿತುಕೊಂಡಿರಬೇಕು
ನನ್ನನ್ನು ನಾನೇ ಅನುಭವಿಸಿಕೊಂಡಿರಬೇಕು
ನಾನೊಬ್ಬನೇ ಇಲ್ಲದೆ ಜೊತೆ ಜೊತೆಯನ್ನಾಗಿ ಮಾಡಿಕೊಂಡಿರುವೆನು

ನನ್ನ ಜೊತೆ ದೇವರ ಅನುಭವವಾಗಿ ಜೊತೆಯಾಗಿರುವೆನು
ದೇವರ ಸುಖವು ನನ್ನಲ್ಲಿ ಬೆರೆತು
ಮನದಲ್ಲಿ ಆನಂದದ ಕಾಂತಿ ಹೊಂದಿರುವೆನು

ನನ್ನ ಕಾಂತೆಯೊಡನೆ ಬೆರೆತು
ನಮ್ಮಿಬ್ಬರ ಅನುಭವ ಒಂದೇ ಇರುವ ಕಾರಣ
ಕಾಂತೆಯ ಅನುಭವವೂ ದೇವರ ಅನುಭವದಂತೆಯೇ ಇದೆ !

ಎಲ್ಲದರಲ್ಲೂ ಎಲ್ಲಾ ಜೀವನದ ಹಾದಿಯಲ್ಲಿ
ಹೊಸ ಹೊಸತರ ಅನುಭವ
ಎಲ್ಲದರಲ್ಲಿ ಒಂದಾದರೆ ಜೊತೆಯಾನುಭವ

ಬರವಣಿಗೆ ಇಲ್ಲದೆ ಬೆರೆಯುವ ಅನುಭವ
ಬರೀ ಉಪಮಾನಗಳು ಹೇಳುತ್ತ
ತಕ್ಷಣವೇ ವಸ್ತುವಿನ ವಿಚಾರ ಹೇಳಿದರೆ



ಉಪಮಾನಗಳು ಹೇಳದೇ ಆಗುವ ದರ್ಶನ ಅನುಭವದ ದರ್ಶನ
ಉಪಮಾನಗಳಿಲ್ಲದ ದೇವರ ಜೊತೆ ಬೆರೆತಿರುವ ಅನುಭವ
ಆ ಅನುಭವ ಜೊತೆಯೇ ದೇವರು . . .

ದೇವರು ಬಂದು ಹೋದ ಜಗತ್ತಿನಲ್ಲಿ ಗುರುತುಗಳಿಲ್ಲದೆ
ಪ್ರೀತಿ–ಪ್ರೇಮಗಳನ್ನು ತೇಲಿಸಿ ಹೋಗಿರುವ ಗುರುತು

ಊರಿಗೆ ಒಂದು ಮರದ ನಿಶಾನಿ ಇದ್ದರೆ
ದೇವರಿರುವ ಜಾಗ ಮನಸ್ಸಿನಲ್ಲಿ ಗುರುತು ಹಾಕಿಸದೆ
ಪವಿತ್ರ ಭಾವನೆಗಳು ಜೊತೆಯಾದ ಮೇಲೆ

ಗುರುತಿಲ್ಲದ ಭಾವನೆ . . .
ದೇವರ ಭಾವನೆ ನಿಶಾನೆ ಬಿಡದ ಭಾವನೆ !

ಆನಂದದ ಮಾಪಕ ಮಾಡದ ಮಾಪಕ
ಒಳ್ಳೆಯ ಮನಸ್ಸು ದೇವರಲ್ಲಿ ಬೆರೆಯಲು
ಮನಸ್ಸಿನ ತಕ್ಕಡಿ ಭಾರವಿಲ್ಲದೆ ದೇವರ ಜೊತೆಯಿದೆ

ಒಂದು ಕಡೆ ವಿಶ್ವ ಮತ್ತೊಂದು ಕಡೆ ದೇವರ ಅಳೆದರೆ
ದೇವರ ಮನಸ್ಸಿನ ತಕ್ಕಡಿಯಿದೆ
ತಕ್ಕಡಿಯೇ ದೇವರ ಜೊತೆಗೆ ಜಾರಿ

ದೇವರನ್ನು ಅಳತೆ ಮಾಡಲಾಗದ ಕಾರಣ
ಎಲ್ಲವೂ ವಿಶ್ವವನ್ನೇ ವ್ಯಾಪಿಸಿದೆ
ನಮ್ಮಲ್ಲಿ ನಾವು ದೇವರ ಅನುಭವವನ್ನು ಅನುಭವಿಸಿದರೆ

ಮನಸ್ಸಿರುವ ಎಲ್ಲೆಡೆ ಮನಸ್ಸಿನ ಜೊತೆ ವ್ಯಾಪಕವಾಗಿ
ಸುಖದ ಅನುಭವ ಅನುಭವಿಸಿ ನಂಬುವುದೇ ಶಾಶ್ವತ,
ನಂಬಿ ಅನುಭವಿಸುವುದು ಶಾಶ್ವತವಲ್ಲ

www.sriharikhoday.com

ನಾ ಅನುಭವಿಸಿ ದೇವರಲ್ಲಿ ನಂಬಿದ್ದೇನೆ ನಂಬಿ ಅನುಭವಿಸಲಿಲ್ಲ
ಪರಿಪೂರ್ಣದ ಪೂರ್ಣತೆ ಹೊಂದಿರುವ ನೀ
ಅನುಭವ ನಂಬಿಕೆ. .ನಂಬಿಕೆಯೇ ಅನುಭವದ ವಿಚಾರಗಳು
ಸಾಮಾನ್ಯ ವಿಷಯವಲ್ಲ

ಕ್ಷಣ ಕ್ಷಣದಲ್ಲಿಯೂ ಜೀವ ಹರಿಯುವಂತೆ
ದೇವರ ಜೊತೆಗೆ ಪ್ರೀತಿ ಹರಿಯುವಂತೆ
ಸುರಿಯುವ ಮಳೆಯನ್ನು ಅನುಭವಿಸುವವನು

ಬೆತ್ತಲೆಯಾಗಿ ಮಳೆಯನ್ನು ಅನುಭವಿಸುವನು
ಉಳಿದವರೆಲ್ಲ ಮಳೆಯ ನೀರಿನಿಂದ ಮೈತೊಳೆದುಕೊಳ್ಳುವರು !

**- ಶ್ರೀ ಹರಿ.**

**21-04-2015**



## 926

ಕೊರತೆಯಿಲ್ಲದ ಪ್ರಕೃತಿ
ಆಸೆಗಳು ತಿಳಿಯದ ಬಯಕೆ
ಸಾವೇ ತಿಳಿಯದ ಪ್ರಕೃತಿ

ಪ್ರಕೃತಿಯ ಯೌವ್ವನಕ್ಕೆ ಕೊನೆಯೇ ಇಲ್ಲ
ಪ್ರಕೃತಿ ಸದಾ ಯೌವ್ವನ !

ಬೆಳೆಯುತ್ತಿರುವ ಗಿಡ
ಹಣ್ಣೆಲೆ ಉದುರಿಸಿದರೆ ಗಿಡಕ್ಕೆ ವಯಸ್ಸಾಗಿದೆ ಎಂದಲ್ಲ
ಪ್ರಕೃತಿಯ ದುಡಿಮೆಯ ಬೆವರೇ ಗಿಡದ ಹಣ್ಣೆಲೆಗಳು !

ಯೌವ್ವನವಾಗಿಯೇ ಇರುವ ಬಣ್ಣ ಬಣ್ಣಗಳು
ಕಿಂಚಿತ್ತು ಬದಲಾವಣೆ ಇಲ್ಲದ ಕೆಂಪು ಬಿಳುಪು.
.ಹಸಿರು..ನೀಲಿಗಳು
ಆಕಾಶದ ನೀಲಿ ಎಂದೂ ಯೌವ್ವನವಾಗಿಯೇ ಇದೆ !

ಸೂರ್ಯನ ಬೆಳಕೂ ಅದೇ ರೀತಿ ಯೌವ್ವನವನ್ನು ಸವೆಯದೇ
ಹೊರಚೆಲ್ಲುತ್ತಿದೆ
ಮನದ ಭಾವನೆಗಳು ಬದಲಿಸದೆ
ಯೌವ್ವನದ ಹೆಜ್ಜೆಗಳನ್ನೇ ಹಾಕುತ್ತಿದ್ದರೆ

ಕಾಲಕ್ಕೂ ಯೌವ್ವನದ ಅನುಭವ ಅಮೃತವಾಗಿ
ಸಾವೇ ಇಲ್ಲದ ಕಾಲವಾಗಿದೆ !

www.sriharikhoday.com

ಎಲ್ಲವೂ ಬೆಳೆಯುತ್ತಲೇ ಇದೆ
ಬೆಳವಣಿಗೆಯು ಮಾತ್ರ ಕಾಲಮಾಪಕವಲ್ಲ
ಮನಸ್ಸಿನಿಂದ ಯೌವ್ವನಕ್ಕೆ ಮುದಿ ಮಾಡಿಸುತ್ತಿರುವ ಈ ಮನಸ್ಸು

ತನ್ನ ಯೌವ್ವನವನ್ನು ಎಂದೂ ಅನುಭವಿಸದೇ
ಬರೀ ಕ್ರಿಯೆಗಳ ನೆನಪುಗಳಾಗಿ
ತನ್ನ ಶಕ್ತಿಯನ್ನೇ ಕಳೆದುಕೊಂಡಿದೆ !

ಯೌವ್ವನವನ್ನು ನಂಬಿರುವವರು ಯುಗಗಳನ್ನು ಅಲೆಯಬಲ್ಲರು
ಯೌವ್ವನದಲ್ಲಿ ನಂಬಿಕೆಯಿಲ್ಲದಿರೆ ವಯಸ್ಸನ್ನು ಅಳೆಯುತ್ತಲಿದೆ !

ಈಜು ತಿಳಿಯದೇ ಇರುವವನು ನೀರಿನಲ್ಲಿ ಮುಳುಗುವಂತೆ
ಕಾಲದ ಮೇಲೆ ಈಸಲು ತಿಳಿಯದವನು
ತನ್ನ ಕೊನೆಯನ್ನು ತಾನೇ ತರಿಸಿಕೊಳ್ಳುವನು !

ರಕ್ತಗತವಾಗಿ ಬಂದಿರುವ ಯೌವ್ವನದ ರಹಸ್ಯಗಳು
ಹಾಸ್ಯಾಸ್ಪದವಾಗಿರದೆ ನಮ್ಮಲ್ಲಿರುವ ಜೀವನವನ್ನು ಕ್ಷಣ ಕ್ಷಣದಲ್ಲಿ ಚೇತರಿಸುವಂತೆ
ಈಜುವಾಗ ನಾವು ನಮ್ಮ ಮನದಲ್ಲಿ ತೇಲಾಡಿ ಚೇತರಿಸಿಕೊಳ್ಳುವಂತೆ

ಯೌವ್ವನದಲ್ಲಿ ಯೌವ್ವನವನ್ನು ನಂಬೋಣ
ಯೌವ್ವನ ಭವಿಷ್ಯವನ್ನು ರೂಪಿಸುವ ದಿಗಂತವೆಂದು
ಭಯ ಭ್ರಾಂತಿಗಳ ವಿಚಾರ ಮರೆಯೋಣ

ಹೊಸ ದೃಷ್ಟಿಯೇ ಯೌವ್ವನ
ದಿಗಂತದಿಂದ ದಿಗಂತಗಳ ಅಂತರ ಎಂದೂ ಅಳೆಯಲಾಗದೆ
ಕೊನೆಯೇ ತಿಳಿಯದ ಆಕಾಶದಲ್ಲಿ ನಮ್ಮ ಮನದ ಭಾವನೆಗಳ ಜೊತೆ
ಆಕಾಶವನ್ನು ಬೆರೆಸಿಕೊಳ್ಳೋಣ

– ಶ್ರೀ ಹರಿ.

**21-04-2015**



# 927

ನಾನು ಭಾವನೆಯಲ್ಲ
ಭಾವನೆ ಮಾತನಾಡುವುದಿಲ್ಲ
ಭಾವನೆಗಳಿಗೆ ಮುಖ್ಯ ಅಂಗ ಏನೆಂದರೆ
ಹೊಸ ಹೊಸದನ್ನು ಚಿತ್ರಿಸುವ ಮನಸ್ಸು !

ಮನಸ್ಸಿನಂತೆ ಭಾವನೆ
ಭಾವನೆ ಒಪ್ಪಿಕೊಳ್ಳುವಂತೆ ಮನಸ್ಸು
ಭಾವನೆ ಸರಿಯೋ . .ತಪ್ಪೋ ಎಂಬುದು
ಮನಸ್ಸಿನ ಚಿಂತನೆ !

ಭಾವನೆ ಬರೀ ಭಾವನೆಯಲ್ಲ
ಭಾವನೆಯ ಅಂತರಂಗದಲ್ಲಿ ಹಳೆಯ
ಕಷ್ಟ ಸುಖದ ನೆನಪುಗಳು !

ಅತಿಯಾದ ಸುಖ ನೀಡಿದ ಮಾತನಾಡದ ಆನಂದ
ಮನಸ್ಸಿಗೆ ತಿಳಿಯದ ಆನಂದದ ಜೊತೆ
ನೆನಪುಗಳಿಲ್ಲದ ಆನಂದ ಆನಂದ ದೇವರ ಜೊತೆ
ಭಾವನೆಗಳೇ ತಿಳಿಯದ ಅರಿವು ದೇವರ ಆನಂದ !

www.srisharikhoday.com

ಮನೋ ಕಲ್ಪನೆಯಿಲ್ಲದ ಭ್ರಾಂತಿಯಿಂದ
ನೆನಪುಗಳು ಯಾವ ಆಕಾರವಿಲ್ಲದೆ ಎತ್ತರ-ತಗ್ಗಿನ ಪ್ರಮಾಣಗಳಲ್ಲಿ
ಇರುವಿಕೆಯೇ ಹೊಸ ಪ್ರಮಾಣಗಳಲ್ಲಿ ಬೆರೆತು
ತಾವೇ ಇಲ್ಲವಾಗಿರುವ ಸ್ಥಿತಿಯನ್ನು ಆನಂದ ಜೊತೆ
ಸೇರಿಕೊಳ್ಳುವುದು !

ದೇವರ ಸತ್ಯಸ್ಥಿತಿಯ ಅನುಭವವಾಗಿ
ಉಲ್ಲಾಸ ತೆರೆಸುವ ಆನಂದ
ಸುಖವಾಗಿ ಗಣಿಕೆಗಳಿಲ್ಲದ ಕಾಲದಲ್ಲಿ
ಆನಂದ ತೇಲಿ ಮನದಲ್ಲಿ ಅಚ್ಚುಹಾಕದೆ ಅರಿವು ನೆನಪಾಗಿದೆ !

ಆಕಾಶದ ಸ್ಥಿತಿಯಲ್ಲಿ ಜೊತೆ
ದೇವರ ಜೊತೆ ಬೆರೆಯುವ ಹೊಸ ಭಾವನೆ ಉದ್ಭವವಾಗಿ
ಆ ಅನುಭವದ ಚಿತ್ತದಲ್ಲಿ ಬೆರೆತುಹೋಗಿ
ನಾನು ಭಾವನೆಯಲ್ಲ. .ನಾನು ಮನಸ್ಸೂ ಅಲ್ಲ. .!

ಆನಂದವನ್ನು ತರಿಸುವ ಮೋಡಗಳಂತೆ
ನಾವು ಚಿತ್ತದ ಅನುಭವ ಮಾತ್ರ
ಎಂದು ಹೇಳುತ್ತಿರುವುದು
ನಾನು ಮರೆತಿರುವ ಭಾವನೆಗಳು

ಮನಸ್ಸು ಚಿತ್ರಿಸಿದ ಭಾವನೆಯಾಗದೆ
ಚಿತ್ತದ ತರಂಗಗಳು
ದೇವರ ಜೊತೆ ಬೆರೆಸುವ ತರಂಗ
ಶಾಶ್ವತವಾಗಿ ಜೊತೆಯಿರುವ ಅಂತರಂಗ !

**- ಶ್ರೀ ಹರಿ.**

**23-04-2015**



www.sriharikhoday.com

## 928

ಬರಗಾಲ ಬರದ ಭಾವನೆಗಳು
ಬಂದಾಗಲೆಲ್ಲ ಮನದ ಮೇಲೆ ಅಚ್ಚಾಕ್ಕಿ ಹೋಗುವ ಭಾವನೆಗಳು
ಸುಮ್ಮನಿರುವ ಮನಸ್ಸಿಗೆ ಭಾವುಕನಾಗಿ ಮಾಡುವ ಭಾವನೆಗಳು

ಬಾಧೆ ತರಿಸುವ ಭಾವನೆಗಳು
ಬಾಸ್ಕರನ ನೋಡಿ ಸಂತನ ತರಿಸುವ ಭಾವನೆಗಳು
ಮನೋ ಭಂಡಾರದ ಜೊತೆ ಜೊತೆಗಿರುವ ಭಾವನೆಗಳು !

ಸುಮ್ಮನಿದ್ದು ಭಿನ್ನ ಭಾವನೆಗಳ ತರಿಸುವ ಭಾವನೆಗಳು
ಭೀಕರ ವಾತಾವರಣವನ್ನು ತರಿಸುವ ಭಾವನೆಗಳು
ಭಾರವಿಲ್ಲದ ಭಾವನೆಗಳು !

ಭಾವನೆಗಳಿಗೆ ಭಾರ ಬರದ ಭಾವನೆಗಳು
ಬಿಂದುವಿನಿಂದ ವಿಶ್ವವನ್ನು ರೂಪಿಸಬಲ್ಲ ಭಾವನೆಗಳು
ಹೊಸದರ ಜೊತೆಗೆ ಬಾಂಧವ್ಯ ಬೆಳೆಸುವ ಭಾವನೆಗಳು

ಎಷ್ಟು ಬರೆದರೂ ಬರಿದಾಗದ ಭಾವನೆಗಳು
ಬದುಕಲ್ಲಿ ಅತಿ ಅವಶ್ಯಕವಾದ ಜೀವನದ ಬಿಂದು ಭಾವನೆಗಳು
ಬದುಕನ್ನು ಸರಿಪಡಿಸುವುದೇ ಭಾವನೆಗಳು !

ಮನೋಋತುಗಳಿಗೆ ವಸಂತ ತರಿಸುವ ಭಾವನೆಗಳು
ಮಾತು ಮಾತಲ್ಲಿ ಬೆತ್ತಲೆ ಮಾಡುವ ಭಾವನೆಗಳು
ಬಹಿಷ್ಕಾರವನ್ನು ಸೂಚಿಸುವ ಭಾವನೆಗಳು

ಜೀವಪರ್ಯಂತ ಮನದಲ್ಲಿ ಬಿಡಾರ ಮಾಡುವ ಭಾವನೆಗಳು
ಬ್ರಹ್ಮ ಬ್ರಹ್ಮಾಂಡಗಳಲ್ಲಿ ಭ್ರಮೆಯ ರೂಪದಿಂದ
ಬ್ರಹ್ಮಾಂಡವನ್ನೇ ಕಟ್ಟಿರುವ ಭಾವನೆಗಳು !

ಎಂದೂ ಭಾಜಕವಾಗದೆ ಮನಸ್ಸಿನ ಜೊತೆಗೆ ಭಾವುಕನಾಗಿ
ಭಾವನೆಗೆ ಪೂರ್ಣತೆ ನೀಡುವ ಭಾವನೆಗಳು
ಹೆಜ್ಜೆ ಹೆಜ್ಜೆಗೂ ಬದುಕಿಗೆ ಬೇಕಾದ ಭಾವನೆಗಳು

ಬಾಧೆಗಳಿಗೆ ಭಂಡಾರ ಸುಖವ ನೀಡುವ ಭಾವನೆಗಳು
ಭವರೋಗ ನಮ್ಮ ರೋಗಗಳೆಂದು ಹೇಳುವ ಭಾವನೆಗಳು
ಎಲ್ಲರನ್ನೂ ಭರ್ತಿಮಾಡುವ ಆವೇಶಗಳುಳ್ಳ ಭಾವನೆಗಳು !

ಭಾವನೆಗಳಿಂದ ದೇವರನ್ನು ಬೆರೆಸಿಕೊಳ್ಳುವ ಭಾವಗಳು
ಇದ್ದುದ್ದನ್ನು ಸರಿಯಾಗಿ ನಿರೂಪಿಸುವ ಭಾವನೆಗಳು
ಬರವಣಿಗೆಗೆ ಎಂದೂ ಬರಿದಾಗಿಸದ ಭಾವನೆಗಳು !

ಎಲ್ಲೋ ಹಟ್ಟುತ್ತಿದೆ ಎಲ್ಲೋ ಲಯವಾಗುತ್ತಿದೆ
ಹುಟ್ಟಿಗೆ ಕಾರಣವೇನು . . ? ದ್ವೇಷಕ್ಕೆ ಕಾರಣಗಳೇನು . . ?
ಎಂದೂ ಅರಿಯದ ಭಾವನೆಗಳು

ಸುಖವನ್ನು ತರುವ ಭಾವನೆಗಳು
ದ್ವೇಶವನ್ನೂ ತರಿಸುವ ಭಾವನೆಗಳು
ಅಹಂಕಾರವನ್ನು ಮೂಡಿಸುವ ಭಾವನೆಗಳು

ಪಂಚೇಂದ್ರಿಯಗಳಿಗೆ ಜೀವಿಸುವ, ಭಾಷೆ ಕಲಿಸುವ ಭಾವನೆಗಳು
ಬರೆದು ಬರೆದ ಭಾವನೆಗಳು
ಬಾಳಿನಲ್ಲಿ ಜೊತೆ ಬೆಸೆದು ಬಾಳುತ್ತಲಿದೆ ಭಾವನೆಗಳು !

**– ಶ್ರೀ ಹರಿ.**

**25–04–2015**



www.sriharikhoday.com

# 929

ತರ್ಕದಲ್ಲಿ ಅಡಗಿರುವ ಕಷ್ಟ ತಿಳಿದಿರುವುದು ಮನಸ್ಸಿಗೆ ಮಾತ್ರ
ಅತಿದೊಡ್ಡ ಸಂಕಟ ಮನಸ್ಸಿಗೆ ಮಾತ್ರ
ಎಲ್ಲಾ ವಿಚಾರ ತಿಳಿದಿರುವ ಮನಸ್ಸಿಗೆ
ಸರಿತಪ್ಪುಗಳ ವಿಮರ್ಶೆ ಇರುವುದು ಮನಸ್ಸಿಗೆ ಮಾತ್ರ !

ಶಾರೀರಿಕ ಬಲ ಒಂದು ಕಡೆ ಪ್ರಕೃತಿಯ ವರಗಳು ಒಂದು ಕಡೆ
ಮನಸ್ಸಿನ ಬಲವೇ ವಿಶ್ವದ ಶಕ್ತಿಗಳಲ್ಲಿ ಬೆರೆತು
ಸರಿ–ತಪ್ಪುಗಳ ವಿಮರ್ಶೆ ಗಾಂಭೀರ್ಯತೆಯಿಂದ ಮಾಡುತ್ತ
ಘನತೆಯುಳ್ಳ ವಿಮರ್ಶೆ ನೀಡಿ
ಸಾಧನೆಯಾದ ಮೇಲೆ ಮನಸ್ಸೇ ಸಫಲತೆಯ ಅನುಭವ
ಪಡುವುದು !

ಕಲ್ಮಶವಿಲ್ಲದ ಮನಸ್ಸು ಹರುಷದಿಂದಲೇ ಇರುವ ಮನಸ್ಸು
ಕೂಲಂಕಷ ತಪ್ಪಿಲ್ಲದ ಮನಸ್ಸು
ದ್ವೇಷವಿಲ್ಲದ ಮಾರುವೇಷದಲ್ಲಿ ಜೀವಿಸುತ್ತಿರುವ ಮನಸ್ಸು
ಇಷ್ಟಪಟ್ಟರೆ ಪವಾಡಗಳನ್ನೇ ಮಾಡುವ ಪುರುಷನ ಮನಸ್ಸು !

ಚಿಂತೆಗಳ ಕಂತೆಗಳನ್ನು ಮರೆಸುವ ಮನಸ್ಸು
ಕಾಂತೆಯನ್ನು ಅಯಸ್ಕಾಂತದಿಂದ ಹತ್ತಿರ ತರಿಸಬಲ್ಲ ಮನಸ್ಸು
ಹೆಜ್ಜೆ ಹೆಜ್ಜೆಗಳಲ್ಲಿ ಸಫಲತೆಯ ಪ್ರಸನ್ನತೆ ನೀಡುವ ಮನಸ್ಸು
ಸ್ಥಾನ ಬದ್ಧತೆಯನ್ನು ಕಾಪಾಡುವ ಮನಸ್ಸು !

ಭೂಕಂಪಕೆ ಹೆದರದೆ ಹೆದರಿಸಿ ಸುಖವನ್ನು ಮತ್ತೆ ತರಿಸುವ
ಮನಸ್ಸು
ಯಾವ ಉಪಕರಣಗಳೂ ಇಲ್ಲದೆ ಸಾಧನೆ ಮಾಡಬಲ್ಲ ಮನಸ್ಸು
ಕ್ರಮಬದ್ಧವಾಗಿ ಜೀವನಕ್ಕೆ ಕಲಶಪ್ರಾಯವಾದ ಮನಸ್ಸು
ಮಾನವನ ಜನುಮಕ್ಕೆ ಪ್ರಕೃತಿಯ ಕೊಡುಗೆ ಮನಸ್ಸು !

ಕಾರಣಪುರುಷನೆಂದು ಹಸರು ಪಡೆಯಬಲ್ಲ ಮನಸ್ಸು
ರಾಜಾರೋಷದ ಗಾಂಭೀರ್ಯದ ಹೆಜ್ಜೆಗಳ ನಡಿಗೆ
ಚಾಕಚಕ್ಯದಿಂದ ಯಾರು ಯಾವ ಬೆಂಬಲವಿಲ್ಲದೆ ಸಾಧನೆಗಳ
ಸಾಧಿಸುವುದು
ತನಗೇ ಹೆಸರಿಲ್ಲದ ಯಾರಿಗೂ ಕಾಣದ

ಯಾವ ಬೇಡಿಕೆಯೂ ಬೇಡದೆ
ಉಸಿರು ನಿಟ್ಟುಸಿರುಗಳುಗಳನ್ನು ತಿಳಿಯದ
ಸೂಕ್ಷ್ಮತೆಯಲ್ಲಿ ತೀವ್ರತೆ ಅಡಗಿರುವ ಮನಸ್ಸು !

ಅವಶ್ಯವಿಲ್ಲದಿದ್ದರೆ ಯಾವುದರ ಜೊತೆಗೂ ಅಂಟಿಕೊಳ್ಳದೆ
ದೋಷರಹಿತ ಇರುವಿಕೆ ಗಾಂಭೀರ್ಯದಿಂದ ಘನತೆಯಿಂದ
ಪ್ರಸನ್ನತೆಯಿಂದ ಸಫಲತೆ ಸಾಧಿಸುತ್ತ ತನ್ನನ್ನು ತಾನೇ ತಿಳಿಯದೆ
ಸರಿ ಅರ್ಥಗಳನ್ನು ಮಾಡಿಕೊಂಡಿರುವ ವಿಶ್ವದ ಆಧಾರ ಮನಸ್ಸು !

**– ಶ್ರೀ ಹರಿ.**

**27–04–2015**



## 930

ಪುಟಗಳಲ್ಲಿ ಅಡಗಿರುವ ಗತಕಾಲದ ಇತಿಹಾಸ
ಮನದ ಆಳದಲ್ಲಿ ಅಡಗಿರುವ ಬಿಡಿಸಿ ಹೇಳಲಾಗದ
ರೋಮಾಂಚನ

ಹೂ . .ಹೂವುಗಳಿಂದ ತಮ್ಮ ಬಣ್ಣಗಳಿಂದ
ಹರಡುತ್ತಿರುವ ಪ್ರೀತಿ-ಪ್ರೇಮಗಳ ತರಂಗಗಳು
ನೋಡುತ್ತಾ . .ಲಯವಾಗುತ್ತಾ . ಕಣ್ತೆರೆಸಿ ಕಣ್ಮುಚ್ಚಿಸಿ

ಆನಂದವನ್ನು ತರಿಸುತ್ತಿರುವ
ಚೆಲುವಿನ ರೂಪ . . ಸ್ವರೂಪಗಳು
ಹಳೆಯ ಕವನಗಳಿಗೆ ಹೊಸ ಕವನವನ್ನು ಜೋಡಿಸುತ್ತಿದೆ !

ಕಣ್ಣುಗಳಿಂದ ಮಿನುಗುತ್ತಿರುವ ಚೆಲುವೆಯ ರೂಪದ ಪ್ರತಿಭೆ
ಪ್ರೀತಿ-ಪ್ರೇಮದ ಬೆಳಕಾಗಿ ಮಿನುಗುತ್ತಿದೆ
ಹಂಬಲಿಸುತ್ತಿರುವ ಸ್ನೇಹಕ್ಕೆ ಅಸ್ತು ಎಂದು ಹೇಳುತ್ತಿರುವ ಕಣ್
ರೆಪ್ಪೆಗಳ ಸನ್ನೆಗಳು

ಪ್ರೀತಿಯ ಹೊಸ ಅಳತೆ ಕೋಲಾಗಿ
ಹಳೆ ಮುಖಗಳನ್ನೆಲ್ಲ ಮರೆಸಿ
ನಿನ್ನಲ್ಲಿ ನಾನು ಹೊಸ ಮುಖವನ್ನೇ ಕಾಣುತ್ತಿದ್ದೇನೆ!

ಕ್ಷಣ ಕ್ಷಣಕ್ಕೂ ಬದಲಿಸುತ್ತಿರುವ ಮನೋಪರಿಸರ
ಮನದ ಎಲ್ಲೆಡೆಯಲ್ಲಿ ನೀನೊಬ್ಬಳೇ ಇದ್ದು
ಕುದಿಯುತ್ತಿದ್ದ ನನ್ನ ಅಂತರಂಗ



www.sriharikhoday.com

ನಿನ್ನ ಜೊತೆ ಪ್ರೀತಿಯ ಭಟ್ಟಿಯನ್ನು ಇಳಿಸಿದೆ
ನಾನು ನಿನಗೆ ಬಲಿಯೋ . .ನೀನು ನನ್ನ ಬಲೆಯ ಬಲಿಯೋ
ಅತಿ ತೀವ್ರವಾದ ನಮ್ಮಲ್ಲಿರುವ ಪ್ರೀತಿ-ಪ್ರೇಮ

ಮುದ್ದು ಮಾಡುವುದನ್ನು ಬಿಟ್ಟು
ಬೇರೆ ಏನೂ ತಿಳಿಯದೆ ನಾ ಗೆದ್ದೆ . .ನೀ ಗೆದ್ದಿರುವೆ ಎಂಬ
ನಮ್ಮಿಬ್ಬರ ಛಲ ಕಾಲ ನೋಡಿ ನಗುತ್ತಿದೆ !

ನೆತ್ತಿ ಮೇಲೆ ಚಂದಿರನು ನಮ್ಮಿಬ್ಬರ ಪ್ರೀತಿಗೆ
ಅಡ್ಡಬರದೆ ಛತ್ರಿ ಹಿಡಿದು
ಮಾಡುವ ಕ್ರಿಯೆಗಳೆಲ್ಲ ಅರ್ಥಪೂರ್ಣವಾಗಿ

ಒಬ್ಬರನೊಬ್ಬರ ಹೃದಯಾರಾಧನೆ . .ಸರಳ ರೀತಿಯ ಕೊಡುಗೆಗಳು
ನಮ್ಮಿಬ್ಬರ ಮನಸ್ಸುಗಳೇ ಬೇಹುಗಾರರಾಗಿ ನಮ್ಮ ಪ್ರೀತಿಯು
ಎಷ್ಟು ಸಲ ನೋಡಿದರೂ ಮತ್ತೊಂದು ಸಲ ಕದ್ದು
ನೋಡುವಾಸೆ

ನಮ್ಮ ಪ್ರೀತಿಯ ಅದೃಷ್ಟಕ್ಕೆ
ನಾಚಿಕೆ ಮೆರುಗು ತುಂಬಿ ಮೋಹಕ ಬೆರಳ ಸನ್ನೆಗಳು

ನೀ ಕರೆದಾಗ ನಾ ಬರುತ್ತಿರುವೆ . .ನಾ ಕರೆದಾಗ ನೀ ಬರುತ್ತಿರುವೆ
ತುಟಿ ಮನಗಳ ತುಂಟಾಟ
ಪ್ರಕೃತಿಯನ್ನೇ ಬೆರಗುಗೊಳಿಸುತ್ತಿದೆ !

**– ಶ್ರೀ ಹರಿ.**

**28–04–2015**



# 931

ನಗುನಗು ನಗುತ ಇರುವುದೇ ಜೀವನ
ನಗಿಸಿ ನಗುವುದು ಜೀವನ
ಎಲ್ಲರ ಮುಖದ ಮೇಲೆ ನಗುವನ್ನು ನೋಡುವುದು
ಜೀವನದ ಚೇತನ !

ಮಾನವನಿಗೆ ಅತಿ ಅವಶ್ಯಕ ನಗು
ಜೀವನದಲ್ಲಿ ನಗುವಿನ ಲೇಪನ
ಯಾರ ಜೊತೆಗಾದರೂ ನಗು ಬೆಳೆಸುವುದು ಸಂಧಾನ
ಶತ್ರುಗಳಿಗೂ ಕೂಡ ಕ್ಷಣದಲ್ಲಿ ಬೆಳೆಸುವುದು ಮೈತ್ರಿತ್ವದ ಮಿಲನ !

ದ್ವೇಷವನ್ನು ಮಾಡುವುದು ಶಮನ
ಸಜ್ಜನರ ವಾಡಿಕೆಯನ್ನು ನಗು ತರಿಸುವುದು ಬಂಧನ
ಅನುದಿನದಿಂದಲೂ ಜೀವನದ ವಿಧಾನ
ಅನುಮಾನಗಳಿಲ್ಲದ ಮಿಲನ !

ಮೌನ ತರಿಸುವುದು ನಗುವಿನಲ್ಲಿ ಯೌವ್ವನ
ಜೀವನದ ವಿಜ್ಞಾನವೇ ನಗುವಿನಿಂದ ಪ್ರೀತಿಯ ಆಲಿಂಗನ
ಜೊತೆ ಜೀವಿಸುವ ಮಾಪನ
ಬಿಡಿಸುವುದು ಮಾನವನಲ್ಲಿ ಅಲ್ಪತನ !

www.sriharikhoday.com

ದೊರಕಿಸಿಕೊಡುವುದು ಒಡೆತನ
ನಗುವರ ಕಂಡು ಮಾಡುವರು ಗುಣಗಾನ
ನಗುವಿಲ್ಲದೆ ಜೀವಿಸುವುದು ದಡ್ಡತನ

ಜೀವನದ ರೋಮಾಂಚದಲ್ಲಿ ಘನ ಉದ್ದೇಶಗಳ ಶ್ಲಾಘಿಸುತ್ತ
ಪಾನ ಮಾಡುತ್ತಾ . .ಮಾಡುತ್ತಾ . .
ಸೃಜನ ಭಾವನೆಗಳನ್ನು ತೇಲಿಸುತ್ತ
ಅನುಮಾನಗಳಿಲ್ಲದ ಜೊತೆ . .ಜೊತೆ ಜೊತೆಗಳ ಅಧೀನವಾಗಿ

ಕೇಳಿದ್ದನ್ನೆಲ್ಲ ದಾನವಾಗಿ ನೀಡಿಸಬಲ್ಲ
ನಗು ನಗುವ ಜೀವನ . .ನಗೆ ನಗಿಸುವ ಜೀವನ
ಕ್ಷಣದಲ್ಲಿಯೇ ದೊರಕಿಸಿಕೊಳ್ಳುವುದು ಗೆಳೆತನ
ಇದೇ ಜೀವನ ವಿಜ್ಞಾನ !

**– ಶ್ರೀ ಹರಿ.**

**30–04–2015**



# 932

ನಮ್ಮ ಯೌವ್ವನಕ್ಕೆ ಕೀರ್ತಿ ತರಿಸಬೇಕೆಂಬ ಭಾವನೆ
ನಮ್ಮ ಹೃದಯ ಸಾಮ್ರಾಜ್ಯದಲ್ಲಿ ನಾವಿಬ್ಬರೂ ಜೊತೆಯಾಗಿ
ವಂಚನೆಯಿಲ್ಲದೆ ಪರಿಶುದ್ಧ ನಿಷ್ಠೆಯಿಂದ ಜೊತೆ ಒಲಿದುಹೋಗಿರುವೆವು!

ನಮ್ಮ ಮನದ ಸರಳ ಸತ್ಯಕ್ಕೆ ಶ್ರೇಷ್ಠತೆ ನೀಡಿರುವ ನಾವು
ನಮ್ಮಿಬ್ಬರ ರೋಮಾಂಚನೆ ಯಾನೆಯಲ್ಲಿ ಸಾಗುವುದೇ ಲೇಸೆಂದು
ಕಡಿದಾದ ಕಾಲದಲ್ಲಿ ಜೊತೆ ಬಿಡದೆ

ಚೆಲುವಿನ ಭ್ರಮೆಯಲ್ಲಿ ನಮ್ಮ ಅನಿಸಿಕೆಗಳು ಕ್ಷೀಣವಾಗದೆ
ನಮ್ಮ ಪ್ರೀತಿ–ಪ್ರೇಮದ ಕೋಟೆಯನ್ನು ಕಟ್ಟುತ್ತಲೇ ಇರುವೆವು !

ಎತ್ತರವಾದ ಕೋಟೆ ಮೇಲೆ ನಿಂತು ನಾವಿಬ್ಬರು ಪ್ರೀತಿಯ
ಪತಾಕೆಯನ್ನು ಹಾರಿಸುತ್ತ
ಆಗಾಗ್ಗೆ ಬರುವ ವ್ಯಥೆಗಳು . . ತುಟಿಯ ವ್ಯಥೆಯನ್ನು ನುಂಗಿ
ನಮ್ಮಲ್ಲೇ ಆಧಾರದ ಬುನಾದಿಯ ಮೇಲೆ ನಮ್ಮ ಪ್ರೀತಿಯ ಪತಾಕೆ
ಹಾರುತ್ತಲೇ ಇದೆ !

ಲೆಕ್ಕ ಬರೆಯಲಾಗದ ನಮ್ಮ ಪ್ರೀತಿ–ಪ್ರೇಮಗಳು
ನಮ್ಮಿಬ್ಬರ ಮನಗಳು ಪ್ರೀತಿ–ಪ್ರೇಮದ ಸತ್ಯಕ್ಕೆ
ಒಪ್ಪಿಕೊಂಡಿರುವ ನಮ್ಮ ಜೀವನದ ನಡತೆ

www.sriharikhoday.com

ನಿನ್ನನ್ನು ಬಿಡಲು ನನ್ನ ಮನದ ಕಾನೂನು ಒಪ್ಪಲಿಲ್ಲ
ನನ್ನನ್ನು ಬಿಡಲು ನಿನ್ನ ಮನದ ಕಾನೂನು ಬಿಡಲಾಗದೆ
ನಮ್ಮಿಬ್ಬರ ಜೊತೆ ಗೆಳೆತನದ ವೃದ್ಧಿ ಹಿತವೆಂದು ಅನಿಸಿದ ನಮ್ಮಿಬ್ಬರಿಗೆ

ಬೆರೆತಿರುವುದೇ ಸರಿ ಒಲಿದು ಜೊತೆಗಿರುವುದೇ ಸರಿ
ಕೊರತೆಗಳಿಲ್ಲದೆ ಜೀವಿಸಿರುವುದೇ ಸರಿ
ಅಂತರಾಳದಲ್ಲಿರುವ ಪ್ರೀತಿ-ಪ್ರೇಮಗಳ ದಿವ್ಯರಸವನ್ನು ಸೇವಿಸುವುದೇ ಸರಿ

ಮಧುರ ಬೆಸುಗೆಯನ್ನು ನೆನಸುವುದೇ ಸರಿ
ವ್ಯಥೆಯಿಲ್ಲದ ತುಂಬುರಸವನ್ನು ಅನುಭವಿಸುವುದೇ ಸರಿ
ಹಳೆಯ ಕಲ್ಪನೆಗಳ ಬಿಟ್ಟು ಹೊಸ ಹೊಸ ಕಲ್ಪನೆಗಳ ಮಾಡುವುದೇ ಸರಿ !

ಹೃದಯದಲ್ಲಿ ಜೇನಾಗಿರುವ ಪ್ರೀತಿ ಪ್ರೇಮಗಳನ್ನು ಸವಿಯುವುದೇ ಸರಿ
ಮೂಕವಾಗಿರುವ ಪ್ರೀತಿ-ಪ್ರೇಮಗಳಿಗೆ ಸತ್ಯವೇ ವಾದಿಸುತ್ತಿರುವುದು
ನಮ್ಮ ಪ್ರೀತಿ ಪ್ರೇಮದ ಕೋಟೆಗೆ ಮೂಕ ಪ್ರೇಮವನ್ನು ತೋರಿಸಲು
ಹಾರುತ್ತಲೇ ಇದೆ !

**-ಶ್ರೀ ಹರಿ.**

**30-04-2015**



## 933

ಕೆಂಪು ಬಣ್ಣವುಳ್ಳ ಮುಳ್ಳಿನ ಜೊತೆ ಬೆಳೆಯುತ್ತಿರುವ ಗುಲಾಬಿಯೇ
ಏನೆಂದು ವರ್ಣಿಸಲಿ ನಿನಗೆ
ಜೊತೆ ಜೊತೆ ಮುಳ್ಳುಗಳು ನಿನ್ನ ಹುಟ್ಟುಗುಣವೇ ..?

ಮುಳ್ಳಿನ ವಾತಾವರಣವನ್ನು ಬಯಸುವ ಸುಗುಣ ಸಂಪನ್ನನೆ. .
ವಿಶ್ವದ ಕಣ್ಣಿಗೆ ನೀ ತೋಟದ ಆಭರಣವಾಗಿ
ನಿನ್ನ ವಿಚಾರಣೆ ಯಾರಿಗೂ ತಿಳಿಸಲಾಗದೆ

ನಿನ್ನ ನಿರ್ಮಾಣದಲ್ಲಿ ನೀನೇ ಕಳೆದುಹೋಗಿರುವೆ
ಪ್ರೀತಿಯ ಪ್ರತೀಕವೇ ..
ಪ್ರೀತಿ-ಪ್ರೇಮಗಳ ಹೃದಯಕ್ರಿಯೆಗೆ ತಾಣವೇ . .

ಎಷ್ಟೆಂದು ವರ್ಣಿಸಲಿ . .
ನೀ ಹುಟ್ಟಿರುವ ಹುಟ್ಟುತ್ತಿರುವ ಮನೋ ವಿಸ್ತಾರಣೆ

ನೋಡುತ್ತಾ, ನೋಡುತ್ತಾ ನೀ ಹುಟ್ಟಿರುವುದು ಲೋಕ ಕಲ್ಯಾಣಕ್ಕಾಗಿ
ನಿನ್ನನ್ನೇ ನೀನು ಮಾಡಿರುವೆ
ನಿನ್ನ ಇರುವಿಕೆ ಎಲ್ಲವನ್ನು ಅರ್ಪಣ ರೂಪದಲ್ಲಿ !

www.sriharikhoday.com

ನೀ ಇರುವ ಸ್ಥಳಗಳಲ್ಲಿ ಔತಣಗಳು ನಡೆಯುತ್ತಿದ್ದರೂ
ನಿನ್ನನ್ನು ಯಾರೂ ಮಾತನಾಡಿಸದಿದ್ದರೂ
ಎಲ್ಲರಿಗೂ ಕಲ್ಯಾಣವನ್ನು ಬಯಸುವ ರೋಜಾ ಹೂವೇ . .

ಕಠಿಣ ಜೀವನದಲ್ಲಿ ಕ್ಷಣಕ್ಷಣದಲ್ಲಿಯೂ
ಬಣ್ಣದ ಕಿರಣಗಳನ್ನು ಹೊರಹೊಮ್ಮಿಸುತ್ತ
ತರುಣ ಭವನೆಯಿಂದ ಬಾಳುತ್ತಿರುವ

ದಯೆಯುಳ್ಳ ವಾತಾವರಣವನ್ನು ಕಲ್ಪಿಸುವ
ಸುಂದರವಾದ ಸ್ಥಳಗಳಲ್ಲಿ ನಿನ್ನನ್ನು ಹಿಡಿದ ಹಸ್ತ
ನಿನ್ನನ್ನು ಹಸ್ತದಿಂದ ಬೇರೆ ಹಸ್ತಕ್ಕೆ ತಲುಪಿದಾಗ

ಮೆಚ್ಚುಗೆಯ ವಾತಾವರಣವನ್ನು ಬೆಳೆಸಿ ಜೊತೆ ತಬ್ಬಿಕೊಂಡು
ಹೊಸ ಜೀವನ ಕವಿತೆಯನ್ನು ಚಂದದಿಂದ
ಮುಂದು ಹೋಗುವ ಮೈತ್ರಿ . ಪ್ರೀತಿಸದೇ ಇರುವವರು ಗೌರವ
ನೀಡಿ

ಪ್ರತಿಬಿಂಬವಾಗಿ ಗೌರವವನ್ನು ವ್ಯಕ್ತಪಡಿಸುತ್ತ
ಮನೋಅಂಗಣದಲ್ಲಿ ಅರ್ಪಣಾ ಭಾವನೆಯನ್ನು ಕಟ್ಟುತ್ತಾ
ಪ್ರೀತಿ-ಪ್ರೇಮದ ಸತ್ಯ ಜೀವನದಲ್ಲಿ

ಪ್ರೀತಿಯ ವಾತಾವರಣಗಳನ್ನು ಭಾವನಾ ರೂಪದಲ್ಲಿ
ಆಭರಣವಾಗಿ ಹೊಸ ಹೊಸ ಭಾವನಾ
ವಿಚಾರ ಸಂಕಿರಣಗಳನ್ನು ಪಟ್ಟಿ ಮಾಡಿಸುವ ಗುಲಾಬಿಯೇ

ಮುಳ್ಳು ಸುಖವಾಗಿರುವಾಗ
ಎದುರು ಎದುರು ಕಾಣುವ ಕಣ್ಣುಗಳಲ್ಲಿ
ಆನಂದಬಾಷ್ಪ ತರಿಸುವ ಕಣ್ಣೀರಿನ ತ್ರಾಣವೇ . .

ಎಷ್ಟು ಸಲ ನಿನ್ನ ನೋಡಿದರೂ ನಿನ್ನ ಹೊಸತನದ ಯೌವ್ವನ
ಜೊತೆ ಬೆರೆತುಕೊಳ್ಳುವ ಅರ್ಪಣ ಭಾವನವನ್ನು ಮೂಡಿಸುತ್ತಿದೆ



ನಿನ್ನ ರೀತಿಯೇ ಬೇರೆ
ಪ್ರೀತಿಯ ಜೊತೆಗೆ ಪರಿಮಳವೂ ಹೊರ ಚೆಲ್ಲುತ್ತಿರುವುದು
ನಿನ್ನದೇ ಆದ ನಿನ್ನ ಜೀವನ ನಿರ್ಮಾಣದಲ್ಲಿ ಕಳೆದುಹೋಗಿರುವೆ
ನೀ ಹುಟ್ಟಿರುವುದು ನಿನಗೇ ತಿಳಿಯದೆ
ಚಿಗುರಿದಾಗಲೆಲ್ಲ ಹೊಸದನ್ನು ವಾತಾವರಣದಲ್ಲಿ ಚಿಗುರಿಸಿ
ಪ್ರಕೃತಿಯಲ್ಲಿ ವಿಶೇಷ ಗೌರವವನ್ನು ನೀ ಪಡೆದುಕೊಂಡಿರುವೆ !

**- ಶ್ರೀ ಹರಿ.**

**02-05-2015**

www.sriharikhoday.com

## 934

ಬುದ್ಧಿಗೆ ಭ್ರಮೆಗೊಳಿಸುವ ಭೂಮಿಯ ಅಯಸ್ಕಾಂತದ ಎಳೆತಗಳು
ಅರಿವಿನ ಅರಿವಿಗೆ ಬಿಸಿ ತಣ್ಣನೆಯ ಅನುಭವಗಳು
ಆಕಾಶದಲ್ಲಿ ಬೆಳಕು . .ಕತ್ತಲುಗಳ ಸರಮಾಲೆಗಳು
ಹೆಜ್ಜೆ ಹೆಜ್ಜೆಗೆ ಅಡ್ಡ ಬರುತ್ತಿರುವ ಹತ್ತಿರ ದೂರಗಳು

ನೆನಪಿಗೆ ಅವಶ್ಯಕ ವಸ್ತುಗಳಾದ ಅರಿವು ಮರೆವುಗಳು
ಪ್ರಕೃತಿಗೆ ಆಧಾರವಾಗಿರುವ ನೀರು . ನದಿ ಸಮುದ್ರಗಳು
ಕಲ್ಪನೆಗೆ ಸಿಲುಕದ ಭೂಮಿ . .ಬೆಟ್ಟ ಪರ್ವತಗಳು
ಮಾನವನ ದಿನಚರಿಯಲ್ಲಿ ಜೊತೆ ಜೊತೆಯಿರುವ ಸೂರ್ಯ ಚಂದ್ರ
ನಕ್ಷತ್ರಗಳು !

ಕಲ್ಪನೆಗೇ ಕಾಣದ ಅಗೋಚರವಾದ
ಕಣ್ಣಿಗೇ ಬೀಳದ ಕಾಲ ಕೊನೆ ಮೊದಲುಗಳು
ವಾದಗಳಿಗೆ ಕೊನೆ ತಿಳಿಯದ ಶೂನ್ಯಗಳು
ಬೆಳಕಿನಲ್ಲಿ ಆಶ್ಚರ್ಯದಿಂದ ಅಡಗಿಕೊಂಡಿರುವ ಬಣ್ಣ ಬಣ್ಣಗಳು !

ಕಣ್ ಹಾಯಿಸಿದಾಗ ಹರಿದು ಬರುವ ಆಳ ಎತ್ತರಗಳು
ಬೀಸುತ್ತಿರುವ ಗಾಳಿ ಉಸಿರು ನಿಟ್ಟುಸಿರಿನ ಗುಟ್ಟಿನ ಜೀವನದ
ಸಂಚುಗಳು
ಕಾರಣವಿಲ್ಲದೆ ಯಾವ ಸಾಹಸವಿಲ್ಲದೆ ಬೆಳೆಯುತ್ತಿರುವ
ಗಿಡ ಸಸ್ಯರಾಶಿಗಳು . ಕ್ರಿಮಿ ಕೀಟಗಳು . ಪ್ರಾಣಿಗಳು



ಸುಮ್ಮನಿದ್ದ ಮಂಜಿನ ಗೆಡ್ಡೆ ತಾನಾಗಿಯೇ ಕರಗಿ
ಹರಿಯುತ್ತಿರುವ ಹುಟ್ಟು ಹುಚ್ಚಿನ ನದಿಗಳು
ಕಹಿ ಸಿಹಿಗಳ ರುಚಿಗಳು . ಎಚ್ಚರ ಕನಸುಗಳು
ಗುಡುಗಿನ ಜೊತೆ ಸಿಡಿಲುಗಳು . . .

ಹಗಲು ರಾತ್ರಿಗಳು ಅಂಟಿಸಿಕೊಳ್ಳಲಾಗದ ಜೊತೆ ಸಂಬಂಧಗಳು
ನನ್ನದು . ನಮ್ಮದು ಎಂದು ಹೇಳುವ ಮಾತುಗಳು
ಕೈಯ್ಯಲ್ಲಿ ಹತೋಟಿಯಿಲ್ಲದ ಹುಟ್ಟು ಸಾವುಗಳು
ನಮ್ಮನ್ನು ನಾವೇ ಕಾಣದೆ ನಮ್ಮಲ್ಲಿರುವುದು ನಮಗೇ ತಿಳಿಯದೆ

ನಮ್ಮನ್ನು ನಾವೇ ಮರೆತಿರುವ
ಉಸಿರಾಡುತ್ತಿರುವ ಮಾನವನ ಅನೇಕ ಜನಾಂಗಗಳು
ಪ್ರೀತಿ-ಪ್ರೇಮದ ಸಂಬಂಧದ ಜಾಲಗಳು
ಹಿಂದೆ . .ಮುಂದೆ ಎಂಬ ಜೀವನದ ವ್ಯಾಕರಣಗಳು !

ಬುನಾದಿ ತಿಳಿಯದ ಅಹಂಕಾರಗಳು
ನೈಜ ರಸ್ತೆ ತಿಳಿಯದ ಜಂಭದ ಹಾದಿಗಳು
ಕಲ್ಪಿತ ಹೆದರಿಕೆಗಳು . .ದಡ ಗಡಿಗಳ ಜಗಳಗಳು
ನೆನಪು ಮರೆವುಗಳು . .ಸೀಳು ಸೀಳಾಗಿರುವ ಜೀವನ

ವ್ಯಕ್ತವಾಗಿ ಪಾಳಾಗುತ್ತಿರುವುದು ಕರುಳಿನ ನೋವುಗಳು
ಒತ್ತಿ ಹೇಳಲು ಮಾತನಾಡದ ಕೊರಳುಗಳು
ವಿಶ್ವದಲ್ಲಿ ಎಲ್ಲವೂ ಅರಳುತ್ತಿದ್ದರೆ ಮಾನವನ ಬೆಳವಣಿಗೆ ಅರಳುತ್ತಿಲ್ಲ
ಅರಳಿದ ಬಣ್ಣ ಬಣ್ಣಗಳು ಸೌಂದರ್ಯ ತರಿಸದೆ

ಜೀವನದಲ್ಲಿ ಜೇನನ್ನೇ ತುಂಬಿಕೊಳ್ಳದೆ
ಹೂವಿಗಿಂತ ಕಡೆಯಾಗುತ್ತಿರುವನು ಮಾನವ
ತಿಳಿಹೇಳಲು ಆಧಾರವಿಲ್ಲದ ಅಂಜಿಕೆಗಳು
ಮಿಂಚುಹುಳುಗಳಿಗಿಂತ ಮಿನುಗುತ್ತಿರುವುದು



www.sriharikhoday.com

ಕಷ್ಟಗಳಿಗೆ ಸಾಕ್ಷಿಗಳಾದ ದೇಶ ಆಳುತ್ತಿರುವ ರಾಜಕಾರಣಿಗಳು
ಆಕಳುಗಳ ಕಷ್ಟ ತಿಳಿಯದೆ ಕರುಳಿನ ದುಃಖ ಅರಿಯದೆ
ದಯಾಳು ಎಂಬ ಭಾವನೆಗಳಿಲ್ಲದೆ ಜೀವನವೇ ಕಂಗಾಲಾಗಿದೆ !

ತೆರೆದ ಕಣ್ಣಿಗೆ ಕಾಣಿಸುತ್ತಿರುವ ಗೋಳುಗಳು
ಕಣ್ಣಿನಿಂದ ಕಣ್ಣೀರು ಬರದೆ ಮನಸ್ಸು ಅಳುತ್ತ ತಿಳಿಹೇಳಲು
ಮಾತೇ ಬರದೆ ಮುಖದಲ್ಲಿನ ಮುಗುಳು ಕರಗಿ ಹೋಗಿ
ಪ್ರಕೃತಿಯು ಕೊಡುತ್ತಿರುವ ನೆರಳು ಬಿಟ್ಟು ಬೇರೆ ಯಾವುದೂ ಸಿಗದೆ

ಮಣ್ಣಿನ ಧೂಳಾಗಿ ಗಾಳಿ ಬೀಸಿದಂತೆ ಹಾರಿ ಹೋಗುತ್ತಿದೆ ಜೀವನ
ಯಾವ ಸಂಬಂಧಗಳಿಲ್ಲದೆ ಬಾಳುತ್ತಿರುವ ಒಂಟಿ ಬಾಳುಗಳು
ಪಾಳಾಗಿ ಬಿದ್ದಿರುವ ಮನೆಗಳು ನೋಡುತ್ತಿರುವವರು ಕಣ್ಣಿದ್ದೂ
ಕಣ್ಣಿಲ್ಲದೆ ಸತ್ಯಕ್ಕೆ ಕುರುಡರಾಗಿರುವ ಸಾಕ್ಷಿಗಳು !

**– ಶ್ರೀ ಹರಿ.**

**04–05–2015**



# 935

ನಿನ್ನ ಸ್ವತ್ತು ನಿನ್ನದಲ್ಲ
ಆ ಸ್ವತ್ತು ನಿನ್ನ ರೂಪ ಪಡೆದಿರುವ ಸ್ವತ್ತು

ನಿನ್ನ ಕವಿತೆಯ ಅರ್ಥಗಳು ನಿನ್ನದಲ್ಲ
ಮಾತನಾಡಲಾಗದೆ ಬಾಯಿಲ್ಲದ ಭಾವನೆ
ನಿನ್ನ ಮನಸ್ಸಿನಲ್ಲಿ ನಾನೂ ಇಲ್ಲದ ಹೊತ್ತು
ಆ ಹೊತ್ತಿನಲ್ಲಿ ಸತ್ಯ ಹಾಕಿದ ಹೆಜ್ಜೆಗಳ ಗುರುತು

ಆ ಸ್ವತ್ತು ನಿನ್ನದಲ್ಲ
ಆ ಸ್ವತ್ತು ರೂಪ ತರಿಸಿಕೊಂಡಿರುವ ಸ್ವತ್ತು !

ಹಿಂದು ಮುಂದುಗಳು ಅರಿತು ಬರೆಯುವ ಕವಿತೆಗಳು
ಅನೇಕ ಕಾಲದಿಂದ ಕಾದು ಕುಳಿತಿವೆ ಹೊರಬರಲು
ಪ್ರತಿಯೊಂದು ಕವಿತೆಗೆ ಒಂದು ಬಿಂದುವುಂಟು
ಹಿಂದು ಮುಂದುಗಳ ತಿಳಿದಿರುವ ಬಿಂದು !

ಹೌದು ಅವುದು ಎಂದು ಹೇಳಿ ಮನಸೊಪ್ಪಿ
ಬರೆಯುವ ಕವಿತೆಗಳು
ಬಿರುದುಗಳು ಬೇಡದ ಕವಿತೆಗಳ ಸಾಲುಗಳು
ಕಳೆದುಹೋಗಿದ್ದನ್ನು ನೆನಪಿಸಿ ಮುಂದನ್ನು ರೂಪಿಸಿ

www.sriharikhoday.com

ಮುಂದಿನ ಸ್ವತ್ತನ್ನು ಗಳಿಸಿಕೊಳ್ಳುವ
ಕಾದು ಕುಳಿತಿರುವ ಅನೇಕ ಕವಿತೆಯ ಸಾಲುಗಳು !

ವಿಶ್ವವೇ ತನ್ನ ಜೊತೆ ಬಂದು
ಹಿರಿದು . ಕಿರಿದು ಮರೆತಿರುವ ಕವಿತೆಯ ಸಾಲುಗಳು
ದಿನನಿತ್ಯವೂ ಕ್ಷಣ ಕ್ಷಣದಲ್ಲಿ ಮೂಡುತ್ತಿದೆ
ಹೊಸ ವಿಚಾರಗಳ ಅಮದು !

ಕಾದು ಕಾದು ಸೋಲನ್ನು ಅನುಭವಿಸದೆ
ಇಂದು . .ನಾಳೆ ಆಗುವುದ ತಿಳಿದಿರುವ ಸಾಲುಗಳು
ಆ ಸುಖ ರೂಪವಿಲ್ಲದ ಸುಖದ ಸ್ವತ್ತನ್ನು
ಕವಿತೆಯ ಸ್ವತ್ತೆಂದು ಕವಿ ಭಾವಿಸಿ

ಅರ್ಥಗಳಿಗೆ ಅಕ್ಷರ ರೂಪದಲ್ಲಿ ರೂಪ ತೋರಿಸುವ ಕವಿ
ತನ್ನ ಸ್ವತ್ತು ಎನ್ನುತ್ತಿದ್ದಾನೆ !

ಪದಗಳೇ ನನ್ನ ಸ್ವತ್ತು ಅಕ್ಷರಗಳೂ ನನ್ನ ಸ್ವತ್ತು
ಪದಗಳ ಜೋಡಣೆಯ ಆಭರಣಗಳೇ ಸ್ವತ್ತು
ಸುಮ್ಮನಿರದೆ . .ಇರಲಾಗದೆ ಹಗಲು ರಾತ್ರಿ ಮಿನುಗುತ್ತಿರುವ
ಅರ್ಥಗಳಿಗೆ
ಹೊಸ ಪದಗಳ ಸ್ವತ್ತನ್ನು ಹುಡುಕಬೇಕಾಗಿದೆ

ನಮ್ಮ ಸ್ವತ್ತು ಕಾಣಿಸುವ ಸ್ವತ್ತಲ್ಲ
ಮನೋರೂಪಗೊಂಡಿರುವ ಅನುರೂಪವೇ ಕವಿಯ ಸ್ವತ್ತು !

**– ಶ್ರೀ ಹರಿ.**

**05-05-2015**



# 936

ನಿಶೆಯ ತೊಟ್ಟುಗಳು ನನ್ನಲ್ಲಿ ಸೇರುತ್ತಾ . . . .ಸೇರುತ್ತಾ
ತೇಲಾಡುತ್ತಿರುವ ಹೊಸ ಹೊಸ ಭಾವನೆಗಳು
ಹೊಸ ಹೊಸ ಅನುಭವದ ಹೊಸ್ತಿಲುಗಳನ್ನು
ದಾಟುತ್ತಾ .. ದಾಟುತ್ತಲೇ ಇವೆ !

ನಾನೊಬ್ಬನೇ ದಾಟದೆ ನನ್ನ ಜೊತೆಗೆ ನನ್ನ ಕಾಂತೆಯೂ
ದಾಟುತ್ತಿರುವಳು
ಏಕೆ ಬಂದಿರುವೆ . .? ಏನು ಮಾಡುವುದು ಎಂಬುದು ಮರೆತು
ನಿಶೆಯ ಸುಖ ನನ್ನ ಕಾಂತೆಯ ಜೊತೆ ಸುಖವಾಗಿ
ಜೀವನದಲ್ಲಿ ಸುಖವಿಲ್ಲದಿದ್ದರೆ ಜೀವನವಲ್ಲ ಎಂದು ಹೇಳುತ್ತಿದೆ
ನನ್ನ ಮನ

ಒಂದು ಕಡೆ ಕೈಯ್ಯಲ್ಲಿ ನಿಶೆ
ಮತ್ತೊಂದು ಕೈಯ್ಯಲ್ಲಿ ನನ್ನ ಕಾಂತೆ
ಹೊಸ ಅನುಭವವಾದ ದೇವರ ಜೊತೆ
ಕಾಲ ಕೂಡ ಜೊತೆಯಾಗಿದೆ !

ಜೀವನದ ಹೆಜ್ಜೆಗಳ ನೋಡುತ್ತಿರುವ ನಮ್ಮ ಮನೋಕಾಂತಿಯ
ಕನ್ನಡಿ
ಅದನ್ನು ನಾಜೂಕಾಗಿ ನಾಜೂಕು ಮಾಡದಿರೆ
ದಿಕ್ಕು ದೆಸೆಗಳಿಲ್ಲದೆ ಒಡೆದುಹೋಗುವುದು

www.sriharikhoday.com

ಇಂದಿನ ರಸಭರಿತವಾದ ರೋಮಾಂಚನ ದೇವರ ಜೊತೆ
ಅನುಭವ
ನನ್ನನ್ನು ಕೂಡ ಭಕ್ತಿಯಿಂದ ನಮಿಸುತ್ತಿರುವುದು
ಇಂದು . ಎಂದು . .ನಾಳೆಗಳ ತಿಳಿಯದೆ
ಕೊನೆಗಳೇ ಇಲ್ಲದ ಅನುಭವ ನೀಡುತ್ತ

ಹೆದರದೆ ಅಂಜದೆ ಮನಸಾರೆ ನೀಡುತ್ತಿರುವುದು
ನನ್ನ ಜೊತೆಯಿರುವ ಸುಖ
ಸುಖದ ಜೊತೆಗೆ ಬೆರೆತ ಅನುಭವಗಳ ನೀಡಿ
ಮಿಕ್ಕಿರುವ ಕೆಲವೇ ಹನಿಗಳಿರುವ ನಿಶೆಯ ಬಟ್ಟಲಲ್ಲಿ

ನಿನ್ನ ಸುಖ . .ನನ್ನ ಕೊನೆ ತಿಳಿಯದ ಸುಖವನ್ನು ನೋಡಿ
ಹನಿ ಕೂಡ ನನ್ನ ಜೊತೆ ಸುಖದಲ್ಲಿ ಬೆರೆಯುವ ಆಸೆಯಿಂದ
ನಿನ್ನ ಸುಖದಲ್ಲಿ ನಾನೂ ಬೆರೆಯುವೆನೆಂಬ
ಪ್ರೀತಿಯ ಒಲುಮೆಯ ಹೂವು !

ಸುಖದಲ್ಲಿಯೇ ಬೆರೆಯಲು ಇಚ್ಚಿಸುವ ಹನಿಗಳಿಗೆ
ಅತಿ ಪ್ರೀತಿಯಿಂದ ಸ್ವೀಕರಿಸಿ
ಅವರ ಪ್ರೀತಿಯ ಕಾಂತಿಯ ಪ್ರಭಾವ ನನ್ನನ್ನು
ಮೋಡಿ ಮಾಡಿ . .ನಿಶೆಯ ಬಟ್ಟಲನ್ನು ಮೇಲೆತ್ತಿ

ಪ್ರತಿಯೊಂದು ಹನಿಯೂ ನನ್ನನ್ನು ಸುಖದಲ್ಲಿ ಸೇರಿಸಿಕೊಳ್ಳಿ
ಹೊಸದಾಗಿ ಬಂದಿರುವ ಹನಿಗಳು
ನನ್ನ ಜೊತೆಗೆ ಅದೂ ಬೆರೆತು ಸುಖಪಡುತ್ತಿರುವುದು
ನನ್ನ ಅನುಭವಕ್ಕೆ ಹೊಸ ಮೆರುಗು ಕೊಡುತ್ತಿದೆ !

ಒಳ್ಳೆಯದು . .ಕೆಟ್ಟದ್ದು ಮರೆತಿರುವ ನಾನು
ಹಿಂದು ಮುಂದುಗಳಿಲ್ಲದ ವಾತಾವರಣ
ಹೆಸರೇ ತಿಳಿಯದ ನನ್ನ ದೇವರು
ನನ್ನ ಜೊತೆಗೆ ಹನಿಗಳೂ ಕೂಡ ದೇವರಲ್ಲಿ ಬೆರೆತು ಸುಖಪಡುವುದ
ಕಂಡು



www.sriharikhoday.com

ಸುಖದಲ್ಲಿ ಆನಂದ ರೂಪದಲ್ಲಿರುವ ನನ್ನ ದೇವರನ್ನು
ನಮ್ಮಗಳ ಜೊತೆ ಬಿಡದೆ ಆವರಿಸಿಕೊಂಡಿರುವ ಆನಂದ
ದೇವರ ರೂಪವಾದ ಆನಂದ
ಜೊತೆ ಜೊತೆಯಿರುವ ನನ್ನ ಕಾಂತೆ

ಎಲ್ಲವೂ ಅತಿ ಸೂಕ್ಷ್ಮ . .
ಅತಿ ತೇಜಸ್ಸುಳ್ಳ ಸ್ವಪ್ನಗಳಿಲ್ಲದ ಭ್ರಾಂತಿಗಳಿಲ್ಲದ
ಆನಂದದ ಸತ್ಯರೂಪ ಅನುಭವವಾಗಿ
ನನ್ನಲ್ಲಿ ಸೇರಿಹೋಗಿದೆ !

**. . . ಶ್ರೀ ಹರಿ.**

**06-05-2015**

## 937

ಬೇಹುಗಾರಿಕೆ ಮನಸ್ಸಿನ ವಾಡಿಕೆ
ಸುಮ್ಮ . .ಸುಮ್ಮನೆ ಉದ್ದೇಶವಿಲ್ಲದೆ
ಹೊರಬರುತ್ತಿರುವ ಅನಿಸಿಕೆ ಬೇಹುಗಾರಿಕೆ !

ಅಪನಂಬಿಕೆಯೇ ಬುನಾದಿ ಮೇಲೆ ಬೆಳೆಯುತ್ತಿರುವ ಬೇಹುಗಾರಿಕೆ
ಕದ್ದು ಕೇಳಿಸಿಕೊಳ್ಳುವ ಅನಿಸಿಕೆ
ಗುಲಾಮನಾಗಿರುವುದು ಮನಸ್ಸಿನ ಆಳ್ವಿಕೆ !

ಎಚ್ಚರ ಮರೆತಿರುವ ಬೇಹುಗಾರಿಕೆ
ತನ್ನದೇ ಆದ ಎದೆಗಾರಿಕೆ
ಬೇಹುಗಾರಿಕೆಗೆ ಹೊಸ ಹೆಸರು ನೀಡುತ್ತಿದೆ ಕವಿತೆ !

ಅಂತೆ-ಕಂತೆಗಳು ದಕ್ಷತೆ ಕಳೆದುಕೊಂಡು
ಚಂಚಲತೆ ಹೆಚ್ಚಿಸಿಕೊಂಡು ವಿಶ್ವದ ಸುತ್ತಳತೆಯ ಬೇಹುಗಾರಿಕೆ
ನಿಜವಾಗಲು ಸಾಹಿತ್ಯವಿಲ್ಲದ ನಾಟಕೀಯತೆ !

ಅವರದೇ ಆದ ಹೊಸ ನಾಗರಿಕತೆ
ಏನೋ ಸಾಧಿಸುವರಂತಹ ಸಫಲತೆ
ಸುಳ್ಳಿನ ಆಶುಕವಿಗಳಾಗಿ ಮನೋಶೀಲತೆಯನ್ನು ಧ್ವಂಸಗೊಳ್ಳುತ್ತಿದೆ



ಯಾವ ಸಫಲತೆಯೋ . .ಯಾವ ಬಾಳಕತೆಯೋ
ಯಾವ ದೇವರ ಹರಕೆಯೋ . .
ಬೇಹುಗಾರಿಕೆ ಮಾನವನ ಜೊತೆ ಮುನ್ನಡೆಯುತ್ತಲೇ ಇದೆ !

ಬೇಹುಗಾರಿಕೆ ಸಮಾಜ ಅರ್ಥೈಸಿಕೊಂಡು
ಅತಿ ಎಚ್ಚರದಿಂದ ಹೊರಗಿದ್ದುದ್ದನ್ನು ಗುಡಿಸಿ ಸಿದ್ಧಪಡಿಸುವ ಬದಲು
ಮನಸ್ಸಿನ ಬೇಹುಗಾರಿಕೆ ಕಸ ಗುಡಿಸಿ

ಮನಸ್ಸಿನಾಳದಲ್ಲಿ ಕೊಳೆತು ಗೊಬ್ಬರವನ್ನಾಗಿ
ಮಾಡುವುದೇ ಲೇಸು

ಆಳದ ಅರ್ಥ ಬೇಹುಗಾರಿಕೆಯಲ್ಲಿ ಎಷ್ಟು ಸತ್ಯ
ಎಷ್ಟು ಸುಳ್ಳುಗಳಿರುವಂತಹ ಎರಡು ಅರ್ಥಗಳಿರುವಾಗ
ಇದು ಕಸಕ್ಕೆ ಸಮಾನ .

ನಮ್ಮ ಅಂತಹ ವಾಡಿಕೆಗಳಿದ್ದರೆ ಅದ ಬಿಟ್ಟು
ಹೊಸ ವಾಡಿಕೆಯನ್ನು ಅಂಟಿಸಿಕೊಳ್ಳುವುದೇ ಮೇಲು
ಅಂತೆ-ಕಂತೆಗಳ ವಿಚಾರ ಇಂದು ಮರೆಯೋಣ

ಸಫಲತೆಯ ಮಾರ್ಗದಲ್ಲಿ ನಡೆಯೋಣ
ಮನೋಶೀಲತೆಯನ್ನು ಕಾಪಾಡೋಣ
ಜೀವಂತವಾಗಿರುವ ನಮ್ಮ ಬಾಳ ಕತೆ ಬರೆಯೋಣ !

**- ಶ್ರೀ ಹರಿ.**

**07-05-2015**

www.sriharikhoday.com

## 938

ಕವಿತೆಯಲ್ಲಿರುವ ಭವಿಷ್ಯ
ಮಾನವನ ಸುಖಕ್ಕೆ ಬಳಸಿಕೊಳ್ಳಬಹುದಾದ ಕವಿಯ ರಹಸ್ಯ !

ಯಾವುದೇ ನಿರ್ಮಾಣಕ್ಕೆ ಆಕಾಶ ಅವಶ್ಯಕ
ಭವಿಷ್ಯವನ್ನು ಬೆಳೆಯಲು
ಬೆಳೆಸಲು, ತನ್ನ ಅದೃಷ್ಟವನ್ನು ಹೆಚ್ಚಿಸಿಕೊಳ್ಳಲು,
ನಮ್ಮ ಮನಸ್ಸು .ಮನಸ್ಸಿನ ಗುಂಪುಗಳೇ ಉಪಕರಣಗಳು !

ಹರುಷದ ಭಾವನೆ ಶೇಷಕೇಶವಿಲ್ಲದ ಭಾವನೆ
ಆವೇಶರಹಿತ ಭಾವನೆ ಭವಿಷ್ಯವನ್ನು ರೂಪಿಸಲು
ಸಫಲತೆಯ ಸಾಧಿಸಲು
ನಮ್ಮ ಮನೋಗುಣಗಳೇ ಬುನಾದಿ !

ಗಾಣಿಗನು ಗಾಣದ ಮೇಲೆ ಕುಳಿತು ಸುಮ್ಮನೆ ಸುತ್ತಿದರೆ
ಗಾಣಕ್ಕೆ ಕಾಳನ್ನು ತುಂಬದಿದ್ದರೆ
ಎಣ್ಣೆ ಹೇಗೆ ಬರದೋ .. ಸತ್ಯ ವಿಷಯಗಳು
ಮನದಲ್ಲಿ ತುಂಬಿಕೊಳ್ಳದಿದ್ದರೆ

ಖಾಲಿ ಗಾಣವನ್ನು ಸುತ್ತಿ ಸುತ್ತಿ
ನಾನೂ ಕೆಲಸ ಮಾಡುತ್ತಿರುವೆನೆಂದು ಹೇಳುವಂತೆ
ವಿಚಾರ ಸಂಕಿರಣ ಅಸಹ್ಯಕ್ಕೆ ಹೋಲಿಸಬಹುದು !



ಮನಸ್ಸು ಅದರಲ್ಲಡಗಿರುವ ಶಕ್ತಿ
ಅದರಲ್ಲಡಗಿರುವ ಕಲ್ಪನಾ ಶಕ್ತಿ
ಅದರಲ್ಲಡಗಿರುವ ಸಾಧನೆಯ ಶಕ್ತಿ
ಅದರಲ್ಲಡಗಿರುವ ಗ್ರಹಣಾ ಶಕ್ತಿ

ಅಡಗಿ ಜೊತೆ ಜೊತೆಗಿರುವ ಶ್ರವಣಾ ಶಕ್ತಿ
ಕಷ್ಟವಿಲ್ಲದೆ ಭವಿಷ್ಯವನ್ನು ರೂಪಿಸಬಲ್ಲದು
ಆಸಕ್ತಿ . .ಈ ದಡದಿಂದ ಮತ್ತೊಂದು ದಡದ ಸಾಧನೆ
ದಡಕ್ಕೆ ಹೋಗಲು ಆಸಕ್ತಿಯೇ ಸೇತುವೆ !

ಅಸಾಧ್ಯವೆಂಬ ಭಾವನೆ ಇಲ್ಲದ್ದಲ್ಲಿ
ನಮ್ಮ ಮನೋಜೋಡಣೆ ಭವಿಷ್ಯವನ್ನು ರೂಪಿಸಲು ಬಲು ಸುಲಭ
ಆಸಕ್ತಿಯಿಂದ ಕೇಳಿ ಆಸಕ್ತಿಯಿಂದ ಗ್ರಹಿಸಿ
ಯಾವ ಕಡಿವಾಣಗಳೂ ಇಲ್ಲದೆ

ಆದಿ ಪುರುಷನು ಯೋಚಿಸುವಂತೆ
ಬ್ರಹ್ಮ ಬ್ರಹ್ಮಾಂಡಗಳನ್ನೇ ಸೃಷ್ಟಿಸಬಲ್ಲದು
ಅಸಾಧ್ಯವಿಲ್ಲದ ಕಾರ್ಯಗಳನ್ನು ಸಾಧಿಸಬಲ್ಲ ಓರ್ವ ಮನಸ್ಸು
ದೊಡ್ಡದು ಕಿರಿದು ಮರೆತು ಕಣಕಣಗಳಲ್ಲಿ ಬೆಳೆಯುವ ಆಸಕ್ತಿ
ತುಂಬಿರುವುದು

ಬೆಳವಣಿಗಳ ಇಚ್ಚೆಗಳು ಮನಸ್ಸಿನಲ್ಲಿಯೂ ಇದೆ
ಮನಸ್ಸಿನಿಂದ ಒಂದು ದೃಷ್ಟಿಕೋನದಿಂದ ನಾವು ನೋಡಿದರೆ
ಅಸಾಧ್ಯಗಳು ಸಾಧ್ಯವಾಗಿ ನಮ್ಮ ಮನಸ್ಸಿಗೆ
ಒಂದು ಹೊಸ ಆಭರಣ ರೂಪವಾಗುತ್ತದೆ

ಜೋತಿಷ್ಯನ ಭವಿಷ್ಯಕ್ಕಿಂತ ಮನುಷ್ಯನ ಮನಸ್ಸಿನ ಭವಿಷ್ಯ ಮುಖ್ಯ
ಕವಿಯಂತೆ ಜೋಡಣೆಯಾಗಿ ತಾನೊಬ್ಬನೇ ಸುಖಪಡದೆ
ಭವಿಷ್ಯದ ಬೆಳೆಯನ್ನು ಎಲ್ಲರೂ ಹಂಚಿಸಿಕೊಳ್ಳುವ
ಸಾಧ್ಯತೆಗಳು ಹೆಚ್ಚಾಗಿರುವುದು

www.sriharikhoday.com

ಕವಿತೆಗೆ ಓದುಗರು ಹೆಚ್ಚಾಗುವಂತೆ
ಮನಸ್ಸಿನ ಸಾಧ್ಯತೆಗಳ ಜೋಡಣೆಗಳು
ಎಲ್ಲದರಲ್ಲಿಯೂ ಎಲ್ಲರಿಗೂ ಯಶಸ್ಸನ್ನು ತರಿಸಿ
ಕೀರ್ತಿಶಾಲಿಯಾಗಿ ಕೀರ್ತಿ ಶರೀರಕ್ಕೆ . . ತನ್ನ ಹೆಸರಿಗೆ ಕೀರ್ತಿಯನ್ನು
ಕೊಡದೆ
ಮನಸ್ಸಿಗೆ ಕೀರ್ತಿಯ ಒಪ್ಪಿಗೆಯ ಆಭರಣ ನೀಡಿದರೆ
ಶ್ರಮವಿಲ್ಲದ ಮನಸ್ಸು ಮತ್ತೆ ಒಂದು ಭವಿಷ್ಯವನ್ನು ರೂಪಿಸಲು
ಸಜ್ಜಾಗುವುದು
ಗಾಣಿಗನಂತೆ ಕಾಳಿಲ್ಲದೆ ತಾನೊಬ್ಬನೇ
ಸುಮ್ಮನೆ ತಿರುಗುತ್ತಿದ್ದರೆ ಕಾಲಶೇಷವು ಕಳೆದುಹೋಗುವುದು !

**– ಶ್ರೀ ಹರಿ.**

**08–05–2015**



## 939

ಮುಂದಿನ ಜೀವನದ ಸುಖಕ್ಕೆ
ಇಂದಿಗೆ . ಇಂದಿನ ಜೀವನ ನಿಯಮಗಳು
ಇಂದಿನ ಸುಖಕ್ಕೆ
ಅಂದಿನ ನಿಯಮಗಳಂತೆ ಬಾಳಿದ ಬಾಳುಗಳು

ಬರೀ ಓದುಗಾರಿಕೆ ಅಲ್ಲ
ಬರೀ ಬೆದರಿಕೆಯ ಮಾತುಗಳಲ್ಲ
ಸತ್ಯ ಜೀವಂತದ ಕಥೆಗಳು
ಇಂದಿನ ಜೀವನದ ನಿಯಮಗಳು !

ಯಾವ ತಂತ್ರಗಾರಿಕೆ ಇಲ್ಲದ
ಜವಾಬ್ದಾರಿಯ ಮನೋ ತತ್ತ್ವಗಳು
ತಮ್ಮ ಮಾತಿನ ತತ್ತ್ವಗಳು ತಮ್ಮದೇ ನಂಬಿಕೆಯ ಬಾಳು
ಬೇರೆಯವರಿಗೆ ತಿಳಿಹೇಳಿದರೆ ಸತ್ಯವಾಗುವುದು !

ಹೆಜ್ಜೆ ಹೆಜ್ಜೆಗೆ ಜೀವನವನ್ನು ತುಂಬಿಕೊಳ್ಳುತ್ತ
ಹೆಜ್ಜೆ ಹೆಜ್ಜೆಗೂ ಎಚ್ಚರದ ಹೆಜ್ಜೆಗಳ ಅಚ್ಚಾಕುತ್ತ
ತಪ್ಪು ನಂಬಿಕೆಗಳನ್ನೆಲ್ಲ ದೂರವಾಗಿರಿಸಿದರೆ
ಮೆದುಳಿನ ತಿಳುವಳಿಕೆಗೆ ಮಾನ್ಯತೆ ನೀಡುತ್ತದೆ

www.sriharikhoday.com

ಮಾನ್ಯತೆಯ ನೆರಳಾಗಿರುವ ಬಾಳು
ಯಾವ ತೆಗಳಿಕೆಗೂ ಸಿಗದೆ
ಎತ್ತರದ ಬೆರಕೆಯ ಅನುಭವ
ಅದು ಇದು ಕಾಣದೆ ಇರುವ ನಮ್ಮ ಮನದ ಜಾದುಗಾರಿಕೆ !

ನಮ್ಮ ಅಂತರಾಳದ ತಂತ್ರಗಾರಿಕೆಗೆ
ತಪ್ಪನ್ನು ನಂಬದೆ ನಾನು ನಾನೆಂಬ
ಮನೋಸಾಲುಗಳ ಅಡ್ಡಗಾಲುಗಳ ಲೆಕ್ಕಿಸದೆ
ನನ್ನ ಮನೋನಿಯಮಗಳನ್ನು ಪಾಲಿಸು ಎಂದು ಅಂತರಾಳ
ಹೇಳುತ್ತಿದೆ

ಇಂದಿನ ಸುಖಕ್ಕೆ . . ಮುಂದಿನ ಸುಖಕ್ಕೆ
ಕ್ಷಣ ಕ್ಷಣಗಳ ಸುಖಕ್ಕೆ ಬೇಡದ ನಾನು ನಮ್ಮದು ಎಂಬುದು
ಮರೆಸೋಣ

ಇಂದಿನ ನಿಯಮಗಳ ಸಾಧನೆಗಳನ್ನು
ಅದರ ಸುಖವೆಂದು ಅನುಭವಿಸೋಣ

ಮುಂದಿನ ಜೀವನ ಸುಖಕ್ಕೆ
ಹಿಂದಿನ ನಯಮಗಳು ಇಂದಿನ ಸುಖಗಳು,
ಇಂದಿನ ನಿಯಮಗಳು ನಮ್ಮ ಮುಂದಿನ ಬಾಳು !

**– ಶ್ರೀ ಹರಿ.**

**09-05-2015**



# 940

ಮನ ಮೌನದ ಆಳದ ಮೇಲೆ
ನಾನು ನನ್ನದು ಎಂಬುದು
ನೆನಪಿನ ದೋಣಿಯ ಮೇಲೆ ತೇಲಾಡುತ್ತಿದೆ !

ನಾನು ನನ್ನದು ಒಂದೇ ಉಯ್ಯಾಲೆ
ಮಾತನಾಡಲಾಗದ ಉಯ್ಯಾಲೆ ನೆನಪುಗಳು
ಉಯ್ಯಾಲೆಯಲ್ಲಿ ಕುಳಿತು ಮಾನವನ ಮನ
ಒಂದೆಡೆ ನಿಲ್ಲದೆ ಜೋಕಾಲಿಯಾಡುತ್ತಿದೆ !

ಬೆತ್ತಲೆಯ ಮನಸ್ಸು
ಮುನ್ನುಗ್ಗುವ ಹಾದಿ ತಿಳಿಯದೆ
ಕತ್ತಲೆಯಲ್ಲಿ ಬೆರೆತುಹೋಗಿ ನಿಜವನ್ನು ಮರೆಸಿ
ಬೀಸುತ್ತಿದೆ ಹೊಸ ಹೊಸ ವಿಚಾರಗಳ ಬಲೆ !

ದಾಂಧಲೆಗೆ ಒಳಗಾಗಿ ಅಲೆಗಳಂತೆ ಬರುವ ಕಷ್ಟಗಳಿಗೆ
ತನ್ನ ನಾಟಕಶಾಲೆಯಲ್ಲಿ ಕಲಿತಿರುವ
ನಾಟ್ಯಕಲೆಯ ವಿಚಾರಧಾರೆ ಮುಂದುವರೆಸಿ

ಸತ್ಯದ ಅಂದ-ಚೆಂದಗಳಿಗೆ
ತನ್ನ ಅಪ್ಪಣೆಯ ಚಲಾಯಿಸಲು
ಮೌನದ ಆಳದಿಂದ ಕಳಿಸುತ್ತಿದೆ ಕರೆಯೋಲೆ !



www.sriharikhoday.com

ಅಂದ-ಚೆಂದಗಳ ಮರೆತಿರುವ ನೆನಪಿನ ಗುಂಪುಗಳು
ಭೇದ ಭಾವನೆಗಳನ್ನು ತರಿಸಿ
ವಿವಾದದೊಳಗೆ ತಾನೇ ನುಗ್ಗಿ ಬುದ್ಧಿವಾದದ ಅರ್ಥ ತಿಳಿಯದೆ
ತಾನೇ ಅಪವಾದಗಳ ಸ್ವೀಕರಿಸುವ ಸಮಯಗಳು ತನ್ನೆಡೆಗೆ

ನಾನು ನನ್ನದೆಂಬ ದೋಣಿಯ ಮೇಲೆ ಕುಳಿತು
ಇಲ್ಲಿಂದ ಅಲ್ಲಿ. ಅಲ್ಲಿಂದ ಇಲ್ಲಿ ತೇಲಾಡುತ್ತಿರುವುದು ನೋಡಿದರೆ
ಸರಳ ರೀತಿಯ ಅನುವಾದ ನಾನು-ನನ್ನದು
ಮಾಡಲಾಗದೆ ಗೌಪ್ಯವಾಗಿ ಮನದ ಆಳದ ಮೌನದ ಕದವನ್ನು
ಬಡಿದು

ಬಲೆಗೆ ಸಿಲುಕಿಕೊಂಡಿರುವ ನೆನಪುಗಳು
ಬುದ್ಧಿವಾದಗಳನ್ನು ಅರ್ಥೈಸಿಕೊಂಡು
ಸರಳವಾದ ದಾಂಧಲೆಯ ಕಷ್ಟಗಳಿಗೆ
ಬುದ್ಧಿವಾದಗಳನ್ನು ಅರಳಿಸಿಕೊಂಡು

ಮತ್ತೆ ನಾನು ನನ್ನದು ಎನ್ನುವುದು
ನೆನಪಿನ ದೋಣಿಯಲ್ಲಿ ಸೇರಿಕೊಂಡು
ನಾನು ನನ್ನದೆಂಬ ಹೊಸ ದಡ ಹುಡುಕಲು
ನೆನಪಿನ ದೋಣಿಗಳು ತೇಲಾಡುತ್ತಿದೆ !

ಎಂದೂ ಮುಗಿಯದ ನೆನಪಿನ ತೇಲಾಟ
ಸುಮ್ಮನಿರುವಾಗಲೆಲ್ಲ ಹೊಸ ಹೊಸ ವಿಚಾರದ ಅಲೆ
ಸೃಷ್ಟಿಸಿ ಹೊಸ ದಾಂಧಲೆಯಲ್ಲಿ ಬೆರೆತು ಹೋಗುತ್ತಿದೆ !

**- ಶ್ರೀ ಹರಿ.**

**11-05-2015**



## 941

ಬೇಕು ಬೇಡಗಳ ಮನದ ಗುಂಪು
ಬೇಕಿದ್ದು ಬೇಕು. ಬೇಡದ್ದು ಬೇಕು
ಬೇಡಿದ ತಕ್ಷಣ ಬೇಕೇ ಬೇಕು

ಬಯಸಿದ್ದು ಜೊತೆ ಬಂದರೆ
ಎಂದೂ ಕಾಣದ ಸಾಧನೆಯ ಇಂಪು
ಜೊತೆ ಜೊತೆಗೆ ಜೊತೆಗಾರರ ಜೊತೆ ಮಾತು
ಮಾತಿನ ಸವಿಸೊಂಪು

ಬೇಕುಗಳು.. ಬೇಡದೇ ಇರುವವುಗಳು
ಬೇರೆ ಬೇರೆ ನೆನಪಿನ ಗುಂಪುಗಳೂ
ಅವರು ಒಪ್ಪಿದ್ದೆಲ್ಲಾ ನಾವು ಒಪ್ಪಿಕೊಂಡರೆ
ನಮ್ಮನ್ನು ಅಪ್ಪಿಕೊಳ್ಳುವರು !

ಪ್ರೀತಿಯೆಂಬ ವಸ್ತು ಎಲ್ಲಾ ಮನದಲ್ಲಿರುವ ಪ್ರೀತಿಯನ್ನು
ಹೆಪ್ಪಾಕಿಸಿ ಸುಮ್ಮನಿದ್ದ ನಮ್ಮ ಮನಸ್ಸಿಗೆ
ಮನಸ್ಸಿನ ಗುಂಪುಗಳು ಹಾಕಿಕೊಳ್ಳುವುವು
ಒಂದು ಗುಂಪಿನ ಜಾಪು !

www.sriharikhoday.com

ನೆನಪು ನೆನಪುಗಳು ಅದರಲ್ಲಿರುವ ಹೊಳಪುಗಳು
ಬರೀ ತಪ್ಪನ್ನು ಹುಡುಕುತ್ತ ಎಲ್ಲವೂ ಜೊತೆಯಿದ್ದರೂ
ನಮ್ಮಲ್ಲಿ ಒಂದು ಜೊತೆಯಿಲ್ಲವೆಂಬ ಭಾವನೆ
ನಮ್ಮನ್ನು ಬೆಪ್ಪಾಗಿಸಿ

ಬೇರೆಯಲ್ಲಿರುವುದನ್ನು ಕಂಡು ಅಸೂಯೆ ಅಸಹ್ಯಗಳ
ರೋಷ-ಉದ್ರೇಕಗಳ ಗುಂಪುಗಳು
ಮಾನವನ ಜನುಮ ಅಪ್ರಯೋಜಕವಾಗಿ ಯಾರ ಜೊತೆಗೂ
ಸೇರಿಕೊಳ್ಳದೆ ಸಾಧನೆಗಳಿಂದ ದೂರವಾಗುವುದು !

ಬೇಕೇ . ಬೇಕೆಂಬ ಛಲ
ಸಾಧಿಸಬೇಕೆಂಬ ಛಲ
ಹಿತದೃಷ್ಟಿಯುಳ್ಳ ನೆನಪಿನ ಗುಂಪುಗಳ ಭಾವನೆಗಳ
ಜೊತೆ ನಾವಾದರೆ . . .

ಸಮಾಜ ತೆರೆದ ತೋಳಿನಿಂದ ಅಪ್ಪಿ
ನಾವು ಹೇಳಿದ್ದನ್ನೆಲ್ಲಾ ಒಪ್ಪಿ
ಹೆಜ್ಜೆ ಹೆಜ್ಜೆಗೂ ಮುನ್ನಡೆಯುವ ಹೆಜ್ಜೆಗಳಿಗೆ
ಮುಂದು ಹೋಗುತ್ತಿರುವೆನೆಂಬ ಭಾವನೆ !

ಜೀವನ ಪೂರ್ಣ ರೀತಿಯಲ್ಲಿ ಅನುಭವಿಸಿ
ಉಸಿರು ಉಸಿರಿನಲ್ಲಿಯೂ ಇಂಪನ್ನು ಕೇಳಿ
ಹೊಸ ಮಾರ್ಗದ ನಡಿಗೆ ಅಸೂಯೆಯುಳ್ಳವರಿಗೆ
ಮಾಡುತ್ತಿದೆ ಬೆಪ್ಪು !

ಬೇಕು . . ಬೇಡಗಳ ಮನದ ನೆನಪುಗಳ ಗುಂಪು
ಬೇಕಿದ್ದೂ ಬೇಕು. .ಬೇಡದ್ದೂ ಬೇಕು
ಎಂಬ ಮೂಲಸೂತ್ರ ಸರಿಯೋಜನೆಗಳಿಂದ
ಸವಿನೆನಪುಗಳ ಗುಂಪುಗಳನ್ನು ಉಪಯೋಗಿಸಿಕೊಂಡರೆ



ಎಲ್ಲವೂ ಜೊತೆಸೇರಿ ತರಿಸುವುದು ಇಂಪು
ನಮ್ಮ ಮಾತುಗಳಿಗೆ ಕೇಳುಗರಾಗಿ
ಮಾತಲ್ಲಿ ಕಾಣುವರು ತಮ್ಮದೇ ಆದ
ಒಪ್ಪಿಗೆಯ ಸೊಂಪು . . !

**ಶ್ರೀ ಹರಿ.**

**16-05-2015**

www.sriharikhoday.com

## 942

ಕಾಲವೇ ಜೀವನ
ಜೀವನದ ಮಾಪಕವೇ ಕಾಲ
ಕಾಲವೇ ಜೀವನವೋ . .ಜೀವನವೇ ಕಾಲವೋ
ಇವೆರಡೂ ಜೊತೆ ಜೊತೆಯಾಗಿರುವರೆಗೂ
ಜೀವ . .ಕಾಲ . .ಜೊತೆಯಾಗಿರುತ್ತದೆ !

ಕಾಲದ ಅವಧಿ ಸಾಧನೆಯ ಅವಧಿ
ಕಾಲ ಇಲ್ಲದಿರೆ ಸಾಧನೆಯ ಮಾಪಕವೇ ಇಲ್ಲ
ಜೀವನದ ಪ್ರಾಣ ಇಲ್ಲದಿರೆ
ಕಾಲದ ಗಣಿಕೆ ಮಾಡುವುದು ಯಾವುದೂ ಇಲ್ಲ
ಕಾಲಕ್ಕೆ ಜೀವ . ಜೀವಕ್ಕೆ ಕಾಲ . . !

ಜೊತೆಗಿರುವ ಇರುವಿಕೆ ಪ್ರಮಾಣಗಳ ಜನುಮ
ಜನುಮವೇ ಜೀವ. . .ಜೀವವೇ . ಜನುಮ
ಸರಿಯಾಗಿ ಉಪಯೋಗಿಸದ ಜೀವ ಜೀವನವಲ್ಲ

ಸರಿಯಾಗಿ ಉಪಯೋಗಿಸದೆ ಇರುವ ಕಾಲ ಕಾಲವಲ್ಲ
ಕಾಲವೇ ಜೀವನವಾಗಿರುವಾಗ
ಕಾಲದ ವ್ಯರ್ಥ . ಜೀವನದ ವ್ಯರ್ಥ
ಎಂದು ಮನದಲ್ಲಿ ಕಾಳಜಿ ಇದ್ದರೆ
ಜೀವನವೇ ಜೀವ ಪೂರ್ಣ ಅನುಭವ ಪಡೆಯಬಹುದು



www.sriharikhoday.com

ಕಾಲದ ಜೊತೆಗೆ ಜೀವಿಸೋಣ
ಜೀವನ ಜೊತೆ ಕಾಲವನ್ನು
ಜೊತೆ ಸೇರಿಸಿಕೊಂಡು ಉಪಯೋಗಿಸೋಣ
ಜೀವನ ಏಳಿಗೆಯ ಹೆಜ್ಜೆಗಳನ್ನು ಸರಿಯಾಗಿ ಉಪಯೋಗಿಸಿಕೊಂಡು
ನಮ್ಮಲ್ಲಿರುವ ಜೀವದ ಜೊತೆಗೆ ಕಾಲವನ್ನು ಬೆರೆಸಿಕೊಳ್ಳೋಣ !

**– ಶ್ರೀ ಹರಿ.**

**18-05-2015**

## 943

ಎಲ್ಲದರಲ್ಲಿ ಸೆಳೆತಗಳ ಎಳೆತಗಳು
ಸುಮ್ಮನಿರದ ದೈವ ಕ್ಷಣಗಳೂ . . .
ಸೆಳೆತಗಳ ಎಳೆತಗಳಲ್ಲಿ ತಾವೇ ಭಾಗಿಗಳಾಗಿ ಹೋಗಿರುವುವು !

ಸುಖವನ್ನು ಅನುಭವಿಸುತ್ತ ಸುಖದ ಪ್ರಮಾಣವನ್ನು ಅಳೆಯುತ್ತ
ಅರಿತು–ಬೆರೆತು ಹಳೆಯದನ್ನು ಮರೆತು ಹೊಸರೂಪದಲ್ಲಿ
ನೋಡುವ ಮನೋ ಸೆಳೆತಗಳು

ಮೇಲು–ಕೀಳುಗಳ ಭಾವನೆಗಳು
ದ್ವೇಷವನ್ನು ಸೆಳೆಯುತ್ತ ಬಾಳಿನ ಬೆಳಕನ್ನು
ಇರುಳಾಗಿಸುತ್ತಿದೆ !

ಜೀವನದ ತಿರುಳು ತಿಳಿಯದೆ
ಎಳೆತಗಳಲ್ಲಿ ಮರುಳಾಗಿ
ಒಂಟಿಬಾಳು ಬಾಳುತ್ತಿದೆ !

ಕಣ್ ರೆಪ್ಪೆಗಳ ಎಳೆತಗಳು ರೂಪದ ಸೆಳೆತಗಳು
ಅನುಭವದ ಬಯಕೆಯ ಸಂಬಂಧಗಳು
ಐಕ್ಯ ಭಾವದಲ್ಲಿ ಬೆರೆತು ಅಹಂಭಾವವನ್ನು ಕರಗಿಸಿ

ಆನಂದದ ತರಂಗಗಳಲ್ಲಿ ಆನಂದದ ಅಳತೆಗಳು
ನಮ್ಮ ಮನೋಕ್ರಿಯೆಗಳನ್ನೇ ಎಳೆಯುತ್ತಿದೆ !



ಭಾವಭಂಗಿಗಳ ಅಭಿನಯಗಳು
ಪ್ರೀತಿ–ಪ್ರೇಮ ದ್ವೇಷಗಳ ಅಭಿನಯಗಳು
ಅಹಂಭಾವವನ್ನು ಹೆಚ್ಚಿಸಿ ಹೆಚ್ಚಿಸುತ್ತ

ಛಲಗಳ ಯೋಚನೆಗಳಿಗೆ
ಎಳೆತಗಳು ಕಣ್ಣಿಗೆ ಕಾಣದ ವಿಶ್ವದ ಜಾಲ
ಅಳತೆ ಸೆಳೆತಗಳು ಅದರ ಕೆಲಸದ ಕೀಲಿ ತಿಳಿಯದು

ಕಾಲವನ್ನು ಅಕಾಲ ಮಾಡುತ್ತ
ಅಕಾಲವನ್ನು ಕಾಲದ ಪ್ರಜ್ಞೆಯಲ್ಲಿ ಮೂಡಿಸುತ್ತ
ಬರಿದಾದ ಮನಸ್ಸಿಗೆ ಉಜ್ವಲ ಮನಸ್ಸಿನ ಆಕರ್ಷಣೆ !

ಚಪಲಗಳಿಗೆ ಆಕರ್ಷಕ ಕಲೆಗಳು
ಸುಮ್ಮನಿರುವವನಿಗೆ ಉನ್ನತ ಸ್ಥಿತಿಗೆ ತರುವ ಆಕರ್ಷಣೆ
ಕಿಮ್ಮತ್ತು ಗಮ್ಮತ್ತಿಗೆ ವಿಶ್ವಕೋಶದ ಆಕರ್ಷಣೆಗಳು

ದೌಲತ್ತಿನ ಬಾಬತ್ತುಗಳು
ಅಹಂಭಾವಗಳನ್ನು ಹೆಚ್ಚಾಗಿಸಿಕೊಳ್ಳುವ ಆಕರ್ಷಣೆ
ಹೊಸ ರೀತಿಯ ಅಭಿನವದ ಆಕರ್ಷಣೆ

ಸುಮ್ಮನೆ ಒಬ್ಬನೆ ಇರದೆ
ಎಲ್ಲದರಲ್ಲಿ ಸೇರಿಸಿಕೊಂಡು ಲಗತ್ತಾಗಿರುವ ಎಳೆತ ಸೆಳೆತಗಳು
ಒಂದು ರೀತಿಯ ಭಕ್ತಿಯ ಶ್ರಾವ್ಯವಾಗಿ

ಒಂದು ಕಡೆ ಅಸಾಧ್ಯವನ್ನು ಸಾಧ್ಯ ಮಾಡುವ ಆಕರ್ಷಣೆ
ಅನುಭವದ ರಥದಲ್ಲಿ ಕುಳಿತು ಎಲ್ಲಾ ಭಾವನೆಗಳು
ಅನುಭವದ ಸಾರೋಟಿನಲ್ಲಿ ಕುಳಿತು ಮುನ್ನಡೆಯುತ್ತಿವೆ !

ಧೂಳಾಗಿರುವ ಬಾಳು . ಬಾಳಿನ ಹಿಂದೆ ದೂಳು
ಎಳೆತಕ್ಕೆ ಸೆಳೆತಕ್ಕೆ ಯಾವ ರೀತಿ ಕುತ್ತು ಬರದೆ
ಎಲ್ಲದ ಅನುಭವ ಹೆಜ್ಜೆ ಹೆಜ್ಜೆಗೂ ಸಾಯಿಸುತ್ತಿರುವುದು ಪರಾಭವ



www.sriharikhoday.com

ವಾಸ್ತವದಲ್ಲೇ ಬೆಳೆಯುತ್ತ . .ಜೀವಿಸುತ್ತ
ವಾಸ್ತವದಲ್ಲಿ ಒಂಟಿಬಾಳೇ ಇದ್ದರೂ
ಸಂಬಂಧಗಳ ತಿರುಳು ತಿಳಿದುಕೊಂಡಿರುವ ಮನೋಜಾಲ

ಒಂದು ಕಡೆ ನಾನು ಆಕರ್ಷಿಸಬೇಕೆಂಬ ಭಾವನೆ
ಮತ್ತೊಂದೆಡೆ ನಾನು ಆಕರ್ಷಕವಾಗಿರಬೇಕೆಂಬ ಭಾವನೆ
ಇವುಗಳು ಆಕರ್ಷಕ ವಸ್ತುಗಳ ಸೆಳೆತಕ್ಕೆ ಗುರಿಯಾಗಿ

ಅದರ ಎಳೆತದ ಒತ್ತಡಕ್ಕೆ ಮರುಳಾಗಿ
ಕ್ಷಣವೂ ಸುಮ್ಮನಿರದೆ ಭಾವ. .ಭಾವನೆ . . .ಆಸೆ . .ದುರಾಸೆ.
ಶ್ರೀಮಂತಿಕೆ. .ಬಡತನ ಎಲ್ಲಾ ಎಳೆತ ಸೆಳೆತಗಳ ಒತ್ತಡದಲ್ಲಿ

ಒಂದೆಡೆ ಕ್ಷಣವೂ ಸುಮ್ಮನಿರದೆ
ಹಗಲು . .ಇರುಳೂ . .ಸ್ವಪ್ನಗಳ ಹೋರಾಟ
ಜೀವನದ ಹೋರಾಟದ ಸೆಳೆತ ಎಳೆತಗಳು !

ಅಳೆದು . ಅರಿತು . .ಬೆರೆತು . .ಮರೆತು
ಹಳೆಯದನ್ನೇ ಹೊಸರೂಪವಾಗಿ ನೋಡಬೇಕೆಂಬ ಮನೋ ಆಸೆ
ಎಳೆತಗಳು
ಜೀವನದ ಸತ್ಯ ತರಂಗಗಳಾಗಿ ವಿಶ್ವವನ್ನೇ ಆವರಿಸಿದೆ !

– ಶ್ರೀ ಹರಿ.

19–05–2015



www.sriharikhoday.com

## 944

ಜೀವನದ ಸಾಧನೆಗೆ
ಮನಸ್ಸಿನಲ್ಲಿ ಉದ್ದೇಶಗಳ ಬಿತ್ತನೆ
ಜೀವನದ ಫಲಗಳಿಗೆ ದೊರಕಬಲ್ಲ ಫಲಗಳ ಸತತ ಆಸೆ

ಮನಸ್ಸಿಲ್ಲದ ಕಾಲದ ಜೊತೆಗೆ
ಫಲದ ಆಸೆಗಳು ಕಾಲದ ಜೊತೆಗೆ ಪಟ್ಟರೆ
ಕಾಲ ಫಲವನ್ನು ನೀಡುವುದು !

ಎಲ್ಲರ ಒಪ್ಪಿಗೆಯ ಫಲ
ಭಾವನೆಗಳಿಗೆ ರಂಜನೆ ತರಿಸುವ ಫಲ
ಫಲ ದೊರೆತಾದ ಮೇಲೆ ಮನಸ್ಸಿನ ಸಾಧನೆಯ ಫಲ !

ತಟಕ್ಕನೆ ಘಟನೆಗಳನ್ನು ನೆನಪಿನಲ್ಲಿಟ್ಟುಕೊಂಡು
ಒಪ್ಪಿಗೆಯ ಭಾವನೆಗಳನ್ನು ಮಾತ್ರ ಹೊರಚೆಲ್ಲುವಂತೆ
ಆಗಾಗ ಒಳಗಿರುವ ಮನಸ್ಸಿನ ಜೊತೆಗೆ

ಜಿಗುಪ್ಸೆಗಳಿಲ್ಲದ ತಾವರೆಯ ಮೇಲೆ ನೀರಿನ ಹನಿ ಇರುವಂತೆ
ಗಡಿಗಳು ಇಲ್ಲದ ಮನಸ್ಸಿಗೆ ಧಾರಾಕಾರವಾಗಿ
ನೀನೇ ದೊಡ್ಡವನೆಂದು ಮನಸ್ಸಿಗೆ ಬಿರುದು ಕೊಟ್ಟರೆ

ಭರವಸೆಗಳ ತೊರೆ ತುಂಬಿ ಹರಿಯುತ್ತದೆ
ಯೋಚನೆ . .ಯೋಚನೆಯಿಂದ ಮತ್ತೊಂದು ಯೋಜನೆ
ಭಾವನೆಯ ನಟನೆ . .ಘಟನೆಗಳ ರಚನೆ

ಹೊರಗೊಂದು ಒಳಗೊಂದು ಇಲ್ಲದೆ
ಜೊತೆ ವಲಸೆ ಹೋಗುತ್ತಿರುವ ಮನಸ್ಸುಗಳು
ನಮ್ಮ ಜೊತೆ ಬರುವಂತೆ ನಕಾಶೆ ತೋರಿಸಿ ಆಸರೆ ನೀಡಿದರೆ

ಒಟ್ಟಾರೆ ಜೊತೆಗೆ ಸೇರಿ ಅರೆಕೊರೆಗಳಿಲ್ಲದೆ
ಬಿಂದುವಿನಿಂದ ವೃತ್ತ ಬೆಳೆಯುವಂತೆ
ಆಶಿಸಿದ ಫಲ ಫಲದಾಯಕವಾಗಿ

ಭವಿಷ್ಯದಲ್ಲಿ ಬರುವ ಚರಿತ್ರೆಯನ್ನು
ಈಗಲೇ ಬರೆಯಬಲ್ಲ
ಗದ್ದುಗೆಯ ನಿರ್ಮಾಣ ಮಾಡಬಲ್ಲ

ಭಾವಾರ್ಚನೆ ಕೊನೆ ಮೊದಲು ತಿಳಿಯದೆ
ತೆಪ್ಪಗೆ ಇರುವಂತೆ ನಟಿಸಿ
ಎಲ್ಲಾ ಕಷ್ಟಗಳಿಗೆ ಆಸರೆ ನೀಡುತ್ತದೆ

ಬೆರಗನ್ನು ತರಿಸುವ ಘಟನೆಗಳ ರಚನೆಗಳು
ತಟಕ್ಕನೆ ಮಾಡುವ ಶಕ್ತಿ ಮನಸ್ಸಿಗೆ ಮಾತ್ರ
ಮನಸ್ಸಿನ ಜೊತೆಗೆ ಬೆಳೆಸಿಕೊಳ್ಳುವ ಉದ್ದೇಶಗಳ ಪಾತ್ರ

ಫಲವತ್ತಾದ ಮನಸ್ಸಿನ ತೋಟದಲ್ಲಿ
ಉದ್ದೇಶಗಳ ಬಿತ್ತನೆ ಫಲದಾಯಕವಾದ ಉದ್ದೇಶಗಳ ಬಿತ್ತನೆಯೇ
ಸಾಧನೆಗಳ ಯೋಜನೆ

**– ಶ್ರೀ ಹರಿ.**

**20-05-2015**



## 945

ಕೋಪದಿಂದ ಶತ್ರುತ್ವವೋ . . .
ಶತ್ರುತ್ವದಿಂದ ಕೋಪವೋ . .

ಸ್ನೇಹಭಾವನೆಯಿಂದ ಕೋಪ ಶಮನವೋ . .
ಶತ್ರುಭಾವನೆ ಪ್ರಭಾವದಿಂದ ಕೋಪವೋ .
ಎಲ್ಲವೂ ಸಮಯಾನುಸಮಯಗಳ ಮನೋವ್ಯವಸ್ಥೆಯ
ಭಾವನೆಗಳು !

ಕೋಪದಿಂದ ಗರ್ಜನೆ
ಕೇಳುವವರಿಗೆ ಚಿಂತನೆ
ಕೋಪ ಸತ್ಯವೋ . . ನಟನೆಯೋ ತಿಳಿಯದೆ

ನೆನಪಿನ ಸೇನೆಯ ಉಗ್ರರೂಪ
ತಟಕ್ಕನೆ ತೆಪ್ಪನೆ ಕುಳಿತುಕೊಳ್ಳುವ
ಬಾಂಧವ್ಯ ನಿಯೋಜನೆ !

ಕೊನೆ ಮೊದಲನ್ನು ತಿಳಿಯದ ಇರುವಿಕೆ ಕೋಪದ ಆಳ್ವಿಕೆ
ಮನೋಶೋಧನೆ ಮಾಡಿದರೆ ಸಹನೆಯಿಂದ ನಾವು ಚಿಂತಿಸಿದರೆ
ಕೋಪದ ಹಿಂದೆ ಸ್ನೇಹ ಅಡಗಿದೆ !

ಸರಿಸಿಗದ ಸ್ನೇಹದ ವರ್ತನೆ ಕೋಪದ ಯೋಜನೆ
ಎಲ್ಲದ್ದನ್ನು ರಚಿಸಿ ಅಪವಾದ ವ್ಯಾಕರಣ ಮಾತುಗಳು
ನಿಬಂಧನೆಯಿಲ್ಲದೆ ಕೊನೆಗಳೂ ಕಾಣದೆ ಕೋಪದ ಪ್ರವಾಹಕ್ಕೆ

www.sriharikhoday.com

ಶಾಂತಿ ತುಂಬಿಕೊಂಡಿರುವ ಮೌನ
ಜಗಳ ಮಾಡುತ್ತಿರುವ ಇಬ್ಬರ ಸ್ನೇಹದಲ್ಲಿ ಮನೋಶೋಧನೆಯಾಗಿ
ಯಾವ ನಿಬಂಧನೆಗಳೂ ಇಲ್ಲದೆ ಅಪ್ಪಿತಬ್ಬಿಕೊಳ್ಳುವರು !

ಸರಿಯೋಚಿಸಿದ್ದಲ್ಲಿ ಶತ್ರು ಮಿತ್ರತ್ವದಲ್ಲಿ
ಅಡಗಿರುವ ಮೈತ್ರಿ ದ್ವೇಷವನ್ನು ತೆಗೆಯುವುದು
ದ್ವೇಷವನ್ನು ಹುಟ್ಟಿಸುವುದು !

ಎಲ್ಲವೂ ಬುನಾದಿಯಿಲ್ಲದ ಭಾವನೆಗಳು ಕಟ್ಟಿರುವ ಕಟ್ಟಡಗಳು
ಸರಿ ಎಂದರೆ ಮಿತ್ರರೂ ಇಲ್ಲ ಶತ್ರುಗಳೂ ಇಲ್ಲ
ಎಲ್ಲದರಲ್ಲಿಯೂ ಜಗತ್ತಿನ ಎಲ್ಲವೂ ತಾನೊಂದೆ ಎಂದು
ಹೇಳುವುದು

ಸೂರ್ಯನು ನಾನು ಒಂದೇ . .
ಚಂದಿರನು ನಾ ಒಂದೇ ನಕ್ಷತ್ರಗಳು ನಾವೊಂದು . . .
ಎನ್ನುವ ಅದರಲ್ಲಿ ನಮ್ಮನ್ನು ಕಳೆದುಕೊಂಡಿರುವ

ಸ್ಥಿತಿ ಸಮಾಜದ ಬುನಾದಿ
ಕೋಪವೂ ಇಲ್ಲ . . ತಾಪವೂ ಇಲ್ಲ
ಶತ್ರುಗಳೂ ಇಲ್ಲ . ಮಿತ್ರುಗಳೂ ಇಲ್ಲ

ಸಮಾಜದ ಜೊತೆಗೆ ಅರ್ಥೈಸಿಕೊಂಡು
ಜೊತೆ ಜೊತೆ ಯಾಗಿರುವವನು ನಾನು
ನನ್ನಲ್ಲಿರುವ ನಾನು ಮರೆತಿರುವ ನಾನು
ಪರಿಸರವೇ ನನ್ನ ಕೋಪ ತಾಪಗಳಿಗೆ ಹಿನ್ನೆಲೆ !

**– ಶ್ರೀ ಹರಿ.**

**21–05–2015**



## 946

ಹೆದರಿಕೆಯಿಂದ ಬೆಳವಣಿಗೆ ಇಲ್ಲ
ಬೆಳೆಯದೆ ಇದ್ದರೆ ಮುಂದೆನ್ನುವುದು ಇಲ್ಲವೇ ಇಲ್ಲ
ಮುಂದಿಲ್ಲ ಎಂದರೆ ಕೊಳೆಯುವುದು . .

ಕಳೆಯುವುದು . . ಕೊಳೆಯುವುದು ಎಂದರೆ
ಇಂದಿನ ಇರುವಿಕೆ ಕಾಣೆಯಾಗುವ ಮನೋ ನಿಜಸ್ಥಿತಿ !

ಹೆದರಿಕೆಯನ್ನು ದೂರಗೊಳಿಸುವುದು ಆನಂದ
ನಾನು ನನ್ನವುಗಳು . .ಅವುಗಳಿಗೆ
ಹೆದರಿಕೆ ಇಲ್ಲದಿದ್ದರೆ ತಾನಾಗೆ ಜೊತೆ ಹರಿದು ಬರುವ ರೂಪದ
ಆನಂದ !

ಅದರ ಎಚ್ಚರ ಹೆದರಿಕೆಯಿಂದ ಮುನ್ನೆಚ್ಚರಗಳು
ಯಾವ ಆಧಾರವಿಲ್ಲದೆ ತೂಗುತ್ತಿರುವುದು

ದೇವರು ರೂಪದ ಆನಂದ
ಅಂತರಂಗವಾಗಿ ಆತ್ಮನಾದ ವಸ್ತು
ಎಲ್ಲಾ ತೂಗುಗಳ ಜೊತೆ ಸತ್ಯದ ತೂಗಲ್ಲಿ ಹೊಸ ಅರಿವಿನ
ಮನೋಸ್ಥಿತಿ !



www.sriharikhoday.com

ಹತ್ತಿರವೇ ಇರುವ ಸತ್ಯದ ಜೊತೆ ಬೆರೆಯುವ ಸ್ಥಿತಿ
ಸತ್ಯದ ಜೊತೆ . . ದೇವರ ಜೊತೆ ಆನಂದದ ಅನುಭವ

ದೇವರೇ ಆನಂದ
ಮನದಲ್ಲಿ ಎಲ್ಲಾ ಸ್ಥಿತಿಗಳ ಪ್ರತಿಬಿಂಬಗಳು
ಬಿಂಬಗಳಿಲ್ಲದ ಪ್ರತಿಬಿಂಬಗಳು

ಅಖಂಡ ಜ್ಞಾನದ ಉದಯದ ಪ್ರಭೆ
ಅರಿತುಕೊಂಡರೆ ಅಂಧಕಾರ ಕರಗಿ
ನಿಜಸ್ಥಿತಿಯ ಆತ್ಮಪ್ರಕಾಶದಲ್ಲಿ ಬೆರೆತುಕೊಳ್ಳುವುದು !

ನಾನು ನನ್ನದು ಇಲ್ಲದ ನಿಶ್ಶಬ್ದದಲ್ಲಿ ಉಸಿರಾಟ – ನಾ ನಿನ್ನ ಜೊತೆಗೆ ಬೆರೆತು

ಆನಂದದ ಅರಿವಿನಲ್ಲಿ ದೇವರ ಜೊತೆ ಸತ್ಯದ ಜೊತೆಗೆ
ದೇವರ ಅನುಭವ ಸುಖದ ತುರಿಯಾ ವ್ಯವಸ್ಥೆಯ ಅನುಭವ

ಹೆದರಿಕೆ ಬೆದರಿಕೆ ಇಲ್ಲದೆ ಎಲ್ಲ ಕಡೆ
ತೇಜಸ್ಸುಳ್ಳ ಭಾವನೆಯೇ ಆನಂದ ಆನಂದವೇ ಸದಾನಂದ !

**– ಶ್ರೀ ಹರಿ.**

**26–05–2015**



www.sriharikhoday.com

## 947

ಬೆರೆಯೋಣ ಇಂದು ಬೆರೆಯೋಣ ಇಂದು
ಬೆರೆತು ಅನುಭವಿಸೋಣ ಆನಂದ
ಭಾಗ್ಯಗಳ ಸುಖಗಳನ್ನು ಮರೆತಿರುವ ಆನಂದ

ಆಶ್ಲೇಷಿತ ಪ್ರಾಪಂಚಿಕ ವ್ಯವಹಾರಗಳ ಬಿಟ್ಟು
ಮನಸ್ಸು ನಿಜಸ್ಥಿತಿಯ ಅನುಭವಗಳನ್ನು
ಜೊತೆಗಿರುವ ಮನೋಭಾವನೆಗಳ ಜೊತೆ ಬೆರೆತಾದ ಮೇಲೆ

ಜಗತ್ತೇ ಸದ್ರೂಪವಾಗಿ ಬೆಳೆದು
ಜಗತ್ತನ್ನೇ ಹೊಸರೂಪವಾಗಿ ನೋಡುವ ಆನಂದ
ಬಾ . . ಮನವೇ ಬಾ . .ಆನಂದದಲ್ಲಿ ಬೆರೆಯೋಣ !

ಜೊತೆಯಿರುವ ಆನಂದವನ್ನು ತಿಳಿಯದಿರುವುದೇ ಅಜ್ಞಾನ
ನಿಜಸ್ಥಿತಿಗಳ ದರ್ಶನವೇ ಜ್ಞಾನ
ನಾನು . ನನ್ನದು ಮರೆತಿರುವ ನಮ್ಮ ಜನ್ಮಸ್ಥಿತಿ

ಕೊನೆಬರದೆ ನಿಲ್ಲದೇ ಹೊಳೆಯುತ್ತಿರುವ
ಅರಿವಿನ ಪೂರ್ಣಜ್ಞಾನ ಸ್ಥಿತಿ
ಬಿಂಬ ಪ್ರತಿಬಿಂಬಗಳ ಜೋಡಣೆ ಪೂರ್ಣದ ಆನಂದ !

ಶಬ್ಧದ ಪದಗಳಿಂದ ದೊರೆಯದ ಆನಂದ
ಜೊತೆ ಆವರಿಸಿಕೊಂಡಿರುವುದು . .ದೇವರ ಜೊತೆಯಾನಂದ
ನಾಶದ ಅರ್ಥ ತಿಳಿಯದ ಅದ್ಭುತ ಶಕ್ತಿಯ ಆನಂದ !

ಎಂದೂ ನಾಶವಾಗದ ಸ್ಥಿರವಾಗಿರುವ ಶುದ್ಧ ಅರಿವಾಗಿ
ಎಲ್ಲಾ ಮನೋಸ್ಥಿತಿಗಳಲ್ಲಿರುವ ಆನಂದ
ಸತ್ ಚಿತ್ ಆನಂದವಾಗಿರುವ ದೇವರ ಸ್ಥಿತಿ ಆನಂದ !

ಕೊಳಚೆಯ ಮನದಲ್ಲಿ ಆನಂದವೆಂಬ ಕಮಲವ ಬೆಳೆಸೋಣ
ಆನಂದದಲ್ಲಿ ಭಕ್ತಿಯ ಪರಿಮಳವನ್ನು ಕೂಡ ಬೆರೆಸಿಕೊಂಡು
ಎಲ್ಲದರಲ್ಲಿ ಬೆರೆತು . .ಕಾಲ ಮರೆತಿರುವ ಬೆರಕೆ

ಸಾವಿಲ್ಲದ ಆತ್ಮದ ಜೊತೆಗೆ
ನಾವು ಬೆರೆತು ದೇವರ ಜೊತೆಗೆ ಆನಂದವನ್ನು
ಅನುಭವಿಸಲು ಬಂದಿರುವ ಈ ಶರೀರಕ್ಕೆ

ಆನಂದ ಮನಸ್ಸಿನಿಂದ ತರಿಸಿ
ಆನಂದವನ್ನು ಅನುಭವಿಸೋಣ !

ಆನಂದದ ಮನೋಸಾಗರದಲ್ಲಿ ಅಲೆಅಲೆಗಳು ಬರುವಂತೆ
ಬರುತ್ತಿರುವ ಆನಂದದ ಅಲೆಗಳನ್ನು ನೋಡಿ
ನಾವೇ ಆನಂದಿಸೋಣ

ಅರಿವಿನ ಸ್ಥಿತಿಯನ್ನು ಮೀರಿಸಿ ಕಣ್ಣಿಗೆ ಕಾಣದ ಎಲ್ಲದರಲ್ಲಿ
ಹಗಲು ರಾತ್ರಿ ಬೆಳೆದು ಜೊತೆಗಿರುವ ಆನಂದದ ಅನುಭವಗಳನ್ನು
ಬಿಡದೆ ಅನುಭವಿಸುತ್ತಲೇ ಇರೋಣ

ಬಾ ಮನಸ್ಸೇ . . ಬೇಗ ಬಾ
ಆನಂದದ ಜೊತೆ ಬೆರೆಯೋಣ !

**– ಶ್ರೀ ಹರಿ.**

**26–05–2015**



## 948

ಚಂಚಲ ಮನಸ್ಸಿಗೆ
ಚಾಂಚಲ್ಯವನ್ನು ಬಿಡಿಸುವುದು
ಜೊತೆ ಸೇರಿಕೊಂಡಿರುವ ಗೆಳೆತನ . . .!

ದೃಢವಾದ ನಿರ್ಧಾರ ಗೆಳೆತನ
ನಾನು . . ನನ್ನದು ಎಂಬುದನ್ನು ಬಿಡಿಸಿ
ನಾವು ನಮ್ಮದು ಎಂದು ಹೇಳುವ ಮಾತುಗಳು
ನಿರಂತರ ಜೀವಿಸುವ ಗೆಳೆತನ !

ಕನಸುಗಳು ನನಸಾದರೆ
ಜೊತೆ ಸಮಾಜದ ಬೇಡಿಕೆಗಳು
ಜೊತೆ ನಿರ್ಧಾರಗಳು ಒಬ್ಬನ ಕನಸಾಗದೆ
ಜೊತೆ ಯೋಚಿಸುವ ರೀತಿ ವಿಶ್ವದಲ್ಲೇ ಅತ್ಯುತ್ತಮ ವೃತ್ತಿ !

ಜೊತೆ ಗೆಳೆತನದ ಜೊತೆ ಭಾವನೆಗಳು
ನಕಾರಾತ್ಮದ ಅರ್ಥ ತಿಳಿಯದೆ
ಎಲ್ಲರ ಮನಸ್ಸಿನ ಜೊತೆ ವಿಕಾಸದಲ್ಲಿ
ತಿಳಿಯದೆ ಜೊತೆಯಾಗಿರುವುದು ಧೀರತನ !



www.sriharikhoday.com

ನಿನ್ನೆಯನ್ನು ಬದಲಿಸಲು ಯತ್ನಿಸದೆ
ಇಂದಿನಿಂದ ಎಂದು ಹೇಳುವ
ಜೊತೆ ಅಂಟು . . ನೆಂಟು
ಗೆಳೆತನದ ಅಮೂಲ್ಯ ವಸ್ತುಗಳು !

ಅಸಾಧ್ಯವನ್ನು ಸಾಧ್ಯವಾಗಿಸಿ
ಸಾಧನೆಯಾದ ಮೇಲೆ
ನಾನೊಬ್ಬನೆ ಮಾಡಿದೆನೆಂದು ಹೇಳಲು
ತಿಳಿಯದ ಜೊತೆ ಗೆಳೆತನ !

**– ಶ್ರೀ ಹರಿ.**

**30–05–2015**



## 949

ನಿಮ್ಮ ಜೊತೆ ಮಿತ್ರರ ಮನದಲ್ಲಿ
ಪ್ರೀತಿಯ ಗಂಟೆಯ ಸದ್ದು
ಬಿಂದುವಾಗಿ ನಿಮ್ಮ ಮಧ್ಯೆ ನಿಂತ ನನಗೆ
ಪ್ರೀತಿಯ ನಾದದ ಪ್ರೀತಿಯ ತರಂಗಗಳ ಸದ್ದು!

ಅಂದು . .ಮುಂದು ., ಮರೆತಿರುವ
ಕೊನೆ ಕಾಣಿಸದ ಕಾಲದ ಅನುಭವ ಮಾತು ಮಾತುಗಳಲ್ಲಿ
ಮಾತಿನಲ್ಲಿ ಯೌವ್ವನ ನೋಡುತ್ತ
ಮತ್ತೆ ಮತ್ತೆ ತಾವುಗಳು ಗುರುಗಳನ್ನು

ನೆನೆಸುತ್ತಿರುವುದು ಭಾವನೆಗಳು ಆಶ್ರಯದಾಸಿಗಳಾಗಿದ್ದವು . .
ಜನಾಂಗ ಎದುರಿಸುತ್ತಿರುವ ಕಷ್ಟಗಳಿಗೆ
ಜೊತೆ ಹೋರಾಡುವ ಮಾತುಗಳು
ಪ್ರೀತಿಯ ಪರಂಪರೆಯ ಮಾತುಗಳು !

ಹೊಸ ಹೊಸ ಪ್ರೇರೇಪಣೆ ಎಲ್ಲರಿಗೂ
ಒಂದೇ ಪ್ರೇರಣೆಯಾಗಿರುವುದು ಒಂದು ಆಶ್ಚರ್ಯ
ಹೊಸ ಹೊಸ ಯೋಜನೆಗಳ ಜೋಡಣೆ
ಎಲ್ಲಾ ಮಿತ್ರರ ಜೊತೆ ಜೋಡಣೆಯಾಗಿ

www.sriharikhoday.com

ಪ್ರೀತಿಯ ಗಂಟೆಯ ಸದ್ದಲ್ಲಿ
ವಿಶ್ವವನ್ನೇ ಸೇರಿಸಿಕೊಂಡು
ಎಲ್ಲರ ಬಾಯಿಯಲ್ಲಿ ಹೊರಬರುತ್ತಿರುವ
ಮೈತ್ರಿಯ ಸುಖದ ಅನುಭವಗಳು

ಅನುಭವದ ಮಾತುಗಳನ್ನು ನೆನಪಿನ ಪಟ್ಟಿ ಮಾಡುತ
ನನ್ನ ಕಿವಿಗಳು ಕೇಳುತ್ತಾ ಕೇಳುತ
ನಾ ಮಾತನಾಡಲು ನಾನು ಅನುಭವಿಸಿದ ಸವಿಯನ್ನು
ಹೇಳಲು ಮಾತನಾಡಲಾಗದೆ ಮಾತನ್ನೇ ನುಂಗಿರುವೆನು !

ಎಲ್ಲರ ಮನದಲ್ಲಿ ಒಂದೇ ರೀತಿಯ ಅನುಭವಗಳ ಬಿತ್ತನೆ
ಜೊತೆ ಮಿತ್ರರ ಸುಖವೇ ಬೆಳೆಯ ತೆನೆಯಾಗಿ ಬೆಳೆದು
ಸ್ನೇಹತನಕ್ಕೆ ಯಶಸ್ಸನ್ನು ನೀಡುತ್ತಿದೆ !

– **ಶ್ರೀ ಹರಿ.**

**01–06–2015**



## 950

ಸಂತೋಷಮಯ ಜೀವನ
ಮೈತ್ರಿ ಸ್ನೇಹದ ಭಾವನ

ತಮ್ಮ ಜೀವನದ ಗುಣಮಟ್ಟವನ್ನು
ಅಳೆಯುವುದು ಸ್ನೇಹಭಾವನ
ಇದೇ ಜೀವನದ ಮನೋಗಾನ !

ಪವಿತ್ರವಾದ ಮಾನವನಿಗೆ ದೇವರು ಕೊಟ್ಟಿರುವ
ದೇವರವರ . ..
ಸ್ನೇಹಭಾವನದ ಅರಿವಿನ ಜ್ಞಾನ !

ಮೌನದಲ್ಲಿಯೇ ಚಿಗುರುವ ಸ್ನೇಹ ಭಾವನ
ಸ್ಥಾನಮಾನಗಳನ್ನು ಲೆಕ್ಕಿಸದ
ಜೊತೆ ಜೊತೆ ಸೇರಿಕೊಳ್ಳುವುದು ಜೊತೆಯ ಅಭಿಮಾನ

ಲೇಸು ಅನುಮಾನಗಳ ಭಾವನೆಗಳಿಲ್ಲದ
ಶಾಯಿಯಿಲ್ಲದ ಬರವಣಿಗೆಯ ಲೇಖನ
ಸ್ನೇಹತನದ ಶಾಸನ !

www.sriharikhoday.com

ಪ್ರಚೀನ ಕಾಲದಿಂದ ಮಾನವನ ಜೊತೆಗೆ
ಜೀವಿಸುತ್ತಿರುವುದು ಸ್ನೇಹತನ
ಸರಿಸಮಾನ ಗುಣವಿಲ್ಲದ ಮನೋ ಶೋಧನ ಗೆಳೆತನದ ಸ್ಥಾನ !
ಸಂತೋಷಮಯ ಜೀವನ
ಮೈತ್ರಿ ಸ್ನೇಹದ ಭಾವನ !

ಮಾತು ಮಾತಿನಲ್ಲಿ ಆಹ್ವಾನ ನೀಡುತ್ತಿರುವುದು
ಮೌನವನ್ನು ಭೇದಿಸುವ . .
ನಗುವಿನ ಪ್ರಕಾಶನ !

**– ಶ್ರೀ ಹರಿ.**

**02–06–2015**



## 951

ಪ್ರೀತಿಯ ಹಿಂದೆ ಬೆಳೆಯುತ್ತಲೇ ಇರುವ ನಂಬಿಕೆ
ಅಂಜದೆ ಎಲ್ಲಾ ವರಗಳ ನೀಡುವ ಪ್ರೀತಿ ತಾಯಿ ಅಂಬಿಕೆ
ತಾಯಿರೂಪದಲ್ಲಿ ಅಡಗಿರುವ ನಂಬಿಕೆ
ಸ್ನೇಹದ ಬುನಾದಿಯೇ ನಂಬಿಕೆ !

ಜೀವನದ ಹೆಜ್ಜೆಗಳಲ್ಲಿ ಅಡಗಿರುವ ಅಳವಡಿಕೆ
ಸ್ನೇಹ ಜೀವನದ ಬಾಳಿನ ಆಳ್ವಿಕೆ
ಯಾವ ಕಲಬೆರಕೆಯೂ ಇಲ್ಲದ ನಂಬಿಕೆ
ಒಳ್ಳೆ ಕೆಲಸಗಳ ಹಿಂದೆ ಒಂದು ಸಿದ್ಧಾಂತದ ಅನಿಸಿಕೆಯೇ ನಂಬಿಕೆ !

ಕಡಿವಾಣಗಳಿಲ್ಲದೆ ಜೊತೆ ಮಾಡಿಸುವುದು ನಂಬಿಕೆ
ನಗೆ . . ಹರುಷ . .ನೀಡುವುದು ಕಾಣಿಕೆ
ತಪ್ಪು ಮಾಡುವ ಗಣಿಕೆ ಇಲ್ಲದ ನಂಬಿಕೆ
ಜೊತೆ ಜೀವನದ ಯಶಸ್ಸಿಗೆ ಇರುವುದು ನಂಬಿಕೆ !

ನಂಬಿಕೆಯ ಗಿಡಿ ಫಲಕೊಡುತ್ತ
ಜೀವಂತವಾಗಿ ಜೊತೆಯಿರುವ ಸ್ನೇಹ ಬಂಧನಕ್ಕೆ
ಕೊನೆ ಬರದ ಯಶಸ್ಸಿಗೆ
ನಂಬಿಕೆಯಲ್ಲಿ ದೈವತ್ವವನ್ನು ಸೇರಿಸಿಕೊಳ್ಳುವ ಒಕ್ಕಣಿಕೆ !

www.sriharikhoday.com

ಜೊತೆಗಾರಿಕೆಗೆ ದೇವರು ನೀಡಿರುವ ಕಾಣಿಕೆ
ನಂಬಿಕೆ ಅಂಜದೆ ತಾನಾಗಿಯೇ ತಾನು ಅರಳುವ ಜೀವನದ
ವಾಡಿಕೆ

ಸುಗಂಧವ ನೀಡುವುದು ಮನಬೇಡಿದ
ಎಲ್ಲಾ ತರಹದ ಸುಗಂಧಕ್ಕೆ ನಂಬಿಕೆಯೇ ಬುನಾದಿ

ತಾಯಿ ಕಲಿಸಿರುವ ಜೀವನದ ವಾಡಿಕೆ
ಕೊನೆಗಾಣದ ದಿಗಂತದಲ್ಲಿ ಜೀವಿಸುತ್ತಲೇ ಇದೆ
ಪ್ರೀತಿಯ ಹಿಂದೆ ಸದಾ ಇರುವುದು ನಂಬಿಕೆ
ಅಂಜಿಕೆಯಿಲ್ಲದೆ ವರಗಳನು ನೀಡುವಳು ತಾಯಿ ಅಂಬಿಕೆ !

**– ಶ್ರೀ ಹರಿ.**

**04–06–2015**



# 952

ಮರೆವಿನ ಅರ್ಥ ತಿಳಿಯದ ಸ್ನೇಹತನ
ಜೀವನದಲ್ಲಿ ಜೊತೆ ಜೊತೆ
ನಮ್ಮ ಜೊತೆ ಬಾಳುತ್ತಿರುವ ಭಾವನ
ಧ್ಯಾನ ಮಾಡಿದರೂ ಸಿಗದ ಸ್ನೇಹತನ

ತಾನಾಗಿಯೇ ತಾನು ನಮ್ಮ ಮೌನದಲ್ಲಿ ..
ಮನದಲ್ಲಿ ಬೆಳೆಯುತ್ತಿರುವ ಗೆಳೆತನ
ಜೊತೆ ಸೇರಿದಾಗಲೆಲ್ಲ ನಾವು ನಮ್ಮ ಮೇಲೆಯೇ
ನಗುವಿನ ಅರ್ಚನ !

ಮಾಪನಗಳನ್ನು ಮೀರಿಸಿರುವ ನಮ್ಮ ಭಾವನ
ಕ್ಷಣ ಕ್ಷಣದ ಮಾತುಗಳಲ್ಲಿ ತುಂಬುತ್ತಿರುವೆವು ನಾವು ಯೌವ್ವನ
ಲೇಖನ ಬರೆಯಲಾಗದ ಸ್ನೇಹತನ
ಸನ್ಮಾನಗಳ ನೀಡುವರು ಅನುಮಾನವಿಲ್ಲದ ಅಭಿಮಾನ !

ಎಲ್ಲರೂ ನೀಡುವರು ನಮಗೆ
ಜೊತೆ ಸೇರುವರು ನಮ್ಮ ಜೊತೆಗೆ
ಮಾತು ಮಾತುಗಳಿಗೆ ನೀಡುವರು ನಮಗೆ ಆಹ್ವಾನ
ಸ್ನೇಹತನದ ಜೀವನ ಪಾವನ !

www.sriharikhoday.com

ಅನುದಿನವೂ ಬಾಳಿನಲ್ಲಿ ಜೀವನದ ಜೊತೆಯುದ್ದಕ್ಕೂ
ಜೊತೆಯಾಗಿರಲಿ

ಮರೆವಿನ ಅರ್ಥ ತಿಳಿಯದ ಸ್ನೇಹತನ
ಜೀವನದಲ್ಲಿ ನಮ್ಮ ಜೊತೆ ಜೊತೆ
ಬೇರೆಯವರ ಜೊತೆಗೆ ಬಾಳುವ ಭಾವನ!

ಅನುಮಾನಗಳ ಆಸ್ವಾದಗಳಿಲ್ಲದ ನಮ್ಮ ಗೆಳೆತನ
ಧ್ಯಾನ ಮಾಡಿದರೂ ಸಿಗದ ಸ್ನೇಹತನ
ಗಾನರೂಪವಾಗಿ ತಮ್ಮದೇ ಆದ ಅವರೋಹಣ ಆರೋಹಣಗಳ
ಸ್ನೇಹತನ
ನಮ್ಮನ್ನು ಬಿಟ್ಟುಹೋಗದೆ ಜೊತೆಯಾಗಿಯೇ ಇರಲಿ ಕೊನೆಬರದ
ಬಾಳಿನ ಬಂಧನ !

**– ಶ್ರೀ ಹರಿ.**

**06–06–2015**



## 953

ಸ್ನೇಹದ ಮನಸ್ಸಿನ ಕುಂಚ
ಸದಾ ಬೆಳಕನ್ನು ಚಿತ್ರಿಸುತ್ತಿದೆ
ಬಣ್ಣ ಬಣ್ಣಗಳನ್ನು ಬಿಡಿಸುತ್ತ
ಸ್ನೇಹಕ್ಕೆ ಹೊಸ ಹೊಸ ರೂಪ ರಚಿಸುತ್ತಲೇ ಇದೆ !

ದೂರವಿಟ್ಟರೂ ಸ್ನೇಹದ ತರಂಗಗಳು
ಆನಂದದ ರೂಪತಾಳಿ
ಯಾವುದೇ ಇರುವಿಕೆಯಿದ್ದರೂ ಜೀವನಪರ್ಯಂತಾ
ಒಂದು ಆತ್ಮನಾಗಿ ಸಾಗುತ್ತಲೇ ಇದೆ !

ಜೊತೆ ಜೊತೆ ಸತ್ಯದ ಸಾಕ್ಷಾತ್ಕಾರ
ಪರಿಪೂರ್ಣದ ಅನುಭವಗಳ ಬಣ್ಣಗಳು
ಹಳೆ ಕ್ಷಣಗಳನ್ನು ಮರೆತು ಹೊಸ ಕಾಲದ ಕ್ಷಣಗಳಲ್ಲಿ
ಸ್ನೇಹವನ್ನು ತುಂಬುತ್ತಾ ರಂಜಿಸಿಕೊಳ್ಳುತ್ತಾ

ಎಲ್ಲರ ಮನಸ್ಸು ಒಂದೇ ರೀತಿಯ ಕಾಲದ ಅನುಭವ
ಬಾಳು ಒಂದೊಂದು ಕ್ಷಣಗಳು
ಆಧ್ಯಾತ್ಮಿಕ ಶಕ್ತಿಗಳಾಗಿ
ಗೆಳೆತನಕ್ಕೆ ಅಚ್ಚರಿಯನ್ನು ನೀಡುತ್ತಿದೆ

www.sriharikhoday.com

ಅನಂತವಾಗಿ ಹರಡಿರುವ ಭಾವ
ಮೋಸವಿಲ್ಲದೆ ರೂಪವಾದ ಸ್ನೇಹ
ಜೊತೆ ಅನುಭವದಲ್ಲಿ ವಂಚನೆಯಿಲ್ಲದೆ
ಎಲ್ಲರ ಬಾಯಿಯ ಮಾತುಗಳು ಒಂದೇ ಅರ್ಥ ನೀಡುತ್ತಾ

ಬಲವಾಗಿ ವಿಚ್ಛೇದನೆಗೊಳ್ಳದೆ ಜೊತೆ
ಸಂಚು ವಂಚನೆಯಿಲ್ಲದ ಅನುಭವ ಸ್ನೇಹದ ಗೆಳೆತನದ
ಜೀವನ ಉಸಿರು ನಿಟ್ಟು-ಸಿರುಗಳೇ
ಗೆಳೆತನದ ಉಸಿರು ನಿಟ್ಟುಸಿರುಗಳು !

**- ಶ್ರೀ ಹರಿ.**

**07-06-2015**



# 954

ಜಗದಲ್ಲಿ ಎಲ್ಲವೂ ಬೆಳೆಯುತ್ತಲೇ ಇದೆ
ಸ್ನೇಹದಲ್ಲಿ ಪ್ರಶ್ನೆಗಳು ಹುಟ್ಟುತ್ತಲೇ ಇದೆ
ಪ್ರಶ್ನೆಗಳು ಜವಾಬಾಗಿ ಉತ್ತರಗಳ ಸೇರುತ್ತಲೇ ಇದೆ
ಮೈತ್ರಿಯ ಶಕ್ತಿ ದಿನೇ ದಿನೇ ಜೊತೆಗೆ ಬಲವಾಗಿ ಬೆಳೆಯುತ್ತಲೇ
ಇದೆ !

ಸ್ನೇಹದ ಮನದ ತೋಟದಲ್ಲಿ ಹೊಸ ಹೊಸ ಹೂಗಳು
ಅರಳುತ್ತಲೇ ಇದೆ
ಅರಳಿದ ಹೂಗಳಿಗೆ ಹೊಸ ಹೊಸ ಬಣ್ಣಗಳು ಜೊತೆ
ಸೇರಿಕೊಳ್ಳುತ್ತಲೇ ಇದೆ
ಹೂವುಗಳಲ್ಲಿ ಹೊಸ ಹೊಸ ಸ್ವಾದ ಹುಟ್ಟುತ್ತಲೇ ಇದೆ !
ಸ್ನೇಹ ಸೇರಿದಾಗಲೆಲ್ಲ ಹೊಸ ಹೊಸ ಜೊತೆ ಅರಿವಿನ ಅನುಭವ
ಬರುತ್ತಲೇ ಇದೆ !

ಕಳೆದುಹೋದದ್ದನ್ನು . .ಕಷ್ಟಗಳನ್ನು ಸ್ನೇಹ ನೆನಪಿಸುತ್ತಲೇ ಇದೆ
ಹಿಂದನ್ನು ನಮಿಸಿ ನಾಳೆಯ ಸಂಜೆಗೆ ಹೊಸ ಹೊಸ ಚಿತ್ರ
ಚಿತ್ರಿಸುತ್ತಲೇ ಇದೆ
ಮನುಷ್ಯನ ಜೀವನ ನಕ್ಕು . . ನಲಿದು ಹೊಗಳುತ್ತಲೇ ಇದೆ
ಮಾತು ಮಾತುಗಳಲ್ಲಿ ಜೊತೆ ಸೇರಿದ ಪ್ರಜ್ಞೆ ಅತಿಯಾಗಿ
ಬೆಳೆಯುತ್ತಲೇ ಇದೆ !

www.sriharikhoday.com

ಜೊತೆ ಜೀವನದ ಬಿಂಕವನ್ನು ಬಿಡದೆ ಜೊತೆ ಜೊತೆಗೆ ಬರುತ್ತಲೇ
ಇದೆ
ಗೆಳೆಯನ ಕಣ್ಣೋಟದ ಅರ್ಥ ಪಾಲಿಸುತ್ತಲೇ ಇದೆ
ಜೊತೆ ಹೊರ ಜಂಭಗಳು ಸ್ನೇಹತನದಲ್ಲಿ ಮಾಯವಾಗುತ್ತಲೇ
ಇದೆ
ಬೇರೆಯವರ ಮೋಸ ಕೆಟ್ಟ ನಡುವಳಿಕೆಗಳು ಗೆಳೆಯರು ಹೊರ
ಚೆಲ್ಲುತ್ತಲೇ ಇದ್ದಾರೆ

ಗೆಲುವು ಸೋಲುಗಳು ಜೀವನದಲ್ಲಿ ಜೊತೆ ಸೇರಿಸಿಕೊಳ್ಳುತ್ತಲೇ
ಇದೆ
ಎದುರಿಗೆ ಕಾಣದಿದ್ದರೂ ಊಹಾಪೋಹಗಳು ಬೆಳೆಯುತ್ತಲೇ ಇದೆ
ಜೊತೆ ಬಿಡದ ಗೆಳೆತನ ಎಂದೆಂದಿಗೂ ಜೊತೆಗೆ ಬರುತ್ತಲೇ ಇದೆ
ಜೀವನಪರ್ಯಂತ ನಮ್ಮನ್ನು ಬಿಡದೆ ನೆರಳಾಗಿ ಹಿಂಬಾಲಿಸುತ್ತಲೇ
ಇದೆ

ಹಿಂದು ಮುಂದಿನ ನಡುಗೆಯಲ್ಲಿ ಗೆಳೆತನದ ಹೆಜ್ಜೆ
ಗುರುತುಗಳನ್ನು ಅಚ್ಚಾಕುತ್ತಲೇ ಇದೆ !

**– ಶ್ರೀ ಹರಿ.**

**08–06–2015**



www.sriharikhoday.com

**955**

ನಮ್ಮನ್ನು ನಾವು ಅರಿತು
ನಮ್ಮಲ್ಲೇ ನಾವು ನುರಿತುಕೊಂಡರೆ
ಹೊಸದಾಗಿ ಬರುವ ಬೇಡಿಕೆಯ ಉದಯ . . .

ಈ ಉದಯ ವಿಶ್ವ ಬೆಳೆಸಿರುವ
ಪ್ರಕೃತಿ ಬೆಳೆಸುತ್ತಿರುವ ಸ್ನೇಹತನವೇ . . ಗೆಳೆತನ . .!

ಶಾರೀರಿಕವಾಗಿ ಸ್ನೇಹಿತ . .ಗೆಳೆಯ ಬೇರೆ
ಶರೀರವಾಗಿದ್ದರೂ ನಮ್ಮಲ್ಲಿ ನಿರಾಳ ಆಳದ ದೃಷ್ಟಿಯಿಂದ
ಮನ ನೋಡಿದ್ದಲ್ಲಿ ಗೆಳೆತನದ ಬಯಕೆ

ಮನಸ್ಸಿಗೆ ವಾಡಿಕೆಯಾಗಿ
ಜೊತೆ ಸಂಬಂಧಗಳ ಮನೋತರಂಗಗಳ ಜೋಡಣೆ
ಅದು ಹೆಚ್ಚಿನ ಸುಖ ತರುವ ಹೊಂದಾವಣಿಕೆ

ಸ್ನೇಹತನದ ದಿನ ದಿನವೂ ಹೊಸ ವಿಚಾರಗಳ ಶೇಖರಣೆ
ತಮ್ಮನ್ನೇ ತಾವು ಪೂರ್ಣವಾಗಿ ಒಂದು ಗುರಿಗೆ ಸಮರ್ಪಣೆ
ಸಾಧಿಸಿದ ಮೇಲೆ ಗೆಳೆತನಕ್ಕೆ ಸರಿ ಉದಾಹರಣೆ !

ಬೇರೆಯವರ ಹೊಣೆ . .ಬೇರೆಯವರ ಭವಣೆ
ತಮ್ಮನ್ನು ತಾವೇ ಅರ್ಪಿಸಿಕೊಂಡು
ನಾನಾ ಮನೋ ವಿಶ್ಲೇಷಣೆ ಮಾಡಿ

ವೀಕ್ಷಕರಾಗಿ ಜೊತೆ ವಿವರಣೆ ತಮ್ಮಲ್ಲೇ ತಾವು ಮಾಡುತ
ಬುದ್ಧಿಭ್ರಮಣೆಯಾಗಿರುವ ಬೇರೆಯವರಿಗೆ ಸರಿಬುದ್ಧಿ ಹೇಳಿ
ಕರುಣೆಯ ಕನಿಕರ ಹರಿಸಿ

ಸ್ನೇಹಿತರ ನಿರ್ಧಾರ ಕಟ್ಟಪ್ಪಣೆಯೆಂದು ಘೋಷಿಸುತ
ತಮ್ಮನ್ನು ತಾವೇ ತಮ್ಮ ಜೊತೆ
ಬೇರೆಯವರ ಕಷ್ಟಗಳಿಗೆ ಜೋಡಿಸಿಕೊಂಡು

ಸ್ಥಿಮಿತವಾಗಿರುವ ಉದ್ದೇಶಗಳಿಗೆ ಚಾಲನೆ ನೀಡುವುದೇ ಗೆಳೆತನ
ಚಾಲನೆ ನೀಡುವುದೇ ಸ್ನೇಹತನ !

ಸಾಧನೆಯಾದ ಮೇಲೆ ವಿಶೇಷವಾದ ಸುಖ ತರಿಸುತ್ತಿರುವ
ನಮ್ಮ ಜೊತೆ ಜೊತೆ ಜೀವಿಸುವ ಹೊಂದಾವಣೆ
ಸ್ನೇಹಿತನ ಸೃಷ್ಟಿಸಿರುವ ಪ್ರಕೃತಿಗೆ ವಂದನಾರ್ಪಣೆ !

**– ಶ್ರೀ ಹರಿ.**

**09–06–2015**



# 956

ಸೂರ್ಯನು ಒಬ್ಬನಿಗೋಸ್ಕರ ಮಾತ್ರ ಬೆಳಗದಿರುವಂತೆ
ಮೋಡ ತುಂಬಿದ ಮಳೆಯು ಒಬ್ಬನಿಗೆ ಮಾತ್ರ ಸುರಿಯದಿರುವಂತೆ
ನಮ್ಮಲ್ಲಿರುವ ಮನಸ್ಸು ಒಬ್ಬರಿಗೆ ಮಾತ್ರ ಪ್ರೀತಿಸದಿರುವಂತೆ
ಜೊತೆ ಜೊತೆ ಜೀವನದ ಸುಖವನ್ನು
ಬೇರೆಯವರ ಜೊತೆಗೆ ಸೇರಿಸಿಕೊಳ್ಳುವುದೇ ಗೆಳೆತನ !

ಪ್ರೀತಿ–ಪ್ರೇಮಗಳು ಮಾನವನಿಗೆ ನಿಧಿಯಾಗಿ
ಬೇಕಿದ್ದಾಗ ಮಾತ್ರ ಚಲಾಯಿಸುವಂತೆ
ಬೇಡಿದಾಗಲೆಲ್ಲ ಸ್ನೇಹದ ಜೊತೆ ಪ್ರೀತಿ ಸೇರಿಸಿಕೊಳ್ಳುವಂತೆ
ಮಾನವನ ಅಂತರಾಳದ ಮನದಲ್ಲಿ ನಿಲ್ಲದೆ ಹರಿಯುತ್ತಿರುವುದು
ಪ್ರೀತಿ–ಪ್ರೇಮಗಳು ತುಂಬಿದ ಗೆಳೆತನ !

ಬರೀ ಸುಖದಲ್ಲಿ ಮಾತ್ರ ಜೊತೆ ಸೇರಿಕೊಳ್ಳದೆ
ದುಃಖ ಕಣ್ಣೀರುಗಳಲ್ಲಿ ನಾವು ಕೂಡ ಪಾತ್ರಧಾರಿಗಳಾಗಿ
ಸಮಯದಲ್ಲಿಪ್ರೀತಿ–ಪ್ರೇಮದ ಧನನಿಧಿ ಅವಶ್ಯವಿರುವಂತೆ
ನೀಡಿದ ಧನ ತುಂಬಿಕೊಂಡು ಸಂತಸ ಹೊಳೆಯುತ್ತಿರಲಿ
ಎಂದು ಆಶೀರ್ವಾದ ನೀಡುವ ಸ್ನೇಹತನ !

ಗೆಳೆತನ ಬರೀ ಸುಖದಲ್ಲಿಲ್ಲ
ಜೊತೆ ಜೊತೆ ಸೇರಿಕೊಳ್ಳುವುದು ದುಃಖದಲ್ಲಿಯೂ ಕೂಡ
ಎಲ್ಲರ ಜೊತೆಗೆ ಭಾಗಿಯಾಗಿ

www.srisrikhoday.com

ತಮ್ಮ ಗೆಳೆತನದ ಪಾತ್ರದಲ್ಲಿ ತಮ್ಮನ್ನು ತಾವೇ ಮರೆತು
ಕಾಣುವ ಸಮಸ್ಯೆ ಜೊತೆಗೆ ಬೆರೆತು

ತಮ್ಮಲ್ಲೇ ತಾವು ಕಳೆದುಹೋಗಿ
ಕ್ಷಣ ಕ್ಷಣಗಳಲ್ಲಿ ಜೊತೆ ಸೇರಲು ಸಜ್ಜಾಗುತ್ತಿದೆ
ಗೆಳೆತನದ ಪ್ರೀತಿ-ಪ್ರೇಮಗಳು
ದೊಡ್ಡದು ಚಿಕ್ಕದು ಮರೆತಿರುವ ಸ್ನೇಹತನ !

ಸ್ನೇಹತನದಲ್ಲಿ ಗೆಳೆತನದ ಜಾಣ್ಮೆಯನ್ನು ಒಪ್ಪಿಕೊಂಡು
ಅದರ ಜೊತೆಗೆ ಭಾಗಿಯಾಗಿ
ನಾವು ಸಮಯಕ್ಕೆ ಮಳೆ ಬೇಡುವಂತೆ
ಸಮಯಕ್ಕೆ ಬೇಕಾದ ಸೂರ್ಯೋದಯ ಬೇಡುವಂತೆ
ಸಮಯಕ್ಕೆ ಸರಿಯಾಗಿ ಅರಳುವ ಸ್ನೇಹದ ಜೊತೆಗೆ ಸೇರಿ

ಬಣ್ಣ ಬಣ್ಣಗಳ ಹೊಸ ಹೊಸ ರೀತಿಯ
ಸುಖದ ರೀತಿಗಳನ್ನು ಅನುಭವಿಸಿ
ಅನುಭವಿಸುತ್ತಿರುವ ನೀತಿ
ಮಾತು ಮಾತಿನಲ್ಲೇ ಸುಖದ ನಿಧಿಯನ್ನು ಸಂಪಾದಿಸಿ
ಸರಿ ಸಮಯಕ್ಕೆ ವಿಶ್ವದ ಸಮಸ್ಯೆಗಳ

ಸರಿಪಡಿಸುವ ವಿಶ್ವನಿಧಿ ಗೆಳೆತನ
ಜೊತೆ ತುಂಬಿಕೊಂಡಿರುವ ಪ್ರೀತಿಯ ಮನ
ನಮ್ಮೊಬ್ಬರಿಗೆ ಮಾತ್ರ ನಿಧಿ ಬಳಸದೆ
ದೊಡ್ಡವರು ಚಿಕ್ಕವರು ಮರೆತಿರುವ ಸ್ನೇಹಭಾವನೆ
ಬೇಡಿಕೆಯಿರುವ ಕಾಲದಲ್ಲಿ ಜೊತೆ ಸಿದ್ಧವಾಗಿಯೇ ಇರುತ್ತದೆ !

**- ಶ್ರೀ ಹರಿ.**

**10-06-2015**



## 957.

ನಮ್ಮಲ್ಲಿ ನಮಗೆ . ನನ್ನೊಬ್ಬನಿಗೆ ಶಾಂತಿ ದೊರಕದೆ
ಅಶಾಂತಿಯಾದ ಅದು ಮನಸ್ಸನ್ನು ಶಾಂತಗೊಳಿಸದೆ
ದಣಿದವರು ನೆರಳನ್ನು ಹುಡುಕುವಂತೆ
ದಿನಚರಿಯ ಅಸ್ತಿತ್ವಕ್ಕೆ ಶಾಂತಿಯು ಗೆಳೆಯನ ನೆರಳಲ್ಲಿ ದೊರಕುವುದು !

ಗೆಳೆತನ ಮನದಲ್ಲಿ ಅಡಗಿರುವ ಸಮಾಧಾನ ಸ್ಥಿತಿ
ಮೇಲು-ಕೀಳುಗಳನ್ನು ಮರೆಸುವ ಸ್ಥಾನ
ಹಸಿದವರಿಗೆ ಊಟ ಬೇಕಿರುವಂತೆ
ಜೀವನದ ಸಂಬಂಧಗಳಲ್ಲಿ ಗೆಳೆತನ ಅವಶ್ಯಕ !

ನಮ್ಮಲ್ಲಿರುವ ನೆಮ್ಮದಿಯನ್ನು ಬೇರೆಯವರಿಗೆ
ನೆಮ್ಮದಿ ನೀಡಬಲ್ಲದು ಗೆಳೆತನ
ಬೇರೆಯವರಲ್ಲಿರುವ ಕಲಿಕೆ ಬೇರೆಯವರಿಗೆ ಕಲಿಸುವ ಕಲಿಕೆಯೇ ಗೆಳೆತನ
ಗೆಳೆತನದ ಸಂಬಂಧಗಳು ಮನದ ಆಟ !

ಸೂರ್ಯ-ಚಂದ್ರರು ಒಬ್ಬರನ್ನೊಬ್ಬರು ಹುಡುಕಾಡುವಂತೆ ಗೆಳೆತನದ ಜೊತೆಯಾಟ
ವಿಶ್ವದ ಎಲ್ಲಾ ಕ್ರಿಯೆಗಳಲ್ಲಿ ಜೊತೆ ಜೊತೆ ಸಮಾಧಾನ ಸ್ಥಿತಿಗಳಿವೆ

www.sriharikhoday.com

ಒಬ್ಬರನ್ನೊಬ್ಬರಿಗೆ ರೇಗಿಸುವುದು . .ಸಮಾಧಾನಗೊಳಿಸಿ
ಸರಿಪಡಿಸುವುದು

ಧೈರ್ಯವನ್ನು ನೀಡುವುದು . . .
ಹೊಸ ಹೊಸ ಯೋಜನೆ ಪ್ರಪಂಚಕ್ಕೆ ಬರಮಾಡಿಕೊಳ್ಳುವುದು
ಯುವ ಬೇಡಿಕೆಯನ್ನು ಎಲ್ಲಾ ರೀತಿಯಲ್ಲೂ ನೀಡಬಲ್ಲದು ಗೆಳೆತನ !

ತಾಳ್ಮೆಯಿಂದ ತೆರೆದ ಕಿವಿಯಿಂದ . .ತೆರೆದ ಕಣ್ಣಿನಿಂದ
ಹೊಸದಾಗಿ ತೆರದ ಮನಸ್ಸಿನಿಂದ
ಎಲ್ಲರ ಜೊತೆ ಬೆರೆತುಕೊಳ್ಳುವುದು
ಜೀವನದ ನೆರಳಲ್ಲಿ ಗೆಳೆತನ ಮಾತ್ರ !

ತನ್ನಲ್ಲಿ ತಾನೇ ಹಿಗ್ಗುತ
ತನ್ನಲ್ಲಿ ತಾನೇ ಪಶ್ಚಾತ್ತಾಪಪಡುತ್ತ
ಸರಿಯೋಜನೆಗಳಲ್ಲಿ ಭಾಗಿಯಾಗುವ
ಹೆಚ್ಚಿನ ಸೌಲಭ್ಯವನ್ನು ಸಂಪಾದಿಸುತ್ತ

ಕೊನೆಗಳಿಗೆ ಅರ್ಥ ತಿಳಿಯದ ಜೀವಂತ ಜೊತೆಬರುವ
ಗೆಳೆಯರು ಜೀವಂತ ಅವಶ್ಯಕತೆ
ಜೀವಂತ ಅವಶ್ಯಕತೆ ಗೆಳೆತನದ ಬಾಂಧವ್ಯ !

– **ಶ್ರೀ ಹರಿ.**

**11–06–2015**



www.shrikhoday.com

# 958

ಮಾಯಾವಿಯಾಗಿರುವ ಗೆಳೆತನ
ಸ್ನೇಹತನವನ್ನು ತಮ್ಮ ಎಂದು ಕರೆಯುವುದು
ಹೃದಯದ ಬಡಿತದ ಸದ್ದಿನಲ್ಲಿ ಜೊತೆಯಾಗಿರುವುದು
ಜೊತೆ ಭವಿಷ್ಯಗಳಲ್ಲೂ ಜೊತೆ ಜೊತೆಗಿರುವ ಭಾವನೆ
ಜೊತೆ ಜೀವನವೇ ಗೆಳೆತನ !

ತಮ್ಮಲ್ಲಿ ಅಡಗಿರುವ ಮಕ್ಕಳ ಭಾವನೆ ಹೊರಸೂಸುತ್ತ
ವಿಶ್ವದ ಉಸಿರನ್ನೇ ಆಡುತ
ತಮ್ಮದೇ ಆದ ಸ್ವಪ್ನಗಳ ತಾವೇ ನೆನೆಸುತ್ತ
ಗೆಳೆತನದ ಗೌರವ ಬೆಳೆಸುವಿಕೆ
ತಮ್ಮಲ್ಲೇ ತಾವು ತೀಟೆಗಳ ಆಟ ಆಡುತ್ತಿದೆ

ನಗುತ್ತಾ . ನಗುತ್ತಾ ನಗಿಸುತ್ತಾ ನಲಿಯುತ
ಜೊತೆಗಿರುವ ಮಾಯಾವಿ ಸ್ನೇಹತನ !

ಕೊಳಲು ರಾಗಬದ್ಧವಾಗಿ ಊದುವಂತೆ
ಗೆಳೆತನ ತನ್ನದೇ ಆದ ನಡೆನುಡಿ ನಡಿಗೆಗಳನ್ನು
ಎಲ್ಲರ ಕೈಗಳನ್ನು ಜೊತೆ ಭದ್ರವಾಗಿ ಹಿಡಿದು
ಹೊಸ ರೀತಿಯ ಉಸಿರು ನಿಟ್ಟುಸಿರುಗಳು ಅನುಭವಿಸುವ ಕಾಲದ
ಸುಖ

ಗೆಳೆತನದ ಜೊತೆ ಸೇರಿಕೊಳ್ಳುತ್ತಿದೆ !
ಪ್ರೀತಿಯ ಲೇಪಿತ ಮಧುರ ಮಾತುಗಳು
ಮಾತು ಮಾತುಗಳಲ್ಲಿ ಸುಲಭವಾಗಿ ಅರ್ಥ ತಿಳಿಸುವ ಗೆಳೆತನ
ಅವಿಚ್ಛಿನ್ನವಾದ ಜೀವನದ ಜೊತೆ ಬೆರೆಕೆ
ಗಾವುದ ದೂರವಿದ್ದರೂ ಜೊತೆಯಿದ್ದಂತೆ
ಸಮಾಜ ಬಾಂಧವ್ಯ ಜೊತೆ ಸೇರಿ

ಪ್ರಕೃತಿಯಲ್ಲುಳ್ಳ ಅರ್ಥವನ್ನು ತಿಳಿದಂತೆ ಮಾತನಾಡುವ ಆಸಕ್ತಿ
ಬೇಗನೆ ಅಸ್ತಮವಾಗುವ ಸೂರ್ಯನನ್ನು ಶಪಿಸಿ
ನಾಳೆ ಉದಯಿಸುವ ಸೂರ್ಯನಿಗೆ ಕಾದು
ಇರುಳಲ್ಲಿ ಕಾಲ ಕಳೆಯುತ
ಇರುಳು ಸ್ವಪ್ನಗಳು ಗೆಳೆತನದ ರಾತ್ರಿಗಳಾಗಿವೆ !

**– ಶ್ರೀ ಹರಿ.**

**12–06–2015**



# 959

ಮನೋ ಸಾಮ್ರಾಜ್ಯದಲ್ಲಿ ಪ್ರೀತಿ ಮಮತೆಗಳ ಗೆಳೆತನ
ಸದಾ ಚಿಂತನೆಯಿಂದ ಹೊಸ ಹೊಸ ಕಲಿಕೆ ಸೌಂದರ್ಯವಾದ
ಜೀವನವನ್ನು
ನೆನೆಸುವುದು ಜೀವನದ ಗೆಳೆತನದ ಸಾಮ್ರಾಜ್ಯದಲ್ಲಿ !

ಗೆಳೆತನದ ಸಾಮ್ರಾಜ್ಯದಲ್ಲಿ ಅಡಗಿರುವ ಗುಟ್ಟು
ಕದ್ದು ಜೊತೆ ಸೇರುವ ಸ್ನೇಹಿತರ ಒಗ್ಗಟ್ಟು
ವ್ಯಕ್ತಿತ್ವಗಳನ್ನು ನಿರ್ಮಾಣಗೊಳ್ಳುವುದಕ್ಕೆ ಮಾತು ಮಾತಿನ

ಸರಳ ಮಾತುಗಳು ವಾಗ್ದಾನ ಭಾವದ ಭಾಷೆ
ಕಷ್ಟ ಭಾರಗಳನ್ನು ತೋಲನೆ ಮಾಡದ ಗೆಳೆತನ
ಮಾನವನ ಜನುಮಕ್ಕೆ ಒಂದು ವರದಾನ !

ಜೀವನದ ಹೊಸ ಹೊಸ ಅನುಭವದ ನೂತನ
ಪ್ರಬಲವಾಗಿ ಬೆಳೆಯುವುದು ಮನೋವಿಜ್ಞಾನ
ಸೃಜನ ಭಾವಗಳಾಗಿ ಜೊತೆಗೂಡಿ ಮಾಡುವರು ಕೂಡುಪಾನ

ಒಂದೇ ದಾರಿ ಒಂದೇ ಮಾರ್ಗ ಭಾವನೆಯಲ್ಲಿ ಬೆಳೆಯುತ್ತಿದೆ ದಿಟ್ಟತನ
ಕಣ್ಣಿನಿಂದ ಸ್ವೀಕರಿಸುವ ಆಲಿಂಗನ
ಜೀವಮಾನ ಪರ್ಯಂತ ಜೊತೆಯಿರುವ ಭಾವನೆ ಗೆಳೆತನ !

www.sriharikhoday.com

ಸುಖದ ಗಳಿಕೆ ಮಾಡುವ ವಿಧಾನ
ಜೊತೆ ಒಬ್ಬರನ್ನೊಬ್ಬರ ಅಧೀನ
ಎಂದಿಗೂ ಸಡಲಿಸಲಾಗದ ಗೆಳೆತನ

ದಾಂಪತ್ಯದಲ್ಲಿರುವ ಗೆಳೆತನ
ವಿಪತ್ತಿಗೆ ಜೊತೆಯಾಗುವವರ ಗೆಳೆತನ
ಕಾಣುವ ಕತ್ತಲೆಗೆ ಬೆಳಕನ್ನು ತೋರಿಸುವ ಗೆಳೆತನ

ಗಿಳಿಯ ಜೊತೆಗೂ ಗೆಳೆತನ
ಪ್ರೀತಿ ಸಾಕಬಲ್ಲ ಎಲ್ಲರ ಜೊತೆಗೆ ಗೆಳೆತನ
ವಿಶ್ವದಲ್ಲಿ ವಿಜ್ಞಾನ ಮೆರೆಯುತ್ತಿವುದು ಪ್ರಕೃತಿಯ ಗೆಳೆತನಕ್ಕೆ ಅತ್ಯುತ್ತಮ ಸ್ಥಾನ

**– ಶ್ರೀಹರಿ.**

**13–06–2015**



# 960

ಪ್ರಪಂಚ ಬೆಳೆಯುತ್ತಿಲ್ಲ
ತಾನೂ ಕೂಡ ಬೆಳೆಯುತ್ತಿಲ್ಲ
ಪ್ರಪಂಚದ ಮಾತು ಮಾತುಗಳು ಮಾತ್ರ ಬೆಳೆಯುತ್ತಲಿದೆ !

ಹೇಳುವವನು ಹೇಳುತ್ತಾ. ಹೇಳುತ್ತ
ಕೇಳುವವನು ಕೇಳುತ್ತಾ . .ಕೇಳುತ್ತ
ಪ್ರಪಂಚದ ಜನ ಮಾತನಾಡುತ್ತಿದ್ದರೆ

ಇದು . ಅದು . ಎಂದು ಮಾತನಾಡುತ್ತಲೇ
ನಿಲ್ಲದೆ ಮಾತನಾಡುತ್ತಿರುವ ರಾಜಕಾರಣಿಗಳು !

ವಿನಾಕಾರಣ ದ್ವೇಷಗಳು ಇಲ್ಲದ ಊಹಾಪೋಹಗಳು
ಅಲಂಕಾರಗಳಿಂದ ವರ್ಣರಂಜಿತವಾಗಿ
ರಾಜಕೀಯ ಎಚ್ಚರಿಕೆ ದಿನಪತ್ರಿಕೆಗಳು !

ದೇವರನ್ನು ಹೆದರಿಸುವ ಬೆದರಿಕೆಗಳು
ಬೇಡದ ಬೇಡಿಕೆಗಳು
ಪ್ರಚೋದಿತ ನೆಮ್ಮದಿಗಳು

ನನ್ನವರು ನಮ್ಮವರು ಎಂಬ ಮಾತಿನ ವಾಡಿಕೆ ಹೋಗಿ
ನನ್ನ ಪಕ್ಷದವರು . ನಮ್ಮ ಪಕ್ಷದವರು
ತನ್ನ ತಮ್ಮ ಬೇರೆ ಪಕ್ಷದವನು

www.shriharikhoday.com

ಅವನು ನನಗೆ ಗೊತ್ತು. .ನಾನು ಅವನ ವಿರೋಧಿ
ಸತ್ಯ ಅಳೆಯಲಾಗದ ಜಂಭದ ಗೊಂಚಲುಗಳು ನೇತಾಡುತ್ತಿವೆ !

ಬಾಯಿಲ್ಲದವರಿಗೆ ಬಾಯಿಯನ್ನು ಮುಚ್ಚಿಸಿ
ನಾನು ಹೇಳಿದಂತೆ ನಡೆ ಎಂಬ ಬೆದರಿಕೆ ಮಾತುಗಳು
ಮನೋ ಸಮುದ್ರದ ಅಲೆಗಳು ನಿಲ್ಲದೆ ಅಲೆದಾಡುತ್ತಿದೆ !

ಸೃಷ್ಟಿಕರ್ತನ ಮೇಲೆ ಶತ್ರುತ್ವ
ಕಷ್ಟವನ್ನು ತಾಳಲಾಗದ ಕಾಲ
ಕತ್ತಲೆಯ ರಾತ್ರಿಯನ್ನೇ ಕಟ್ಟುತ್ತಿದೆ

ಪ್ರಪಂಚ ಬೆಳೆಯುತ್ತಿಲ್ಲ. . ತಾವೂ ಬೆಳೆಯುತ್ತಿಲ್ಲ
ಮಾತು ಮಾತುಗಳು ಮಾತ್ರ ದ್ವೇಷಭರಿತ ಮಾತುಗಳಿಂದ
ಪ್ರಪಂಚವನ್ನು ಅರಿಯದೆ ಮರೆತಿದ್ದಾರೆ.

**– ಶ್ರೀ ಹರಿ.**

**15–06–2015**



## 961

ಕಾಮಧೇನುವಿನ ಮನಸ್ಸು
ಮನೋಕಣಿವೆಯ ಮೇಲಿನ ಕಾಮನಬಿಲ್ಲು

ಕಿತಾಪತಿಯ ಮಾತು
ತೊಂದರೆ ತರಿಸುವ ತಾಪತ್ರಯಗಳು

ಕೀಟಲೆಯ ಉಪದೇಶ
ಕೆಸರಿನ ಸ್ನಾನ

ಕುರುಬ ಕುರಿಗಳ ಹಿಂಬಾಲಿಸುವನು
ಕೂಡಿರುವುದು ಜೀವನದ ಬೆಳೆಯ ಕೂರಿಗೆ

ಕೃಷಿಗೆ ಪ್ರಕೃತಿಯೇ ಗುರು

ಕೆಣಕುವುದು ಇಲ್ಲದ ಜ್ವರ ತರಿಸುವುದು
ಕೇಡನು ತಮಗೆ ತಾವೇ ತರಿಸಿಕೊಳ್ಳುವರು

ಕೈಪಿಡಿದು ಮೇಲೆತ್ತುವುದು ನಮ್ಮ ಧರ್ಮ

**– ಶ್ರೀ ಹರಿ.**

**17–06–2015**

www.sriharikhoday.com

## 962

ನನ್ನ ಏಕಾಂತಕ್ಕೆ ಸ್ಥಳ ಇಲ್ಲದೆ
ನೀ ನನ್ನ ಮನಸ್ಸಿನಲ್ಲಿ
ಜೊತೆ ಜೊತೆಗೇ ಇರುವೆ

ಹಗಲು ರಾತ್ರಿಗಳ ಮರೆಸಿ
ಹಗಲು ರಾತ್ರಿಗಳನ್ನು ಬೆಳಕಿನಂತೆ
ನೀ ನನ್ನ ಜೊತೆಯಲ್ಲಿಯೇ ಜೊತೆಯಿರುವೆ !

ನಾ ಈಗ ಕಾಣುವ ಏಕತನ
ಈ ನಿನ್ನ ಪ್ರೀತಿ . .
ನಾ ನನ್ನ ಪ್ರೀತಿಗೊಂದು ಶಾಂತಿ ತರುವೆ !

ಸುಮ್ಮನೆ ನೀ ಇರಲಾರದೆ
ನಿನ್ನ ನೆನಪಲ್ಲೇ ನಿನ್ನ ಹೊಸ ಹೊಸ ರೂಪ ಕಾಣುತ
ನನ್ನ ಎಲ್ಲಾ ಭಾವನೆಗಳೂ ನಿನ್ನ ಜೊತೆ ಬೆರೆತುಹೋಗಿದೆ !

ನಿನ್ನನ್ನು ಬೆರೆಯುವ ಹೋಲಿಕೆ ಮಾಡೋಣವೆಂದರೆ
ಸರಿ ಹೋಲಿಕೆ ಯಾರೂ ಸಿಗದೆ
ನೀ ನನ್ನ ಮನಸ್ಸಿಗೆ ಹೋಲಿಕೆ ಇಲ್ಲದ ಆಕಾಶದಂತೆ !

www.sriharikhoday.com



ನನ್ನ ಪ್ರೀತಿ-ಪ್ರೇಮಗಳ ಆಕಾಶದಲ್ಲಿ
ಬೆರೆತುಹೋಗಿರುವ ನೀ ಕಾಲ ಕಳೆಯದೆ
ನನ್ನ ಕೈಸೆರಯಾಗು ಪ್ರಿಯೇ!

ನಿನ್ನ ನೆನಪುಗಳು ನಮ್ಮ ಪ್ರೀತಿಗೆ ಸಾಣೆ ಹಿಡಿಯುತ್ತಿರುವುದು
ಜೀವನದ ಯಾವುದೇ ಕಷ್ಟಗಳ ಹೆದರಿಸಲು ಸಜ್ಜಾಗಿ
ನಿನ್ನ ಏಕಾಂತದಲ್ಲಿ ನನ್ನ ಏಕಾಂತ ಕಳೆದುಹೋಗಿದೆ !

ಋತುಗಳು ನಿನ್ನನ್ನು ಪ್ರಚೋದಿಸಿದರೂ
ತಡವೇತಕೆ . .? ಸಖಿ

ನಾವುಗಳು ನಮ್ಮ ಏಕಾಂತಗಳನ್ನು ದೂರ ತಳ್ಳಿ
ಜೊತೆ ಬೆರೆತು ಒಂದಾಗಿ
ನಮ್ಮನ್ನೇ ನಾವು ಮರೆಯೋಣ ಬಾ !

**- ಶ್ರೀ ಹರಿ.**

**18-06-2015**

# 963

ಸಮುದ್ರದ ಅಲೆಗಳು ಸಮುದ್ರದಿಂದಲೇ ಹೊರಬರುವಂತೆ
ನಮ್ಮ ಮನೋಸಾಗರದಲ್ಲಿರುವ ಭಾವನೆಗಳು
ಮನದಿಂದಲೇ ಹೊರ ಬರುವುದು !

ಅಲೆಗಳಿಗೆ ಸಮುದ್ರದಾಚೆ ಹುಡುಕದೆ
ಸಮುದ್ರದಲ್ಲಿ ಇರುವುದೆಂಬ ಸತ್ಯವನ್ನು ನಾವು ಅರಿಯಬೇಕು
ಆಗದೇ ಇರುವುದನ್ನು ಮಾಡುವ ಸಾಮರ್ಥ್ಯ ನಮ್ಮಲ್ಲೇ
ಹುಡುಕಬೇಕು !

ಜ್ಞಾನದ ಅನುಭವಗಳಿಗೆ ನಮ್ಮಲ್ಲಿಯೇ ನಾವು ಹುಡುಕಬೇಕು
ಕೌಶಲ್ಯದ ಬೇಡಿಕೆಗೆ ಕೌಶಲ್ಯವನ್ನು ನಮ್ಮಲ್ಲಿಯೇ ಹುಡುಕಬೇಕು
ಸಾಮರ್ಥ್ಯದ ಬೇಡಿಕೆ ನಮ್ಮ ಮನದ ಆಳದಲ್ಲೇ ಹುಡುಕಬೇಕು !

ದೇವರನ್ನು ಅನುಭವಿಸಬೇಕಾದರೆ ನಮ್ಮ ಮನದಲ್ಲಿ
ನಾವೇ ದೇವರನ್ನು ಹುಡುಕಬೇಕು
ನಮ್ಮ ಅಂತಸ್ತನ್ನು ಹೆಚ್ಚಿಸಿಕೊಳ್ಳಬೇಕಾದರೆ ಬುದ್ಧಿಯಿಂದ
ಉಪಾಯ ನಮ್ಮಲ್ಲೇ ನಾವು ಹುಡುಕಬೇಕು !

ದೊಡ್ಡವರಾಗಬೇಕೆಂಬ ಇಚ್ಛೆ ಅದರ ಮಾರ್ಗ ನಮ್ಮಲ್ಲಿಯೇ
ಹುಡುಕಬೇಕು



ನಮ್ಮ ಹೆಬ್ಬಯಕೆಗಳ ಅಪೇಕ್ಷೆ ಇದ್ದರೆ
ಬೇಕಾದ ರೀತಿ–ನೀತಿಗಳನ್ನು ಹುಡುಕಬೇಕು !

ನಮ್ಮನ್ನು ನಾವೇ ಮರೆತು ಗಣಿಯಲ್ಲಿ ಹುಡುಕುವಂತೆ ಬೇಕಿದ್ದನ್ನು
ಹುಡುಕಬೇಕು

ಸೂರ್ಯನ ಬೆಳಕು ಸೂರ್ಯ ತನ್ನಲ್ಲೇ ಹುಡುಕಿ ಪಡೆದ
ಬೆಳಕನ್ನು ವಿಶ್ವಕ್ಕೆ ನೀಡುತ್ತಿರುವನು

ಮರೆತದ್ದನ್ನು ನೆನಪುಗಳು ತಮ್ಮಲ್ಲೇ ಹುಡುಕಿ ನೆನಪು
ಹೊರಹೊಮ್ಮುವಂತೆ
ನಾವು ನೆನಪುಗಳನ್ನು ತಮ್ಮಲ್ಲೇ ಹುಡುಕುವಂತೆ
ವಿಶ್ವದ ಅನುಭವ ನಮ್ಮಲ್ಲೇ ಹುಡುಕಿ ಅನುಭವಿಸಿದರೆ

ವಿಶ್ವದ ಮೂಲಸ್ಫೂರ್ತಿ ಅನುಭವ ಪಡೆದು ನಮ್ಮಲ್ಲೇ ಪಡೆದ ಸುಖ
ಆ ಸುಖವನ್ನು ನಮ್ಮಲ್ಲೇ ಹೊರತಂದ ಸಾಮರ್ಥ್ಯ
ವಿಶ್ವ ಸಾಮರ್ಥ್ಯಶಾಲಿ ಎಂದು ಕರೆಯುವುದು !

**– ಶ್ರೀ ಹರಿ.**

**20–06–2015**

www.sriharikhoday.com

## 964

ಭೂಮಿ ಹುಟ್ಟು ಕುರುಡು
ಅದನ್ನು ಕೈ ಹಿಡಿದು ನೆಡೆಸದೇ ಇದ್ದರೆ
ಭೂಮಿಯ ಪಾಡು ಬರಡು
ಈ ಮಾತು ಮಾತಿನಲ್ಲಿ ಎಲ್ಲರ ಜೊತೆ ಹರಡು !

ಭೂಮಿಯ ಕಷ್ಟವನ್ನು ಅಗೆದು ತೋಡು
ಬೇಡಿದ್ದನ್ನು ನೀಡು
ಅದು ನಿಶ್ಯಬ್ದದಲ್ಲಿ ಹೇಳುವ ಮಾತಿಗೆ ಕಿವಿಕೊಡು
ಕೇಡಾಗಿರುವ ಜೀವನವನ್ನು ಕುರುಡು ಭೂಮಿ ಜೊತೆಗೆ
ಮಾರ್ಪಾಡಾಗಿಸು !

ಬೆಳೆಯನು ಬೆಳೆಯುವುದಕ್ಕೇ ಕಾದಿದೆ ಭೂಮಿಯ ಬೀಡು
ಆಣೆ ಮಾಡಿ ಹೇಳು . . .
ಕುರುಡು ಭೂಮಿಯ ಜೊತೆ
ಎಂದಿಗೂ ಜೊತೆ ಜೊತೆಗಿರುವೆನೆಂದು ಆಣೆ ಮಾಡು !

ಬೇಡುವ ನೀರನ್ನು ನೀಡು
ಬೆಳೆದು ಬಾಡುವ ಹೆಚ್ಚಿನ ಬೆಳೆಯನ್ನು ಬೆಳೆಯಲು ಜಗ್ಗಾಡು
ಬಿಡದೆ ಒಕ್ಕಲುತನ ಮಾಡು
ಸಾಗಲಿ ನಿನ್ನ ಭೂಮಿಯ ಕೆಲಸ ಗುಡು ಗುಡು !



ಬಡತನದ ಮೇಲೆ ಮಾಡು ಸೇಡು
ಕೆಲಸದಲ್ಲಿ ನೀರಿನಲ್ಲಿ ಈಜಾಡುವಂತೆ ಕೆಲಸದ ಜೊತೆ ಈಜಾಡು
ಬಾಡಿಹೋಗಿರುವ ನಿನ್ನ ಜೀವನವನ್ನು ಮಾರ್ಪಾಡು ಮಾಡು
ಹೆದರದೇ ಮುನ್ನಡೆಸು ಅದು ಜೀವನದ ಜಾಡು !

ನಿನಗೆ ಕಷ್ಟವಾಗುತ್ತಿರುವ ಕೇಡನ್ನು ಬದಿಗೊಡು
ಕುರುಡು ಬೂಮಿಯು ನೀಡಿರುವ ವರಗಳ
ಸುಖದ ಜೊತೆಗೆ ತಾಂಡವವಾಡು
ಮುಚ್ಚುಮರೆಯಿಲ್ಲದ ಕುರುಡು ಭೂಮಿ

ಜೊತೆ ಸಂಬಂಧ ಅದರ ಸುಖ . . .
ಎಲ್ಲರ ಜೊತೆ ಬಹಿರಂಗ ಮಾಡು
ಹುಟ್ಟು ಕುರುಡಾದ ಭೂಮಿಯ ಜೊತೆಯ
ಹಸಿದ ಹೊಟ್ಟೆಗಳು ತಿಂದು ಉಂಡು ಸವಿನೋವ ಪಡು !

**– ಶ್ರೀ ಹರಿ.**

**22–06–2015**

www.sriharikhoday.com

## 965

ಈ ದಿನ ಲಾಭದ ದಿನ . .
ದಿನವೇ ನಮ್ಮ ಲಾಭ . ..
ಮನ ಬಯಸುವುದು ದಿನ ದಿನವೂ ಹೊಸ ಹೊಸ ಪ್ರಾರಂಭ
ಎಲ್ಲಾ ಅನುಭವಗಳ ಹಿಂದೆ ಲಾಭದ ಹಿನ್ನೆಲೆ !

ಅಹಂಭಾವವನ್ನು ತರಿಸುವ ಲಾಭಗಳು
ಐಕ್ಯಭಾವ ತರುವ ಸಮಾಜ ಭಾವಗಳು
ಮನಕ್ಕೆ ಶಾಂತಿ ಲಾಭವಾಗಿ ಬರುವ ದೈನ್ಯ ಲಾಭಗಳು
ಗತ ವೈಭವಗಳನ್ನು ಮೆಚ್ಚುತ ಸುಖತರುವ ಸುಖದ ಲಾಭಗಳು !

ಸಜೀವವಾಗಿ ಅನುಭವಿಸುವ ಶುಭ್ರಭಾವಗಳು
ಲಾಭಗಳಿಗೆ ನಾನಾ ಅಭಿನಯಗಳು
ಹಂತ ಹಂತದಲ್ಲಿ ಸುಲಭರೀತಿಯಲ್ಲಿ ಹುಡುಕುತ ಮುಖಭಾವಗಳು
ಶುಭ-ಅಶುಭಗಳು ಒಂದೆಡೆಗಿದ್ದರೆ ಮತ್ತೊಂದೆಡೆ ಲಾಭ-ನಷ್ಟಗಳ
ಗಣಿಕೆಗಳು !

ಸಮಾರಂಭದ ಮಧ್ಯೆ ಧೈನ್ಯ ಭಾವದಿಂದ ಮಾತನಾಡಿದರೆ
ಮೆಚ್ಚುಗೆಯ ಚಪ್ಪಾಳೆಯ ಲಾಭಗಳು ಜೊತೆ ದಿನಗಳಿಲ್ಲದಿರೆ
ಲಾಭಗಳೇ ಇಲ್ಲ



ಕಾಲದ ಜೊತೆಗೆ ಸಜ್ಜಾಗಿರುವ ದಿನ
ದೇವರು ಮಾನವನಿಗೆ ನೀಡಿರುವ ಮಹಾನ್ ಅನುಭವ !

ಅಂತಿಮವಿಲ್ಲದ ಯಶಸ್ಸಿನ ಬಯಕೆಗೆ
ಗತವೈಭವದ ಹಿನ್ನೆಲೆಯಲ್ಲಿ
ಸಾಹಿತ್ಯಾನುಭವ ಅತಿ ಅವಶ್ಯಕ
ಅನೇಕ ಸಲ ವೈಫಲ್ಯ ಪಡೆದ ಯಶಸ್ಸು ಮಾನವನ ಚರಿತ್ರೆ ಪರೀಕ್ಷೆ!

ಅಹಂಭಾವ ಬಿಟ್ಟು ದೀನಭಾವದಿಂದಲೇ ದೇವರನ್ನು ಬೇಡಿದರೆ
ಹೊಸ ಹೊಸ ಲಾಭಗಳು ಪ್ರಾರಂಭ
ಶುಭದ ಸುಖ ತರುವ ಪ್ರಾರಂಭ
ಅದೇ ಇಂದಿನ ಲಾಭ ತರುವ ಈ . .ದಿನ !

**– ಶ್ರೀ ಹರಿ.**

**23–06–2015**

www.sriharikhoday.com

## 966

ಕೊನೆಯಿಲ್ಲದ ಕೊನೆಕಾಣದ
ವಿಶ್ವವನ್ನೇ ಆವರಿಸಬಲ್ಲ
ವಿಶ್ವದ ಆಗುಹೋಗುಗಳು !

ಅಳತೆ ಮಾಡಿ ವೀಕ್ಷಿಸಬಲ್ಲ
ಸ್ವಯಂ ಪ್ರಚೋದಿತ ವಸ್ತು
ಮಾನವನ ಮನಸ್ಸು !

ಮನಸ್ಸಿನ ಸಹಪಾಠಿ ಕಾಲ
ಕಾಲ ಕೂಡ ಮನಸ್ಸಿನಂತೆ ನಡೆದಂತಿದೆ
ಮನಸ್ಸು ನೆನಪುಗಳಿಗೋಸ್ಕರ

ಕಾಲವನ್ನು ಮನಸ್ಸು ಉದ್ಭವಿಸುವಂತೆ ಎಂದು ಹೇಳುವುದು
ಸೂಕ್ತ. .
ಸೂಕ್ತವಲ್ಲದಿದ್ದರೂ ಕೆಲವು ಸಲ ಅವಶ್ಯವಾಗಿ
ಬೇಕಿರುವ ಸೂಕ್ತ ಎಂದು ಹೇಳಬಹುದು !

ಕಾಲದ ಆಮಿಷವಾದ ಭವಿಷ್ಯ ನುಡಿಯುತ್ತಿದೆ
ಒಂದು ಆಧ್ಯಾತ್ಮಿಕ ವಿಚಾರ ದೇವರು ಕೂಡ ಅವನ ಮನಸ್ಸಿನ
ಆಶ್ರಯ ಪಡೆದೇ ವಿಶ್ವವನ್ನು ನಿರ್ಮಾಣ ಮಾಡಿರಬಹುದು



ಮನಸ್ಸಿನ ತೀವ್ರ ಬಯಕೆ ಒಂದು
ಅದಕ್ಕೆ ಕಾಣುವ ಎಲ್ಲರಲ್ಲಿಯೂ ಸೌಂದರ್ಯವನ್ನು ತುಂಬುವ
ಪ್ರಯತ್ನ
ಪವಿತ್ರ್ಯತೆಯೂ ಕೂಡ ಮನಸ್ಸು ಹೇಳಿದಂತೆ ಕೇಳುತ್ತಿದೆ !

ಅಣು ಅಣುಗಳಲ್ಲಿ ವಾಸಿಸುತ್ತಿರುವ ಅವರವರ ಮನಸ್ಸು
ತಮ್ಮದೇ ಆದ ಬ್ರಹ್ಮಾಂಡಗಳ ಜೊತೆ ಜೀವಿಸುತ್ತಿದೆ

ಬೆಳಿ . . ಬೆಳೆ ಕೊನೆಯಿಲ್ಲದ ಬೆಳವಣಿಗೆಗಳು
ಕೊನೆಗಾಣದ ಬೆಳವಣಿಗೆಗಳು
ಕೊನೆ ಮೊದಲುಗಳು ಅಣು ಅಣುಗಳಲ್ಲಿ ವಾಸಿಸುತ್ತಿರುವ ಮನಸ್ಸಿಗೆ
ತಿಳಿದು
ಪಾವಿತ್ರ್ಯತೆಯನ್ನು ಒಂದು ಶಕ್ತಿಯಾಗಿ
ಕೊನೆಗಾಣದ ಪಾವಿತ್ರ್ಯತೆ ಮನಸ್ಸಿಗೆ ಗೊತ್ತಾಗಿ
ಪವಿತ್ರ ಭಾವನೆಯಿಂದಲೇ ಆಗಿರುವ ಸೃಷ್ಟಿ ದೇವರ ಸೃಷ್ಟಿ

ಮನಸ್ಸಿನ ಹೊಸ್ತಿಲಾದ ಪಾವಿತ್ರ್ಯತೆ
ಅದರ ಹೊಸ್ತಿಲು ದಾಟಿದ ಮೇಲೆ ಹತ್ತಿರ ದೂರಗಳು
ಹತ್ತಿರ–ದೂರಗಳು ದಾಟಿದ ಮೇಲೆ ದಿಗಂತಗಳು

ದಿಗಂತಗಳ ದಾಟಿದ ಮೇಲೆ ಬ್ರಹ್ಮಾಂಡ
ಬ್ರಹ್ಮಾಂಡ ದಾಟಿದ ಮೇಲೆ ಆಕಾಶ
ಕೊನೆಗಾಣದ ಆಕಾಶ

ಆಕಾಶವು ದಾಟಿದ ಮೆಲೆ ಪವಿತ್ರ ಮನಸ್ಸಿನ ಗಡಿಗಳು
ಅದೇ ದೇವರ ಶಕ್ತಿಯಾದ ದೇವರ ದೂತನಾಗಿರುವ ಮನಸ್ಸು
ಕೊನೆಗಳಿಲ್ಲದ ಆಯಾಮಗಳೇ ಮನಸ್ಸು



www.sriharikhoday.com

ಮನಸ್ಸಿನಂತೆ ದೇವರು
ದೇವರಂತೆ ಮನಸ್ಸು
ವಿಶ್ವದ ಆಡಳಿತವೇ ಮನಸ್ಸು !
ವಿಶ್ವದ ಭವಿಷ್ಯದ ಬೇಡಿಕೆಗೆ ಸಜ್ಜುಗೊಳಿಸುವುದು ಮನಸ್ಸು

– ಶ್ರೀ ಹರಿ.

24–06–2015



## 967.

ಆಸೆಗಳ ಭಾರ ಭವಿಷ್ಯ ಹೊತ್ತು
ಕಾಲ ನಾ ಹೊತ್ತಿರುವೆನೆಂದು ಹೇಳದೆ
ಕೊನೆಯಿಲ್ಲದ ಆಸೆಗಳ ಗತ್ತು
ಆಸೆಗಳು ಸಾಧಿಸಿರುವೆ ಎಂಬ ಸಾಬೀತು

ಹಂತ ಹಂತಗಳಲ್ಲಿ ಬೇಕೆಂಬ
ಆಸೆಗಳ ಹೊಸತು ಆಸೆಗಳಿಗೆ ತಲೆಬಗ್ಗಿ
ಪ್ರಕೃತಿಯ ಆಸೆಗಳಿಗೆ ತಲೆ ತಗ್ಗಿಸುತ್ತಿರುವ ಋತು

ಜಂತುವಿನ ಆಸೆಯನ್ನು ಪೂರೈಸುತ್ತಿದೆ
ಮಾನವನ ಆಸೆಯನ್ನೂ ಪೂರೈಸುತ್ತಿದೆ
ಸಮುದ್ರದ ಅಲೆಗಳ ಆಸೆಯೂ ಪೂರೈಸುತ್ತಿದೆ

ವಿಶ್ವದ ಧಾತುವೇ ಆಸೆಗಳ ಗುರುತು
ಸುಮ್ಮನಿರದ ಆಸೆಗಳು ತಮ್ಮದೇ ಆದ ಹಾದಿಯಲ್ಲಿ
ಮುನ್ನಡೆಯುತ್ತಿದ್ದರೂ ಹಾದಿಗಳು ನಡೆಯದೆ
ಆಸೆಗಳು ಭವಿಷ್ಯದ ಮೇಲೆ ಭಾರ ಹಾಕಿ

ಭಾರ ಎತ್ತಿ ಮುನ್ನಡೆಯುತ್ತಿರುವ ಭವಿಷ್ಯ
ಯಾವ ಒಣಮಾತನ್ನೂ ಮಾತನಾಡದೆ
ಯಾವ ರುಜುವಾತೂ ಬಿಡದೆ
ವರ್ಷಋತುಗಳ ಜೊತೆ ಸೇರಿಕೊಂಡು

www.sriharikhoday.com

ಪಿಸುಮಾತುಗಳು ಗಾಳಿ ಮುಖೇನ ಗಾಳಿಮಾತಾಗಿ
ಮಾನವನ ಆಸೆಗಳು ಜಲಜಂತುಗಳ ಆಸೆಗಳು
ಭವಿಷ್ಯ ಹೊತ್ತುಕೊಂಡಿರುವ ಆಸೆಗಳ ಭಾರ
ಬದಲಿ ಮಾತಿಲ್ಲದೆ ಭವಿಷ್ಯಕ್ಕೆ ಕಾಲ ನೀಡುವ ತರಬೇತಿ !

ಬರೀ ಮಾತಿಲ್ಲದೆ ತಲೆ ತಗ್ಗಿಸಿಕೊಂಡು
ಭವಿಷ್ಯ ಶತಮಾನಗಳನ್ನು ಲೆಕ್ಕಿಸದೆ ಮುನ್ನಡೆಯುತ್ತಿದೆ
ಋತುಗಳು . .ಶರದ್ ಋತುಗಳು ಮಿತಿ ಮಾತಾಡದೆ
ಜವಾಬ್ಧಾರಿಯ ಹೊತ್ತುಕೊಂಡು ಮುನ್ನಡೆಯುತ್ತಲೇ ಇದೆ

ನೋಡುತ್ತಲೇ ಇದೆ ಆಕಾಶ,
ಭೂತ ಭವಿಷ್ಯ ವರ್ತಮಾನ ತಿಳಿಯದ ಆಕಾಶ
ಈ ಬದಲಾವಣೆಗಳನ್ನು ನೋಡುತ್ತ. .
ಯಾವುದನ್ನು ಗುರುತಿಸದೆ ಇದೆ

**. . . ಶ್ರೀ ಹರಿ.**

**29–06–2015**



## 968

ವಂಚನೆ ತಿಳಿಯದ ಕಮಲ
ವಂಚನೆ ತಿಳಿಯದ ಹೃದಯ ಕಮಲದಂತಿರಬೇಕು
ಚಿಂತನೆಯನ್ನು ಚಿಂತಿಸುವ ಚಂಚಲ ಮನಸ್ಸು
ರಾತ್ರಿ-ಹಗಲು ಚಿಂತಿಸದಂತೆ ಹೂವು ಅರಳಿಸುವಂತೆ
ಅರಳಿಸುತ್ತಲೇ ಇರಬೇಕು !

ಸ್ನೇಹತನದಂತಿರುವ ಕಮಲದ ಬಣ್ಣಗಳು
ಅದು ಬೆಳೆದು ಕ್ಷಣ ಕ್ಷಣಗಳಲ್ಲಿಯೂ
ಕಮಲದ ಜೊತೆಗೆ ಬಣ್ಣ ಬೆಳೆಯುತ್ತ ಸ್ನೇಹತದಿಂದ
ಜೊತೆಗಿರಬೇಕು !

ರತಿತನವನ್ನು ಎಚ್ಚರಿಸುವ ಪ್ರೀತಿಯೆಂಬ ಸ್ನೇಹತನದ ಜೊತೆ
ಸ್ನೇಹತನ ಎಚ್ಚರಿಸುತ್ತ ನಿಲ್ಲದೆ ಬೆಳೆಯುತ್ತಲೇ ಇರಬೇಕು
ಮನ ಒಲಿಸಿಕೊಳ್ಳಲು ವೇದಿಕೆ ಮೇಲಿರುವ
ಹೂವಿನ ಹಾರಗಳು ಚಪ್ಪಾಳೆಗಳ ಸದ್ದಾದರೆ

ವೇದಿಕೆಯ ಸಭಿಕರೆಲ್ಲ ತ್ಯಾಗ ಬುದ್ಧಿ ಇರುವ ಹೂಗಳಂತೆ
ಹೂ ತನ್ನ ಬಳ್ಳಿಯನ್ನು ತ್ಯಾಗ ಮಾಡಿರುವ ಕ್ರಿಯೆಗೆ
ಚಪ್ಪಾಳೆಯ ಸದ್ದು ಸಲ್ಲಬೇಕು !

www.sriharikhoday.com

ಬಳ್ಳಿಯ ಜೊತೆ ಜೊತೆ ಕಳೆದುಹೋಗಿರುವ ಬಳ್ಳಿಯನ್ನು ಹೂ
ನೆನೆಸದೆ
ಮತ್ತೆ ತಾನು ಅರಳಿಸಿ ಸುಗಂಧವನ್ನು ನೀಡುತ್ತಲೇ ಇದೆ
ವೇದಿಕೆಯ ಸೊಬಗಿನ ಹೂವುಗಳಲ್ಲಿ
ನಿರಾಕಾರವಾಗಿರುವ ಹೂವಿನ ಸುವಾಸನೆ

ಹೂವಿನಲ್ಲಿ ಅಡಗಿರುವ ನಿರಾಕಾರ ತ್ಯಾಗ ಭಾವನೆ
ನೂರಾರು ವೇಷಧಾರಿಗಳಾದ ಸಭಿಕರಿಗೆ
ನೂರಾರು ಭಾವನೆಗಳು ಜೊತೆಯಿರುವ ಸಭಿಕರಿಗೆ
ಪವಿತ್ರ ಭಾವನೆಯನ್ನು ಮೂಡಿಸುತ್ತಿದೆ !

ಗೌರವ ನೀಡುವ ಚಪ್ಪಾಳೆಗಳು ವೇದಿಕೆಯ ಮೇಲಿರುವ
ಮಹಾನ್ ವ್ಯಕ್ತಿಗಳಿಗೆ ಸಲ್ಲಿಸುತ್ತಿದ್ದೇವೆಂಬ ಒಂದು
ದೃಷ್ಟಿಕೋನವಾದರೆ
ಮತ್ತೊಂದೆಡೆ ನಿರಾಕಾರ ಭಾವನೆಯಾದ
ಹೂವಿನ ಸುಗಂಧ ಕಾರಣವಾಗಿರಬಹುದು !

**– ಶ್ರೀ ಹರಿ.**

**02–07–2015**



www.sriharikhoday.com

# 969

ತಪ್ಪಾಗದೇ ಇರುವ ದಾರಿಯಲ್ಲಿ ನಡೆಯುತ್ತಲೇ ಇರಬೇಕು
ದಾರಿಯಲ್ಲಿ ಹೆಜ್ಜೆ ಹೆಜ್ಜೆಗೂ ಸರಿಯನ್ನೇ ನೆನಪಿಸಿಕೊಳ್ಳುತ್ತಲಿರಬೇಕು
ತಮ್ಮ ಎಚ್ಚರದಿಂದ ಹೆಜ್ಜೆ ಹೆಜ್ಜೆಗಳ ಹಾಕುತ್ತಲೇ
ದಾರಿಯಲ್ಲಿ ಮುನ್ನಡೆಯಬೇಕು !

ಮುಂದಾಕಿದ ಹೆಜ್ಜೆಗಳು ಹಿಂತೆಗೆಯದೆ
ನಡಿಗೆ ಸರಿಯೆಂಬ ಭಾವನೆಯಲ್ಲಿ ಹೆಜ್ಜೆ ಹಾಕುತ ಮುನ್ನಡೆಯಬೇಕು
ಹೆಜ್ಜೆ ಹಾಕುವಾಗ ಜೀವನ ಥಳಕನ್ನು ಮರೆಯಬೇಕು
ಯಾವ ಪರಾಕೂ ಕೇಳದೆ ಹೊಸದನ್ನು ಹುಡುಕುತ್ತ ಮುನ್ನಡೆಯುತ್ತಲೇ
ಇರಬೇಕು !

ಬಿರುಕಾಗಿರುವ ರಸ್ತೆಗಳಲ್ಲಿ ಎಚ್ಚರದಿಂದ ಹೆಜ್ಜೆ ಹಾಕುತ
ಬದುಕನ್ನು ಹುಳುಕಿಲ್ಲದೆ ಮುನ್ನಡೆಸಬೇಕು
ನಡೆಯುವ ದೃಷ್ಟಿಗೆ ಯಾವ ಮುಸುಕೂ ಹಾಕದೆ
ಬೆಳಕು ಇರುವ ಕಡೆ ಮುಂದೆ ಸಾಗುತ್ತಲಿರಬೇಕು

ಯಾವ ಕೆಟ್ಟ ವಿಚಾರಗಳು ಸಿಲುಕದೆ
ಒಳ್ಳೆಯ ವಿಚಾರಗಳು ದೂರವಿದ್ದರೂ ತಾರೆಗಳು ಮಿಣುಕುವ ರೀತಿ
ಅಡ್ಡ ಬರುವುದಕ್ಕೆ ನಾವು ಹೆದರಿಸಿ ಕೆಣಕಿಸಿ ಹೊಸಕು
ಭಾವನೆಗಳಿಲ್ಲದೆ
ಮನಸ್ಸಿಗೆ ಒಳ್ಳೆಯ ವಿಚಾರಗಳನ್ನು ಕಲಿಸಿಕೊಂಡು ಬೆರಸುತ್ತಲೇ
ಇರಬೇಕು !

ಸಾಧನೆಗೆ ಸಾಧನೆ ಬೇಕೇ ಬೇಕೆಂಬ ಭಾವನೆ
ಕ್ಷಣ ಕ್ಷಣಗಳಲ್ಲಿ ಹೊಸದನ್ನು ಹುಡುಕುತ
ಹೊಸತನವೇ ಒಳ್ಳೆ ಮಾರ್ಗದ ಕೈಫಲಕವನ್ನೇ ನೋಡುತ್ತಾ
ಹೆಜ್ಜೆಗಳ ಮುನ್ನಡೆಸಬೇಕು !

ಪರಿಶುದ್ಧವಾಗಿರಬೇಕು ಎಂಬ ಭಾವನೆಯಲ್ಲಿ ನಂಬಿಕೆ ಇಡಬೇಕು
ಮಾಡಿದ ತಪ್ಪುಗಳ ಬಿಟ್ಟು ಒಳ್ಳೆ ಪಾಠದಿಂದ ಉತ್ತಮ
ಮನುಷ್ಯನಾಗಲೇಬೇಕು
ತಪ್ಪಿಸುವ ದಾರಿಯಲ್ಲಿ ಎಂದೂ ನಡೆಯದೆ
ತಪ್ಪಾಗದ ಹಾದಿಯಲ್ಲಿ ನಮ್ಮ ಹೆಜ್ಜೆಗಳನ್ನು ಮುನ್ನಡೆಸಬೇಕು !

**– ಶ್ರೀ ಹರಿ.**

**04–07–2015**



# 970

ಸಪ್ತ ಸ್ವರಗಳ ಸೊಬಗಿನ ಜೊತೆ
ಏಳು ಬಣ್ಣಗಳ ಜೊತೆ ಜೊತೆಗೆ
ಕೇಳುತ್ತಾ . . ಕೇಳುತ ಅದರ ಆಳದಲ್ಲಿ ಐಕ್ಯವಾಗಿ ಹೋಗಿ
ಬಯಲ ಸೇರಿ ಬಯಲಾಗುತ್ತಿರುವೆ ನಾ . .!

ಜೊತೆ ಜೊತೆ ಸೇರಿದ ತೂಗು
ಸಂತಸದಿಂದ ಮನದಲ್ಲಿ ನಸುನಗು
ಸದ್ದಿನ ಜೊತೆಗೆ ನೋಟ
ನೋಡುತ್ತಿರುವ ನನಗೆ ಬಹಿರಂಗ ದರ್ಶನ !

ಬೇಡದೇ ಇರುವುದೆಲ್ಲ ಮನದಲ್ಲಿ ಒಣಗಿಹೋಗಿ
ನಿರಾಶಾ ಭಾವನೆಯ ಗುಂಗು
ಸಂತಸ ನಾ ಹೇಳಿದಂತೆ ಬಾಳು ಎಂದು ಹೇಳುತ್ತಾ
ಕೊರಗುತ್ತಿದ್ದ ಮನಸ್ಸಿಗೆ ವಿಶ್ವದಲ್ಲಿ ಬೆರೆಸಿದೆ !

ಸದ್ದು ಬೆಳಕಿಗೆ ವಿಶ್ವವೇ ತಲೆಬಗ್ಗಿ ಒಪ್ಪಿಕೊಂಡು
ಮನಸ್ಸಿಗೆ ಬೇಡದ್ದನ್ನು ಹೊರಹಾಕು ಎಂದು ಹೇಳುತ್ತಿದೆ
ದೈವತ್ವಕ್ಕೆ ಅಧೀನಾಗುತ್ತಿದ್ದೇನೆ !

ಸ್ವರಗಳ ಜೊತೆಗೆ ರಾಗ
ಬೆಳಕಿನ ಜೊತೆಗೆ ದಿಗಂತ

www.sriharikhoday.com

ಸೂರ್ಯಾಸ್ತಮದ ಜೊತೆ ಬೆಳಕು
ರಾತ್ರಿ – ಹಗಲುಗಳು . .

ಬೆಳಕು ರಾತ್ರಿಯಾಗುತ್ತ
ರಾತ್ರಿ ಬೆಳಕಾಗುತ್ತ
ಪ್ರಕೃತಿಯ ಜೀವನದ ಜೊತೆಗೆ
ನಾನೂ ಜೊತೆಯಾಗಿ

ತಡೆಯಲಾಗದ ಆನಂದ
ತನ್ನ ಇಹಪರಗಳಲ್ಲಿ ಸಂತಸ ತುಂಬಿಕೊಂಡು
ಹಗುರಾಗಿ ರಾಗಲಯಗಳ ಆಳದಲ್ಲಿ
ಸಪ್ತ ಸ್ವರಗಳು ನನ್ನನ್ನು ಕೊಂಡೊಯ್ಯುತ್ತಿದೆ !

**– ಶ್ರೀ ಹರಿ.**

**06–07–2015**



www.sriharikhoday.com

## 971

ದೇವರಿಗೆ ಅನೇಕ ಅರ್ಥಗಳು
ಅರ್ಥಗಳಿಂದ ಹೊಸ ಹೊಸ ಧರ್ಮ
ಮಾನವನಿಗೆ ದೇವರು ಬೇಕಂತೆ
ಫಲಪುಷ್ಪಗಳಿಗೆ ಸುವಾಸನೆ ಬೇಕಂತೆ

ನಾವು ದೇವರ ಮಕ್ಕಳಾಗಬೇಕಂತೆ
ನಮ್ಮಲ್ಲಿ ನಾವೇ ನಂಬಿಕೆಯನ್ನು ಹೆಚ್ಚಿಸಿಕೊಳ್ಳಬೇಕಂತೆ
ಭಯ ಭಕ್ತಿಗಳ ಹಿಂದೆ ಪಾಪ ಪುಣ್ಯಗಳ ಜೋಡಣೆಯಂತೆ
ದೇವರನ್ನು  ಆರಿಸುವುದು ಒಂದು ವ್ಯಾಪಾರವಂತೆ

ಮಹಾನ್ ಶಕ್ತಿಯಾದ ದೇವರನ್ನು
ಕಣ್ಣಿಗೆ ಕಾಣಲಾಗದ ಶಕ್ತಿಯನ್ನು
ನಾನು ನನ್ನನ್ನು ಆಡಿಸುವ ಮೈದಾನದಲ್ಲಿ,
ಗೆರೆಗಳು ಅಳತೆಗಳು ಇಲ್ಲದ ಮೈದಾನದಲ್ಲಿ

ನಿರಾಕಾರ ಭಾವನೆಯಿಂದ ಅಸೂಯೆ ಕ್ಲೇಶ ಭಾವನೆಗಳಿಲ್ಲದೆ
ಉರಿಯುತ್ತಿರುವ ದೀಪದಂತೆ,
ದೀಪ ಬೆಳಕನ್ನು ಕೊಡುವಂತೆ
ಎಲ್ಲದರಲ್ಲಿ ಪ್ರೀತಿಯನ್ನು ಕೊಡುತ್ತಿದ್ದರೆ

ಪ್ರೀತಿಯನ್ನು ಸ್ವೀಕರಿಸುತ್ತಿರುವ ಸುಖ ನಮಗೆ ಅನುಭವವಾಗಿ
ನೀಡುತ್ತಿರುವ ಪರಿಸರ ದೇವರ ಪರಿಸರ, ದೇವರ ಅನುಭವ ಅತಿ
ಎತ್ತರದ ರೋಮಾಂಚನವನ್ನು ಬೆಳೆಸಿಕೊಂಡಿರುವ ಎಚ್ಚರ

ಕತ್ತ ಲಿಗೆ ಬೆಳಕು ಹರಿಯುವಾಗ,
ಕತ್ತಲಿಗೆ ಹೊಸ ತೇರ್ಗಡೆಯ ಅನುಭವ
ಎಚ್ಚರ ಮುನ್ನೆಚ್ಚರಗಳಿಗಿರುವ ಪ್ರಜ್ಞೆಯಲ್ಲಿ ಅಂಜಿಕೆ ಲಜ್ಜೆಗಳನ್ನು
ಮೀರಿರುವ ಬೆತ್ತಲೆ ಸೂರ್ಯನ ಅನುಭವ

ಮಾನವ ಶರೀರ ಭಾವನೆಯಿಂದ ದೇವರನ್ನು ಅನುಭವಿಸುವ
ನಮ್ಮನ್ನೇ ಮರೆತಿರುವ ಅನುಭವ ಹತ್ತಿರ ದೂರಗಳು
ಒಂದಾಗುವ ಅನುಭವ ದಶದಿಕ್ಕುಗಳಲ್ಲಿ
ಒಂದೇ ಸಮಯದಲ್ಲಿ ಹರಿಯುತ್ತಿರುವ ಜೋಡಿ ಮನಸ್ಸುಗಳು

ಕನಿಷ್ಠದಲ್ಲಿ ಕನಿಷ್ಠವಾಗುತ್ತಾ ಪ್ರಕೃತಿಯ ಕರ್ಮಯೋಗಿಯಾಗಿ
ಶೃಂಗ ತುದಿಯ ಎತ್ತರದಲ್ಲಿ ನಿಂತು ಹೊಸ ಬಯಲನ್ನು
ಹುಡುಕುವುದು
ನಮ್ಮ ಜೊತೆಗೆ ದೇವರೂ ಸೇರಿಕೊಂಡು ನಮ್ಮ ಹೊಸ ಬಯಲಿನ
ಹುಡುಕಾಟ ಜೊತೆ ಹುಡುಕಾಟವೇ ದೇವರ ಜೊತೆಗಿನ ಅನುಭವ
ಕೊನೆ ಬಯಸದ ಪವಿತ್ರ ಅನುಭವ

**– ಶ್ರೀ ಹರಿ.**

**07–07–2015**



www.sriharikhoday.com

## 972

ನಾವು ನೀರಿನಂತೆ ಆಗಬೇಕು
ಎಲ್ಲಾ ಹಳ್ಳ-ಕೊಳ್ಳ ದಿಣ್ಣೆಗಳ ಗಡಿಗಳ ಜೊತೆಗೆ
ಅನುಸರಿಸಿಕೊಂಡು ಜೀವಿಸಬೇಕು !

ನಮ್ಮ ಮನದಲ್ಲಿ ನಾವು ಏನು ಮಾಡುತ್ತಿದ್ದೇವೆಂದು
ಸಂಶೋಧನೆ ಮಾಡದೆ ಇದ್ದರೆ
ನಮ್ಮ ಮನದಲ್ಲಿ ಏನು ನಡೆಯುತ್ತಿರುವುದೆಂದು ನಮಗೆ
ಅರಿವಾಗದು !

ನಾವು ನಮ್ಮ ಮನೋಸಂಶೋಧನೆ ಮಾಡದಿದ್ದರೆ
ಹೊಸದರ ಅನುಭವ ಎಂದು ಪಡೆಯಲಾಗದು !

ಎದುರಿಗಿರುವ ಕಾಣುವ ಕೆಲಸ ಮಾಡಲು
ಬೇರೆ ನಾಯಕನ ಹೇಳಿಕೆಗೆ ಕಾಯದೆ
ಕೆಲಸ ಮಾಡುತ್ತ ಜೀವನವನ್ನು ಮುನ್ನಡೆಸಬೇಕು !

ಹೊಂದಿಕೆ ಎನ್ನುವುದು ತಾಯಿ ಗರ್ಭದಿಂದ ಕಲಿತ ನಾವು
ಹೊಂದಿಕೆಯಿಂದ ಎಲ್ಲರ ಜೊತೆ ಬೆರೆತು
ನಾವು ಅವರಾಗಬೇಕು . . ಅವರು ನಾವಾಗಬೇಕು !

ಜೀವನದಲ್ಲಿ ಹೊಂದಿಕೆಯನ್ನು ಮರೆತು ಜೀವಿಸುವುದು ಅಸಾಧ್ಯ
ನಾವು ಸುಖ ಸಂತೋಷಗಳ ಅಪೇಕ್ಷಿಸಿದರೆ
ಬರೀ ಸಂತೋಷ ಸುಖಗಳನ್ನು ಹುಡುಕುತ್ತಿದ್ದರೆ

ಎಂದೆಂದಿಗೂ ನಾವು ಸುಖ ಸಂತೋಷದ
ಗಡಿಗಳನ್ನು ಕೂಡ ಕಾಣಲಾರೆವು !

ಹೊಂದಿಕೆ ಹೊಂದಾಣಿಕೆ ಸುಖ ಜೀವನದ ಮೂಲಮಂತ್ರವಾದರೆ
ಸರಳ ಪರಿಹಾರಗಳು ತಾವೇ ಸಹಾಯಕನಾಗಿ
ಎದುರು ಬಂದು ನಿಲ್ಲುವುದು !

ಬದುಕನ್ನು ಬದುಕಾಗಿ ಜೀವಿಸಬೇಕು
ಜೀವನದಲ್ಲಿ ಕಾಣುವ ಎದುರಲ್ಲಿ ಬೆರೆತುಕೊಂಡು ಹಗುರಾಗಿ
ಬಾಳಬೇಕು
ನಾವು ಎಂದೆಂದಿಗೂ ನೀರಿನಂತೆ ತಿಳಿಯಾಗಿರಬೇಕು!

– ಶ್ರೀ ಹರಿ.

08–07–2015



## 973

ಸಮಾಧಾನ ಸ್ಥಿತಿಯಲ್ಲಿ ಇರುವುದೇ ದೇವರ ಪ್ರಸಾದ
ಆತ್ಮವಿಶ್ವಾಸವನ್ನು ಬೆಳೆಸುವುದು ದೇವರಲ್ಲಿನ ಹತ್ತಿರ ಸಂಬಂಧ !

ತುಂಬು ನಿಶೆಯ ಬಟ್ಟಲನ್ನು ನೋಡಿದಾಗ
ನಿಶೆ ಸೇವಿಸದೆಯೇ ತುಂಬುತನವನ್ನು ಅನುಭವಿಸುವುದು
ಒಂದು ಬೀಜ ತಾನು ಗಿಡವಾಗಿ ವಿಸ್ತಾರವಾಗಿ ಬೆಳೆದಿರುವೆನೆಂಬ
ಬೀಜದ ಅನುಭವ ಸತ್ಯದ ಅನುಭವ !

ಎಲ್ಲಾ ಭಾವನೆಯ ಜೀವ ನಾವು ಭಾವನೆಯನ್ನು ಬೆಳೆಸುವ
ರೀತಿಯಲ್ಲಿದೆ
ತುಂಬು ತೂಕವಾದ ಮಾತುಗಳನ್ನು ಆಡುತ್ತಿದ್ದರೆ
ಸತ್ಯದ ಆಧಾರದಿಂದ ಕಟ್ಟಿದ ಮಾತುಗಳನ್ನು ಆಡುತ್ತಿದ್ದರೆ
ಗುಟ್ಟಾಗಿ ಯಶಸ್ಸು ನಮಗೆ ಬಂದು ಸೇರುವುದು !

ಎಲ್ಲಾ ಸ್ಥಿತಿಗಳಲ್ಲಿ ತಮ್ಮಲ್ಲೇ ಇರುವ ಆನಂದದ
ಜೊತೆಗೆ ಸೇರಿಕೊಂಡರೆ ಆನಂದದಲ್ಲಿ ಎಲ್ಲವೂ
ಸಮಾಧಾನ ಸ್ಥಿತಿಯಲ್ಲಿ ಜೀವಿಸುತ್ತ ಆನಂದದಲ್ಲಿ ಹಗುರಾದರೆ
ದೇವರ ಪ್ರಸಾದದಿಂದ ದೇವರ ಅನುಭವ !

ಬಳ್ಳಿ ಹೂಗಳ ಬೆಳಸಲು ಆಕಾಶವನ್ನು ಬಳಸುವಂತೆ
ಮಾನವ ಪ್ರಕೃತಿಯ ಆಕಾಶವನ್ನು ಬೆಳೆಸಿಕೊಂಡು
ಇಲ್ಲದೆ ಪ್ರಗತಿಯ ದೆಸೆಯಲ್ಲಿ ತಾನೇ ಮರೆತು

www.sriharikhoday.com

ಬೆಳೆಯುತ್ತಲೇ ಇರುವನು
ಕ್ಷಣ ಕ್ಷಣಗಳಲ್ಲಿ ಬೆಳವಣಿಗೆಗಳ ಗೋಚರ

ಬೆಳೆಸುವ ಮಾದರಿಯ ಅನುಭವ
ಕಾಲವೇ ನಮ್ಮಲ್ಲಿ ಉಪಯುಕ್ತಕರವಾಗಿ ಹರಿಯುತ್ತಿರುವ ಅನುಭವ
ಎಲ್ಲಾ ನೋಟದಲ್ಲಿ ದೇವರ ಪ್ರಸಾದವ ಅನುಭವಿಸಿದರೆ
ವಿಶ್ವದಲ್ಲಿ ವಿಶ್ವಾಸವನ್ನು ಹೆಚ್ಚಿಸಿಕೊಂಡರೆ

ಉದಾಹರಣೆಗಳನ್ನು ಮೀರಿಸುವ ಹೊಸ ಹೊಸ ಕಲ್ಪನೆಗಳ
ನಿರ್ಮಾಣ
ಮನಸ್ಸಿನ ಸಮಾಧಾನ ಸ್ಥಿತಿ ಪ್ರಕಟಿತ ರೂಪಗಳು
ಅನೇಕ . .ಅನೇಕ . .ಅನೇಕ
ವಿಶ್ವದ ಇರುವಿಕೆಯೇ ಸಮಾಧಾನ ಸ್ಥಿತಿ !

**– ಶ್ರೀ ಹರಿ.**

**08-07-2015**



## 974.

ಮನಸ್ಸಿನಿಂದ ಹೊರಬರುವ ಪ್ರತಿಯೊಂದು ಚಿಂತನೆ
ದೈವಿಕ ಶಕ್ತಿಯನ್ನು ಪಡೆದಿರುತ್ತದೆ
ಸಾಧ್ಯ ಅಸಾಧ್ಯಗಳು ನಮ್ಮ ಮನಸ್ಸಿನ
ಚಿಂತನೆಯ ಮೇಲೆ ಅವಲಂಬಿಸಿರುತ್ತದೆ

ಒಂದು ಚಿಂತನೆ ಕಾರ್ಯರೂಪವಾಗುವವರೆಗೂ
ವಿಶ್ವದ ಎಲ್ಲಾ ಪ್ರಮಾಣಗಳನ್ನು ತುಂಬಿಕೊಂಡು
ಕಾರ್ಯರೂಪಕ್ಕೆ ರೂಪಿಸಿಕೊಳ್ಳುವವರೆಗೂ
ಸಮಾಧಾನ ಸ್ಥಿತಿಗೆ ಬರುವುದಿಲ್ಲ !

ವಿಶ್ವದಲ್ಲಿ ಎಲ್ಲದರ ಮೇಲೆ ಒಂದಲ್ಲ ಒಂದು ಪ್ರಭಾವಿತವಾಗಿ
ಪ್ರಭಾವದ ಒತ್ತಡ ಒಪ್ಪಿಕೊಳ್ಳುವುದು
ಮನದಲ್ಲಿ ಹುಟ್ಟಿದ ಎಲ್ಲಾ ವಿಚಾರಗಳು
ಕಾರ್ಯರೂಪಕ್ಕೆ ಬರುವವರೆಗೂ ಕೊನೆಯಾಗುವುದಿಲ್ಲ

ವಿಶ್ವದ ಆಸಕ್ತಿಯಿಂದ ಹುಟ್ಟಿದ ವಿಚಾರ
ಸ್ವಯಂಶಕ್ತಿ ಸಾಮರ್ಥ್ಯಗಳನ್ನು ಹೊಂದಿರುವ ಕಾರಣ
ತಮ್ಮದೇ ಆದ ತರಂಗಗಳ ಹುಟ್ಟಿಸುತ್ತ

ವಿಚಾರಗಳ ಜೊತೆಗೆ ತಾವು ಸೇರಿಕೊಂಡು
ಕಾರ್ಯಗಳು ತಾವೇ ರೂಪಿಸಿಕೊಳ್ಳುವಂತೆ ಮಾಡುತ್ತದೆ !

www.sriharikhoday.com

ಸುಮ್ಮನಿರದ ಮನಸ್ಸು ಕ್ಷಣ ಕ್ಷಣಗಳಲ್ಲೂ
ವಿಚಾರಗಳ ಜನ್ಮ ನೀಡುತ
ಹುಟ್ಟಿದ ವಿಚಾರಗಳು ಭೇದಭರಿತವಾಗಿ
ಸಾಧ್ಯ ಅಸಾಧ್ಯಗಳ ತಿಳಿಯದೆ

ಕಾರ್ಯಸಾಧನೆಯ ಗುಣಗಳುಳ್ಳ ಶಕ್ತಿಯನ್ನು ಅರಿತು
ಎಲ್ಲಾ ತನ್ನ ಮನಸ್ಸಿನ ವಿಚಾರಗಳಿಗೆ ಮಾನ್ಯತೆಯನ್ನು ನೀಡುತ್ತಿದೆ !
ಮನದಲ್ಲಿ ಗಲಿಬಿಲಿ ಭಾವನೆಗಳು ಮನಸ್ಸಿನಿಂದ ಹುಟ್ಟಿದರೂ
ಅದು ಬೇರೆಂಬ ಭಾವನೆ ದೈವಿಕ ಶಕ್ತಿಯನ್ನು ಕಳೆದುಕೊಳ್ಳುವುದು

ಪ್ರಕೃತಿ ಕೂಡ ಸಾಧನೆಯ ಮೊದಲು
ದೈವಿಕ ಭಾವನೆಯ ಭಾವನೆಯಿಂದ ವಿಚಾರಗಳು ಹುಟ್ಟಿಸುತ್ತಿದೆ
ಕೈಕಾಲುಗಳಿಲ್ಲದ ಶಕ್ತಿಗಳಿಲ್ಲದೆ ತಾವೇ ಬೆಳೆಯುತ್ತಿರುವ ಪ್ರಕೃತಿ
ಅದರ ಮನೋವಿಚಾರದ ಸಾಧನೆ

ಮನದಲ್ಲಿ ವಿಚಾರ ಹುಟ್ಟಿಸದೇ ಇದ್ದರೆ
ಯಾವ ಸಾಧನೆಯೂ ಕಾರ್ಯರೂಪಕ್ಕೆ ಬರುವುದಿಲ್ಲ
ಪವಿತ್ರ ಎಚ್ಚರ ಮನೋವಿಚಾರವೇ
ಎಲ್ಲಾ ಕಾರ್ಯಸಾಧನೆಗಳಿಗೆ ಬುನಾದಿ !

**– ಶ್ರೀ ಹರಿ.**

**10–07–2015**



## 975

ಕಾಲ ನಾವು ಬದಲಿಸಲು ಆಗದೇ ಹೋದರೂ
ನಾವು ಕಾಲಕ್ಕೆ ತಕ್ಕಂತೆ ಬದುಕಬೇಕು
ಋತುಗಳೂ ಸಮಯಕ್ಕೆ ಸರಿಯಾಗಿ ಬೀಸುವ ಗಾಳಿದೆಸೆ
ಬದಲಿಸುವಂತೆ
ನಾವು ಪರಿಸರದ ಜೊತೆಗೆ ಬದಲಿ ಜೊತೆಯಾಗಬೇಕು !

ಉಬ್ಬು–ತಗ್ಗುಗಳು ತಿಳಿದು ನಡೆಯುವಂತೆ
ಕಷ್ಟಸುಖಗಳ ಜೊತೆ ನೆಮ್ಮದಿಯಿಂದ ಇರಬೇಕು
ದ್ವೇಷ–ಅಸೂಯೆಗಳು ಜನಾಂಗದಲ್ಲಿದ್ದರೂ ಜೊತೆ ಜೀವನ
ಬಯಸಿ

ಎಲ್ಲರ ಜೊತೆ ಜೀವಿಸುತ ಹಸನ್ಮುಖರಾಗಿ
ಜೀವನದ ಜೊತೆಗೆ ಗೊಣಗದೇ ಜೀವಿಸಬೇಕು !

ಬೇಕು–ಬೇಡಗಳ ಭಾವನೆ
ಸಮಾಧಾನ ಮನೋಸ್ಥಿತಿಗಳ ಜೊತೆ ಬೆರೆತು
ಬದಲುತ್ತಿರುವ ಪರಿಸರದ ಜೊತೆ ಅರಿತು
ಬೇರೆಯವರಿಗೆ ತಮ್ಮ ಹೊಸ ದೃಷ್ಟಿಕೋನದ ಅರಿವಿನಲ್ಲಿ
ಬೆರೆಸಿಕೊಳ್ಳಬೇಕು !

www.sriharikhoday.com

ಒಪ್ಪಿಕೊಳ್ಳುವಂತೆ ನಂಬಿಸಿ ನಮ್ಮ ಜೀವನದ
ಬುನಾದಿಯನ್ನು ಚಿತ್ರಗೊಳಿಸಬೇಕು
ಮನವು ಶುಭ್ರತೆಯ ಕಳೆದುಕೊಳ್ಳದೆ
ಹೊಸ ಹೊಸ ಶುಭ್ರಭಾವನೆಗಳಿಂದ

ಹಳೆ ಕೆಟ್ಟ ಭಾವನೆಯನ್ನು ತೊಳೆಯುವುದರಿಂದ
ಕಾಲಕ್ಕೆ ಸರಿಯಾಗಿ ಬದುಕುವುದು ಕಷ್ಟಕರ ಕೆಲಸವಲ್ಲ
ಕಾಲಕ್ಕೆ ನಾವು ಬದಲಿಸಲು ಆಗದೇ ಇದ್ದರೂ
ನಾವು ಕಾಲಕ್ಕೆ ಹೊಂದಿಕೊಂಡು ಬದುಕಬೇಕು !

**– ಶ್ರೀ ಹರಿ.**

**11-07-2015**



## 976

ಹಸಿರು ಕೆಂಪನ್ನು ಕಂಡಾಗ ,
ಬೆಳಕು ಕತ್ತಲನ್ನು ಕಂಡಾಗ
ಸದ್ದು ನಿಶ್ಶಬ್ದವನ್ನು ಅನುಭವಿಸಿದಾಗ

ಹಣ್ಣು ಮಾಗಿರುವುದು ತಾನು ಅನುಭವಿಸಿದಾಗ
ಬೀಜ ಚಿಗುರಿ ವೃಕ್ಷವಾಗಿ ಬೆಳೆದಾಗ
ನನ್ನ ರಚನಾಶಕ್ತಿ ಪ್ರಕೃತಿಯನ್ನು ವೀಕ್ಷಿಸಿದಾಗ
ಆಕಾಶದಲ್ಲಿ ನಿಶ್ಶಬ್ದ ಸ್ಫೂರ್ತಿಗೊಳ್ಳುತ್ತಿದೆ

ನನಗೇ ತಿಳಿಯದ ಅರಿವು ನನಗೆ ತಿಳಿದಾದ ಮೇಲೆ
ಬೆತ್ತಲೆಯಾದ ಹೊಸ ಅರಿವು ಕಾಲ ಚಕ್ರದ ಅಂಶವಾಗಿ
ಶೂನ್ಯದಲ್ಲಿ ಅಡಗಿರುವ ಜೀವ ರಾಗಗಳು

ತಾರೆಗಳನ್ನು ರಚಿಸಲು ರಚನಾ ಶಕ್ತಿಯನ್ನು ಹೆಚ್ಚಿಸಿಕೊಂಡು
ಹೊಸದನ್ನು ಹುಡುಕುವ ಹಂಬಲ ಮುಟ್ಟಲಾಗದ
ಎತ್ತರಕ್ಕೆ ಎತ್ತರವನ್ನು ಮುಟ್ಟುವ ಪ್ರಯತ್ನ
ಅರ್ಥಗಳಲ್ಲಿ ಹೊಸ ಅರ್ಥಗಳ ದರ್ಶನ
ಸೋಲಿನಲ್ಲಿ ಗೆಲುವನ್ನು ಕಾಣುತ್ತಾ

ತರಂಗಗಳು ಬಿಡಿಸುತ್ತಿರುವ ರಂಗೋಲಿಯನ್ನು
ಮನದ ಹೊಸ್ತಿಲಿನಲ್ಲಿ ಪ್ರಕೃತಿ ಅಲಂಕರಿಸುತ್ತಿದೆ

**11-07-2015**

**– ಶ್ರೀ ಹರಿ.**

www.sriharikhoday.com

## 977

ಅರ್ಧ ಮುಕ್ಕಾಲುಗಳು, ಒಂದು ಎರಡುಗಳು
ಎಣಿಕೆ ತೋರದೇ ಇರುವ ಈ ಮನಸ್ಸು
ಕಣ್ ತೋರಿಕೆಯಲ್ಲಿ ನಂಬಿಕೆ ಇಲ್ಲದೆ
ಹೊಸ ದಿಗಂತ ನೋಡುವ ಭಾವ

ಹಿಂದೆ ನೋಡಿದರೆ ಕೊಚ್ಚಿ ಹೋಗಿರುವ ಹಳೆತನ
ನೋಡು ನೋಡು ಎಂದು ಕರೆಯುತ್ತಿರುವ ನನ್ನ ಮುನ್ನೋಟಗಳು
ಬಣ್ಣ ಬಣ್ಣದ ಮುನ್ನೋಟಗಳು ನನ್ನ ಜೊತೆ ಜೀವಿಸಬೇಕೆಂಬ
ಅಭಿಲಾಷೆಯುಳ್ಳ ಮುನ್ನೋಟಗಳು, ಕಾಯುತ್ತಿರುವ ಬೆರೆಕೆಗಳು

ಭೂತ ಭವಿಷ್ಯ ವರ್ತಮಾನಗಳ ಬೆರೆಕೆಗಳು
ನನ್ನ ನೋಟದ ಅಭಿಲಾಷೆಗೆ ಮರೆಗೆ ಕಾಲ ಮುನ್ನಡೆಸಲು
ನನ್ನ ಅದೇ ಶಕ್ತಿ ಕಾಯುತ್ತಿರುವುದು

ತಲೆ ಬಗ್ಗಿ ಕಾದಿರುವ ಕಾಲ ನನ್ನಲ್ಲಿ ಇರುವ ಪ್ರಜ್ಞೆಗೆ ಹೆದರಿ
ಕ್ಷಣ ಕ್ಷಣದಲ್ಲಿ ಕಾಲ ಹಾಕುತ್ತಿರುವ ಹೆಜ್ಜೆಗಳಿಗೆ
ಹಾದಿ ತೋರಿಸಿ ಎಂದು ಹೇಳುವ ಕೋರಿಕೆ

ಸರಿ ದಾರಿಯ ತೋರಿಸುತ್ತಿರುವ ನಾನು ವಿಸ್ಮಯಗೊಂಡು
ರೋಗಿಗೆ ಔಷದದಲ್ಲಿರುವ ಹೆದರಿಕೆ ಮೊದಲು ಕಂಡೆ
ಔಷಧ ಸಾಮರ್ಥ್ಯ ತೋರಿಸುವ ಗಮ್ಮತ್ತು ವಿಶ್ವದ
ಮರ್ಮವಾಗಿರಲು



ಮನೋ ದಿಗಂತಕ್ಕೆ ಹೊಸ ಅರಿವು, ಎಲ್ಲವೂ ಎಲ್ಲದರಲ್ಲಿ
ಎಲ್ಲೆಲ್ಲಿಯೂ ಹಗಲು ಕತ್ತಲುಗಳಲ್ಲಿ ಹೆದರಿಕೆಯ ನೆರಳನ್ನು
ನೋಡಿ ಹೆದರುತ್ತಿರುವುದು ತಮ್ಮ ಸಾಮರ್ಥ್ಯದ ಅಸ್ತ್ರಗಳಲ್ಲಿ
ಸಾಮರ್ಥ್ಯವಿಲ್ಲದ ನಿರ್ಣಯ ಅಸ್ತ್ರವುಳ್ಳವನಾ ಸೈನಿಕನಿಗೆ
ನಿರಾಶ ಭಾವನೆಯನ್ನು ತರಿಸುತ್ತಿರುವುದು

ನಿಶ್ಶಬ್ದದಲ್ಲಿ ಸುಮ್ಮನಿರೆ ಹಸ್ತ್ರಗಳ ನಿರಾಶೆಯಿದ್ದರೂ
ನನ್ನಲ್ಲಿರುವ ಸಾಮರ್ಥ್ಯ ಹೇಳುತ್ತಿದೆ ನಾ ಹೊಂದಿಕೊಂಡಿರುವ
ಕೆಲಸಕ್ಕೆ ಬಾರದ ಅಸ್ತ್ರಗಳನ್ನು ಬಿಟ್ಟು
ಅಸ್ತ್ರಗಳಿಲ್ಲದೆ ವಿಶ್ವವನ್ನೇ ಆವರಿಸುವ ಚೈತನ್ಯವುಳ್ಳ ಈ ಇರುವಿಕೆಗೆ
ಯಾವ ಸಾಮರ್ಥ್ಯಗಳು ನನ್ನನ್ನು ಅಪಜಯ ಮಾಡಲಾಗುವುದಿಲ್ಲ
ಎಂಬ ಪವಿತ್ರ ಘೋಷಣೆ ಕಾಪಾಡಲು ಬಂದಿರುವ ಎಲ್ಲಾ
ವಿಷಯಗಳು
ಎದುರಿಗೆ ತಲೆ ಬಗ್ಗಿ ನನ್ನ ಮುಂದಿನ ಮನೋ ಯೋಚನೆಗಳಿಗೆ
ಸ್ವೀಕರಿಸಲು ಕಾದು ನಿಂತಿರುವೆ.

ಕೊನೆ ಮೊದಲಿಲ್ಲದ ಈ ಬರವಣಿಗೆ
ಸತ್ಯದ, ಶುದ್ಧವಾದ , ಪವಿತ್ರವಾದ, ನಿಶೆಯ ಮಾತುಗಳು
ಎಚ್ಚರದಿಂದ ಸ್ವೀಕರಿಸಿ ಮೆಚ್ಚಿ ಮೆಚ್ಚಿ
ನನ್ನಂತೆ ಸಂತಸದಿ ಹಾರಡಿ ಎಂಬ ನಿಶೆಯ ಆಶೀರ್ವಾದ,
ಹಾರಲು ಹೊಸ ರೀತಿಯನ್ನು ನಾ ಕೊಡುತ್ತಿರುವೆ.

ಹೆಚ್ಚನ್ನು ಹೇಳಿದರೆ ತಪ್ಪು,
ತಪ್ಪನ್ನು ಹೇಳಿದರೆ ಹೆಚ್ಚು ಅಂತರಾಳದ
ಎಚ್ಚರದಿಂದ ವಿಶ್ವದ ಒಗಟನ್ನು ಬಚ್ಚಿಡದೆ
ನಿರಾಳ ಭಾವನವೇ ಹೊಸ ವಿಶ್ವವನ್ನು ಕಟ್ಟುವ ಸರಳ ರೇಖೆ.

**– ಶ್ರೀ ಹರಿ.**

**11–07–2015**



www.sriharikhoday.com

## 978

ಒಂದು ಕೈಯಲ್ಲಿ ದೇವರ ಪುಸ್ತಕಗಳು
ಮತ್ತೊಂದು ಕೈಯಲ್ಲಿ ನಿಶೆಯ ಬಟ್ಟಲು
ಸರಿ ತಪ್ಪುಗಳ ವಿಮರ್ಶೆಗಳು ಜೊತೆ ಜೊತೆಗೆ ಬೇಕು ಬೇಡಗಳ
ದ್ವಂದ್ವಗಳು

ಮನದಲ್ಲಿ ಚಿತ್ರ-ವಿಚಿತ್ರ ರಂಗು-ರಂಗಿನ ಆಸೆಗಳು
ಮಾನವ ಜಗದ ವರ್ತಮಾನಗಳನ್ನು ಲೆಕ್ಕಿಸದೆ
ಬರೀ ಕಲ್ಮಶಗಳನ್ನು ಯೋಚಿಸುತ್ತ

ಕಷ್ಟಗಳು ಸುಖದ ಜೊತೆಯಲ್ಲಿ ಇದೆ ಎಂದರೆ
ಅದೇ ಹಿತ ಉದ್ದೇಶಗಳ ಉದಯ !

ಹಂತ ಹಂತದಲ್ಲಿ ಜೊತೆಯಿರುವ ಸೃಷ್ಟಿಯಲ್ಲಿ
ಜೊತೆ ಬೆರೆತುಕೊಂಡಿರುವ ನಾವು
ಸೃಷ್ಟಿಯ ಒಡೆಯ ದೇವರು ಎಂಬ ನಾಮಧಾರಣೆ ಮಾಡಿಕೊಂಡು

ನನ್ನಲ್ಲಿರುವ ದ್ವೇಷ ಹೆಚ್ಚೋ . .
ನಿನ್ನಲ್ಲಿರುವ ಕರುಣೆ ಹೆಚ್ಚೋ . .
ಎಂಬ ಮನೋ ಎಣಿಕೆಗಳು



www.sriharikhoday.com

ಶಾಶ್ವತವಾಗಿ ಮಾನವ ಇಲ್ಲಿ ಇರಲಾಗದ ಕಾರಣ
ಯೋಚಿಸುತ ತಕ್ಷಣ ಏನು ಲಾಭ ಎನ್ನುತ
ಜೀವನದಲ್ಲಿ ಹಾಸುಹೊಕ್ಕಾಗಿ ಗಳಿಕೆ / ಲಾಭಗಳನ್ನು ಎಣಿಸುತ್ತ

ಚಿನ್ನ . . ಕಾಂತೆಯನ್ನು ಜೊತೆ ಬೆರೆಸಿಕೊಳ್ಳುತ್ತ
ಕಾಲಾನುಕಾಲ ನಮ್ಮ ತಲೆಕಾಯುವ ಮಣ್ಣನ್ನು
ಅತಿ ಮೌಲ್ಯವೆಂದು ನಮಿಸುತ್ತ ನಾ ಜೀವಿಸುತ್ತಿದ್ದೇನೆ !

ಒಂದು ಕಡೆ ಮಡಿ ಉಟ್ಟು ವ್ರತಗಳನ್ನು ಆಚರಿಸುತ್ತ
ಮತ್ತೊಂದೆಡೆ ಸುಖದ ಅಮಲಲ್ಲಿ ಬೆರೆತ ನನಗೆ
ಇನ್ನೊಂದೆಡೆ ನಿಶೆಯ ಅಮಲು . . . .

ನನ್ನನ್ನು ಎಲ್ಲರ ಜೊತೆ ಬೆರೆಸಿರುವ ನಿನ್ನ ಜೊತೆ
ಅಪಾರ ಸುಖಗಳನ್ನು ಅನುಭವಿಸುತ್ತಿರುವೆನು ದೇವಾ
ಈ ಪ್ರಪಂಚಕ್ಕೆ ನನ್ನ ಸುಖ ದುಃಖಗಳೆಲ್ಲವನ್ನು
ಹೆದರದೇ ಬಹಿರಂಗ ಪಡಿಸುತ್ತಿರುವೆನು !

ನಾನು ನಿಶೆಗೆ ಜೊತೆಯಿರುವುದು . .
ನಾನು ಕಾಂತೆಯ ಜೊತೆಯಿರುವುದು
ನನ್ನ ಎಲ್ಲಾ ಕಷ್ಟ-ಸುಖಗಳಲ್ಲಿರುವ ದೇವರ ಜೊತೆಯಿರುವುದು
ಎಲ್ಲರೂ ನನ್ನ ಜೊತೆಗೆ ಇರಲು ಒಪ್ಪಿಕೊಂಡಿದ್ದಾರೆ

ಕೊನೆಗಾಣದ ಸುಖ ನನ್ನನ್ನು ಬಿಡದೆ
ನನ್ನ ಜೊತೆಗೆ ಅಂಟಿಕೊಂಡೇ ಇದೆ
ನಾನು ನಂಬಿ ಅನುಭವಿಸುವುದಕ್ಕಿಂತ ಅದನ್ನು ಅನುಭವಿಸಿ
ನಂಬುತ್ತಿದ್ದೇನೆ !

**- ಶ್ರೀ ಹರಿ.**

**14-07-2015**

## 979

ಹಳೆಯ ಆಧಾರದ ಮೇಲೆ ಹೊಸತು
ಹೊಸತಿಗೆ ಹಳೆಯ ಆಧಾರ ಸಾಬೀತು
ಮತ್ತೆ ಮತ್ತೆ ಬರುತ್ತಿರುವ ವರ್ಷ ಋತು
ಹಳೆಯ ಆಧಾರದ ಮೇಲೆ ಋತುಗಳ ಕೈ ಗುರುತು !

ಸಮಯಾಸಮಯಗಳನ್ನು ಕಾಲ ಬರೆದಿದೆ ಜಾಹಿರಾತು
ಮಳೆ-ಬೆಳೆಗೆ ಕೇಳುತ್ತಿರುವುದು ಅರಿಕೆಯ ಮಾತು
ಋತುಗಳಿಗೆ ಋತುಗಳು ಎಂದೂ ಯಾರಿಂದಲೂ ಬೇಡಲಿಲ್ಲ ತರಬೇತು
ಹಳೆಯ ಆಧಾರದ ಮೇಲೆ ಹೊಸತು ಪ್ರಕೃತಿಯ ಕಿವಿಮಾತು !

ಕ್ಷಣ ಕ್ಷಣಗಳಲ್ಲಿ ಬದಲುತ್ತಿರುವ ಹೊತ್ತು
ಈ ಸತ್ಯವನ್ನು ರುಜುವಾತು ಮಾಡಲು ಕಾಣಲಿಲ್ಲ ಅಡ್ಡಮಾತು
ಇರುವಿಕೆಗೆ ಹಳೆತನದ ಮೇಲೆ ಹೊಸತು ಒಂದು ಸತ್ಯದ ಜೀವಧಾತು
ಈ ನಿಜಸತ್ಯ ಎಂದೆಂದಿಗೂ ಸತ್ಯವಾಗಿಯೇ ಉಳಿಯುವ ರುಜುವಾಯಿತು !

ಧೂಮಕೇತು ಬಂತು ಹೋಯಿತು ಎಂಬ ಮಾತಿನಂತಲ್ಲದೆ
ಅಳತೆಯ ಆಧಾರ ಎಂದೆಂದಿಗೂ ಸತ್ಯ . .ಎಂದಿಗೂ ಮರೆಯಲಾಗದ ಹಳತು
ಚಿರಕಾಲವಾಗಿಯೂ ಬಿಡಿಸುತ್ತಿರುವುದು ಈ ಹೊತ್ತು . .ಆ ಹೊತ್ತು
ಜೀವನದ ಸುಖ-ದುಃಖಗಳಿಗೆ ಆಧಾರ ಹಳೆತು . .ಹೊಸತು !

15-07 -2015 — ಶ್ರೀ ಹರಿ.



## 980

ದಿನದ ಹುಟ್ಟಿನಲ್ಲಿ
ಅಂತರಂಗದ ವಿಚಾರಣೆ
ಸರಿತಪ್ಪುಗಳ ಬಡಾವಣೆ
ಕಷ್ಟವಿಲ್ಲದ ವಿಂಗಡಣೆ !

ಭೇದವಿಲ್ಲದ ಮನೋತಪಾಸಣೆ
ದಿನದ ಹುಟ್ಟಿನಲ್ಲಿ ಮಾಡಿದರೆ
ಮನೋ ವಿಚಾರಣೆ ಸರಿ -ತಪ್ಪುಗಳ
ದೇವರ ಪಾದಕ್ಕೆ ಅರ್ಪಣೆ !

ತಪ್ಪು ಮಾಡಿದ್ದಲ್ಲಿ ದೇವರಲ್ಲಿ ಕ್ಷಮಾಪಣೆ
ಕೊನೆಗೊಳ್ಳುವುದು ಪರಿಸರದ ಘರ್ಷಣೆ
ಹುಡುಕು ಎಲ್ಲ ನಮ್ಮ ಮನದಲ್ಲಿರುವ ಕೋಣೆ
ತಪ್ಪನ್ನು ದೇವರ ಹೆಸರಲ್ಲಿ ಮಾಡು ಆಣೆ

ದಿನವೂ ಮಾಡು ಮನಸ್ಸಿನ ಒಕ್ಕಣೆ ಬೇಡು ದೇವರ ಕರುಣೆ
ಈ ಜೀವನವನ್ನು ಮಾಡು ಸಮಾಜಕ್ಕೆ ಸಂತರ್ಪಣೆ
ಹಣೆಯನ್ನು ಮೇಲೆತ್ತಿ ಮಾಡು ಪವಿತ್ರ ಘೋಷಣೆ !
ಕಷ್ಟವಿಲ್ಲದೆ ನೀ ಆಗುವೆ ಜಗಕ್ಕೆ ಉದಾಹರಣೆ !

www.sriharikhoday.com

ಎಲ್ಲರ ಬಾಯಿಯಲ್ಲಿ ಒಳ್ಳೆ ಮಾತುಗಳನ್ನು ಕೇಳಿ
ಲಾಲಿಸು ಎಲ್ಲರ ಬಾಯಿಯಲ್ಲಿ ನಿನ್ನ ಹೆಸರಿನ ಉಚ್ಚಾರಣೆ
ತಲೆಬಗ್ಗಿ ಬೆಳೆಯುತ್ತಿರುವುದರ ಜೊತೆ ಮಾಡು ಪೋಷಣೆ
ದಿನವೆಲ್ಲ ಮರೆತುಬಿಡು ಕಷ್ಟಗಳ ಬವಣೆ !

**– ಶ್ರೀ ಹರಿ.**

**16–07–2015**



**981**

ಧಿ ಪ್ರೀತಿಯ ಜೊತೆಗೆ ಸಹನೆ
ಹೂವಿನ ಜೊತೆಗೆ ಸುವಾಸನೆ ವಿಶ್ವದಲ್ಲಿ ಪ್ರೀತಿಗಿಲ್ಲ ಕೊನೆ
ಜೀವನ ಬೆಳೆಯುವುದು ಪ್ರೀತಿಯ ತೆನೆ !

ಮರೆಸುವುದೆಲ್ಲ, ಮನಸ್ಸಿನ ಯಾತನೆ
ಚೇತನ ನೀಡುವುದು ಮನಸ್ಸಿಗೆ ಕಲ್ಪನೆ
ನಾವು ದುಡಿಯದೇ ದೇವರು ಕೊಟ್ಟಿರುವ ಖಜಾನೆ

ವರ್ಣನೆಗೆ ಸಿಗದ ಯೋಚನೆ
ವಿಕಾರ ಮನಸ್ಸಿಗೆ ಮಾಡುವುದು ಹೊಸರೂಪದ ಕೆತ್ತನೆ
ನಟನೆಗೆಲ್ಲ ತಿಳಿಯುವುದು ಪ್ರೀತಿಯ ಭಾವನೆ !

ಪವಿತ್ರ ಮನಸ್ಸಿಗೆ ಹೊಸ ಹೊಸ ಭಾವನೆಯ ಅರ್ಚನೆ
ಜೀವನ ಸಂಗಾತಿಯ ಜೊತೆ ರಂಜನೆ
ಎಲ್ಲಾ ಮನೋವೇದನೆಗಳನ್ನು ಕೊನೆಗೊಳಿಸುವುದು ಪ್ರೀತಿಯ ಜೊತೆ ಸಹನೆ !

ಹೆದರಿಕೆಗಳನ್ನು ದೂರಗೊಳಿಸುವ ಪ್ರೀತಿಯ ಅಂತರಂಗದ ಸೇನೆ
ತಟಕ್ಕನೆ ಸಜ್ಜಾಗುವ ಅಂತರಂಗ ರಚನೆ
ಆತ್ಮನ ಜೊತೆಗೆ ಜೊತೆ ಜೊತೆ ಇರುವ ಹೊಸ ಹೊಸ ಬಿತ್ತನೆ

www.sriharikhoday.com

ಹೊಸ ಬೆಳೆಗಳನ್ನು ಬೆಳೆಸುವುದು
ಮನಸ್ಸಿನ ಬೆಳೆಯನ್ನು ಬೆಳೆಸಿ ರಚಿಸುವುದು ಗ್ರಂಥ ರಚನೆ
ಆತ್ಮವಂಚನೆಯಿಲ್ಲದೆ ಎಲ್ಲರೂ ಒಪ್ಪಿಕೊಳ್ಳುವ ಮನೋ ವಿಜ್ಞಾಪನೆ !

ಎಲ್ಲರ ಮನವನ್ನು ಗೆಲ್ಲುವ ಪ್ರೀತಿ ಸಹನೆ
ಎಲ್ಲದರಲ್ಲಿ ಬೆರೆಯುವ ಎಲ್ಲಾ ಪ್ರಾಣಿಗಳಲ್ಲೂ ಬೆರೆತಿರುವ
ಎಲ್ಲಾ ಗಡಿಗಳನ್ನು ದಾಟಬಲ್ಲ

ಎಲ್ಲರೂ ಒಪ್ಪಿಕೊಳ್ಳುವ ಪ್ರೀತಿಯ ಸುವಾಸನೆ !
ಪ್ರೀತಿಯ ಜೊತೆಗೆ ಸಹನೆ
ಹೂವಿನ ಜೊತೆಗೆ ಸುವಾಸನೆ ವಿಶ್ವದಲ್ಲಿ ಪ್ರೀತಿಗಿಲ್ಲ ಕೊನೆ

**– ಶ್ರೀ ಹರಿ.**

**16-07-2015**



# 982

ಸೋರುತ್ತಿರುವ ಭಾವನೆಗಳು
ಆದಿ ತಿಳಿಯದ ಮನಸ್ಸು
ಸ್ವಯಂ ಪ್ರೇರಿತ ಭಾವನೆಗಳು
ಮನಸ್ಸಿನ ನಿರ್ಣಯಗಳ ಬಂಧುಗಳು !

ವಾದಗಳ ಹಿನ್ನೆಲೆ ಇರುವ ಭಾವನೆಗಳು
ಬೇಕು ಬೇಡಗಳ ಆದಿಯಲ್ಲಿರುವ ಭಾವನೆಗಳು
ಓದಲೂ ಭಾವನೆಗಳು ನಂಬಲೂ ಭಾವನೆಗಳು
ಹಗಲು ರಾತ್ರಿ ನಮ್ಮ ಜೊತೆ ತೂಗಾಡುತ್ತಿರುವ ಭಾವನೆಗಳು !

ನೆಮ್ಮದಿ ತರಿಸಿಕೊಳ್ಳುವ ಭಾವನೆಗಳು
ಗುರುಗಳ ಜೊತೆ ಬೆರೆಸುತ್ತಿರುವ ಭಾವನೆಗಳು
ಪಾಪ ಪುಣ್ಯಗಳನ್ನು ಅಳೆಯುವ ಭಾವನೆಗಳು
ಕಷ್ಟಗಳನ್ನು ದೂರಗೊಳಿಸುವ ಭಾವನೆಗಳು !

ವಿಶ್ವದ ತತ್ವಗಳ ರಸದಲ್ಲಡಗಿರುವ ಭಾವನೆಗಳು
ಬೆರೆಸುವ ಸೇರಿಸಿಕೊಳ್ಳುವ . .ದೂರ ಸರಿಸುವ
ಬಣ್ಣ ಬಣ್ಣದ ಭಾವನೆಗಳು
ಜೀವ ಇರುವವರೆವಿಗೂ ತೊಟ್ಟುಕ್ಕಿತ್ತಲೇ ಇರುವ ಭಾವನೆಗಳು !

www.sriharikhoday.com

ಮನದ ಮಾಳಿಗೆಯಿಂದ ತೊಟ್ಟಿಡುತ್ತ
ಸೋರುತ್ತಲೇ ಇರುವ ಮನವನ್ನು ಸೂರೆಗೊಳ್ಳುತ್ತಿರುವ
ಭಾವನೆಗಳು
ತೊಟ್ಟಿಡುತ್ತಾ ..ತೊಟ್ಟಿಡುತ್ತಾ .. ನೀರಿನಂತಿರುವ ಭಾವನೆಗಳು
ಹಳ್ಳವಾಗಿ .. ಜರಿಯಾಗಿ ..ಹೊಳೆಯಾಗಿ ನದಿಯಾಗಿ

ಮನಸ್ಸಿನ ಸಮುದ್ರವಾಗಿ ಮನದಲ್ಲಿ ಬೆರೆತುಕೊಂಡಿರುವ
ಭಾವನೆಗಳು
ಉದ್ದೇಶವಾಗಿ ಉದ್ದೇಶಿತ ಕಾರ್ಯರೂಪವಾಗಿ
ಕಾಲವನ್ನೇ ಜೊತೆ ಸೇರಿಸಿಕೊಂಡು
ವಿಚಿತ್ರಗಳನ್ನು ಚಿತ್ರಿಸಿಕೊಂಡು ವಿಶ್ವವನ್ನೇ ಆಳುತ್ತಿರುವ ಭಾವನೆಗಳು

ಸೋರುತ್ತಿರುವ ಭಾವನೆಗಳು ಎಂದೂ ಎದುರಿಗೆ ಬರದೆ
ಎಲ್ಲಾ ಮನಸ್ಸಿನ ಉದ್ದೇಶಗಳ ಹಿಂದೆ ನಾನು . ಎಂದು
ಹೇಳಿಕೊಳ್ಳದೆ
ಹಗಲು ರಾತ್ರಿಗಳ ಅರ್ಥ ತಿಳಿದಿರುವ ಭಾವನೆ . . . .
ಕಾಲವನ್ನೇ ಆಳುತ್ತಿದೆ !

ತೊಟ್ಟು ತೊಟ್ಟಾಗಿ ತೊಟ್ಟಿಡುತ್ತ
ಮನಸ್ಸಿನಲ್ಲಿ ಜಾರಿಕೊಂಡು ಸೇರುತ್ತಿರುವ ಭಾವನೆಗಳು
ವಿಶ್ವಕ್ಕೆ . . . . .
ಚಿತ್ರ ವಿಚಿತ್ರವಾಗಿ ಕಾಲ ಪುರುಷನೆಂದು ಹೇಳಿದರೆ ತಪ್ಪೇನಿದೆ . . ?

**– ಶ್ರೀ ಹರಿ.**

**20-07-2015**



www.shrihrikhoday.com

## 983

ಬಾಳು ಎಂಬ ಕಷ್ಟದ ಗಣಿಯನ್ನು
ತೋಡುತ್ತಲೇ ಇರಬೇಕು
ಆಳ ಹೋದಂತೆ ಅಗೆಯುತ್ತಾ. ಅಗೆಯುತ್ತಾ. .. ಸಿಗುವ ಸುಖ
ಕಷ್ಟದ ಬಾಳಿನಲ್ಲಿ ಸುಖದ ಉದಯ !

ಅಗೆಯುತ್ತಾ ..ಅಗೆಯುತ್ತಾ .. ಸಿಗುವ ರತ್ನಗಳು
ಕಷ್ಟದ ಗಣಿಗೆ ಸುಖ ಬರುವ ಅನುಭವ
ಕಷ್ಟದ ಗಣಿ ತೋಡುವ ಕೆಲಸ
ರತ್ನಗಳೆಂಬ ಸುಖ ಹುಡುಕುವ ಕೆಲಸ

ಎದುರಿಗೆ ಸಿಗುವ ಎಲ್ಲವನ್ನೂ ನಮ್ಮದೆಂದು ಹೇಳುವ ಕೆಲಸ
ಜನುಮವೆನ್ನುವುದು ಬಡ್ಡಿ ಇಲ್ಲದ ಕಾಲದ ಋಣ
ಜನ್ಮವೆತ್ತಿ ಬಾಳುತ
ಕಷ್ಟ ಸುಖಗಳನ್ನು ಅನುಭವಿಸುವುದು ಕಷ್ಟದ ಅರ್ಥ

ಸುಖದ ಒಳ ಅರ್ಥಗಳನ್ನು ಅರ್ಥೈಸಿಕೊಂಡರೆ
ಬಾಳುವುದು ..ಬದುಕುವುದು . .
ಕಾಣುವ ಎದುರಲ್ಲಿ ನೋಡಿ ಅದರಲ್ಲಿ ಬೆರೆತು
ಕಾಲ ನೀಡಿರುವ ಜೀವ ಎಂಬ ಋಣ ಸರಿ
ಉಪಯೋಗಿಸಿಕೊಂಡರೆ

ಕಷ್ಟದಲ್ಲಿ ಬೆರೆತು ಕಾಣುವ ಸುಖ
ಸುಖದಲ್ಲಿ ಬೆರೆತು ನಮ್ಮನ್ನು ನಾವು ಮರೆಯುವ ಸುಖ
ನಾವೇ ಕಷ್ಟ. .ನಾವೇ ಸುಖ ಎಂಬ ಅನುಭವ
ತುಂಬುತನದ ಅನುಭವ ಸಾಧನೆಯಾದರೆ

ಕಾಲ ಕೊಟ್ಟ ಋಣದಿಂದ ಸುಖಪಟ್ಟರೆ
ಋಣ ನೀಡಿದ ಆರ್ಥಿಕ ಒಡೆಯನಾದ ಕಾಲ
ಒಡೆಯನಿಗೆ ಸುಖಪಡಿಸಿದರೆ
ಸಂತಸಪಡಿಸುವ ಅರ್ಥದ ಒಡೆಯ ಕಾಲ

ನಮ್ಮ ಬಾಳಿನಲ್ಲಿ ಹೊಸ ಸುಖ ಅನುಭವ ನೀಡಿ
ಆ ಸುಖ ಕಾಲ ನಮಗೆ ನೀಡಿದಂತೆ
ಸುಖವಾಗಲೀ. . .ಕಷ್ಟವಾಗಲೀ. .ಸುಖದ ಗಣಿಯನ್ನು
ಕಷ್ಟದ ಗಣಿಯನ್ನು ಅಗೆದು . .

ಅದರ ಆಳದಲ್ಲಿ ಬೆರೆಯುವುದೇ ಜೀವನ
ಬದುಕಿನಲ್ಲಿ ಬದುಕುವ ನಾವು
ನಮ್ಮನ್ನೇ ನಾವು ಮರೆತರೆ
ಕಾಲದ ದಿಗಂತದಲ್ಲಿ ನಾವು ಬೆರೆತುಹೋಗುವೆವು !

**– ಶ್ರೀ ಹರಿ.**

**21–07–2015**



www.sriharikhoday.com

## 984

ದೇವರನ್ನು ಅರಿಯುವುದೇ ವಿಜ್ಞಾನ
ಜ್ಞಾನ ವಿಜ್ಞಾನಗಳನ್ನು ತಿಳಿಯದೇ ಇದ್ದರೆ
ಮಹಾನ್ ಶಕ್ತಿಯಾದ ದೇವರನ್ನು ಅರಿಯಲಾರೆವು !

ಭೂತ . .ಭವಿಷ್ಯ. .ವರ್ತಮಾನಗಳಲ್ಲಿ ಆಗು–ಹೋಗುಗಳ
ವೀಕ್ಷಿಸಿದರೆ
ಅಜ್ಞಾನನ ಅರ್ಥ ಬೆರೆಸಿಕೊಂಡರೆ
ಜೀವನ ಒಂದು ಕುರುಡು ಬಾಳು ಒಂದು ಬರಡು !

ಕೆಲಸದ ಗುಣಮಟ್ಟ ಸರಿ ಇದ್ದಲ್ಲಿ
ಯಾರ ಮೆಚ್ಚುಗೆಯೂ ಬೇಡದ ಕೆಲಸ
ಚಿಕ್ಕ ಕೆಲಸವಾಗಲೀ.. ದೊಡ್ಡ ಕೆಲಸವಾಗಲೀ

ಗಾತ್ರ ಮೀರಿಸಿದ ಜೊತೆ ಜೊತೆಗಿರುವ ಕೆಲಸದಲ್ಲಿ
ನಮ್ಮ ಮನಸ್ಸಿಗೆ ಮೆಚ್ಚುಗೆ ಪಡೆದಿದ್ದಲ್ಲಿ
ಸಮಾಜ . .ದೇವರು ಮೆಚ್ಚಿ ಸಂತೋಷಪಡುವರು !

ಕೆಲಸದಲ್ಲಿ ಒಬ್ಬರ ಕೇಳಿ
ಕೇಳಿದ ನಮ್ಮ ಕೆಲಸದಲ್ಲಿ ಬೆರೆಸಿಕೊಂಡರೆ
ಮಾಡುವ ಕೆಲಸದಲ್ಲಿ ಬಹುಮಟ್ಟಿಗೆ ನಷ್ಟವಿಲ್ಲದೆ ಸಾಧನೆ ಮಾಡಿದ
ನಮಗೆ

ಜನರ ಒಪ್ಪಿಗೆ ಜೀವನದ ಗುಣಮಟ್ಟವನ್ನು ಹೆಚ್ಚಿಸಿಕೊಂಡು
ಜ್ಞಾನ ವಿಜ್ಞಾನಗಳ ಬೆರೆಸಿ
ಮುಗಿಸಿದ ಕೆಲಸ ಸಾಧನೆಯಾದರೆ

ಸಾಧನೆಯಾದ ಮೇಲೆ ತೃಪ್ತಿಕರ ಮನೋಭಾವನೆ
ಗಡಿಗಳಿಲ್ಲದ ಹರುಷ . .ಸಂತೋಷ . ಮೆಚ್ಚುಗೆ
ಎಲ್ಲಾ ಜೊತೆ ಸೇರಿಕೊಂಡು ನಮ್ಮ ಮನಕ್ಕೆ ಬಡಿದರೆ

ಹೊಸ ಕೆಲಸಗಳಿಗೆ ಅಂಜದೆ ಲೆಕ್ಕಿಸದೆ
ಮುಂದೆ ದಾಪುಕಾಲು ಹಾಕುತ್ತ
ಹೊಸ ಪ್ರಗತಿಯ ದಿಗಂತದ ಕಡೆ

ನಾ ಸುಮ್ಮನಿದ್ದರೂ ಕೆಲಸ ಕರೆದೊಯ್ದು
ಆ ಹೊಸ ಕೆಲಸ ದೇವರ ಕೆಲಸವೆಂದು ಭಾವಿಸಿ
ಜೀವನದಲ್ಲಿ ದೊರೆಯುವ ಭಾಗ್ಯಗಳೆಲ್ಲ ಜೊತೆ ಸೇರಿಕೊಳ್ಳುವುದು

**– ಶ್ರೀ ಹರಿ.**

**22–07–2015**



www.sriharikhoday.com

## 985

ಅಂತರಂಗದ ರೂಪ ತಾನೇ ರೂಪಗೊಳ್ಳುತ್ತಿದೆ
ಪ್ರೀತಿ–ಪ್ರೇಮಗಳ ರೂಪದಲ್ಲಿ ಜೀವ ತುಂಬಿಕೊಳ್ಳುತ್ತಲೇ ಇದೆ
ವಿಶ್ವದ ನಿಯಮಗಳು ನಾವು ಕರೆಯದೇ ತಾವಾಗಿಯೇ ಜೊತೆ
ಸೇರಿಕೊಳ್ಳುತ್ತಿದೆ !

ಅನಂತ ರೂಪಕೆ ಕಾರಣ ತಂದೆ
ಹಿಂದು–ಮುಂದು ತಿಳಿಯದ ಕಾಲವೇ ಇಲ್ಲದ ವಿಶ್ವಕೆ
ಜನುಮ ಕೊಟ್ಟ ದೇವರೇ ತಂದೆ !

ತನ್ನ ಬೆಳವಣಿಗೆಗೆ ಅಡ್ಡ ಬರಲು
ಯಾವುದೂ ಇಲ್ಲ ಕಾಯಿದೆ
ಯಾವ ವಿಮರ್ಶೆಗಳಿಗೂ ಕಾಯದೆ ತನ್ನ ಸಂಕಲ್ಪಗಳಿಂದ

ಅಂತರಂಗದ ಪ್ರಭಾವದಿಂದ ಕಾಣಲು ಬೇಕಾದ ವಸ್ತುಗಳ
ರೂಪರೇಖೆಗಳು
ತಾವೇ ಜೊತೆ ಸೇರಿಕೊಂಡು ಅಂತರಂಗದ ಅಂತರಾಳದ ಪರದೆ
ಸರಿಸಿ
ಬೆಳವಣಿಗೆಗೆ ಯಾವುದೂ ಅಡ್ಡವಿಲ್ಲದಂತೆ ಹರಿಯುತ್ತಿದೆ !

ಅಡ್ಡ ಪಡಿಸಲಾಗದ ಪ್ರೀತಿ
ಬೆಳೆಸಲು ಅಡ್ಡವಾಗುವ ಪ್ರೇಮ
ಯಾವ ಗಾದೆಗಳೂ ಇಲ್ಲದ ರೂಪಗಳು

ಸ್ವಯಂ ಪ್ರೇರಿತವಾಗಿ ಬೆಳೆಯುತ್ತಲೇ ಇದೆ
ಅಂತರಂಗದಲ್ಲಿ, . .
ದೇವರ ಅಂತರಂಗದಲಿ ವಿಶ್ವ ತಾನೇ ರೂಪಗೊಳ್ಳುತ್ತಿದೆ !

– ಶ್ರೀ ಹರಿ.

**31–07–2015**



## 986

ನಾವು ಪಡೆಯಬೇಕಾದ ಆಸ್ತಿ ಗುರುಗಳು
ನಾವು ಬಾಳಬೇಕು ಹಿರಿಯರ ಗುರಿಯ ನೆರಳಲ್ಲಿ
ನಾವು ಲಾಭವಾಗಿ ಪಡೆಯಬೇಕು ಗುರುಗಳ ಪಾದಗಳು
ನಾವು ನಮ್ಮಲ್ಲು ನಮ್ಮನ್ನು ಕಾಣಬೇಕು ಬಾಳುವ ವರ್ಷಗಳನು !

ಮರೆಯಬೇಕು ಜೀವನದಲ್ಲಿ ಮೇಲು–ಕೀಳು
ಕಿವಿಗೊಡಬೇಕು ..ಕಿವಿತೆರೆದು ಕೇಳಬೇಕು ಜನಗಳ ಗೋಳು
ಅರ್ಥೈಸಿಕೊಳ್ಳಬೇಕು ಸರಿಯಿಲ್ಲದ ಭಂಡಾಯಬಾಳನು
ಆಕಳಿಗಾಗಿ ಜೀವನ ಎಂದೂ ಆಗಕೂಡದು ದೃಷ್ಟಿ ಭಾವನೆಯ
ಸೆರೆಯಾಳು !

ಮಾತನಾಡಬೇಕು ಅಂತರಾಳದಲ್ಲಿ ಅಡಗಿರುವ ಸತ್ಯವನ್ನು
ತಿಳಿದಿರುವ ಕರುಳು
ಯಥೇಚ್ಛವಾಗಿ ಶೇಖರಿಸಬೇಕು ಅಮೂಲ್ಯವಾದ ವಸ್ತು ದಯಾಳು
ಬೀರುತ್ತಲೇ ಇರಬೇಕು ಮುಖದ ಮೇಲೆ ಮುಗುಳುನಗು
ಆಗಬೇಕು ನಮ್ಮ ಸತ್ಯಭಾವನೆಗೆ ಅಡಿಯಾಳು !

ಎಂದೂ ಬಾಳಕೂಡದು ಒಂಟಿಬಾಳು
ಜೀವನದ ಅರ್ಥ ತಿಳಿದಾದ ಮೇಲೆ ಎಲ್ಲರಿಗೆ ಹೇಳು ತಿಳಿಯಾದ
ಮಾತು
ಎಂದೂ ಮಾಡಕೂಡದು ಸತ್ಯ ಅರಿಯದ ಬೆಳಕಿಲ್ಲದ ಇರುಳು

www.sriharikhoday.com

ನಮ್ಮ ಆಸೆಯ ಜೊತೆಗೆ ಬೇರೆಯವರ ಭಾವನೆ ಬೆಳೆಸಿಕೊಳ್ಳಬೇಕು
ಹಗಲು ಇರುಳು !

ನಾವು ಲಾಭವಾಗಿ ಪಡೆಯಬೇಕು
ಗುರು-ಹಿರಿಯರ ಆಶೀರ್ವಾದಗಳನು

– ಶ್ರೀ ಹರಿ.

**01-08-2015**



## 987.

ತಾಯಿ ಕರುಳಿನ ಆಸೆ
ಮಗುವಿನ ಭವಿಷ್ಯದಲ್ಲಿ
ಗೂಡು ಕಟ್ಟುತ್ತಲೇ ಇದೆ !

ವಿಶ್ವಕ್ಕೆ ಜನುಮ ಕೊಟ್ಟ ತಾಯಿ
ತಾಯಿಯ ಕನಸುಗಳು
ವಿಶ್ವವನ್ನು ಭವಿಷ್ಯದಲ್ಲಿ ಕಟ್ಟುತ್ತಲೇ ಸಾಗಿವೆ !

ತಾಯಿಯ ಮಕ್ಕಳಾದ ಸೂರ್ಯ . .ಚಂದ್ರರು
ಭವಿಷ್ಯಕ್ಕೆ ಮಕ್ಕಳು ಸಾವಿಲ್ಲದೆ ಬದುಕಿಸುವ ಆಸೆ
ವಿಶ್ವಕ್ಕೆ ಕೊನೆಗಳೇ ಬರದ ಜೀವ ನೀಡಿ

ಹಾಸುಹೊಕ್ಕಾಗಿರುವ ತಾಯಿಯ ಕರುಳಿನ ಆಸೆಗಳು
ಕಾಲವನ್ನೇ ಕರಗಿಸಿ
ಸಾವಿಲ್ಲದ ಬದುಕನ್ನು ನೀಡಿದೆ !

ತಾಯಿಯ ಅಂತರಾಳದ ಭಾವನೆಗಳು
ಸಾವೇ ಇಲ್ಲದ ತಾಯಿಯ ಭಾವನೆಗಳು
ಕೊನೆ ಬರದ ಕಾಯುವ ದಿಗಂತಗಳಾಗಿವೆ !

ಚಿರಂಜೀವಿಗಳಾದ ತಾಯಿಯ ಕನಸುಗಳು
ನನಸಾಗಿ ರೂಪು ಪಡೆಯುತ್ತ
ಕಳೆದುಹೋದದ್ದನ್ನು ಮರೆತು

www.sriharikhoday.com

ತಾನಾಗಿಯೇ ಬರುತ್ತಿರುವ ಹೊಸದರಲ್ಲಿ
ತಾಯಿಯ ಪ್ರೀತಿ ಬೆರೆತುಹೋಗಿ
ಹೊಸತು ತಾನೇ ಆಗಿದೆ

ಕೊನೆ ಮೊದಲುಗಳು ತಮಗೇ ತಿಳಿಯದೆ
ದೆಸೆಗಳಿಗೆ ಹೊಸ ಸುಖ ನೀಡುತ್ತ
ಆ ಸುಖದ ಅನುಭವ ತಾಯಿಯ ಕರುಳಿನ ಆಸೆ !

ತಾಯಿಯ ಉದ್ಯೋಗ ಏನೆಂದರೆ
ಬರೀ ಪ್ರೀತಿಯಿಂದ ಭವಿಷ್ಯದಲ್ಲಿ
ಕೊನೆಬರದ ಗೂಡುಗಳನ್ನು ಕಟ್ಟುತ್ತ

ಬೆಳೆಸಿದ ತಾಯಿ ಎದುರಿಗೆ ಇಲ್ಲದಿದ್ದರೂ
ಪ್ರೀತಿಯ ರೂಪದಲ್ಲಿ ಮಿನುಗುತ್ತಲೇ ಇದೆ
ವಿಶ್ವವು ಸುಮ್ಮನಿರದೆ ವಿಶ್ವವನ್ನು ತಾಯಿಯ ಆಸೆಯಾಗಿ ಬೆಳೆಸುತ್ತಲೇ
ಇದೆ.

– ಶ್ರೀ ಹರಿ.

04–08–2015



## 988

ಕಷ್ಟಗಳನ್ನು ಮರೆಯಲಾಗದು ಎಂದು ಕೆಲವರು
ಭಾವನೆಯ ಬಡತನದಿಂದ ಬದುಕುತ್ತಿರುವರು ಹಲವರು
ಬರೀ ಕಷ್ಟವಿದೆ ಎಂದು ಸುಮ್ಮನೆ ಕುಳಿತಿರುವರು ಅನೇಕರು
ಸಾಧ್ಯ. ಅಸಾಧ್ಯಗಳ ಗಣಿಕೆ ಮಾಡುತ್ತಿರುವರು ಎಲ್ಲರು !

ಬೇರೆಯವರ ಮನಸ್ಸನ್ನು ಗೆದ್ದವರು
ಅಸಾಧ್ಯಗಳನ್ನು ಸಾಧನೆಯಾಗಿ ದುಡಿಯುತ್ತ
ಹೊಸ ಹೊಸ ದೃಷ್ಟಿಕೋನಗಳನ್ನು ಬದಲಿಸುವರು
ದೇವರ ಅನುಭವ ಅಸಾಧ್ಯ ಎನ್ನುವರು !

ತಮ್ಮ ದೃಷ್ಟಿಕೋನವನ್ನು ಬದಲಿಸಿದರೆ
ದೇವರ ಅನುಭವದಿಂದ ಹುಟ್ಟಿದ ಪ್ರೀತಿ
ಪ್ರೀತಿಯಿಂದ ಲಾಭ. .ಲಾಭದಿಂದ ಸುಖ
ಸುಖದಿಂದ ಶಾರೀರಿಕ ಸುಖ..

ಶಾರೀರಿಕ ಸುಖದಿಂದ ಸುಖವನ್ನು ಮರೆತು
ಕಾಣುವ ಎಲ್ಲದರಲ್ಲಿ ಬೆರೆತ ಸುಖ
ಜೊತೆ ಕಷ್ಟವಿದ್ದರೂ ಕಷ್ಟದಲ್ಲೇ ಬೆರೆತ ಸುಖದ ಅನುಭವ
ಈ ರೀತಿಯ ಹೊಸ ಸುಖ ಕಣ್ಣಿಗೆ ಕಾಣದ ಸುಖ !

ಕಣ್ಣಿಗೆ ಕಾಣದ ದೇವರ ಹೋಲಿಸುತ್ತ
ದೇವರೇ ಅನುಭವವಾಗಿ

www.sriharikhoday.com

ಪ್ರಕೃತಿಯ ಶಕ್ತಿಯಾದ ದೇವರ ಶಕ್ತಿಯನ್ನು ನಾವು ಅನುಭವಿಸುತ್ತ
ಕಷ್ಟಗಳಿಂದ ಸುಖ ತರಿಸುವ ಹಾದಿಯನ್ನು ಆನುಭವಿಸಿ

ಕಾಣುವ ಬೆಳಕಲ್ಲಿ ಬೆರೆತು
ಕಾಣುವ ಬಣ್ಣ ಬಣ್ಣಗಳಲ್ಲಿ ಬೆರೆತು ಸುಖಪಟ್ಟು
ಎಲ್ಲಾ ಬೆಳವಣಿಗೆಯಲ್ಲಿ ಸುಖವನ್ನು ಒಪ್ಪಿ ಅಪ್ಪಿ ಪಡೆಯುವ
ಸುಖ
ದೇವರನ್ನು ಅಪ್ಪಿಕೊಳ್ಳುವಂತೆ ಭಾವನೆ !

ಬಡತನವಿಲ್ಲದ ಪ್ರೀತಿಯ ಅನುಭವ
ಬಣ್ಣ ಬಣ್ಣಗಳ ಹೊಸ ಹೊಸ ದೃಷ್ಟಿಕೋನಗಳು
ಅನುಭವದ ಸಿರಿತನ
ಬೆಳೆ ಬೆಳೆದಿರುವ ಹಸಿರಲ್ಲಿ ಸುಖ ನೋಡುತ್ತ

ಸುಖ ಅನುಭವಿಸುತ್ತಿರುವ ಸೂರ್ಯನ ಬೆಳಕನ್ನು ಜಗಜಗಿಸುತ್ತ
ಚಂದಿರನು ತಂಪಾದ ಬೆಳದಿಂಗಳನ್ನು ನೀಡುತ್ತ
ನಕ್ಷತ್ರಗಳು ನಗುತ್ತಾ ನಗುತ್ತಾ ಮಿನುಗುತ್ತಿವೆ
ಮೋಡಗಳು ಒಬ್ಬರನ್ನೊಬ್ಬರು ತಬ್ಬಿಕೊಂಡು

ಅತಿ ಹರುಷದಿಂದ ಮಳೆ ಸುರಿಸುತ್ತಿದೆ
ಕಣ್ಣಿಗೆ ಕಾಣದ ಸುಖದಲ್ಲಿ ಸುಖವನ್ನು ನೋಡು ಎಂದು
ಮೋಡಗಳು ಗುಡುಗಿನ ಸದ್ದಿನಲ್ಲಿ ಹೇಳುತ್ತಿರುವ ಮಾತುಗಳು
ನಾ ಒಪ್ಪಿ ಸ್ವೀಕರಿಸಿದರೆ ಕಷ್ಟಗಳೆಲ್ಲ ಮರೆತು

ಮನಸ್ಸು ಹೊಸ ದೃಷ್ಟಿಕೋನದಿಂದ
ಸುಖ ನೀಡುವ ಹಂಬಲದಿಂದ
ದೇವರ ಸುಖ ಅನುಭವಿಸಿ
ನಾನು ದೇವರಿಗೆ ಜೊತೆಯಾಗಿರುವೆನೆಂದು



ಮೋಡಗಳ ಜೊತೆಗಿರುವ ಮಿಂಚು
ಬೆಳಕಿನ ರೂಪದಲ್ಲಿ ಎತ್ತರದಿಂದ
ವಿಶ್ವದಲ್ಲಿರುವ ಎಲ್ಲಾ ಇರುವಿಕೆಗೆ ಸಿಡಿಲಿನ ರೂಪದಲ್ಲಿ
ಹಿತವಚನ ನೀಡುತ್ತಿದೆ !

**– ಶ್ರೀ ಹರಿ.**

**05–08–2015**

www.sriharikhoday.com

## 989

ಪ್ರತಿ ಮನುಷ್ಯನಿಗೆ ತನ್ನಲ್ಲಿ ತಾನಾಗುವ ಅವಕಾಶ
ಬರೀ ಊಹಾಪೋಹಗಳ ಮಾಡದೆ ತನ್ನನ್ನು ತಾನು ನಂಬಿದರೆ
ಜೀವನದಲ್ಲಿ ಬೇಡುವ ಗುರಿಗಳನ್ನು ಮಾನವ ಸಾಧಿಸಬಲ್ಲ!

ಮನಸ್ಸಿನ ಏರುಪೇರುಗಳಾಗಿರುವ ಜಾಲ
ನಮ್ಮ ಶರೀರ ಸ್ಥಿತಿಯನ್ನು ತಪ್ಪಿಸಿ
ನಮ್ಮ ಸಾಧನೆಯ ಛಲ ನಮ್ಮಲ್ಲಿಲ್ಲದಿದ್ದರೆ
ಜೊತೆ ಹಂಬಲದಿಂದ ಪ್ರಯತ್ನ ಮಾಡುತ್ತಲಿದ್ದರೆ
ಪ್ರತಿಫಲ ದೊರಕುವುದು ಸತ್ಯ !

ಶೀಲ ಕೆಡಿಸಿಕೊಂಡಿರುವ ಮನಸ್ಸು
ತನ್ನ ಕೋಮಲತೆಯನ್ನು ಕಳೆದುಕೊಂಡು
ನಮ್ಮ ಗುರಿ ಚಪಲವಾಗದೆ

ನಿಶ್ಚಲ ಗುರಿ ಅದರಲ್ಲಡಗಿರುವ
ಪ್ರಜ್ವಲ ಗುರಿ ಸಾಧನೆಯಾದ ಮೇಲೆ
ವಿಶಾಲವಾದ ಮನಸ್ಸಿನ ಸುಖ ಪ್ರಕೃತಿಗೆ ಅನುಕೂಲವಾಗುತ್ತದೆ

ನಮ್ಮ ಸಾಧನೆಗೆ ಎಲ್ಲರೂ ಕುತೂಹಲದಿಂದ ನೋಡಲು
ನಮ್ಮ ಜೀವನ ಸಾಧನೆ ನಮ್ಮಿಬ್ಬರ ಸುಖದ ಜೊತೆಗೆ
ಬೇರೆಯವರ ಸುಖವೂ ಬೆಸುಗೆಯಾದರೆ



www.sriharikhoday.com

ಲೀಲಾಜಾಲವಾಗಿ ದೊರಕುವ ಫಲ
ನಿರ್ಮಲ ಉದ್ದೇಶಗಳನ್ನು ತುಂಬಿಕೊಂಡು
ಯಾವ ಗೊಂದಲಗಳೂ ಇಲ್ಲದೆ

ಎಲ್ಲರ ಜೊತೆಗೆ ಕುಶಲದ ಮಾತುಗಳ ನಡೆಸುತ್ತ
ನಮ್ಮ ಉಜ್ವಲ ಪ್ರಯತ್ನ ಎಲ್ಲರ ಉದಯಕಾಲವಾಗಿ
ಎಲ್ಲರೂ ಹಿತಚಿಂತನಾಶೀಲರಾಗಿ

ಜೀವನದ ಸಂಪನ್ಮೂಲಗಳು
ನಮ್ಮ ಗುರಿಯ ಏಕಾಗ್ರತೆಯ ಸಾಧನೆಯಾಗಿ
ತನ್ನಲ್ಲಿ ತನಗೆ ಅರಿವಾದ ಮೇಲೆ
ನಾವೇ ಶಕ್ತಿಶೀಲರಾಗಿ ಹೆದರಿಕೆ ನಿರ್ಮೂಲವಾಗಿ
ಬಿಲ್ಲಿನಿಂದ ಬಿಟ್ಟ ಬಾಣದ ಗುರಿಯ ಸಾಧನೆ ಸುಖಪಡುವಂತೆ

ಸಾಧನೆಯ ಚಿಕ್ಕ ಗುರಿಯಿಂದ
ದೂರದ ದೊಡ್ಡ ಗುರಿಯನ್ನು ಸಾಧಿಸಬಲ್ಲ ಯೋಗ್ಯತೆ
ಹೆಚ್ಚಿನ ಪ್ರಯತ್ನವಿಲ್ಲದೆ ಮಾನವನು ಸಾಧಿಸಬಲ್ಲ.

**- ಶ್ರೀ ಹರಿ.**

**06-08-2015**

## 990

ಆಲೋಚನೆಗಳೆ ಎಲ್ಲಾ ಕ್ರಿಯೆಗಳಿಗೆ ಜನ್ಮದಾತ
ಮಿತಿ ಇಲ್ಲದ ಆಲೋಚನೆಗಳ ಸಮುದ್ರಧಾರೆ ಅನಂತ
ಸರಿ ಆಲೋಚನೆಗೆ ಫಲ ಬರುವುದರಲ್ಲಿ ಖಚಿತ. . .

ಆಲೋಚನೆಗಳ ಜೊತೆ ಸೇರಿಕೊಳ್ಳುವುದು ಭಾವನೆಗಳ ಗರ್ಭಿತ
ಆಲೋಚನೆಗಳಿಗೆ ಕೊನೆ ಮೊದಲುಗಳು ತಿಳಿಯದೆ
ವಿವೇಕಕ್ಕೆ ನೀಡುವುದು ಅರ್ಪಿತ !

ಜೀವನ ಮುನ್ನಡೆಸಲು ಆಲೋಚನೆ ನಮ್ಮ ಬಾಳಲ್ಲಿ ತುಡಿತ
ಆಲೋಚನೆಗಳಿಗೆ ಕಷ್ಟಗಳೇ ಇಲ್ಲದೆ
ಹತ್ತಿರ ದೂರ ತಿಳಿಯದ ದಿಗಂತ !

ಭವಿಷ್ಯವನ್ನು ಅರ್ಥೈಸಿಕೊಂಡು ದೂರಪಡಿಸುವುದು ದುರಂತ
ಆಲೋಚನೆಗಳಿಗೆ ಕಾಲ ಸಮಯಗಳು ಇಲ್ಲದೆ
ದುಡಿಯುತ್ತಲೇ ಇದೆ ಸತತ !

ಆಲೋಚನೆಗಳ ಬಯಸಿ
ಭಾವನೆಗಳು ಸೇರಿಕೊಳ್ಳುತ್ತಿದೆ ಅಗಣಿತ
ಆಲೋಚನೆಗಳಲ್ಲಿ ನನ್ನ ಆಲೊಚನೆ ಎಂದೂ ಕಣ್ಣಿಗೆ ಕಾಣದ
ಮಿಡಿತ !



ಆಲೋಚನೆಗೆ ಸಾಧನೆಯೇ ಸಂಕೇತ
ಎಲ್ಲಾ ಕಷ್ಟಗಳಲ್ಲಿ ಆಲೋಚಿಸುವುದು ಉಚಿತ
ಉಸಿರಾಡದೆ ಜೊತೆ ಜೀವಿಸುತ್ತಿದೆ ರಂಜಿಸುತ್ತಾ ಎಲ್ಲಾ ಆಲೋಚನೆ
ನಿಶ್ಚಿತ !

ಮೊದಲಲ್ಲಿ ಒಂದು ಆಲೋಚನೆಗೆ ಕೊನೆ ಇದೆ
ಆ ಆಲೋಚನೆ ಕಣ್ಣಿಗೆ ಕಾಣಿಸದ ಲಿಖಿತ !

**– ಶ್ರೀ ಹರಿ.**

**10–08–2015**

www.sriharikhoday.com

**991**

ಸಂತೋಷವನ್ನು ಇನ್ನೊಬ್ಬರೊಂದಿಗೆ ಹಂಚಿಕೊಳ್ಳೋಣ
ಸಂತೋಷ ಸಂತಸವನ್ನು ಮನದಲ್ಲಿ ಹೆಚ್ಚಿಸಿಕೊಳ್ಳೋಣ
ಅರ್ಹರು ಅನರ್ಹರು ಎಂದು ಭೇದಿಸದೆ
ನಮ್ಮ ಹುಟ್ಟುಗುಣವಾದ ಸಂತೋಷದಲ್ಲಿ ಬೆರೆತು
ಹಂಚಿಕೊಳ್ಳೋಣ !

ಎಂದೂ ಕಡಿಮೆಯಾಗದ ಸಂತೋಷ ಬೆಳೆಸುತ್ತಲೇ ಇರೋಣ
ವ್ಯರ್ಥವಾಗದ ಸಂತೋಷ ದೇವರ ಪ್ರಸಾದ ಎನ್ನೋಣ
ಕ್ಷಣ ಕ್ಷಣಗಳಲ್ಲಿ ನಮ್ಮ ಪ್ರಾಣದ ಜೊತೆಗೆ
ಹಗುರಾಗಿ ಸಂತಸದಿಂದ ಇರೋಣ !

ಹೆಚ್ಚಾಗಿರುವ ನಮ್ಮ ಸಂತಸ ಕರ್ತವ್ಯ ಎಂದು
ಬೇರೆಯವರಿಗೆ ಅರ್ಪಣೆ ಮಾಡೋಣ
ಸಂತಸ ಹೆಚ್ಚುವುದರಲ್ಲಿ ಜೊತೆಯಾಗಿರುವುದು ಔತಣ !

ಜೀವನದಲ್ಲಿ ನಮ್ಮ ಮನೋಭಾವನೆಗಳಿಂದ ಮಾಡೋಣ
ಬೇರೆಯವರಿಗೆ ಕಲ್ಯಾಣ
ಮನೋ ಹೊಸ್ತಿಲಿಗೆ ಹರುಷದ ತೋರಣ ಕಟ್ಟೋಣ
ಜೀವನಕ್ಕೆ ಸಂತೋಷವೇ ಭೂಷಣವೆನ್ನುತ
ತಪ್ಪಿದಲ್ಲಿ ಬದಲಿಸಬೇಕಾಗಿದೆ ದೃಷ್ಟಿಕೋನ !

www.sriharikhoday.com



ಜೀವನದ ತಾತ್ಪರ್ಯವೇ ಸಂತೋಷ ಒಂದು ಮನದ ಉಪಕರಣ
ಮೂಡಿಸು ಎಲ್ಲರ ಜೊತೆಗೆ ಒಂದು ಎಂಬ ಭಾವನೆಯ ಮಿಶ್ರಣ
ಮಾಡೋಣ ಮನಸ್ಸಿಗೆ ಸಂತೋಷದ ಶಿಕ್ಷಣ
ಸಂತೋಷವನ್ನು ತೊಟ್ಟುಕೊಳ್ಳೋಣ ಮನಕ್ಕೊಂದು ಆಭರಣ !

– ಶ್ರೀ ಹರಿ.

**10–08–2015**

## 992

ಜೀವನ ಸಾಗುತ್ತಲೇ ಇದೆ
ಜೀವನ ಯಾವ ದೆಸೆಗೆ ಸಾಗುತ್ತಿದೆ ಎಂದು
ಕಲಿಸಲು ಯಾವ ಶಾಲೆಯೂ ಇಲ್ಲ !

ಆಲೋಚಿಸುವುದು ದೌರ್ಬಲ್ಯವಲ್ಲ
ಆಲೋಚನೆ ಒಂದು ವ್ಯಕ್ತಿತ್ವಕ್ಕೆ
ಹೊಸ ರೂಪ ಕೊಡುತ್ತಲೇ ಇರುವುದು

ವಿವೇಕವಿಲ್ಲದ್ದಲ್ಲಿ . .ಹಾಸು ಹೊಕ್ಕಾಗಿ
ಕೆಳಗೆ ಬಿದ್ದಿರುವ ವಿಷಯಗಳನ್ನು ಹುಡುಕಿ
ಸರಿಯಾಗಿ ಉಪಯೋಗಿಸುವುದೇ ಜಾಣರ ಜಾಣ್ಮೆಯೇ

ಯಶಸ್ಸು ವ್ಯಕ್ತಿಯನ್ನು ಹುಡುಕದೆ
ಮೌಲ್ಯಯುತ ಸಾಧನೆ ಸಾಧಿಸಿದರೆ
ಯಶಸ್ಸು ನೆರಳಾಗಿ ಹಿಂಬಾಲಿಸುತ್ತದೆ !

ನಮ್ಮ ಸಮಸ್ಯೆಗಳನ್ನು ನಾವು ಬೆಳೆಸದಿದ್ದರೆ
ಒಳ್ಳೆಯದು ಯಾವುದು ಎಂದು ಹುಡುಕಿದರೆ
ಪ್ರಯತ್ನಗಳಿಲ್ಲದೆ ಜೀವನದಲ್ಲಿ ಸುಖ ತುಂಬಿಕೊಳ್ಳುವುದು !

**– ಶ್ರೀ ಹರಿ.**

**12-08-2015**



## 993

ಸ್ವರ್ಗಗಳು ಸುಂದರ ರೂಪವನ್ನು ಕಲ್ಪಿಸುತ್ತಿದೆ
ಸುಂದರ ರೂಪಗಳು ಸ್ವರ್ಗವನ್ನೇ ಬಯಸುತ್ತಿದೆ !

ಬಯಕೆಯಲ್ಲಿ ಸೌಂದರ್ಯ ಅಡಗಿದ್ದರೆ
ವಿಶ್ವವೇ ಸೌಂದರ್ಯವನ್ನು ಹೋಲಿಸಲು
ವಿಶ್ವ ಸುಂದರವಾಗುತ್ತಿದೆ . !

ಹಿಂದು . ಮುಂದು ತಿಳಿಯದ ಸೌಂದರ್ಯ
ಇರಾದೆ ಬಂದಾಗಲೆಲ್ಲ . . . .
ಸೌಂದರ್ಯದ ಜೊತೆ ಕವಿತೆಯಾಗಿ

ನಿಗೂಢ ಜಾಗ್ರತೆಯನ್ನು ದಕ್ಷತೆಯಿಂದ
ಪರದೆ ಹಿಂದೆ ನಿಂತಿರುವ ರೂಪವತಿ ಎದುರಿಗೆ ಬರದೆ
ಅಳತೆಗಳಿಲ್ಲದ ಸೌಂದರ್ಯದ ತರಂಗಗಳು ಬರುತ್ತಿರಲು

ನಾವು ಕರೆಯದೇ ಜೊತೆಯಾಗುತ್ತಿದ್ದರೆ
ಆ ಪ್ರಸನ್ನತೆ ನಮ್ಮ ಜೊತೆ ಭಾವಗೀತೆಯಾಗಿ
ಮಾನವತೆಯಲ್ಲಿ ರಸಿಕತೆಯನ್ನು ತುಂಬುತ್ತಿದೆ !

ಎದುರು ಬದುರು ಸೌಂದರ್ಯದಲ್ಲಿ ಬೆರೆತರೆ
ಮನದಲ್ಲಿ ಅರಳುವ ನಿಶ್ಶಬ್ದ ಗಾಂಭೀರ್ಯತೆ
ಜೊತೆ ಏಕತಾ ಭಾವನೆಯನ್ನು ಅನುಭವಿಸಿ

www.sriharikhoday.com

ತಾಯಿ ಶಾರದೆ ಕವನಗಳನ್ನು ಮನದಲ್ಲಿ ಹರಿಸುತ
ಹಿಂದೆಯನ್ನೂ ಮರೆತು . .ಮುಂದನ್ನೂ ಮರೆತು
ಸೌಂದರ್ಯ ರೂಪ ನಾವೇ ಪಡೆದು ಗೆದ್ದಂತೆ !

ಸ್ವರ್ಗಗಳು ಸುಂದರ ರೂಪ ಕಲ್ಪಿಸುತ್ತಿದೆ
ಸೌಂದರ್ಯ ರೂಪಗಳು ಸ್ವರ್ಗವನ್ನೇ ಬಯಸುತ್ತಿದೆ
ವಿಶ್ವವೇ ಸೌಂದರ್ಯವನ್ನು ಹೋಲಿಸಲು ವಿಶ್ವ ಸುಂದರವಾಗುತ್ತಿದೆ!

– ಶ್ರೀ ಹರಿ.

13–08–2015



## 994

ಋತುಗಳು ತನ್ನ ಬಣ್ಣ ನೋಡಲಿಲ್ಲ
ಬೆಳಕು ಕತ್ತಲನ್ನೇ ನೋಡಲಿಲ್ಲ
ಕಷ್ಟಗಳು ಸುಖ ಕಾಣಲಿಲ್ಲ
ಸುಖಗಳು ಕಷ್ಟಗಳ ಅರಿತಿಲ್ಲ !

ನಂಬಿಕೆ ಅಪನಂಬಿಕೆಯ ಜೊತೆ ಬೆರೆಯಲಿಲ್ಲ
ಕಾಮನಬಿಲ್ಲು ತನ್ನ ಬಣ್ಣ ಕಾಣಲೇ ಇಲ್ಲ
ಸೂರ್ಯನು ತನ್ನ ಉದಯವನ್ನು ನೋಡಲಿಲ್ಲ
ಹುಟ್ಟು ಸಾವು ಏನೆಂದು ತಿಳಿಯಲಿಲ್ಲ !

ಸ್ವರ್ಗ . . ನರಕಗಳು ಜೊತೆ ಬಾಳಲಿಲ್ಲ
ಬರೀ ಮನಸ್ಸಿನ ಭಾವನೆ ವೈರಾಗ್ಯವಾಗಲಿಲ್ಲ
ಒಬ್ಬರ ಪ್ರೀತಿ–ಪ್ರೇಮವು ಎಲ್ಲರ ಜೊತೆ ಬೆರೆಯುವುದಿಲ್ಲ
ನಾಲಗೆಯ ರುಚಿ ಒಂದು ಭಕ್ಷ್ಯವಾಗಲಿಲ್ಲ !

ಒಂಟಿ ಬಾಳು ಬಾಳಾಗುವುದಿಲ್ಲ
ಒಬ್ಬರ ದೃಷ್ಟಿಕೋನ ಬೇರೆಯವರ ದೃಷ್ಟಿಕೋನವಾಗುವುದಿಲ್ಲ
ಕರುಣೆಯಲ್ಲಿ ಬೇಕು ಬೇಕೆಂಬ ಆಸೆ ಬಿಟ್ಟಿಲ್ಲ
ಮಾನವನ ಜೀವನ ಮೇಲಲ್ಲ ಕೀಳು !

www.sriharikhoday.com

ದೇವರಿಗೆ ಒಬ್ಬನೇ ಆದ ಭಕ್ತನಿಲ್ಲ
ಅಹಂಕಾರ ನಾನು ನನ್ನದು ಎಂಬುದು ಬಿಡಲಿಲ್ಲ
ರಸಿಕತೆ ಒಬ್ಬರ ಜೊತೆ ಬಾಳಲಿಲ್ಲ
ಮಾನವ ಬೇರೆಯವರ ಪಾಡು ಏನಾಯಿತೆಂದು ಕೇಳಲಿಲ್ಲ !

ಬರೀ ಮಾತು ಮಾತುಗಳಲ್ಲಿ ಗುಟ್ಟು ಹೊರಬರಲಿಲ್ಲ
ಎಲ್ಲಾ ಹೂವಿನ ಸ್ವಾದ ಒಂದೇ ಆಗಲಿಲ್ಲ
ಎಲ್ಲಾ ಅಕ್ಷರಗಳು ಒಂದೆಡೆ ಬಾಳಲಿಲ್ಲ
ಉಸಿರು ನಿಟ್ಟುಸಿರಾಗಲಿಲ್ಲ !

ದೆಸೆಗಳು ಒಂದೇ ದೆಸೆಯಾಗಲಿಲ್ಲ
ತನ್ನ ಅನುಭವದ ಅರ್ಥ ಆಕಾಶದಂತೆ ಒಂದೇ ಆಗಿ
ನಮ್ಮನ್ನು ಪಾಲಿಸುವ ಸತ್ಯ
ನೆರಳಾಗಿ ಹಿಂಬಾಲಿಸುವಂತೆ ಜೊತೆಯಾಗಿ

ಎಲ್ಲರ ದೇವರು ಒಂದೇ ಆಗಿ
ನೆರಳೇ ಇಲ್ಲದ ಎಲ್ಲದರ ಜೊತೆ ಇರುವ
ದೇವರನ್ನು ಹುಡುಕಾಡದೆ
ಮುಂದೇ ಸಾಗುತ್ತ ನೆರಳನ್ನು ನಮ್ಮಲ್ಲೇ ಹುಡುಕೋಣ !

ನೆರಳಾಗಿರುವ ದೇವರು
ಮುನ್ನಡೆಸುತ್ತಿರುವ ದೇವರನ್ನು ಎಂದೆಂದಿಗೂ ಮರೆಯದೆ
ಮನಸ್ಸಿನಲ್ಲಿ ದೇವರ ನೆನೆದು ಮೆರೆಯೋಣ !

**– ಶ್ರೀ ಹರಿ.**

**14-08-2015**



# 995

ಪ್ರೀತಿಯ ಬಂಧನದ ಮನೋ ಭವನದಲ್ಲಿ
ಅನೇಕ ವಿಕಾಸಗಳನ್ನು ಅರಳಿಸುವ ಬಂಧನ
ಸೋಲು ಗೆಲುವನ್ನು ಮರೆತಿರುವ ಮನೋ ಭವನ
ಕದಗಳಿಲ್ಲದೆ ತೃಪ್ತಿ ತರಿಸುವ ಮನೋ ಬಂಧನದ ಭವನ !

ಪ್ರೇಮ ಬಂಧನ ವಾಸಿಸುವ ಮನೋ ಭವನ
ಪ್ರೀತಿಗೆ ಆಸರೆ ನೀಡುವ ಮನೋಭವನ
ಕಣ್ಣೋಟಗಳ ಸಂಚನ್ನು ಪ್ರತಿಧ್ವನಿಸುವ ಭವನ
ಇಂದೂ. .ನಾಳೆಯ ಮರೆಸುತ ಪ್ರೇಮರಾಗವ ಹಾಡುವ ಮನೋ ಭವನ

ಪ್ರೀತಿ ಪ್ರೇಮದ ಜೊತೆಗೆ ಪ್ರತಿಧ್ವನಿಸುವ ಮನೋ ಬಂಧನದ ಭವನ

ಕ್ಷಣ ಕ್ಷಣಗಳಲ್ಲಿ ಎಲ್ಲವನ್ನೂ ಮರೆಸಿ
ಜೊತೆ ಬೆರೆಸುವ ಸೌಂದರ್ಯ ಮೀರಿಸುವ ಭವನ
ಸರಿ ತಪ್ಪುಗಳ ಅರಿಯದ ಪ್ರೀತಿಯ ಮನೋ ಬಂಧನ

ಆತ್ಮವೇ ಸಾಕ್ಷಿಯಾಗಿ ಜೊತೆ ಜೊತೆಯಾಗಿರುವ ಮನೋ ಬಂಧನ
ಜೊತೆ ಬೆರೆತು ಪೂರ್ಣದ ಅರ್ಥವನ್ನು ತಿಳಿಸುವ ಮನೋ ಬಂಧನ

www.sriharikhoday.com

ಕಾಲವೇ ಸೊಬಗಾಗಿ ಉಲ್ಲಾಸ ಹರಿಸುವ ಬಂಧನ
ಜೀವನದಲ್ಲಿ ದೇವರ ಲೀಲೆಯನ್ನು ಬೆರೆಸುವ ಮನೋ ಬಂಧನ

ಜಗತ್ತೇ ನಾನು ಎಂದು ಹೊಳೆಯುವ ಜೊತೆ ಬೆರೆಸುವ ಬಂಧನ
ವಿಶ್ವದ ಸೃಷ್ಟಿಯಾದ ಪ್ರೀತಿ-ಪ್ರೇಮಗಳಿಗೆ ಆಶ್ರಯ ನೀಡುತ್ತಿರುವ
ಭವನ
ರಸಿಕ ಪ್ರಪಂಚಕ್ಕೆ ಕಂಗಳ ಸೂಕ್ಷ್ಮ ದೃಷ್ಟಿಯನ್ನು ಪ್ರತಿಬಿಂಬಿಸುವ
ಭವನ
ಭವನದ ನಿಶ್ಶಬ್ದದಲ್ಲಿ ತಮ್ಮನ್ನು ತಾವಾಗಿಸುವ ಮನೋ ಬಂಧನ

ಪ್ರೀತಿಯ ಬಂಡಾರದ ಭವನ
ಪ್ರೀತಿ ಪ್ರೇಮದ ನಾದಗಳಲ್ಲಿ ಬೆರೆತು ಒಂದಾಗಿರುವ ಮನೋಭವನ
ಪ್ರೀತಿ-ಪ್ರೇಮಗಳು ಅಮರ ಎಂದು ಪ್ರತಿಧ್ವನಿಸುವ ಭವನ
ಕದಗಳಿಲ್ಲದೆ ಪೂರ್ಣತನಕ್ಕೆ ಆಶ್ರಯ ನೀಡುತ್ತಿರುವ

ನಿಶ್ಶಬ್ದದಲ್ಲಿರುವ ಭವನ
ಎಲ್ಲಾ ಭವನದ ಮೂಲೆ ಮೂಲೆಗಳಲ್ಲಿ
ದೇವರ ಅನುಭವಿಸುವ ದೇವರ ಜೊತೆ ಆನಂದಪಡುವ
ಸುಂದರ ಭವನ ಅದೇ ಮನೋ ಭವನ !

**- ಶ್ರೀ ಹರಿ.**

**14-08-2015**



## 996

ಈ ಜಗತ್ತಿನಲ್ಲಿ ಯಾರೂ ಸ್ವತಂತ್ರರಾಗಿಲ್ಲ
ಒಂದರ ಮೇಲೆ ಒಂದು ಆಧಾರ
ಕಣ್ಣಿಗೆ ಬೀಳುವುದೆಲ್ಲ ಸ್ವಾತಂತ್ರ್ಯ ರಹಿತ
ಕಣ್ಣಿಗೆ ಕಾಣುವ ಆಕಾಶ ಸ್ವತಂತ್ರದಲ್ಲ !

ಕಣ್ಣಿಗೆ ಕಾಣುತ್ತಿರುವ ಸೂರ್ಯ ಚಂದ್ರರು ನಿಯಮಗಳಿಗೆ
ಒಳಗಾಗಿದ್ದಾರೆ
ಸ್ವಾತಂತ್ರ್ಯ ಅತಿ ಮೌಲ್ಯ ವಸ್ತು
ಅದು ಬೇರೆಯವರ ಆಡಳಿತಕ್ಕೆ ವಶವಾಗದೆ
ನಮ್ಮದು ಎನ್ನುವುದು ಸ್ವಾತಂತ್ರ್ಯದ ಮೂಲ ಮಂತ್ರ !

ಸ್ವಾತಂತ್ರ್ಯಗಳಿಗಾಗಿ ಬೇಕಾದ ಹೋರಾಟಗಳು
ಕತ್ತಿ ಗುರಾಣಿಗಳಿಲ್ಲದೆ ಜಗಳ ಮಾಡದೆ ದ್ವೇಷ ಸಾಧಿಸದೆ
ನಮ್ಮದು ಎಂಬ ಅರಿವು ನಮ್ಮ ದೇಶದ ಜನಗಳಿಗೆ ಅರಿವಾದಾಗ
ಪರಕೀಯರ ಗುಲಾಮಗಿರಿಯನ್ನು ನಾವು ಹೋಗಲಾಡಿಸಿದ ದಿನ

ಈ ದಿನವು ಅರವತ್ತೆಂಟು ವರುಷಗಳ ಹಿಂದೆ
ನಮ್ಮ ನಾಡಿನ ಪಿತಾಮಹ ಮನೋಸ್ವಾತಂತ್ರ್ಯದಿಂದ ಗೆದ್ದು
ಸ್ವಾತಂತ್ರ್ಯವನ್ನು ಸ್ವತಂತ್ರದ ಸುಖ ಅನುಭವಿಸಲು ಆಶೀರ್ವದಿಸಿದ
ದಿನ
ನಮ್ಮ ದೇಶದ ಪವಿತ್ರ ದಿನ ಮಹಾತ್ಮ ಗಾಂಧಿಯನ್ನು ನೆನೆಸುವ
ದಿನ



www.sriharikhoday.com

ಗುಲಾಮಗಿರಿಯಿಂದ ಮುಕ್ತರನ್ನಾಗಿ ಮಾಡಿ
ಕಾಲ ಮನೋ ಸಾಹಸವನ್ನು ಮೆಚ್ಚಿ ಪರಕೀಯರನ್ನು ಓಡಿಸಿದ ದಿನ
ಕಾಲಕ್ಕೆ ನಾವು ತಲೆ ಬಗ್ಗಿಸಿ ನಮಸ್ಕರಿಸುತ
ಪಿತಾಮಹ ಗಾಂಧೀಜಿಯವರ ಪ್ರಸಾದವನ್ನು ಕಣ್ಣಿಗೆ ಒತ್ತಿಕೊಂಡು

ಸ್ವಾತಂತ್ರ್ಯವನ್ನು ಸ್ವೀಕರಿಸಿಕೊಂಡು ಮುಂಬರುವ ಕಾಲದಲ್ಲಿ
ಕಾಲದ ಜೊತೆಗೆ ನಾವು ಪ್ರತಿಜ್ಞೆ ಮಾಡಿ
ನಮ್ಮನ್ನು ನಾವು ಸರಿ ಉಪಯೋಗಿಸಿಕೊಳ್ಳುತ್ತೇವೆ
ಕಾಲವನ್ನು ವ್ಯರ್ಥ ಮಾಡದೆ ಬೇರೆಯವರ ಕಷ್ಟಗಳಲ್ಲಿ
ಸೇರಿಕೊಂಡು

ಕಷ್ಟಗಳಿಲ್ಲದ ದೇಶ ಬಾಳಲು ಹೋರಾಡುವೆವೆಂದು ಕಾಲಕ್ಕೆ ಭಾಷೆ ನೀಡೋಣ
ಇಂದಿನಿಂದ ಕಾಲ ವ್ಯರ್ಥ ಮಾಡದೆ ದುಡಿದು ದೇಶ ಸೇವೆ ಮಾಡಲು
ಎಲ್ಲಾ ಕೆಲಸಗಳಲ್ಲಿ ನಿರತರಾಗಿ ಸ್ವಾತಂತ್ರ್ಯ ನೀಡಿದ

ಕಾಲಕ್ಕೆ ಜಯ ಘೋಷಿಸಿ
ಭಾರತ ಮಾತೆಯ ಪಾದಗಳಿಗೆ ನಮಸ್ಕರಿಸಿ
ದೇಶ ಸೇವೆಯಲ್ಲಿ ನಿರಂತರವಾಗಿ ಬೆರೆಯೋಣ

ದೈವ ರೂಪದಲ್ಲಿರುವ ಕಾಲ
ದಿನವೂ ಕಾಲವನ್ನು ನಮಿಸಿ ನಮ್ಮ ಜೀವನದಿಂದ
ಭವಿಷ್ಯವನ್ನು ರೂಪಿಸುವ ಜೊತೆಗೆ
ದೇಶದ ಭವಿಷ್ಯವನ್ನು ಭಕ್ತಿಯಿಂದ ರೂಪಿಸೋಣ

ಬೋಲೋ ಭಾರತ್ ಮಾತಾಕಿ ಜೈ
ಬೋಲೋ ಗಾಂಧಿ ಮಹಾತ್ಮಾಕಿ ಜೈ
ನಮ್ಮ ಜೊತೆ ಸದಾ ಜೊತೆಗಿರುವ ಕಾಲಕ್ಕೆ ಜೈ ಹೇಳೋಣ

– ಶ್ರೀ ಹರಿ.

**15-08-2015**



# 997

ಮನಸ್ಸಿನ ಬಿಲ್ಲಿನಿಂದ ಗುರಿ ಸಾಧಿಸುವುದಕ್ಕೆ ಆಶೀರ್ವಾದ
ಗುರಿ ಸಾಧನೆಯಾದ ಮೇಲೆ
ಜೊತೆ ಬರುವ ಸಾಧನೆಯ ಸುಖಕ್ಕೆ
ಗುರುಗಳ ಮಹಾ ಪ್ರಸಾದದ ಆಶೀರ್ವಾದ !

ಬೇರೆಯವರ ಜೊತೆಗೆ ಬೆಳೆಸುತ್ತಿರುವ ಸ್ನೇಹಿತನ
ಜೊತೆ ಜೊತೆಯಾಗಿಸುತ್ತಿದೆ
ಭವಣೆ ಉಳ್ಳವರ ಜೊತೆ
ಅವರ ನೆರಳುಗಳೆಲ್ಲ ನನ್ನ ನೆರಳಾಗಿಸುತ್ತಿದೆ

ಭವಣೆ ಪೀಡಿತ ಜನರ ನೆರಳು
ನನ್ನ ನೆರಳಾಗಿ
ಮಹಾ ಪ್ರಸಾದದ ಜೊತೆಗೆ
ಬರುತ್ತಿರುವುದು ಗುರುಗಳ ಆಶೀರ್ವಾದ !

ಗುರುಗಳ ಆಶೀರ್ವಾದ ಕಾಲವನ್ನೇ ನನ್ನಲ್ಲಿ ಬೆರೆಸಿ
ಕಾಲ ನನ್ನ ಜೊತೆ ಇತಿಹಾಸದ ಸಾಧನೆಯಾಗಿ
ಎದುರಿಗೇ ಬಂದು ಹೇಳಿ ಇದು ಬೇಡ . .ಅದು ಬೇಕೆಂದು
ದಿಕ್ಕು ತೋರಿಸುತ್ತಿರುವ ಆಶೀರ್ವಾದ !

www.sriharikhoday.com

ಬೇರೆಯವರ ಕಷ್ಟಗಳನ್ನು ಸಾಲವಾಗಿ ನಾ ಪಡೆದು
ಪಡೆದ ಸಾಲವನ್ನು ಜೀವನದ
ಬಂಡವಾಳವನ್ನಾಗಿ ಉಪಯೋಗಿಸಿ
ಎಲ್ಲರಿಗೂ ಬೇಡದಿರುವ ಕಷ್ಟಗಳ ಜೊತೆ ನಾ ಸೇರಿ

ಪ್ರಗತಿಯ ಸಾಧನೆ ಗುರುಗಳ ಆಶೀರ್ವಾದವೆಂದು
ನನ್ನಲ್ಲಿ ಬರುವ ಕಷ್ಟಗಳನ್ನೆಲ್ಲಾ ಮರೆಸುತ್ತಿದೆ
ಗುರುಗಳ ಹತ್ತಿರ ಅದು . . ಇದು . ಬೇಡದೆ
ಬರೀ ಆಶೀರ್ವಾದವನ್ನು ಬೇಡಿದರೆ ಮಾನವ ಧನ್ಯನಾಗುವನು !

**– ಶ್ರೀ ಹರಿ.**

**17–08–2015**



**998**

ಋಣ . . .ಋಣ ಋಣಿಯರು
ನಮ್ಮ ಜೀವನದ ದಾರಿಯ ಬಿಟ್ಟು ಎಲ್ಲವನ್ನೂ ಕಳೆದುಕೊಂಡು
ಕಣ್ಣೀರು ಸುರಿಸುತ್ತಿರುವ ಮನಗಳು . . .
ಮನದಲ್ಲೇ ಅಳುತ್ತಾ ಇರುವರು !

ಸರಳ ಜೀವನದ ರೀತಿ ಬಿಟ್ಟಿರುವ ಸಮಾಜ
ಎಲ್ಲರ ಮನದಲ್ಲಿ ಬಯಕೆಗಳನ್ನು ಹೆಚ್ಚಿಸಿಕೊಳ್ಳುತ್ತಿರುವ ಸಮಾಜ
ಹೋಲಿಕೆಗಳನ್ನು ಮಾಡುತ್ತಿರುವ ಸಮಾಜದಲ್ಲಿ
ಮನದ ಆಸೆಗಳು ಜೀವಿಸಲು ವಿಪತ್ತಾಗುತ್ತಿದೆ !

ದಾರಿ ನಡೆದ ಕಡೆಗೆಲ್ಲಾ ಹೋಗಿ
ಪ್ರಯೋಜನವಾಗದ ಹಾದಿಗಳು
ಸರಳ ಜೀವನದ ಹಾದಿ ತಪ್ಪಿಸಿಕೊಂಡ ಮನ
ಮನಕ್ಕೆ ಅಳುವನ್ನು ತರಿಸಿ ಜೀವನವೇ ಕಷ್ಟವಾಗಿದೆ

ಜೀವನವನ್ನು ತೊರೆಯುವ ಇಚ್ಛೆಗಳ ಮೋಡಗಳಾಗಿವೆ
ಮಾನವನ ಮೇಲೆ ಚಲಿಸುತ್ತಲೇ ಇದೆ
ಋಣಿಯರಿಗೆ ಪ್ರಕೃತಿಯ ಆಧಾರದ ಮೇಲಿರುವ ಋಣ
ಪ್ರಕೃತಿಯ ವಿಕೃತಿಗಳೇ ಮಾನವನಿಗೆ ಕಷ್ಟಗಳು

www.sriharikhoday.com

ಋಣಿಯರೆಂಬ ಹೆಸರು ನೀಡಿ
ದುಃಖದ ಬಿಸಿ ನೀರನ್ನು ಮೋಡಗಳು
ಕಣ್ಣೀರಿನಲ್ಲಿ ಹರಿಸುವಂತೆ ಮಾಡುತ್ತಿದೆ !

ಸಕಾಲದಲ್ಲಿ ಸತ್ಯವನ್ನು ಮಾನವನು ಅರಿಯಲು
ಸರಳ ಜೀವನ ನಮ್ಮ ದೆಸೆಯಾಗಿ
ಸರಳ ಜೀವನದ ನೆಮ್ಮದಿ ಐಶ್ವರ್ಯವಾಗಿ
ಜೀವನದ ಹೊಸ ರೀತಿಯನ್ನು ಪ್ರಾರಂಭಿಸೋಣ !

ಬರುವ ಸಂತತಿಗೆ ಸರಳ ಜೀವನದ ಐಶ್ವರ್ಯದ ರಹಸ್ಯ ಕಲಿಸಿ
ಎಂದೂ ಋಣ ಋಣಿಗಳ ಕಷ್ಟಗಳಿಗೆ ಬಂಧಿಯಾಗದೆ
ಸರಳ ಜೀವಿಯಾಗಿ ಹರುಷದಿಂದ
ತೃಪ್ತಿಯಿಂದ ಜೀವನದಲ್ಲಿ ಸಾಗೋಣ !

ಎಂದೆಂದಿಗೂ ಹೋಲಿಕೆ ಜೀವನ ಬಿಟ್ಟು
ಸರಳ ಜೀವನದ ಪ್ರಯೋಜನ ಪಡೆದು
ಋಣ. ಋಣಿಗಳಾಗದೆ ಜೀವನದ ತೃಪ್ತಿಯನ್ನು ಸವಿಯೋಣ !

**– ಶ್ರೀ ಹರಿ.**

**18–08–2015**



## 999

ನನ್ನ ಸ್ವಪ್ನದ ಸ್ವರ್ಗದಲ್ಲಿ
ನಿನ್ನ ರೂಪ ಕಂಡೆ
ವರ್ಣಮಯ ನನ್ನ ಪ್ರೀತಿಯ ಉದ್ಯಾನವನದಲ್ಲಿ
ನಿನ್ನ ರೂಪ ರಂಜಿಸುತ್ತಿತ್ತು !

ಪ್ರೇಯಸಿ . . ಪ್ರಿಯಕರರಾದ ನಾವು
ಪ್ರೇಮದ ಜ್ಞಾನದಲ್ಲಿ ತಲ್ಲೀನರಾಗಿದ್ದೇವೆ
ಮುಟ್ಟಿ ಮುತ್ತಿಡುವ ಹರ್ಷದಲ್ಲಿ
ಹೊಸ ಪ್ರೇಮನದಿ ಹರಿಯುತ್ತಿದೆ !

ತನ್ನದೇ ಆದ ಉತ್ಸಾಹದಲಿ
ಸುಂದರಿಯೇ . .! ನನ್ನ ಮನಸ್ಸಿನ ಸುಂದರಿಯೇ
ಚಿರಕಾಲ ಜೊತೆ ಬಾಳೋಣ
ಎಲ್ಲಾ ಋತುಗಳಲ್ಲಿ ಬೆರೆಯೋಣ !

ಜೀವನದ ಎಲ್ಲಾ ಬಣ್ಣಗಳನ್ನು ನೋಡೋಣ
ವಂಚನೆರಹಿತ ನಮ್ಮ ಪ್ರೀತಿ
ಸ್ವಪ್ನ ಸ್ವರ್ಗದಲ್ಲಿ ಎಂದೂ ದೀಪವಾಗಿ
ಬೆಳಗುತ್ತಲೇ ಇರಲಿ !

www.sriharikhoday.com

ನಮ್ಮಿಬ್ಬರ ಮನೋ ಒಪ್ಪಿಗೆ
ನಮ್ಮ ಪ್ರೀತಿ–ಪ್ರೇಮದ ರಹಸ್ಯವಾಗಿ
ನಮ್ಮ ಜೀವನವೆಲ್ಲಾ ನಮ್ಮ ಪ್ರೀತಿ–ಪ್ರೇಮಗಳ
ತರಂಗಗಳನ್ನು ಚಿತ್ರಿಸುತ್ತ

ವಿರಹವೂ ನಮ್ಮಲ್ಲಿ ಎಂದೂ ಬರದೆ
ಪ್ರೀತಿ–ಪ್ರೇಮವೇ ನಮ್ಮ ಕರ್ತವ್ಯವೆಂದು ತಿಳಿಯುತ್ತ
ತುಟಿ ತುಟಿಗಳಲ್ಲೇ ಸಮಯ ಸೇರಿಸುತ್ತ
ನಮ್ಮಲ್ಲಿರುವ ಹಿರಿಮೆ . ಕಿರಿಮೆ . .ಮರೆತು

ನಮ್ಮಿಬ್ಬರಲ್ಲಿರುವ ಪ್ರೀತಿ ಸಾಗರದ ಅಲೆಗಳು
ಬಂದಾಗಲೆಲ್ಲ ನಮ್ಮ ಹೃದಯ ಮಂದಿರದಲ್ಲಿ
ಮಧುರ ಪ್ರಣಯ ಪೂಜೆಯನ್ನು ಮಾಡುತ್ತ
ತುಂಬು ಜೀವನವನ್ನು ಅನುಭವಿಸಿ

ಭೋಗವೇ ವ್ಯಾಮೋಹದ ಭಕ್ತಿಯಾಗಿ
ಪ್ರೇಮವೇ ನಮ್ಮ ಏಕಾಂತದಲ್ಲಿ
ಅಂತರಾಳಕ್ಕೆ ಕರೆದೊಯ್ದು
ಮೌನದಲಿ ನಿಶ್ಚಲ ಪ್ರೀತಿಯಿಂದ

ನಮ್ಮ ಪ್ರೀತಿಯ ಬದುಕೇ ನಮ್ಮ ವಿಧಿ ಎನ್ನುತ
ನಮ್ಮ ಪ್ರೀತಿಯ ಕಮಲವನ್ನು ಅರಳಿಸುತ್ತಲೇ ಇರೋಣ !

ಪ್ರೀತಿ ಪ್ರೇಮಗಳೇ ನಮ್ಮ ಚಂಚಲತೆಯಾಗಿ
ವಂಚನೆಯಿಲ್ಲದ ಬಾಳು..
ಹಗಲು ಇರುಳು ರಸಮಯ ಜೀವನವನ್ನು ಅನುಭವಿಸುತ್ತ
ಪ್ರೇಮವೆಂಬ ಶಕ್ತಿಯನ್ನು ನಮ್ಮ ಮನದಲ್ಲಿ ಬಂಧಿಸಿ

www.sriharikhoday.com



ವಜ್ರ ಬಂಧನವಾಗಿ ನೀನೇ ನನ್ನ ಮಾಣಿಕ್ಯ
ನಾನೇ ನಿನ್ನ ವೀಣೆ
ನಮ್ಮಿಬ್ಬರ ನೆರಳು ಒಂದೇ ನೆರಳಾಗಿ
ನಮ್ಮ ಆನಂದ ನಮ್ಮ ಮನದ ಪ್ರೀತಿಯ ಸೌಂದರ್ಯದ
ಮೂರ್ತಿಯಾಗಿ

ಯಾವುದಕ್ಕೂ ತಡ ಮಾಡದೆ
ನಮ್ಮ ಮಿಲನದ ಸಾರ ಹೆಚ್ಚಲಿ ಎನ್ನುತ
ಮಾಸಬಹುದಾದ ಹೂವುಗಳೆಲ್ಲಾ ಒಣಗದೆ
ನಮ್ಮ ಒಲುಮೆಯ ಭ್ರಾಂತಿಯನ್ನು ಚಿಗುರಿಸಲು

ಎಂದಿಗೂ . . ಎಂದೆಂದಿಗೂ
ಬರೀ ಕವಿಗಳ ಕಾವ್ಯವಾಗದೆ
ನಮ್ಮ ಜೊತೆ ಸಂಸಾರದ ಸಾರವನ್ನೇ
ಸವಿದು ನೋಡೋಣ !

**– ಶ್ರೀ ಹರಿ.**

**18–08–2015**

## 1000

ಬೇಕು ಬೇಡಗಳೇ ಒಂದು ಸಾಹಸ
ಕ್ಷಣ ಕ್ಷಣಗಳಲ್ಲಿ ಆಗುತ್ತಿರುವ ಮನೋ ವಿಕಾಸ
ಸುಮ್ಮನಿರದ ಮನಸ್ಸಿನ ಅಟ್ಟಹಾಸ
ಬೆಳೆಸುವುದು . .ಕಳೆದುಕೊಳ್ಳುವುದು ವಿಶ್ವಾಸ !

ಮನಸ್ಸಿಗೆ ಎಂದೂ ಇರದ ಆಯಾಸ
ಸಾಧಿಸಬೇಕಂತೆ ಇತಿಹಾಸ
ಹೊಸದನ್ನು ಹೊಸದಾಗಿ ಹುಡುಕುವುದೇ ಅಭ್ಯಾಸ
ಸಾಧನೆಯಾದ ಮೇಲೆ ಬರುತ್ತಿರುವ ಉಲ್ಲಾಸ !

ಸಂತೋಷದಿಂದ ಹರಿಯುವುದು ಕಾವ್ಯಾಭ್ಯಾಸ
ಸುಮ್ಮನಿರದೆ ಬದಲುತ್ತಿರುವುದು ಜೀವನದ ವಿಕಾಸ
ಮನಸ್ಸಿಗೆ ತ್ರಾಸವಿಲ್ಲದ ಕೆಲಸ
ಎಚ್ಚರದಿಂದ ತೂಕ ಹಾಕುವುದು ವಿಶ್ವಾಸ . .ನಿಶ್ವಾಸ !

ತಪ್ಪು ಮನಸ್ಸಿನ ನಿರ್ಧಾರದ ಮೇಲೆ
ಅನುಭವಿಸುವುದು ವನವಾಸ
ಯಾರ ಸಹವಾಸಗಳನ್ನೂ ಅರಿಯಲಾಗದು ಮಾನವನಿಗೆ
ತಮ್ಮ ಅತಿ ಕೆಟ್ಟ ಮನಸ್ಸಿನ ಸಹವಾಸ !

www.sriharikhoday.com



ಪ್ರಜ್ಞೆ ಅರಿಯಬೇಕಾಗಿದೆ ಮೋಸಗಳ ಪ್ರಯಾಸ
ಜೀವನ ವಿಲಾಸವಾಗದೆ ಏಕತಾ ದೃಷ್ಟಿಯ ಭಾವನೆಯಿಂದ
ವ್ಯತ್ಯಾಸಗಳನ್ನರಿತು ಪ್ರಜ್ಞೆಯ ವಿಕಾಸದಲ್ಲಿ ಬೆರೆತು
ಜೊತೆ ಜೊತೆ ಜೀವಿಸಬೇಕು ಸಮರಸವಾಗಿ !

ಬೇಕು ಬೇಡಗಳೇ ಒಂದು ಸಾಹಸ
ಕ್ಷಣ ಕ್ಷಣಗಳಲ್ಲಿ ಆಗುತ್ತಿರುವುದು ಮನದಲ್ಲಿ ವಿಕಾಸ !

**– ಶ್ರೀ ಹರಿ.**

**19–08–2015**

## 1001

ಬೆವರು ಹರಿಸಿ ದುಡಿಯುವುದಕ್ಕೆ ಉಪದೇಶ ಬೇಡ
ದುಡಿಮೆ ಖಂಡ ಖಂಡವಾಗಿ ವಿಭಜಿಸಿದರೆ
ತಂಡ ತಂಡವಾಗಿರುವ ಕೆಲಸಗಳು ತಡೆಯಿಲ್ಲದೆ ಕಟ್ಟಡದ ರೂಪ
ಪಡೆದು
ಕುರುಡು ಮನಸ್ಸಿಗೆ ತೋರಿಸುವುದು ಮುಖಂಡತ್ವದ ಪವಾಡ!

ಎಲ್ಲಾ ಕಷ್ಟಗಳ ಜೊತೆಯಾಗಿರುವುದೇ
ಬೆವರು ತರಿಸುವ ದುಡಿಮೆ
ಪ್ರತಿಬಿಂಬವಾಗಿ ಕುರುಡು ಮನಸ್ಸಿಗೆ ತೋರಿಸುವುದು
ರನ್ನನ ಕನ್ನಡಿಯ ಪ್ರತಿಬಿಂಬ ಸಾಧಿಸುವ ದುಡಿಮೆ !

ಚಂಡಮಾರುತಗಳಿಗೆ ಹೆದರದ ದುಡಿಮೆ
ಕಟ್ಟಬೇಕಾಗಿದೆ ಮನಸ್ಸಿನ ಕಟ್ಟಡ
ಹೆದರಿಕೆಯನ್ನರಿಯದ ಬುನಾದಿ
ಹೆದರದ ಗಿಡಮರಗಳ ವಿಶ್ವಾಸ ಕಲಿತು

ಬಂಡ ಭಾವನೆಯಿಂದ ಅನೇಕ ಮನಸ್ಸಿನ ವಿಚಾರ
ಕಟ್ಟಬೇಕಾಗಿದೆ ಒಂದು ದಂಡಿನ ಗುಂಪು
ಹೊರಚೆಲ್ಲಬೇಕಾದ ಕಟ್ಟಡ
ಮಣಿಯಬಾರದು ಬೇರೆಯವರ ಒತ್ತಡಕ್ಕೆ

www.sriharikhoday.com



ಸಾಹಸವಾದ ಮೇಲೆ ನಾನೊಬ್ಬನೆ ಸಾಹಸವನ್ನು
ಸಾಧಿಸಿರುವೆನೆಂದು ಹೇಳದೆ ಎಲ್ಲರಿಗೂ ಜೊತೆ ಸೇರಿಸುವುದು
ಪ್ರೀತಿಯಿಂದ ಜೊತೆಗೂಡಿ ಎತ್ತರಕ್ಕೆ ಹಾರಿಸು ನಮ್ಮ ಝಂಡ
ನಮ್ಮ ಸಾಹಸ ಮಾಡುವ ಶಕ್ತಿ ಎಂದು ಹಾರಿಸು ಝಂಡ

**– ಶ್ರೀ ಹರಿ.**

**19–08–2015**

## 1002

ಅತಿ ಉತ್ತಮನಾದ ಕವಿ
ಮಿತವಾಗಿ ಮಾತನಾಡುತ್ತ
ಕಲ್ಲಿನಲ್ಲಿ ಹೂವನ್ನು ಅರಳಿಸುತ್ತ
ಆ ಹೂವಿನ ಸ್ವಾದದ ಅನುಭವವನ್ನು ಪಡೆಯುವವನೇ ಕವಿ !

ಕವಿ ತನ್ನದೇ ಆದ ದೃಷ್ಟಿಕೋನದಿಂದ
ತನ್ನ ದಿಗಂತದಲ್ಲಿ ಬೆರೆತು ಕಳೆದುಹೋಗಿ
ತನ್ನಲ್ಲಿರುವ ಅಜ್ಞಾನವನ್ನು ನೋಡಿ
ಹುಚ್ಚನಂತೆ ನಕ್ಕು ಕೂಗಾಡುವವನೇ ಕವಿ !

ಜೊತೆ ಜೊತೆ ಪ್ರೀತಿಯನ್ನು ಅನುಭವಿಸಿ
ಆ ಅನುಭವದಲ್ಲಿ ರಸಿಕತೆಯನ್ನು ತಾನೇ ಪಡೆದು
ರಸಿಕತೆಯಲ್ಲಡಗಿರುವ ಆಳಕ್ಕೆ ತಾನೇ ಹೋಗಿ
ತನ್ನದೇ ಆದ ವಿಶ್ವದಲ್ಲಿ ಬೆರೆತು ಕಳೆದುಹೋಗುವವನೇ ಕವಿ !

ಭಿಕಾರಿಯ ಕಷ್ಟ .ರಾಜನ ಕಷ್ಟ
ಪ್ರೀತಿ-ಪ್ರೇಮಗಳ ಕಷ್ಟ. .
ಜೀವನದ ಸಂಕಟದ ಜೊತೆಗೆ ಜೀವಿಸುವ ಕಷ್ಟ
ಬೇಕಾದಾಗ ದೂರದಲ್ಲಿರುವ ದಿಗಂತವನ್ನು ಹತ್ತಿರ ತರಿಸುವವನೇ
ಕವಿ !



ತುಸು ಕಷ್ಟದಲ್ಲಿ. .ತುಸು ಸುಖದಲ್ಲಿ
ಹತ್ತಿರ ದೂರಗಳ ಒಂದು ಮಾಡಿ
ಯಾವುದರ ಜೊತೆಗೂ ಅಂಟಿಕೊಳ್ಳದೆ
ತನ್ನ ಮನಸ್ಸಿನ ಲೇಖನಿ ಸುಮ್ಮನಿರದೆ

ಬರುವ ದುಃಖಗಳೆಲ್ಲವನ್ನೂ ಅರಿತು
ದೂರದಲ್ಲಿರುವ ಸುಖವನ್ನು ಇಂದೇ ಅನುಭವಿಸುತ್ತ
ತನ್ನ ಮನದಲ್ಲಿ ತಾನೇ ಮುಳುಗಿಹೋಗಿ
ತನ್ನ ವರ್ತನೆಯನ್ನು ತಾನೇ ನೋಡುವವ ಉತ್ತಮ ಮಾನವನಾದ
ಕವಿ !

ಸಮುದ್ರದ ಕಷ್ಟ . .ಸಮುದ್ರದ ಅಲೆಗಳ ಕಷ್ಟ
ದಡಬಿಟ್ಟು ಹೊರಬರಲಾಗದ ಅಲೆಗಳ ಕಷ್ಟ
ಸುಮ್ಮನಿರಲಾಗದ ಚಂದ್ರ
ಸುಮ್ಮನೆ ಮಿನುಗುತ್ತಿರುವ ನಕ್ಷತ್ರಗಳ ಕಷ್ಟ

ಸೂರ್ಯನ ಕಷ್ಟ . . ಬೆವರಿನ ಕಷ್ಟದಲ್ಲಿ
ಸುಗಂಧ ಸ್ವಾದವನ್ನು ಅನುಭವಿಸುವವನೇ ಕವಿ
ಭೂತ. .ಭವಿಷ್ಯ . ವರ್ತಮಾನಗಳ ಜೊತೆ ಜೀವಿಸುವವನು
ಹೆಮ್ಮೆಯಿಂದ ಬಾಳುವವನು ಹುಚ್ಚನಂತೆ ಕಾಣಿಸಿಕೊಳ್ಳುವವನು
ಕವಿ!

ಬದಲುತ್ತಿರುವ ಸಮಾಜದ ಅರ್ಥಗಳನ್ನು ಅರ್ಥೈಸಿಕೊಂಡು
ರಾಜಕೀಯ ವ್ಯವಸ್ಥೆಗಳನ್ನು ಅರಿತುಕೊಂಡು
ಇಂದಿನ ಸತ್ಯದ ಅರ್ಥವನ್ನು ಅರಿತು ನಡೆದು
ಕ್ಷಣ ಕ್ಷಣದಲ್ಲಿಯೂ ತನ್ನ ಹೊಸತನದ ಅರಿವಿನಲ್ಲಿ

ಉದಯವನ್ನು ಅನುಭವಿಸಿ ಯೌವ್ವನವನ್ನು ಅನುಭವಿಸುತ್ತ
ಎಲ್ಲದರ ಜೊತೆಗೆ ಎಲ್ಲದರಲ್ಲಿ ಬೆರೆಯುವವನೇ ಕವಿ
ಎಲ್ಲದರಲ್ಲಿ ಸಮಭಾವನೆಯಿಂದ ಎಲ್ಲದರಲ್ಲಿ ಬದಲುತ್ತಿರುವ

www.sriharikhoday.com

ಹೊಸದನ್ನು ಕಂಡು ಬೇರೆಯವರ ಕಷ್ಟ ತನ್ನದೆಂದು
ಕಷ್ಟಪಡುವವರಿಗೆ ತನ್ನಲ್ಲಿರುವ ಸುಖದ
ಭಂಡಾರವನ್ನು ನೀಡುವವನೇ ಕವಿ !

ಮಾತುಗಳಿಂದ ಬರವಣಿಗೆ ಹೆಚ್ಚಾಗಿ
ಎಲ್ಲಾ ಅರ್ಥಗಳ ಅಕ್ಷರಗಳಿಗೆ ಮುತ್ತಿಡುತ್ತ
ಎಲ್ಲಾ ಭಾವನೆ ಜೊತೆ ತಾನೇ ಬೆರೆಸಿಕೊಂಡು
ನಿಶ್ಶಬ್ದದ ಸದ್ದಿನಲ್ಲಿ ಜೀವಿಸುತ್ತಿರುವವನೇ ಕವಿ !

ಭಾವನೆಯ ನೆರಳನ್ನು ಬಣ್ಣಿಸುತ
ಸೌಂದರ್ಯವನ್ನು ಹೊಗಳುತ್ತ
ದುಸ್ಸಾಹಸಗಳನ್ನು ತೆಗಳುತ್ತ
ತಾವೇ ಯೌವ್ವನವಾಗಿ ತಾನೇ ವೃದ್ಧನಾಗಿ

ಎಚ್ಚರ ಸ್ವಪ್ನಗಳ . .ಸ್ವಪ್ನಗಳ ಎಚ್ಚರದಲ್ಲಿ ಬೆರೆಯುತ್ತ
ಕಲ್ಲಿನ ಮೇಲೆ ಸುಖವಾಗಿ ಮಲಗಿ ಸ್ವಪ್ನಗಳ ತೇಲಿಸುವವನೇ ಕವಿ
ವಿಶ್ವಕ್ಕೆ ಶುಭವನ್ನು ಕೋರುತ್ತ
ತನ್ನ ಮನಸ್ಸನ್ನು ತಾನೇ ಹೊಗಳುತ್ತ

ತನ್ನ ಬುದ್ಧಿಗೆ ಎಲ್ಲದಕ್ಕಿಂತ ಕಡಿಮೆ ಎಂದು ಹೇಳುತ್ತ
ಯಾವ ಸಹಾಯವಿಲ್ಲದೆ ಎಲ್ಲವನ್ನೂ ಅನುಭವಿಸುತ್ತ
ಜೀವನದ ಸವಿರುಚಿಯನ್ನು ತಿಳಿದಿರುವವನೇ ಕವಿ !

ತನ್ನ ಅನುಭವದಲ್ಲಿ ಸತ್ಯ ಅಸತ್ಯಗಳನ್ನು ಅನುಭವಗಳ ವಿಮರ್ಶೆ
ಮಾಡುತ್ತ
ಮನಸ್ಸಿಗೆ ಬರುವುದೆಲ್ಲ ಕನ್ನಡಿಯಂತೆ ಹೊರಚೆಲ್ಲುವ ಬೆಳಕಿನಂತೆ
ಕಾಲವನ್ನು ಲೆಕ್ಕಿಸದೆ ಮರೆತಿರುವವನೇ ಕವಿ !

ಪ್ರೀತಿಯ ಖಜಾನೆ ಕುಬೇರನ ಕವಿ
ಹೂವಿನ ಬಣ್ಣಗಳ ಒಡೆಯ ಕವಿ



www.sriharikhoday.com

ಆ ಬಣ್ಣ ತನ್ನದೇ ಎಂದು ಹೇಳಿ ಜಗಳ ಮಾಡುವವ ಕವಿ
ಮಾತನಾಡದ ವಸ್ತುವಿನ ಜೊತೆ ಮಾತನಾಡುವವನೇ ಕವಿ !
ಪ್ರಜ್ಞೆಯ ಜೊತೆ ಬೆರೆತು
ತನ್ನಲ್ಲಿರುವ ಪಂಚಭೂತಗಳ ಒಡೆಯ ತಾನೇ ಎನ್ನುತ
ಎಲ್ಲವೂ ನನ್ನದೆಂದು ಎಲ್ಲದರ ಒಡೆಯ ಕುಬೇರನೆಂದ ಕವಿ

ಬ್ರಹ್ಮಾಂಡಗಳ ಅಂದ ಚೆಂದಗಳ ಅನುಭವಿಸುವ
ಮಣ್ಣಿನ ಕುಡಿಕೆಯಲ್ಲಿರುವ ಬಣ್ಣಗಳ ಅನುಭವವನ್ನು
ರೂಪ ಸೌಂದರ್ಯ ರಾಗ ಲಯಗಳನ್ನು ಅನುಭವಿಸುವ
ಆಳೆತ್ತರ ಅನುಭವ ಪಡೆಯುತ

ತಬ್ಬಲಿತನವನ್ನು ಅನುಭವಿಸುವವ
ಭಾವನೆಗಳಿಗೆಲ್ಲ ಸಮಾನತೆ ನೀಡುತ
ತನ್ನದೇ ಆದ ದಿಗಂತದಲ್ಲಿ ತೇಲಾಡುವವನೇ ಕವಿ !

ತುಂಬುತನವನ್ನು ತನ್ನದು ಎಂದು ಅನುಭವಿಸುತ್ತ
ಎಲ್ಲವೂ ತನ್ನೊಳಗೆ ಇದೆ ಎನ್ನುವ ಧೈರ್ಯ ತಿಳಿದು ಮರೆತು
ಮರೆತು ನೆನಪಾದ ಹೊಸದನ್ನು ಅನುಭವಿಸಿ

ಕೊನೆಗಳೇ ತಿಳಿಯದ ದಿಗಂತಗಳನ್ನು
ಮಿತಿಯಿಲ್ಲದ ಅನುಭವದಿಂದ
ಉದಯದಲ್ಲಿ ಅಸ್ತಮವನ್ನು ಅನುಭವಿಸಿ ಸಂತೈಸಿ

ಸಂತಸ ಹರುಷದ ಸಮುದ್ರದಲ್ಲಿ ಮುಳುಗಿಹೋಗಿ
ಸುಖವನ್ನು ಅನುಭವಿಸುವಂತೆ ಕಷ್ಟಗಳನ್ನೂ ಅನುಭವಿಸಿ
ಬೇಡಿಕೆಯಿಲ್ಲದ ತೃಪ್ತಿ ಜೀವನವನ್ನು
ಪವಿತ್ರ ಮನವನನ್ನಾಗಿ ಮಾಡುವವನೇ ಕವಿ !

**– ಶ್ರೀ ಹರಿ.**

**20–08–2015**

## 1003

ವಿರಹಕ್ಕೆ ಮೌನವೇ ಬಳಕೆ
ದುಃಖಕ್ಕೆ ಹಳೆಯ ನೆನಪುಗಳ ಬಳಕೆ
ಸೌಂದರ್ಯವನ್ನು ವರ್ಣಿಸಲು ಹೊಗಳಿಕೆಯ ಬಳಕೆ
ಪ್ರೇಮದ ಭಾಷೆಗೆ ತುಟಿಗಳ ಬಳಕೆ !

ಏಕೈಕ ಭಾವನೆಯಿಂದ ಐಕ್ಯ ಮಿಲನಗಳ
ಭಾಷೆಗೆ ಕಣ್ ಸಂಚಿನ ಬಳಕೆ
ಆಕರ್ಷಕ ಶರೀರದ ರೂಪಕ್ಕೆ ಮಾಪಕ
ಕಲ್ಪನಿಕ ಭಾವನೆಗಳ ಬಳಕೆ !

ಅನೇಕ ಐತಿಹಾಸಿಕ ಪ್ರೀತಿ-ಪ್ರೇಮಗಳ
ಆರಾಧಿಕ ಭಾವನೆಗಳಿಗೆ ನಗೆನಾಟಕದ ಬಳಕೆ
ಕ್ಷುಲ್ಲಕ ಭಾವನೆಗಳ ಮರೆತು
ಅಂತರಾಳದ ಪ್ರೇಮದ ವರ್ಧಕ ಮೂಕ ಪ್ರೀತಿಯ ಚಾಲಕನ
ಬಳಕೆ!

ಅವಶ್ಯಕವಾಗಿ ತೋರುವ ಯುವಕ ಭಾವನೆ
ಪ್ರೀತಿ-ಪ್ರೇಮಗಳ ತಿಲಕವಾಗಿ
ಅನೇಕಾನೇಕ ಕಂಟಕಗಳನ್ನು ಮರೆತು
ದೆಸೆಗಳು ಆದರೂ ಕಾಯುವ ಪ್ರೀತಿಯ ದೂರದರ್ಶಕ



ಚುಂಬಕವನ್ನೇ ಬಯಸುತ್ತ
ತನ್ನ ಪ್ರೀತಿಯ ವಿರಹಕ್ಕೆ ಮೌನವನ್ನು ಬಳಸಿ
ಕಾಣುವ ಎಲ್ಲಾ ದೇಗುಲಗಳಿಗೆ ನಮಸ್ಕರಿಸಿ
ಮಾನಸಿಕ ಕಷ್ಟವನ್ನು ದೇವರಲ್ಲಿ ಬಿನ್ನವಿಸಿ

ವರಗಳ ಪಡೆದು ವಿರಹಕ್ಕೆ ಪುನರ್ ಚೇತನವನ್ನು ನೀಡಿ
ದುಃಖದ ನೆನಪುಗಳನ್ನು ಮರೆತು
ಹರುಷದ ನೆನಪುಗಳನ್ನು ಮೆಲುಕು ಹಾಕುತ್ತ

ಸೌಂದರ್ಯದ ಆರಾಧಕನಾಗಿ
ಪ್ರೀತಿ-ಪ್ರೇಮಗಳ ಬಳಕೆ ಮಾಡುತ್ತ
ತನ್ನ ಪ್ರೇಯಸಿಯನ್ನು ಪ್ರೀತಿ-ಪ್ರೇಮದ ತೋಟದ ನೆರಳಲ್ಲಿ
ತನ್ನ ಒಲವನ್ನು ಹಂಚಿಕೊಳ್ಳುತ್ತ

ಕೆಟ್ಟ ಸ್ವಪ್ನಗಳನ್ನು ಮರೆತು, ದಿಗಂತದಲ್ಲಿ ಆಳ ಹುಡುಕುತ್ತ
ಹೊಸ ಸ್ವಪ್ನಗಳನ್ನು ತೇಲಿಸುತ್ತಲೇ ಇರುವರು ಪ್ರೇಮಿಗಳು

**- ಶ್ರೀ ಹರಿ.**

**21-08-2015**

www.sriharikhoday.com

## 1004

ತನ್ನಲ್ಲಿ ತಾನೇ ಕಳೆದುಕೊಂಡು
ದೇವರು ನೀಡಿರುವುದನ್ನು ಲೆಕ್ಕಿಸದೆ
ನನಗೆ ಏನೂ ಇಲ್ಲ ಎಂದು ಮನಸ್ಸು ಹೇಳುತ್ತಾ

ಸಲಿಸಲಿ ಅದೇ ಮಾತನಾಡುತ್ತ
ದೇವರಿಗೆ ಅಪರಾಧಿಯನ್ನಾಗಿಸಿ
ದೇವರಿಗೆ ದೂಷಿಸಿ ಕಣ್ಣೀರನ್ನೇ ಹಾಕುತ್ತಿರುವರು
ಮಾನವನಾಗಲು ಅರ್ಹರಾಗದವರು !

ದೇವರು ನೀಡಿರುವ ಭಾಗ್ಯದಲ್ಲಿ ಸುಖಪಡೆಯದೆ
ದೇವರಲ್ಲಿ ದ್ವೇಶವೇ ಇಲ್ಲವೆಂದು ಅರಿಯದೆ
ದೇವರ ಫಲ ಎಂದು ಜೀವಿಸುವವರು ಕೆಲವೇ ಕೆಲವರು !

ಗಿಡಕ್ಕೆ ತನ್ನ ಫಲದ ಮೇಲೆ ದ್ವೇಷವಿಲ್ಲದಂತೆ
ಜೀವಕೊಟ್ಟ ತಾಯಿಗೆ ತನ್ನ ಕೂಸಿನ ಮೇಲೆ ದ್ವೇಷವಿಲ್ಲದಂತೆ
ಜನುಮ ಕೊಟ್ಟ ದೇವರಿಗೆ ನಮ್ಮನ್ನು ದ್ವೇಷಿಸಲು ಸಮಯವಿಲ್ಲ!

ಮನಸ್ಸಿನ ಸಾವಿರಾರು ಕಣ್ಣಗಳಿಂದ
ನಮ್ಮನ್ನು ನಾವು ನಮ್ಮ ಕಣ್ಣುಗಳಿಂದ ನೋಡಿದರೆ
ಸಾವಿರಾರು ರೂಪ ನಾವು ಕಂಡು
ನಿಜ ಸತ್ಯವನ್ನು ಮನವು ಅರಿಯದಾಗಿದೆ !



ಅಸತ್ಯವನ್ನು ನಂಬಿ ಸತ್ಯವನ್ನು ನಂಬದೆ
ನಾವೇ ನಮ್ಮ ಜೊತೆಗೆ ನಮ್ಮ ನೆರಳನ್ನು ಕೂಡ ಸೇರಿಸಿ
ಶಪಿಸುತ್ತಾ . .. ಶಪಿಸುತ್ತಾ ತಮ್ಮಲ್ಲಿ ತಮ್ಮನ್ನೇ ಕಳೆದುಕೊಳ್ಳುತ್ತಿದ್ದೇವೆ!

ಇದ್ದೂ ಇಲ್ಲದೆ ಜೊತೆಯಿರುವ ಸಂತೋಷದಲ್ಲಿ ಬೆರೆಯದೆ
ಇಲ್ಲ. ಇಲ್ಲಾ . ನನಗೆ ಇದಿಲ್ಲ. ..ಅದು ಇಲ್ಲಾ ಎಂದು ಮನ
ಹೇಳುತ್ತ

ಗಿಡಕೊಟ್ಟ ಫಲ ಕಹಿ ಎಂದು

ಭವಿಷ್ಯದಲ್ಲಿ ಫಲ ಸಿಹಿಯಾಗುವುದೆಂಬುದ ನಂಬದೆ
ತಮ್ಮನ್ನು ತಾವೇ ಕಳೆದುಕೊಂಡು
ತಮ್ಮ ಮೌಲ್ಯವನ್ನು ಕ್ಷಣ ಕ್ಷಣದಲ್ಲಿ ಕಳೆದುಕೊಂಡು
ಸತ್ಯದ ದಾರಿಯನ್ನು ಬಿಟ್ಟು , ಅಸತ್ಯದ ಹಾದಿಯನ್ನು
ತುಳಿಯುತ್ತಿದ್ದೇವೆ !

**- ಶ್ರೀ ಹರಿ.**

**24-08-2015**

www.sriharikhoday.com

## 1005

ಗುರುತು ಬೀಳದ ನೆರಳು
ಆಕಾಶದಲ್ಲಿ ಹಾರಾಡುವ ಹಕ್ಕಿಯದು
ಯಾವ ಗುರುತೂ ಬೀಳದೆ

ಮೋಡದಲ್ಲಿ ಮಿನುಗುವ ಮಿಂಚುಗಳು
ಆಕಾಶದಲ್ಲಿ ಗುರುತೇ ಇಲ್ಲದಂತೆ
ನೆರಳಿನ ಮೂಲ ತಿಳಿಯದೆ

ಯಾವ ಗುರುತೂ ಬೀಳದ ದೇವರ ನೆರಳು
ಗುರುತಿಲ್ಲದ ದೇವರು ಗುರುವಿನಲ್ಲಿ ಬೆರೆತು
ಬರಿದಾದ ಆಕಾಶದಲ್ಲಿ ಗುರುಗಳೆ ದೇವರಾಗಿ

ಯಾವ ಜಾತಿ ಮತ ಕುಲವಿಲ್ಲದೆ
ಯಾವ ಆಧಾರವೂ ಇಲ್ಲದ ಆಕಾಶದಂತೆ
ಬೆಳಗಿನಿಂದ ಬೆಳಕು ಆಗುವಂತೆ

ದೇವರೇ ಗುರುಗಳಾಗುತ್ತ
ಗುರುಗಳೇ ದೇವನಾಗುತ್ತ
ಗುರುಗಳ ನೆರಳೇ ದೇವರ ಆಶೀರ್ವಾದದ ನೆರಳಾಗಿ

ಮನುಜ ಕುಲಕ್ಕೆ ಜ್ಞಾನದ ಅರಿವು
ನೀಡುತ್ತಿರುವವರೇ ಗುರುಗಳ ರೂಪದಲ್ಲಿರುವ
ದೇವರು . . !

– ಶ್ರೀ ಹರಿ.

**24–08–2015**



## 1006

ಸತ್ಯದಲ್ಲಿ ಅಡಗಿರುವ ಕತ್ತಲೆಯಿಂದ
ಸತ್ಯದ ಅರಿವಿನ ಕಡೆಗೆ
ಅಂತರಂಗದಲ್ಲಿ ಅಡಗಿರುವ
ಪ್ರಶಾಂತ ಆಕಾಶದ ನೆಲೆ

ದ್ವಂದ್ವ ಭಾವನೆಯಿಲ್ಲದೆ
ರೂಪರಹಿತನಾಗಿರುವ ದೇವರು
ನಾಮರಹಿತನಾಗಿ
ಎಲ್ಲಾ ಪಂಚಭೂತಗಳ ಆತ್ಮನಾಗಿ

ಪರಿಶುದ್ಧ ಭಾವನೆಯಿಂದ ದೇವರನ್ನು
ಅನುಭವಿಸುವ ಸಾಧ್ಯತೆ ಸತ್ಯ ಪದವಾದ ಅನುಭವ
ವಾದ ವಿವಾದವಿಲ್ಲದ ಮನೋಸ್ಥಿತಿ

ಅನುಭವಿಸುವ ಶಕ್ತಿರೂಪದಲ್ಲಿರುವ ದೇವರ ಅನುಭವ ಪಡೆದು
ಕಣ ಕಣವಾಗಿರುವ ಶಕ್ತಿಯು
ಜೊತೆ ಜೊತೆ ಸೇರಿಕೊಂಡು ವಿಶ್ವವೇ ವಿಶ್ವವಾಗಿ
ಅಣು ಪರಮಾಣುಗಳ ವಿಭಜನೆ ಪಡೆಯುತ

ಖಂಡ ಖಂಡಗಳ ಜೊತೆ ಅಖಂಡವನ್ನು ಅನುಭವಿಸಿ
ಅಖಂಡದಲ್ಲಿ ಅಖಂಡತ್ವವನ್ನು ಅನುಭವಿಸುವ
ದೇವರ ಅನುಭವ ಮಹಾನ್ ಶಕ್ತಿಯ ಅನುಭವ !



www.sriharikhoday.com

ವಿಶ್ವವೇ ದೇವರಾಗಿರುವಾಗ
ಸೃಷ್ಟಿಯಲ್ಲಿ ಎಲ್ಲಾ  ಸ್ವರೂಪಗಳು ದೇವರ ರೂಪವಾಗಿರುವಾಗ
ಮಣ್ಣಿನ ಆಧಾರದಿಂದ  ಪಂಚಭೂತಗಳು ಆಗಿರುವ ಕಾರಣ
ನಶ್ವರವಾದ ಈ ದೇಹ ಪರಾತ್ಮನ ನಿಜ ಸ್ವರೂಪವನ್ನು ಮರೆತು

ಮಾಯೆಯ ರಚನೆಯಾದ ಶರೀರದಲ್ಲಿ
ಮಣ್ಣಿನಿಂದ ಗಿಡ ನಿರ್ಮಾಣವಾಗುವಂತೆ
ಮಣ್ಣಿನಿಂದ ಗಿಡ ಹೂ ಅರಳಿಸುವಂತೆ
ಹೂವಿನಿಂದ ಸ್ವಾದದ ಸುಖ ಹೊರ ಬರುವಂತೆ

ಮಣ್ಣಿನಲ್ಲಿರುವ ಸುಗಂಧ ಮಣ್ಣಲ್ಲೇ ಬೆರೆಯುವಂತೆ
ನಮ್ಮಿಂದ ಶರೀರವು ತಾನೇ ಹೆಸರಿಲ್ಲದಂತೆ ಮಣ್ಣಾಗುವಂತೆ
ರಾಜ .. .ಸನ್ಯಾಸಿ . . ಸ್ತ್ರೀ . ಪುರುಷರೆಲ್ಲ ಮಣ್ಣಿನ ಮಯವಾಗಿ
ಅಣು ಅಣುಗಳಾಗಿ ಮಣ್ಣಲ್ಲಿ ಬೆರೆತುಹೋಗುತ್ತ

ಅಣು ಅಣುಗಳಲ್ಲಿ ಅಡಗಿರುವ ತರಂಗಗಳು
ತನ್ನ ತರಂಗಗಳು ಬೆಳಕಾಗಿ ಪ್ರಾಣದ ಶಕ್ತಿಯಾಗಿ
ಎತ್ತರದ ಚಿರಾಕಾಶದಲ್ಲಿ ಪ್ರಾಣವೆಂಬುದನ್ನು ತುಂಬಿಕೊಂಡು
ಬೆಳಕಿನ ರೂಪ ಪಡೆಯುವುದು

ಮಹಾನ್ ಶಕ್ತಿಯ ಆಧಾರವನ್ನು
ಮೂರ್ತಿಯ ರೂಪದಲ್ಲಿ ನೋಡುತ್ತಿರುವ ಭಾವನೆ
ಅಂತರಂಗದಲ್ಲಿರುವ ದೇವರ ಶಕ್ತಿಯನ್ನು
ಹೊಸ ಬೆಳಕಿನಿಂದ ಅನುಭವಿಸಲು

ಭಾವನೆಯಿಂದಲೇ ದೊರಕುವುವ ದೇವರನ್ನು
ಮಾನವನ ರೂಪದಲ್ಲಿ ನೋಡುತ್ತ
ಕುದುರೆ ಮೇಲೆ ಕುಳಿತಿರುವ ಸವಾರ
ಕುದುರೆ ಎಲ್ಲೆಲ್ಲೂ ಓಡಾಡುವಂತೆ



www.sriharikhoday.com

ಮಾನವನ ಮನ ಹತೋಟಿ ತಪ್ಪಿ
ದೇಹದ ದೇಗುಲದಲ್ಲಿರುವ ದೇವರನ್ನು ಮರೆತು
ನಮ್ಮ ಜೀವಧಾತುವಾದ ಆತ್ಮವನ್ನು ಮರೆತು
ದೇಹದ ಹೊರಗಿನ ದೇವರನ್ನೇ ಹುಡುಕುತಿಹನು ಮಾನವ !

ದೇವರನೆಂದೂ ಅನುಭವಿಸದೆ
ದ್ವೇಷವಿಲ್ಲದ ಪವಿತ್ರ ಭಾವನೆಯಿಂದ
ಬೆಳಕನ್ನು ತುಂಬಿಕೊಂಡಿರುವ ಬೆಳಕಿನ ಭಾವನೆಯಿಂದ
ಬೆಳಕಿನಿಂದ ಜ್ಞಾನ ಮಾರ್ಗವ ಹಿಡಿದು

ನಮ್ಮಲ್ಲಿರುವ ಆತ್ಮನ ಅಂಧಕಾರದ ಸ್ಥಿತಿಯಿಂದ
ಕತ್ತಲಿನಿಂದ ಬೆಳಕಿಗೆ ನೆಗೆದರೆ
ತಪ್ಪು ಭಾವನೆಗಳೆಲ್ಲ ಹೋಗಿ
ಭೇದ ಭಾವನೆಗಳನ್ನು ಮರೆತು

ಜೊತೆ ಜೊತೆ ಬೆರೆತು
ಹೋಲಿಕೆಗಳ ಮಾಡುವ ಭಾವನೆ ಮರೆತು
ದಾಖಲೆ ಸಿಗದ ಮೂಢನಂಬಿಕೆಗಳನ್ನು
ಸತ್ಯದ ನಿಜ ವಿಚಾರಗಳು ಮನದಲ್ಲಿ ಅರಳಿ

ದೇವರು ನಿರ್ಮಾಣ ಮಾಡಿರುವ
ಸೃಷ್ಟಿಗೆ ಬೆಲೆ ನೀಡುತ
ನಮ್ಮಲ್ಲಿರುವ ದೈವತ್ವದಲ್ಲಿ ದೇವರ ಅನುಭವಿಸೋಣ

**– ಶ್ರೀ ಹರಿ.**

**24–08–2015**

## 1007

ನನ್ನಲ್ಲಿ ಇರುವ ಆಳ ಅಳೆಯಲು
ಕಣ್ಮುಚ್ಚಿ ಕತ್ತಲೆಯಲ್ಲಿ ಕುಳಿತೆ
ನನ್ನ ಶರೀರವನ್ನು ಮರೆತು
ನಿಶ್ಶಬ್ದದ ನೆಲೆಯ ಮೇಲೆ ನಡೆದೆ

ನೆನಪುಗಳು ಕಳೆದುಹೋದವು
ಕತ್ತಲೆ ಆವರಿಸಿರುವ ನನಗೆ
ಯಾವ ದೆಸೆಯ ಹುಡುಕಾಟ ಇಲ್ಲದಂತೆ
ನನ್ನಲ್ಲಿರುವ ಎಚ್ಚರ ಆವರಿಸಿತು !

ಎಚ್ಚರದ ಜೊತೆಗೆ ಚಿತ್ತ ಬೆರೆಯಿತು
ನಡೆಯದೇ ಇರುವಿಕೆ ಮುನ್ನಡೆದಂತೆ
ನನ್ನ ಮೇಲೆ ನೀರು ಸುರಿದಂತೆ ಭಾಸವಾಗಿ
ನನ್ನ ಎಚ್ಚರ ಎಂದೂ ಕಾಣದ ಹೊಸ ಬಣ್ಣಗಳನ್ನು ಗುರುತಿಸಿದೆ !

ನೆನಪುಗಳಿಲ್ಲದ ಅರ್ಥ ತಿಳಿಯದ ಎಚ್ಚರ
ಗಾಳಿ ದೂಳನ್ನು ಎತ್ತಿಕೊಂಡು ಹೋಗುವಂತೆ
ದಿಕ್ಕು ದೆಸೆಗಳಿಲ್ಲದ ಪರಿಸರ
ಆಕಾಶವನ್ನು ಮೀರಿಸುವ ಎತ್ತರದಂತೆ



www.sriharikhoday.com

ಅಳೆಯಲಾಗದ ಆಳದ ದಿಗಂತಗಳು
ಬೆಂಕಿ ಮೇಲಿನಿಂದ ಕೆಳಗೆ ಸುರಿಯುವಂತೆ
ಉಸಿರು ನಿಟ್ಟುಸಿರುಗಳು ಅರಿವಿಲ್ಲದಂತೆ
ನನಗೇ ತಿಳಿಯದೆ ಯಾವುದರಲ್ಲೂ ಬೆರೆತುಹೋಗಿರುವ ಅರಿವು

ನನ್ನಿಂದಲೇ ಬೆಳಕು ಹೊರ ಹರಿಯುವಂತೆ
ನಾನೇ ನೆಲವಾಗಿ . . ನಾನೇ ನೀರಾಗಿ
ಉರಿಯುತ್ತಿರುವ ಬೆಂಕಿಯಾಗಿ
ನನ್ನನ್ನೆತ್ತಿಕೊಂಡು ಹೋಗುತ್ತಿರುವ ಗಾಳಿಯೂ ನಾನೇ ಆಗಿ

ದೆಸೆಗಳು ತಿಳಿಯದ ಆಕಾಶ ನಾನಾಗಿ
ಯಾವ ಬೇಡಿಕೆಗಳು ಇಲ್ಲದೆ
ಕಷ್ಟ ಸುಖ ಭಯಗಳು ಅರಿವಾಗದೆ
ಹೆದರಿಕೆ ಹುಟ್ಟು ಸಾವು ಅನುಭವವಿಲ್ಲದೆ

ಹೊಸ ಶಕ್ತಿಯಲ್ಲಿ ಬೆರೆತು
ನಾನು ಅಲ್ಲದ ನನ್ನಲ್ಲಿ ಹೊಸ ಶಕ್ತಿ ತುಂಬಿಕೊಳ್ಳುವಂತಿದೆ
ಗಾಳಿಯನ್ನೆತ್ತಿ . .ಬೆಂಕಿಯ ನುಂಗಿ
ನಾನೇ ಆಕಾಶವಾದಂತೆ

ನಾನೇ ಆಕಾಶವನ್ನು ತುಂಬಿಕೊಳ್ಳುತ್ತ
ಅಲೆಗಳಿಲ್ಲದ ಸಮುದ್ರವಾಗಿ
ಪಂಚಭೂತಗಳಲ್ಲಿ ನಾನು ಅಲ್ಲದ ನಾನು ಬೆರೆತುಹೋಗಿ
ಬೆರೆತಾದ ನಾನು ಅಲ್ಲದ ನಾ . .

ಎಲ್ಲವನ್ನು ತುಂಬಿಕೊಳ್ಳಲಾಗದೆ
ನನ್ನಿಂದಲೇ ಹೊರಬರುತ್ತ
ನನ್ನಲ್ಲಿ ಬೆರೆತ ಆಕಾಶ, ನನ್ನಲ್ಲಿ ಬೆರೆತ ನೀರು
ನನ್ನಲ್ಲಿ ಬೆರೆತ ಬೆಂಕಿ

ಎಲ್ಲವೂ ಜಾರಿ  ಹೊರಬರುತ್ತಿರುವುದ ಕಂಡು
ಹೊರಬಂದು ವಿಶ್ವದ ರೂಪ ತಾಳುತ್ತ
ಹೊಸದಾದ ಹೂಗಳು ತಮ್ಮದಾದ ಚಿತ್ತದಿಂದ
ಹೊಸ ಪ್ರಮಾಣಗಳನ್ನು ಬೆಳೆಸಿಕೊಳ್ಳುತ್ತ
ಹೊಸದಾಗಿ ಸೃಷ್ಟಿಸಿಕೊಂಡು ನನ್ನಿಂದ ದೂರ ಹೋಗುತ್ತ
ನಾ ಬೆರೆತಿದ್ದರಿಂದ ದೂರವಾಗುತ್ತಿದೆ
ನಾ ಜಾರುತ್ತಾ . .ಜಾರುತ
ನಾನೂ ನನ್ನದು ಎಂಬ ನೆಲದ ಜೊತೆ ಬೆರೆತು

ಜೊತೆಗೇ ಇದ್ದ ನೆನಪುಗಳೆಲ್ಲ ಕಳೆದುಹೋಗಿ
ಮತ್ತೆ ಜೊತೆ ಬಂದು ಆ ವಿಶ್ವ ಶೂನ್ಯದೆಡೆಗೆ ಜಾರಿಹೋಗಿ
ನನ್ನ ನೆನಪುಗಳು ಜೊತೆ ಬೆರೆತು
ನಾನು ಧ್ಯಾನದಲ್ಲಿ ಕುಳಿತಿರುವೆ ಎಂಬ ಅರಿವು

ಶೂನ್ಯದಲ್ಲಿ ಮರೆತಿದ್ದ ನನಗೆ ನಿಜಸ್ಥಿತಿ ಅರಿವಾಗಿ
ಮುಚ್ಚಿಕೊಂಡಿರುವ ಕಣ್ಣುಗಳಿಗೆ ಕತ್ತಲು ಆವರಿಸಿರುವುದು ಅರಿವಾಗಿ
ಜನ್ಮ ಕೊಟ್ಟ ಕಾಲದ ಜೊತೆಗೆ ಬೆರೆತು
ಬೆಳಕನ್ನು ನೋಡಿದಾಗ ಹೊಸ ಅನುಭವ !

ಹೊಸ ರೀತಿಯ ಸುಖದಲ್ಲಿ ಬೆರೆತಿತ್ತು
ಅರಿತಿರುವ ಅನುಭವ
ದ್ವಂದ್ವ ಭಾವನೆಗಳ ಮಧ್ಯದಲ್ಲಿರುವ ಸುಖದಲ್ಲಿ ಬೆರೆತು
ದೇವರಲ್ಲಿ ಬೆರೆತಂತೆ ಎಲ್ಲದರಲ್ಲಿ ಇದ್ದೂ ಇಲ್ಲದೆ

ಶಕ್ತಿಯ ತರಂಗಗಳಾಗಿರುವ ದೇವರು ಎಂಬ
ಇರುವಿಕೆಯ ಲಾಭದ ಅನುಭವ
ನನ್ನ ಧ್ಯಾನದ ಅನುಭವ ನನಗೆ ಅನುಭವದ ಲಾಭ
ಸರಿಯಿಲ್ಲದ್ದಲ್ಲಿ ಬೆರೆಯಲು ಇಚ್ಛೆ ಪಡೆದ ಮನೋವೃತ್ತಿ



www.sriharikhoday.com

ಗಾಳಿ ಇರುವವರೆಗೂ ಯಾನ ತೇಲುವಂತೆ
ನನ್ನ ಜೀವಯಾನ ಮುನ್ನಡೆಯುವುದು ಅರಿವಾಗಿ
ನನ್ನ ಆಳದಲ್ಲಿ ಕಳೆದುಹೋಗಿದ್ದ ನನಗೆ
ಏನೋ ನನ್ನ ಜೊತೆಗೆ ಬಂದಂತೆ

ನಾ ಬೇರೆಯವರಿಗೆ ಒಳ್ಳೆಯದು ಮಾಡಬಲ್ಲೆ
ನನ್ನ ಮನಸ್ಸು ನುಡಿದಂತೆ ಬೇರೆಯವರ ಬೇಡಿಕೆಗಳು ಈಡೇರಿಸುತ್ತಿದೆ
ಎಂಬ ಭಾವನೆ ಪಡೆದವರು ಸಿದ್ಧರು.
ಗುರುಗಳು ದೇವರ ರೂಪವಾಗಿ

ವಿಶ್ವದ ಸುಖವನ್ನು ಬಯಸುವ ಗುರುಗಳಾಗಿ
ನನ್ನ ಮನದ ಆಳದ ಪಯಣ
ಹೊಸ ರೀತಿಯ ಸುಖದ ಜೊತೆಗೆ ಲಾಭವಾಗಿರುವ
ಎಲ್ಲಾ ಶಕ್ತಿಯುಳ್ಳ ದೇವರು

ಎಲ್ಲಾ ದೇವರ ಶಕ್ತಿಯ ಹೊಸ ಹೊಸ ತರಂಗಗಳು ಎಂಬ ಅರಿವು
ಆಳ ಇಳಿದವರಿಗೆ ಅರಿವಾಗಿ
ವಿಶ್ವಶಕ್ತಿಯ ಮಾಪಕರಾಗಿರುವರು
ತಮ್ಮನ್ನು ತಾವೇ ಮರೆತಿರುವ ಗುರುಗಳು!

**– ಶ್ರೀ ಹರಿ.**

**25–08–2015**

## 1008

ತೃಪ್ತಿ ಇಲ್ಲದಿರೆ ಪ್ರೀತಿ ಹುಟ್ಟುವುದಿಲ್ಲ
ತುಂಬಿದೆ ಎಂದು ಮನ ಹೇಳಿದರೆ
ನಿಲ್ಲದೇ ಪ್ರೇಮ ಹರಿಯುವುದು !

ಹಳತು ಹೊಸತು ತಿಳಿಯದ ಪ್ರೀತಿ-ಪ್ರೇಮಗಳು
ಕೊನೆಯವರೆಗೂ ಸುಖಪಡುವ ಅಭಿಲಾಷೆಗಳಲ್ಲಿ
ಬದುಕಿಗೆ ನ್ಯಾಯ ದೊರಕಿಸುವಂತೆ

ಎಲ್ಲಾ ಸೌಭಾಗ್ಯಗಳ ಹಿಂದೆ
ಪ್ರೀತಿ-ಪ್ರೇಮಗಳು ಇದ್ದರೆ
ಜೀವನ ಜೀವಮಯವಾಗಿ ಜೀವಿಸುವುದು !

ಹೊಸತನದಿಂದ ಹೊಸದನ್ನು ಕಲಿತು
ಕಾಲದ ಮೇಲೆ ತೇಲಾಡುತ್ತಿರುವ ಹಡಗಿನಂತೆ ಮನಸ್ಸು ಆಗಿ
ನಮ್ಮ ದಿನಚರಿಯಲ್ಲಿ ದಿನವೂ ಹೊಸ ಹೊಸ ಹಡಗುಗಳನ್ನು
ಕಟ್ಟುತ್ತ

ಕಾಲಯಾನ ಮಾಡುತ್ತಿರುವ ಮಾನವನಿಗೆ
ತಾಯಿ ಮತ್ತು ತಾಯಿಯ ಹಕ್ಕಿನ ಪ್ರೀತಿ ಕಂಡರೆ
ನಮ್ಮನ್ನು ನೋಡಲು ಓಡಿ ಬರುತ್ತಿರುವ ತಾಯ್ತನದ ಜೊತೆಗೆ



ಪ್ರೀತಿಯನ್ನೂ ಕೂಡ ತಂದು ನಮ್ಮಲ್ಲಿ ಪ್ರೀತಿಯ ತುಂಬುತ
ಮುದ್ದದಾಟಗಳಲ್ಲಿ ತೊಡಗಿದ ತಾಯಿಯ ತೋಳಪ್ಪಿನಲ್ಲಿ ತೃಪ್ತಿಯ
ಅನುಭವ
ನಿರಂತರವಾಗಿ ನನ್ನ ಜೀವನದ ಹೆಜ್ಜೆ ಹೆಜ್ಜೆಗಳಲ್ಲಿ

ಪ್ರೀತಿ ಪ್ರೇಮಗಳ ಸದ್ದನ್ನು ನೆನಪುಗಳು ತರಿಸುತ್ತ
ನನ್ನ ಹಿಂದೆ ಹಿಂಬಾಲಿಸುತ್ತಿರುವ ನೆರಳು
ನನ್ನ ನೆರಳಲ್ಲ ತಾಯಿಯ ನೆರಳು ಎನ್ನುತ

ಪ್ರೀತಿ-ಪ್ರೇಮಗಳನ್ನು ತುಂಬಿಕೊಂಡಿರುವ
ನನ್ನ ತಾಯಿಯಿಂದ ಪ್ರೀತಿಗಳ ಅರ್ಥ ತಿಳಿದು
ನನ್ನ ಜೀವನ ನೆರಳಾಗಿದೆ ಎಂದರೆ

ತನ್ನ ತಾಯಿತನದ ಜೊತೆ ಅದರ ನೆನಪುಗಳು
ಕಣ್ಣೀರಿನ ಬಾಷ್ಪ ಕಣ್ಣಿಗೆ ಒದ್ದೆ ಮಾಡುತ್ತಿದೆ
ಪ್ರೀತಿ-ಪ್ರೇಮಗಳ ಕಲಿಸಿರುವ ತಾಯಿ ಅವರೆ . . . ನನ್ನ ತಾಯಿ !

**– ಶ್ರೀ ಹರಿ.**

**26-08-2015**

www.sriharikhoday.com

**1009**

ಪರಿಸರ ಬೇರೆಯಾದರೂ
ನಿನ್ನ ಮನದ ನೆಲೆಯ ಬಿಡಬೇಡ
ಸಂದರ್ಭಗಳು ಬದಲಿಸಿದರೂ
ನೀ ಮಾತ್ರ ಬದಲಬೇಡ !

ಅನ್ಯಾಯವನ್ನು ತಡೆಗಟ್ಟಲು
ನೀ ಸತ್ಯದಿಂದ ದೂರಾಗಬೇಡ
ಸಾಧ್ಯ ಅಸಾಧ್ಯಗಳನ್ನು ಮಾತ್ರ ನೀ ಒಪ್ಪಿಕೊಂಡು
ನಿನ್ನಲ್ಲಿರುವ ಮನಸ್ಸಿನ ಸ್ಫೂರ್ತಿ ಬಿಡಬೇಡ !

ಬೆಳಕು ನೆರಳುಗಳ ಮಾಯಾಜಾಲವನ್ನರಿತು
ಬೆಳಕಿನಲ್ಲಿ ಬೆರೆತು
ಬೆಳಕಾದಾಗ ನೀ ಬೆರೆತಂತೆ
ನೆರಳಲ್ಲಿ ಬೆರೆತಾಗ ನೀ ನೆರಳಲ್ಲಿ ಬೆರೆತಂತೆ !

ಹಿತಚಿಂತನೆಯನ್ನು ಮಾಡಲು ಎಂದೂ ಬಿಡಬೇಡ
ಸತ್ಯವಾಗಿರುವ ಗಿಡದ ನೆರಳನ್ನು ನಂಬಿ
ಸಮಾಧಾನದಿಂದ ಗರ್ಭಿತ ಮಾತುಗಳ ನೆನೆದು
ಎಲ್ಲರ ವಾಚನೀಯ ಅರ್ಥಗಳನ್ನು ಗ್ರಹಿಸಿ

www.sriharikhoday.com



ಕರೆಯುತ್ತಿರುವ ಮನೋ ಹೊನಲಿನ ಭಾವನೆಗಳನ್ನರಿತು
ಎಲ್ಲರ ಜೊತೆಗೆ ಕೈ ಕುಲುಕಿ
ಅವರ ಮನಸ್ಸನ್ನು ಗೆದ್ದು
ಅವರ ಜೊತೆ ಅವರ ಕಷ್ಟಗಳಲ್ಲಿ ಭಾಗಿಯಾಗಲು ಹೆದರಬೇಡ !

**– ಶ್ರೀ ಹರಿ.**

**27–08–2015**

## 1010

ದೆವ್ವದಂತಿರುವ ಬುದ್ಧಿವಂತಿಕೆ
ಜೀವನದ ಹಾಸುಹೊಕ್ಕುಗಳಲ್ಲಿ ಆಗುತ್ತಿದೆ ಹೂಡಿಕೆ !

ನಾನು ನನ್ನದೆಂಬ ಕೇಂದ್ರಕ್ಕೆ
ನಮಗೆ ತಿಳಿಯದೇ ಸೇರಿಕೊಳ್ಳುತ್ತಿರುವುದು
ಬುದ್ಧಿವಂತಿಕೆಯ ದೆವ್ವ!

ನಮ್ಮ ಆಳ್ವಿಕೆಗೆ ಬುದ್ಧಿವಂತಿಕೆಯೇ ದೆವ್ವ
ಸಾಧಿಸಿದ ಮೇಲೆ ತನ್ನಲ್ಲೇ ತಾನು ಹಾಕಿಕೊಳ್ಳುವುದು ಕೇಕೆ !
ಹೇಳಿದ್ದೆಲ್ಲ ಅವಶ್ಯಕವಾಗಿ ಬರಬೇಕಾಗಿದೆ ಜಾರಿಗೆ !

ದೆವ್ವದ ಆಳ್ವಿಕೆಯಲ್ಲಿ . .ಬುದ್ಧಿವಂತಿಕೆಯ ಆಳ್ವಿಕೆಯಲ್ಲಿ
ಕಳೆದುಹೋಗಿದೆ ಎಚ್ಚರಿಕೆ
ಜೊತೆ ಇರುವವರೆಲ್ಲ ಅನುಭವಿಸುತ್ತಿರುವರು ಅಗಲಿಕೆ !

ಹೆದರುತ್ತಿರುವರು ಮಾಡಲು ಟೀಕೆ
ದೆವ್ವದ ಬುದ್ಧಿವಂತಿಕೆ ಮೀರಿಹೋಗುತ್ತಿರುವುದು ಎಲ್ಲಾ ಗಣಿಕೆ
ಸಹಜ ಜೀವನ ಮುನ್ನಡೆಸಲು ನಡೆಯುತ್ತಿದೆ ದೆವ್ವದ ದಬ್ಬಾಳಿಕೆ !



www.sriharikhoday.com

ದೇವರು ಕೊಟ್ಟ ಬುದ್ಧಿವಂತಿಕೆಯಲ್ಲಿ
ನಾನು ನನ್ನದೆಂಬ ಮನದಲ್ಲಿ ಇರುವಿಕೆ
ನಮ್ಮ ಜೀವನದಲ್ಲಿ ಮಾಡಿರುವುದು ಯಾರೂ ತಿಳಿಯದ
ಜಾದುಗಾರಿಕೆ !

ಎಚ್ಚರ ಎದ್ದು ಹೇಳಬೇಕಾಗಿದೆ
ಹೇ ಬುದ್ಧಿವಂತಿಕೆ . .ಜೋಕೆ . .
ಕಣ್ಣೆದುರಿಗೆ ಕಾಣದೆ ನಡೆಯುತ್ತಿದೆ ಯಾಮಾರಿಕೆ

ಮನಸ್ಸಿನಿಂದಲೇ ಕಿತ್ತು ಹೊರಹಾಕಬೇಕಾಗಿದೆ
ಬುದ್ಧಿವಂತಿಕೆಯ ಶ್ರೀಮಂತಿಕೆ
ಅಲಸಿಕೆ ಮರೆತು ಚಂದ್ರಿಕೆಯಲ್ಲಿ ಗೂಡು ಕಟ್ಟುವಂತೆ

ಪವಿತ್ರ ಮನೋಭಾವನೆಯಿಂದ ಬುದ್ಧಿ ಕಲಿಸುತ್ತಿದೆ ಅರಿಕೆ
ಸರಿ ರೀತಿಯಲ್ಲಿ ಜೀವನ ನಡೆಸಬೇಕಾದರೆ ತಡೆಯಬೇಕಾಗಿದೆ
ಬೇಡದ ಬುದ್ಧಿವಂತಿಕೆಯ ದಬ್ಬಾಳಿಕೆ !

**– ಶ್ರೀ ಹರಿ.**

**28–08–2015**

## 1011

ಬರೀ ಬೋಧನೆ ಎಂದೂ ಎಚ್ಚರಗೊಳಿಸುವುದಿಲ್ಲ
ಬೋಧನೆಯನ್ನು ಮನದಲ್ಲಿ ಬೆರೆಸಿಕೊಂಡು
ಅದರ ಅರ್ಥ ಜೀವನದ ವಾಡಿಕೆಯಾದರೆ
ಬೋಧನೆಯ ತತ್ವ ಜೀವನದಲ್ಲಿ ಬೆರೆತುಕೊಳ್ಳುವುದು !

ಎಲ್ಲವೂ ಹೆಚ್ಚಿನದಕ್ಕಾಗಿ ಹೆಜ್ಜೆ ಹಾಕುತ್ತಿರುವಾಗ
ನಮ್ಮಲ್ಲೇ ಹಂತ ಹಂತದಲ್ಲಿ ಆಗುತ್ತಿರುವ ಬೆಳವಣಿಗೆ
ನಮ್ಮನ್ನು ನಾವೇ ಗುರುತಿಸಿಕೊಂಡು ಸಂತಸಪಟ್ಟು

ಬೇರೆಯವರ ಬೆಳವಣಿಗೆಗೆ ಹೋಲಿಸದೆ
ನಮ್ಮಲ್ಲೇ ನಡೆಯುತ್ತಿರುವ ಬದಲಾವಣೆ ಗೋಚರವಾದರೆ
ಬೋಧನೆಯ ಫಲ ನಿಜಕ್ಕೂ ನಮಗೆ ದೊರಕುವುದು !

ಜಗತ್ತಿನಲ್ಲಿ ಸತ್ಯಕ್ಕೆ ಅನುಗುಣವಾಗಿ
ವಾಡಿಕೆಗಳನ್ನು ಬಳಸುತ್ತಿದ್ದರೆ
ಗುಣವನ್ನು ದಿನದ ಆಚರಣೆಯಲ್ಲಿ ಬಳಕೆ ಮಾಡುತ್ತಿದ್ದರೆ

ಜಗತ್ತು ನಿನಗೆ ಗುಣವಂತನೆನ್ನುವರು
ಹಿತನುಡಿಯನ್ನು ಸಮಾಜದಲ್ಲಿ ಬೆಳೆಸುತ್ತ
ನಮ್ಮ ಬಾಳು ನೀತಿಯನ್ನು ಅನುಸರಿಸಿಕೊಂಡರೆ
ಜನ ಒಪ್ಪಿಕೊಂಡು ನಮ್ಮನ್ನು ಹಿಂಬಾಲಿಸುವರು !

www.sriharikhoday.com



ಬೇರೆಯವರಿಗೆ ಟೀಕೆ ಮಾಡದೆ
ನಮ್ಮ ತಪ್ಪುಗಳ ನಾವೇ ನಮ್ಮ ಮನದಲ್ಲಿ ಟೀಕೆ ಮಾಡಿದ್ದಲ್ಲಿ
ಸಮಾಜ ನಮ್ಮನ್ನು ಮಾತ್ರ ಹೊಗಳದೆ
ನಮ್ಮ ಹಿರಿಯರನ್ನೂ ಕೂಡ ನೆನಸಿಕೊಂಡು ಹೊಗಳುವರು

ಈ ರೀತಿಯ ಜೀವನದ ಮುಂದುವರಿಕೆ
ನಾವೇ ಬೋಧನೆ ನೀಡುವವರಾಗಿ
ಎಲ್ಲರ ಮನದಲ್ಲಿ ಸರಿಯಿಲ್ಲದ್ದನ್ನು ಎಚ್ಚರಿಸುವೆವು

– ಶ್ರೀ ಹರಿ.

29–08–2015

## 1012

ಜೊತೆ ಬೆರೆಸಿದ ಪ್ರೀತಿ ಪ್ರೇಮದ ಸಿದ್ಧಿ
ನಾನು ಅವಳನ್ನು ನೋಡಿದೆ ಅವಳು ನನ್ನನ್ನು ನೋಡಿ
ಮನಸ್ಸು ಮೋಹಕ ಮುತ್ತ ನೀಡುತ್ತ
ನಮ್ಮಿಬ್ಬರ ಬಾಳು ಬೆಳೆಯಲಾರಂಭಿಸಿತು

ಅರಳಿ ನಿಂತಿರುವ ಕೆಂಪು ಕೆನ್ನೆಗಳು
ಮೌನವನ್ನು ಭೇದಿಸಲು ಕಿರುನಗೆ
ನಮ್ಮ ಪ್ರೇಮವೇ ಭಕ್ತಿಯ ರೂಪ ಪಡೆದು
ನಮ್ಮ ಪ್ರೀತಿಯೇ . .

ಪ್ರಣಯಗಳ ಕಷ್ಟಗಳಿಗೆ ಮುಕ್ತ ತರಿಸಿ
ಸಹಿಸಲಾರದ ಏಕಾಂತದ ಬಯಕೆ
ಕಣ್ಣ ಕಂಬನಿಗಳಿಂದ ಊಹಕ ಚುಂಬನ
ಮನದಲ್ಲೇ ನಡೆಯುತ್ತಿದೆ !

ಕಾಣದ ಸ್ವರ್ಗ ಜೊತೆ ಬಿಂದು ಜೀವಿಸುವಂತೆ
ನಮ್ಮ ಸ್ವಪ್ನ ಸುಖಗಳು ಇಳಿದು ಕೆಳಗೆ ಬಂದಂತೆ
ಜಡವಾಗಿದ್ದ ನನ್ನ ಸೆರಗು ಗಾಳಿಯಲ್ಲಿ ತೇಲಿ ಹೋದಂತೆ
ನಮ್ಮ ಜೊತೆ ಮುತ್ತಿಗೆ ಕಾಮನಬಿಲ್ಲು ಕಾದು ನಿಂತಿದೆ !

www.sriharikhoday.com



ನಮ್ಮ ಭ್ರಾಂತಿ ಆಗದ ನಮ್ಮಿಬ್ಬರ ಪ್ರೇಮ
ವಿಧಿಯ ಕೃತಿ ಇಂದು ಹಿರಿಯರ ಆಶೀರ್ವಾದದಿಂದ ಜೊತೆ ಸೇರಿಸಿ
ಜಗದೀಶ್ವರನ ವಿಶ್ವ ಸಂಸಾರದಲ್ಲಿ
ನಮ್ಮಿಬ್ಬರ ಜೊತೆ ಬೆರೆಸಿಕೊಂಡಿದೆ !

**– ಶ್ರೀ ಹರಿ.**

**31–08–2015**

## 1013

ಎಲ್ಲರ ಜೊತೆ ಒಂದು ಗುಣ ಕೂಡಿಬರುವಂತೆ
ತಿಳಿಯದೇ ಇರುವ ಆಕಸ್ಮಿಕ ಘಟನೆ ಅಲ್ಲ. . .
ಎಲ್ಲಾ ಗುಣಗಳು ಹುಟ್ಟಿನಿಂದಲೇ ಎಲ್ಲರಲ್ಲಿಯೂ ಬರುವುದು !

ಅದರ ಜೊತೆಗೆ ಜೀವನ ಪುಸ್ತಕದಂತೆ
ಅನೇಕ ಹಾಳೆಗಳನ್ನು ಹೊಂದಿರುವುದು !

ಜೊತೆ ಗುಣಗಳು ಬೇರೆ ಬೇರೆ ಹಾಳೆಯಲ್ಲಿರುವಂತೆ
ನಮ್ಮ ಜನುಮದಿಂದ ಜೊತೆ ಹುಟ್ಟಿದೆ
ಎಲ್ಲಾ ಗುಣಗಳ ಜೀವನಾವಧಿಯ ಪುಸ್ತಕ !

ಜೀವನದ ದಿನ ಚರಿತ್ರೆಯ ಹಾಳೆಗಳು ಅತ್ಯಾವಶ್ಯಕತೆ ಇರುವಾಗ
ತಾವೇ ಅದನ್ನು ತೆಗೆದು ನೋಡಿ ಅರ್ಥ ಮಾಡಿಕೊಂಡ ಮೇಲೆ
ಅರ್ಥದಿಂದ ಸರಿಮಾರ್ಗ ನಡೆಯುವಂತೆ

ಕಾಣುವ ಗಿಡ ತನ್ನ ಜೀವನವನ್ನು ಅರಿತಂತೆ,
ಮಾನವನಿಗೆ ಜೊತೆ ಹುಟ್ಟಿದ ಪುಸ್ತಕ
ಅನೇಕ ಘಟನೆಗಳನ್ನೂ ಕೂಡ ಜೊತೆಗೆ ತಂದು

ಅದನ್ನು ಸಾಧಿಸುತ
ವಿಶ್ವದಲ್ಲಿ ಯಾವುದೂ ಆಕಸ್ಮಿಕ ಅಲ್ಲ
ಎಲ್ಲವೂ ಕೂಡಿ ಜೊತೆ ಬಂದ ಗುಣಗಳ ಅನುಭವ !



ಹುಟ್ಟುತ್ತಿರುವ ಗುಣಗಳು ನೆನಪುಗಳಾಗುತ್ತ
ನೆನಪುಗಳ ಜೊತೆ ತಾನು ತಾನು ಎಂದು ಬೆರೆಯುತ್ತ
ನಡೆಯುತ್ತಾ . ನಡೆಯುತ್ತಾ. .ಧೈರ್ಯ ಕೂಡ ಜೊತೆ ಬಂದಂತೆ

ನಮ್ಮ ಕ್ರಿಯೆ ಪ್ರತಿಕ್ರಿಯೆಗಳು ಇದ್ದದ್ದು ಹೊರ ಹೋಗದೆ
ಇಲ್ಲದ್ದು ಯಾವುದೂ ಸೇರಿಕೊಳ್ಳದೇ ಇರುವುದು
ವಿಶ್ವಕ್ಕೆ ವಿಸ್ಮಯಗೊಳಿಸುತ್ತಿದೆ !

ಜೊತೆ ಗುಣಗಳು ಅಟ್ಟಿದರೂ ಹೊರ ಹೋಗದೆ
ಬಾ . . ಬಾ . .ಎಂದು ಕರೆದರೂ ಜೊತೆ ಬರದೆ
ತಮ್ಮಿಂದ ಅಸಾಧ್ಯಗಳನ್ನು ಸಾಧಿಸುತ ವಿಶ್ವಕ್ಕೆ ಬೆರಗುಗೊಳಿಸುತ್ತ

ಯಾವುದೂ ಆಕಸ್ಮಿಕವಲ್ಲ
ಎಲ್ಲರಿಗೂ ತಮ್ಮಲ್ಲಿರುವ ಗುಣಗಳ ಆಧಾರದ ಮೇಲೆ ಬೆಳೆದು
ಗುಣಗಳೇ ಒಂದು ಪದಾರ್ಥದ ಮೌಲ್ಯವಾಗಿ

ಮಾರಾಟ ಮಾಡಲು ಯತ್ನಿಸಿದರೂ ಮಾರಾಟವಾಗದೆ
ದೇವರ ಸೃಷ್ಟಿಯಲ್ಲಿ ಅಪೂರ್ವವಾದ ಒಂದು ಸ್ವತ್ತಾಗಿ
ನೆರಳಿಲ್ಲದ ಗುಣಗಳು ತನ್ನ ಪಾಡಿಗೆ ತಾನೇ ಜೀವಿಸುತ

ತಮ್ಮ ನಿಲುವನ್ನು ಕದಲಿಸದೆ ಮಹತ್ ಅರ್ಥಗರ್ಭಿತವಾದ
ಎಲ್ಲಾ ಇರುವಿಕೆಯ ಜೊತೆಗೆ ಬೇಕಾದಾಗ ಬೆರೆತು ನಂತರ
ತಾನಾಗಿಯೇ ತಾನು ಒಂಟಿಯಾಗಿಯೇ ಉಳಿಯುತ್ತಿದೆ ಗುಣಗಳು !

**-ಶ್ರೀ ಹರಿ.**

**01-09-2015**

www.sriharikhoday.com

## 1014

ಯಶಸ್ಸಿನ ಬೇಡಿಕೆ ಮನಸ್ಸಿನ ಬಯಕೆಯಾದರೆ
ತಮ್ಮ ಕೆಲಸ ಕಾರ್ಯಗಳಲ್ಲಿ ವೈಫಲ್ಯವಾಗಿದ್ದರೂ
ಸತ್ಯವಾದ ಮಾತುಗಳ ವರ್ತನೆ ಇತರರು ಅರಿಯದಂತೆ
ಫಲ ಕೊಡುವ ಋತುಗಳಂತೆ ಮಾತುಗಳನ್ನಾಡುವರು !

ತನ್ನ ಸುಖದ ವ್ಯಕ್ತಿತ್ವ ಪ್ರದರ್ಶನದಲ್ಲೇ ಕಳೆಯುತ
ತಾನು ಮಾಡುವ ಕೆಲಸ ಮತ್ತು ಮಾತುಗಳು
ತನಗೇ ತಿಳಿಯದೆ ತಮ್ಮ ಬೇಡಿಕೆಗಳನ್ನು
ಬೇರೆಯವರ ಬೇಡಿಕೆ ಎನ್ನುತ
ತಮ್ಮನ್ನು ತಾವೇ ನಾಶ ಪಡಿಸಿಕೊಳ್ಳುತ್ತಿರುವರು.

ನಿಜ ವ್ಯಕ್ತಿತ್ವವನ್ನು ಬಚ್ಚಿಡುತ್ತ
ನಕಲಿ ವ್ಯಕ್ತಿತ್ವವನ್ನು ಪ್ರದರ್ಶಿಸುತ್ತಿರುವರು !

ಯಶಸ್ಸಿನ ಬೀಜ ಸತ್ಯವಾಗಿ ಪ್ರೀತಿಯಿಂದ ಎಲ್ಲರ ಮನದಲ್ಲಿ
ಬಿತ್ತಿದರೆ
ಜೋಳದ ಬೆಳೆಯು ಜೋಳದ ಕಾಳು ಬೆಳೆಯುವಂತೆ
ರಾಗಿಯ ಬಿತ್ತನೆ ರಾಗಿ ಬೆಳೆಯುವಂತೆ
ಯಶಸ್ಸಿನ ಮನೋ ಬಿತ್ತನೆ ಯಶಸ್ಸನ್ನು ಬೆಳೆಸುತ್ತದೆ !

ಯಶಸ್ಸನ್ನು ಯಾರೂ ಮನಸ್ಸಿನಿಂದ ಬಿತ್ತದೆ
ತನ್ನಲ್ಲಿ ತಾನೇ ಬಿತ್ತನೆ ಮಾಡಿ
ವ್ಯಕ್ತಿತ್ವದ ನಟನೆಯಿಂದ ಶ್ರೇಯಸ್ಸನ್ನು ಅನುಭವಿಸದೆ
ತಮ್ಮ ಬದುಕನ್ನು ವ್ಯಕ್ತಿತ್ವದ ನಟನೆಗಳಿಂದ ಬರಡು ಮಾಡದೆ

ಮನದಲ್ಲಿ ಸತ್ಯವನ್ನು ಅರಿತು
ಯಶಸ್ಸಿನ ಬೀಜವನ್ನು
ಬೇರೆಯವರ ಮನದಲ್ಲಿ ಬಿತ್ತನೆ ಮಾಡಿದರೆ
ಬಯಸಿದ ಬೆಳೆಗಿಂತ ಹೆಚ್ಚಿನ ಲಾಭ ಪಡೆಯುವರು !

**– ಶ್ರೀ ಹರಿ.**

**03–09–2015**

www.sriharikhoday.com

## 1015.

ಪ್ರೀತಿಯ ಸೌಂದರ್ಯದಲಿ ಸೌಂದರ್ಯ
ಜೊತೆ ಸೇರಿ ನಮ್ಮ ಮನಸ್ಸೇ ಸುಂದರ
ನಮ್ಮ ಮನವೇ ಸುಂದರ . . . .!

ನಮ್ಮ ಕಣ್ಣಿಗೆ ಕಾಣುವ ಆಳದಲ್ಲಿ ಅಡಗಿರುವ ಸೌಂದರ್ಯ
ನಮ್ಮ ಮನದ ಭಾವನೆಯ ಚಿತ್ರಗಳು ಸುಂದರ !

ಅತಿ ಕೋಮಲ ತುಂಬಿಕೊಂಡಿರುವ ಮಾತನಾಡಲಾಗದ
ಸೌಂದರ್ಯ
ಸೌಂದರ್ಯದಲ್ಲಿ ನಿಲ್ಲದೆ ಎರಡು ಆಟಗಳು ನಡೆಯುತ್ತಲೇ ಇದೆ
ಒಂದು ಕೊಡುವುದು ಮತ್ತೊಂದು ಸ್ವೀಕರಿಸುವುದು !

ಸ್ವೀಕರಿಸಿದ್ದನ್ನು ಮತ್ತೆ ಪ್ರತಿಬಿಂಬಿಸುವುದು
ಸೌಂದರ್ಯವೆಂದರೆ ಸೌಂದರ್ಯ ಮಾತ್ರವೇ
ಸುಂದರ ಅತಿ ಸುಂದರ . . . .!

ನಮ್ಮ ಹಿಂದಿನ ನೆರಳಿನ ಆಟ
ನಮ್ಮ ಜೊತೆ ಆಟವಾಡಲು ಹಿಂಬಾಲಿಸಿ ಬರುವ ಸೌಂದರ್ಯ !
ನಮ್ಮ ಎಲ್ಲಾ ಶಾರೀರಿಕ ಭಾವನೆಯ ಭಾವನೆಗಳಿಂದ
ಬರುತ್ತಿರುವ ಹರುಷ ಸುಂದರ !

ಆಕಾಶ ಭೂಮಿಗೆ ದಿಗಂತದಲ್ಲಿ ಬೆರೆತು
ಮುತ್ತ ನೀಡುತ್ತಿರುವುದ ನೋಡಿದರೆ ಸುಂದರ



ಮನಸ್ಸಿನಿಂದ ನೋಟ ನೋಡಿದ್ದಲ್ಲಿ ಮನಸ್ಸು
ಸೌಂದರ್ಯವನ್ನು ಅನುಭವಿಸಿದ ಅನುಭವದ ಸೌಂದರ್ಯ

ನೋಡುವ ಕನ್ನಡಿಗಳು ಬೇಕಿಲ್ಲದೆ
ಅನೇಕ ರೂಪ ಇರುವುದರ ಕಡೆ ನೋಟವನ್ನು ಹರಿಸುತ
ಸೌಂದರ್ಯವನ್ನು ಕಾಣದೇ ಇದ್ದರೆ
ಕಾಣುವವರ ಕಣ್ಣಿಗೆ ಕುರುಡು ಬಂದಿದೆ ಎಂದರ್ಥ !

ಭೋಗದ ಮುಂದೆ ಸೌಂದರ್ಯ
ಮಾತು ಮಾತಿನಲ್ಲಿ ಸೌಂದರ್ಯ
ಮಾತಿನ ಸದ್ದಿನಲ್ಲಿ ಸೌಂದರ್ಯ
ಇಂಪಾದ ಶಬ್ದದಲ್ಲಿ ಸೌಂದರ್ಯ

ಬದುಕನ್ನು ಒಂದಾಗಿಸುತ್ತಿರುವುದು ಕಣ್ಣಿಗೆ ಕಾಣುತ್ತಿರುವ
ಸುಂದರ ಸೌಂದರ್ಯ ಮಾತನಾಡದ ಚಿತ್ರಗಳಲ್ಲಿ ಆನಂದ
ಹರಿಸುವ ಸೌಂದರ್ಯ !
ಬೇರೆಯವರ ಮನವನ್ನು ಎಳೆದುಕೊಂಡು
ನಮ್ಮದಾಗಿಸಿ ಜೊತೆ ಕೊಂಡೊಯ್ಯುವುದು ಸೌಂದರ್ಯ !

ಮಾನವನ ನೆನಪಿನಲ್ಲಿಡುವುದು ಸೌಂದರ್ಯ ಬೆಳೆಸಿದರೆ
ಜೀವನ ಸುಖದಲ್ಲಿ ಹೊಸ ರೀತಿಯ ಸೌಂದರ್ಯ ಅನುಭವಿಸಿ
ಜೀವನ ಸುಖಗಳನ್ನು ಬಣ್ಣ ಬಣ್ಣಗಳಲ್ಲಿ ನೋಡುತ

ಪತಿ ಪತ್ನಿಯರ ಜೀವನದ ಸೌಂದರ್ಯ ಕಾಲವನ್ನೇ ಮರೆಸಿದೆ
ಕಾಲವನ್ನು ಗೆದ್ದಿರುವ ವಿಶ್ವದ ಹಿನ್ನೆಲೆಯಲ್ಲಿ
ಸೌಂದರ್ಯ ಮಿನುಗುತ್ತಲೇ ಇದೆ !

**– ಶ್ರೀ ಹರಿ.**

**05–09–2015**



www.sriharikhoday.com

## 1016

ಎಲ್ಲಾ ನಾಯಕರು ತಮ್ಮ ಸಾಮರ್ಥ್ಯದ ಜೊತೆಗೆ
ಅವರು ಆರಿಸುವ ಯೋಗ್ಯ ಪುರುಷನೇ ನಾಯಕ
ತೋಳ್ಬಲದ ನಾಯಕರು ಎಂದಿಗೂ
ನಾಯಕತ್ವವನ್ನು ಪಡೆಯಲಾಗುವುದಿಲ್ಲ!

ನಾಯಕನಿಗೆ ಎಂದು ಏನು ಮಾಡಬೇಕು
ಇಂದಿನ ಕೆಲಸ ನಾಳೆಯ ಕೆಲಸವಾಗದೆ
ತನಗೆ ತೃಪ್ತಿ ಬರುವಂತೆ ಕೆಲಸ ಮುಗಿಸುವವನೇ
ಎಲ್ಲರ ಪ್ರೀತಿಗೆ ಪಾತ್ರನಾಗುವ ನಾಯಕ !

ಸರಿಯಿಲ್ಲದ್ದನ್ನು ದೂರವಿರಿಸಿ
ಸರಿಯಾದದ್ದನ್ನು ಹತ್ತಿರ ತರಿಸಿ
ಕಾಲದ ಜೊತೆಗೆ ಆಯಾಸವಿಲ್ಲದೆ
ಕೆಲಸ ಮುಗಿಸುವ ವಿಳಂಬಗಳನ್ನು ಬದಿಗೊತ್ತಿ

ಕೆಲಸವನ್ನು ಮುಗಿಸಿ ಎಲ್ಲರ ಜೊತೆಗೆ
ಸಂತಸಪಡುವವನೇ ಜನರ ನಾಯಕ
ಸಮಾಧಾನ ಎಚ್ಚರದಿಂದ ಸಾಧನೆಗೆ
ಬೆವರಿಗೆ ಹೆದರದೆ ತೃಪ್ತಿಕರ ಭಾಷೆ



ನಾಯಕನ ಮನವು ಎಲ್ಲರ ಜೊತೆಗಿದ್ದು
ಎಲ್ಲವೂ ವ್ಯವಸ್ಥಿತವಾಗಿ ಒಬ್ಬರಿಗೊಬ್ಬರು
ಮನೋಸಂಬಂಧವನ್ನು ಬೆಳೆಸಿಕೊಂಡು

ಕೆಲಸವಿರಲಿ. .ಇಲ್ಲದಿರಲಿ ಎಲ್ಲರ ಮನದ ಜೊತೆಗೆ
ಬಾಂಧವ್ಯದಿಂದ ಎಂದಿಗೂ ಜೊತೆಯಿರುವವನೇ ನಾಯಕ
ತೋಳ್ಬಲದ ನಾಯಕರು ಎಂದೂ ನಾಯಕರಾಗದೆ
ಜಗಳಗಂಟಿ ಪ್ರವೀಣರಾಗುತ್ತಾರೆ !

**– ಶ್ರೀ ಹರಿ.**

**07–09–2015**

www.sriharikhoday.com

## 1017

ಮಣ್ಣಿನ ಮಕರಿಯನ್ನು ತಲೆ ಮೇಲೆ ಹೊತ್ತಿರುವ ಭಾರ
ಇಂದಿನ ಹೊಟ್ಟೆಯ ಹಸಿವನ್ನು ಮರೆಸಿದೆ !

ಹಸಿರೆಲೆಯ ಮೇಲೆ ತಣ್ಣಗೆ ಮಲಗಿರುವ ಕೂಸಿಗೆ
ಹಸಿದಿರುವ ಕೂಸಿನ ಹಸಿವನ್ನು
ಪಕ್ಷಿಗಳ ಚಿಲಿಪಿಲಿ ಸದ್ದು ಮರೆಸಿದೆ !

ತೊದಲು ತಿಳಿಯದ ಕೂಸಿನ ತುಟಿಗಳು
ಭಾರ ಹೊತ್ತಿರುವ ತಾಯಿಯ ನಗುವಿನ ನೋಟ
ಹರುಷಗೊಂಡ ತಾಯಿ ಮಗುವಿನ ಬೆವರನ್ನು ಸೆರೆಗಿಂದ
ಒರೆಸುತ್ತಿದೆ.

www.sriharikhoday.com

ಎಲೆಗಳ ಮರೆಯಿಂದ ಕದ್ದು ನೋಡುತ್ತಿರುವ ನೇಸರ
ಹೆತ್ತ ತಾಯಿಯ ಕದ್ದು ನೋಡುವ ನೋಟವಾಗಿದೆ

ನೀ ಭಾರ ಹೊತ್ತು ಕಾಸು ಸಂಪಾದಿಸು
ನಿನ್ನ ಕಂದನ ನಾ ನೋಡಿಕೊಳ್ಳುವೆನೆಂದು
ಬೀಸುವ ಬಿಸಿಗಾಳಿ ವಿಶ್ವಾಸದಿಂದ ಹೇಳುತ್ತಿದೆ



ಕದ್ದು ನೋಡುವ ಸೂರ್ಯನು ಕಣ್ಣೀರ ಹರಿಸುತ್ತ
ತಂದೆ ತಾಯಿಗಳ ಕಷ್ಟಗಳನ್ನು ನೋಡಲಾರದೆ
ತಾನು ಶೀಘ್ರದಲ್ಲೇ ಅಸ್ತಮನಾಗಿ

ದುಡಿದ ಹಣ ಬೇಗನೆ ಕೊಡಿಸುವ
ಪ್ರಯತ್ನ ಸೂರ್ಯನು ಮಾಡುತಿಹನು !

**– ಶ್ರೀ ಹರಿ.**

**08–09–2015**

## 1018

ವಯಸ್ಸಿಗೆ ತಕ್ಕಂತೆ . . . ಕಾಲಕ್ಕೆ ತಕ್ಕಂತೆ
ಮನೋತೋಟದ ಬಯಕೆಗಳು
ಎಲ್ಲದರಲ್ಲಿ ತನ್ನ ಸುಖ ಕಾಣುವ ಬಯಕೆ !

ತನಗೆ ಸುಖ ಬೇಕಾದರೆ ಬೇರೆಯದಕ್ಕೆ ನೀಡಿ
ನಮ್ಮ ಸುಖ ಬೇರೆಯವರ ಸುಖವೆಂದರೆ
ಸುಖಪಡುವವರಿಂದ ನಮಗೆ ಅತಿ ಹೆಚ್ಚಿನ ಸುಖದ ಅನುಭವ !

ತನ್ನ ವಯಸ್ಸಿಗೆ ಬೇಕಾಗಿರುವ ಸುಖ
ವಯಸ್ಸಿಗೆ ಸುಖ ನೀಡುವ ಹಕ್ಕಾಗಿರುವ ಕಾರಣ
ಜೀವನದ ಸುಖದ ಬೇಡಿಕೆ ತನ್ನಲ್ಲಿ ಸುಖ ಕಾಣದೆ

ಕನ್ನಡಿಯಲ್ಲಿ ಸೌಂದರ್ಯವನ್ನು ನೋಡುವಂತೆ
ಮನಸ್ಸಿಗೆ ತಕ್ಕಂತೆ ಹರುಷದ ಬದಲಾವಣೆ
ಮನಸ್ಸಿಗೆ ತಕ್ಕಂತೆ ಹಕ್ಕು ಚಲಾಯಿಸಿದರೆ

ಮನದ ಹೂತೋಟದಲ್ಲಿ ಸುಖ ನೀಡುವ
ಅನೇಕ ಬೆಳೆಗಳು ಬೆಳೆಯುತ್ತಿದೆ !

ಎಲ್ಲದರಲ್ಲಿ ಬೆರೆತು ಬಾಳುತ್ತ
ಸುಖ ಬಯಸಿದಾಗಲೆಲ್ಲ ತಮ್ಮ ಸುಖದ ಬೇಡಿಕೆ
ಬೇರೆಯವರಿಗೆ ನೀಡುತ್ತ ಅವರ ಸುಖದಲ್ಲಿ ನಾವು ಬೆರೆತು



ಸುಖದ ಬಿಸಿಯನ್ನು ಹೆಚ್ಚಿಸಿಕೊಂಡು
ನೊರೆ ನೊರೆಯಾಗಿ ಉಕ್ಕುತ್ತ
ಬಿಸಿ ಹಾಲು ಉಕ್ಕಿ ಹೊರ ಚೆಲ್ಲುವಂತೆ

ಪ್ರೀತಿಯ ಹಕ್ಕು ಮನದಲ್ಲಿ ಸುಮ್ಮನಿರದೆ
ಆಗಾಗ ಉಕ್ಕಿ ಹೊರ ಚೆಲ್ಲುತ್ತಲೇ ಇದೆ !

ಪ್ರತಿ ದಿನ ಪ್ರೀತಿಸುವುದೇ ಪ್ರಕೃತಿಯ ಧರ್ಮ ಪಾಲಿಸುವಂತೆ
ಅದು ಪ್ರಕೃತಿಯ ನಿಯಮವಾಗಿರುವ ಕಾರಣ
ವಿಶ್ವದ ಚರಾಚರಗಳಲ್ಲಿ ತುಂಬಿಕೊಂಡಿರುವ

ಸುಂದರ ಸುಖದ ಅನುಭವ ನೋಡಿದರೆ
ಮಾತನಾಡಲಾಗದ ಹೂಗಳು ತಮ್ಮ ಪ್ರೀತಿಯ
ಸುಖದ ಬೇಡಿಕೆಗೆ ಬಣ್ಣವಾಗಿ ಸುಗಂಧವಾಗಿ ಮಾರ್ಪಾಟಾಗಿ

ಬೇರೆಯವರ ಸುಖದಲ್ಲಿ ತನ್ನ ಸುಖವನ್ನು
ಹೂಗಳು ಅನುಭವಿಸುವಂತೆ
ಪ್ರಕೃತಿಯ ಸುಖದಲ್ಲಿ ಅಡಗಿದೆ ನೀಡುವುದು . . ಬಯಸುವುದು !

ವಿಶ್ವದ ಎಲ್ಲದರಲ್ಲಿ ತಾಂಡವ ನರ್ತನ ಮಾಡುತ್ತಿರುವ
ಸುಖದ ಅನುಭವಗಳಿಗೆ ನೀಡುವವರು ಬೇಕಾಗಿದ್ದರೆ . .
ಬಯಸುವವರೂ ಬೇಕಾಗಿದ್ದಾರೆ. . .!

**– ಶ್ರೀ ಹರಿ.**

**08-09-2015**

www.sriharikhoday.com

## 1019

ಪ್ರೀತಿಸುವುದು ನನ್ನ ಉದ್ಯೋಗವಾಗಿ
ಕಷ್ಟಸುಖಗಳಲ್ಲಿ ಭಾಗಿಯಾಗಿ
ನನ್ನನ್ನು ಪ್ರೀತಿಸುವವರು ತಂಗಿಯಾಗಿ

ಎಂದೂ ನಾನು ಅನುಭವಿಸದ ಏಕಾಂಗಿಯಾಗಿ
ಸಹಾಯ ಮಾಡಿದೆನೆಂದು ಹೇಳದೆ
ಕಾಲ ನನ್ನ ಜೊತೆಗೆ ನನ್ನ ಸಹಪಾಠಿಯಾಗಿ

ಮಾತು ಮಾತಿನಲ್ಲಿ ಅನುರಾಗಿಯಾಗಿ
ಪ್ರೀತಿಸುವುದೇ ಉದ್ಯೋಗವಾಗಿರುವಾಗ
ಎಂದೂ ನಾನು ನಿರುದ್ಯೋಗಿಯಾಗದೆ

ಎಲ್ಲವೂ ಖಾಸಗಿ ದೃಷ್ಟಿಯಿಂದ ನೋಡುತ
ಭಾವ ಭಂಗಿಯಲ್ಲಿ ಪ್ರೀತಿಸುವ ತ್ಯಾಗಿಯಾಗಿ
ನನ್ನ ಅರ್ಧಾಂಗಿಯ ಜೊತೆಗೆ ಭೋಗಿಯಾಗಿ

ಸ್ನೇಹತನಕ್ಕೆ ಪ್ರೀತಿಯೇ ಠೇವಣಿಯಾಗಿ
ಈ ಧರಣಿಯಲ್ಲಿ ಕರುಣೆ ತುಂಬಿಕೊಂಡಿರುವ ಭೂಮಿಗೆ
ಪ್ರೀತಿ-ಪ್ರೀತಿಸುವುದು ಒಂದರ ಹಿಂದೆ ಒಂದು ಹಿಂಬಾಲಿಸುವ
ಸರಣಿಯಾಗಿ

ಜೀವನದಲ್ಲಿ ಎಂದೂ ಅಧಿಕಪ್ರಸಂಗಿಯಾಗದೆ
ಸರಿ ಅರ್ಥದ ಶ್ರೇಣಿಗಳ ಜೊತೆಯಾಗಿ
ಪ್ರೀತಿ-ಪ್ರೇಮಗಳು ವ್ಯಕ್ತಿತ್ವಗಳಿಲ್ಲದೆ

ವಿಶ್ವದ ರಹಸ್ಯ ಲಿಂಗಗಳನ್ನರಿಯದ ವಿಯೋಗಿ ಆಗಿ
ಪ್ರೀತಿಸುವುದು ಜನ್ಮತಾಃ ಬಂದಿರುವ
ಜೀವನದ ಕಾರ್ಯಕ್ಷೇತ್ರದ ಅಯಸ್ಕಾಂತವಾಗಿ

ಯಾವುದಕ್ಕೂ ಅಂಟಿಕೊಳ್ಳದೆ ಇರುವಿಕೆಯನ್ನು ಪ್ರತಿಬಿಂಬಿಸುವ
ಯಕ್ಷಿಣಿಯಾಗಿ
ಜೀವನದ ಹಂತಹಂತದಲ್ಲಿ ಹಾಸು ಹೊಕ್ಕಾಗಿ
ಪ್ರೀತಿ-ಪ್ರೇಮಗಳು ಬೇಡಿಕೆಗಳ ದಾಸರಾಗಿರುವವು.

**- ಶ್ರೀ ಹರಿ.**

**09-09-2015**

www.sriharikhoday.com

## 1020

ಗುಬ್ಬಚ್ಚಿಯ ಗುಂಪಿನಂತೆ ಇರುವ ನಮ್ಮ ಮನಸ್ಸುಗಳು
ಒಂದೆಡೆ ಕೂತು ಅತ್ತ ಇತ್ತ ನೋಡದೆ
ಮುಂದಿನ ಕ್ಷಣಗಳು ನಾವು ಏನು ಮಾಡುತ್ತೇವೆಂದು
ಮುಂದಿನ ಕ್ಷಣಗಳನ್ನು ನಾವು ಏನೂ ಮಾಡದೇ ಆಗಿ

ಗುಂಪು ಹಾರಿದರೆ ನಾವೂ ಜೊತೆ ಗುಂಪಿನಲ್ಲಿ ಸೇರಿ
ಹಾರುವಂತೆ
ದೆಸೆಗಳು ತಿಳಿಯದೆ ನಮ್ಮ ಮನಸ್ಸುಗಳ ಗುಂಪುಗಳು ಹಾರುತ್ತಲೇ
ಇವೆ !

ತಮ್ಮ ಗೂಡಿನಲ್ಲಿರುವ ಕೂಸಿನ ಬದುಕಿಗೆ
ಕೂಸಿನ ಯೋಗಕ್ಷೇಮ ಮಾತ್ರ ನೋಡುತ ನೆನಯುತ
ತಮ್ಮ ಯೋಗಕ್ಷೇಮವನ್ನೇ ಮರೆಯುವ ಗುಬ್ಬಚ್ಚಿಗಳು
ಯಾವ ಗೂಡೂ ಕಟ್ಟದ ಮನಸ್ಸುಗಳು

ಯಾವ ದೆಸೆಗಳ ಸಾಧನೆ ಅರಿಯದ ಮನಸ್ಸುಗಳು
ಗುಂಪು ಗುಂಪಾಗಿ ಇಲ್ಲಿಂದ ಅಲ್ಲಿಗೆ ಹಾರುತ್ತಲೇ ಇವೆ !

ಯಾವ ಪ್ರಗತಿಯ ಸಾಧನೆಗೆ ಯೋಚಿಸದೆ
ಬರೀ ನಾನೂ ನನ್ನದೂ ಕೂಡ ಮರೆತು

www.sriharikhoday.com



ಕೆಲಸ ಇಲ್ಲದ ಸಮಯದಲ್ಲಿ
ಗುಬ್ಬಚ್ಚಿ ರೆಕ್ಕೆಯ ಪುಕ್ಕವನ್ನು ಕೆರೆದುಕೊಳ್ಳುವಂತೆ

ನಾನು ಅಂಥವನು . .ನಾನು ಇಂಥವನು ಎಂಬ ಜಂಭದಿಂದ
ಮನೋಚೇಷ್ಟೆಯಲ್ಲಿ ಕಳೆದುಕೊಳ್ಳುತ್ತಿರುವನು ಮಾನವ !

ಮುಂದಿನ ಕ್ಷಣಗಳನ್ನು ಮಾಡಲಾಗದ ಕಾರಣ
ಕಾದು ಮುಂಬರುವ ಕ್ಷಣಗಳನ್ನು ನಮ್ಮ ಮನ
ಏನು ಮಾಡಬೇಕು . .? . ಹೇಗೆ ಮಾಡಬೇಕು ? ಏಕೆ
ಮಾಡಬೇಕೆಂಬ
ಮನೋ ರೀತಿಯನ್ನು ಬಳಸಿಕೊಂಡರೆ

ಕೊಂಬೆಯಿಂದ ಕೊಂಬೆಗೆ ಗುಬ್ಬಚ್ಚಿ ಹಾರುವಂತೆ ಹಾರದೆ
ಎದುರು ಕಾಣುವ ಅವಕಾಶದ ಜೊತೆಗೆ ಬೆರೆತು

ತನ್ನ ಯೋಗಕ್ಷೇಮ, ನಮ್ಮನ್ನು ನಂಬಿರುವ ಕೂಸಿನ ಯೋಗಕ್ಷೇಮ
ಜೊತೆಗಿರುವ ಪರಿಸರದ ಕ್ಷೇಮಗಳಲ್ಲಿ
ಸುಲಭ ರೀತಿಯಲ್ಲಿ ಭಾಗಿಯಾಗಲು ಸಾಧ್ಯ !
ಗುಬ್ಬಚ್ಚಿ ಗುಂಪಿನಂತಿರುವ ನಮ್ಮ ಮನಸ್ಸಿಗೆ ಇದು ಅರಿವಾದರೆ
ಮಾನವ ಸಮಾಜದಲ್ಲಿ ಹೆಚ್ಚಿನ ಮಟ್ಟವನ್ನು ಏರಿ ಸುಖ
ಪಡುವನು !

**– ಶ್ರೀ ಹರಿ.**

**10–09–2015**

# 1021

ಜೀವನದಲ್ಲಿ ಒಂದು ದೊಡ್ಡ ಪ್ರಶ್ನೆ . . ?
ಎಲ್ಲದರಲ್ಲಿ ಹೆದರಿಕೆ ತರಿಸುವ ಪ್ರಶ್ನೆ . . ? . . ಜೀವನದಲ್ಲಿ ಸಾವಿನ ಹೆದರಿಕೆ

ಆ ಹೆದರಿಕೆಗೆ ಒಂದೇ ಒಂದು ಉತ್ತರ
ಆ ಉತ್ತರ ಪವಿತ್ರ ಜೀವನದ ಬದುಕು !

ನಷ್ಟವನ್ನು ಅರಿಯದ ಪವಿತ್ರ ಜೀವನ
ನಮ್ಮಲ್ಲಿಯೇ ಹೇರಳವಾಗಿರುವ ಸಂಪತ್ತು
ಯಾರಿಂದಲೂ ಸಾಲವಿಲ್ಲದೆ ಬೇರೆಯವರಿಗೆ ನೀಡುವ ಸಂಪತ್ತು
ನಮ್ಮ ಬಾಯಿಂದ ಒಳ್ಳೆ ಮಾತುಗಳು !

ಯಾರ ಮನಸ್ಸಿಗೂ ಕಷ್ಟ ನೀಡದೆ
ನಮ್ಮ ನಡೆ-ನುಡಿಗಳ ದೈವಭಾವನೆ
ಈ ಮತದವರು ಆ ಮತದವರು ಎಂಬ ದ್ವಂದ್ವ ಭಾವವಿಲ್ಲದೆ
ಹೊಸ ಭಾವನೆಯಿಂದ ಒಳ್ಳೆಯ ಮಾತುಗಳನ್ನು ನುಡಿಯೋಣ !

ಮಾತು ಮಾತುಗಳಲ್ಲಿ ನಂಟಿನ ಬಳಕೆ
ನಾವೆಲ್ಲ ಕಾಲದ ಅಣ್ಣ-ತಮ್ಮಂದಿರು
ಸತ್ತರೂ ಮತ್ತೆ ಹುಟ್ಟುವೆವು ಎಂಬ ಧೈರ್ಯ ತರಿಸುವ ನಂಬಿಕೆ
ಸಾವಿನ ಹೆದರಿಕೆಯನ್ನು ನಾವು ನುಂಗಿಬಿಡೋಣ !



ಹಳೆಯದನ್ನು ಮರೆತು ನೆನಪಿಗೋಸ್ಕರ ಹೊಸ ನೆನಪುಗಳನ್ನು ನೆನೆಸಿ
ಸದ್ದಿಲ್ಲದೆ ಸೂರ್ಯ-ಚಂದ್ರರು ಬಂದು ಕಳೆದುಹೋದಂತೆ
ಸಾವಿನ ಹೆದರಿಕೆ ನಮ್ಮ ಮನದಲ್ಲಿ ತೆಗೆದು
ಲೌಕಿಕ ಸಾವಿನ ಬೆದರಿಕೆಯನ್ನು ಲೆಕ್ಕಿಸದೆ ದೀರ್ಘಕಾಲ ಬಾಳೋಣ !

ನಮ್ಮಲ್ಲಿರುವ ಹೇರಳವಾದ ಸಂಪತ್ತು
ಒಳ್ಳೆಯ ಮಾತುಗಳನ್ನು ನುಡಿಯುತ್ತ
ಎಲ್ಲರ ಮನದಲ್ಲಿ ಜೊತೆ ಬಾಳುತ್ತಾ
ಒಳ್ಳೆಯ ಭಾವನೆಯನ್ನು ಎಲ್ಲರ ಮನಸ್ಸಿನಲ್ಲಿ ಚಿಗುರಿಸೋಣ!

**- ಶ್ರೀ ಹರಿ.**

**11-09-2015**

www.sriharikhoday.com

## 1022

ಕನ್ನಡಿಯಲ್ಲಿ ಕಾಣಲಾಗದ ಗುಣಗಳು
ಪ್ರೀತಿಯನ್ನು ಕನ್ನಡಿಯಲ್ಲಿ ಕಾಣಲಾಗದ ಪ್ರೇಮಿಗಳು
ಜೀವನದಲ್ಲಿ ಎಲ್ಲರೂ ಹುಡುಕುತ್ತಿರುವರು ತಮಗೆ ಬೇಕಾದ
ಹರಳುಗಳು
ತಿಳುವಳಿಕೆ ಇಲ್ಲದ ಕೆಲಸ ಮಾಡಿ ಸುಟ್ಟುಕೊಳ್ಳುತ್ತಿರುವರು
ಬೆರಳುಗಳು

ಇದು ಮಾಡಬೇಕು ಅದು ಮಾಡಬೇಕು ಅದನ್ನು ಸಾಧಿಸಬೇಕು
ಅದು ನನ್ನ ಸಾಧನೆಯಾಗಬೇಕು ಅವರಿಗಿಂತ ಹೆಚ್ಚಿರಬೇಕು
ಬೇಕು ಬೇಕೆಂಬ ಆಸೆಗಳು ತರಿಸುತ್ತಿವೆ ಬಾಳಿಗೆ
ಎಂದೂ ಕಾಣದ ಗೋಳುಗಳು !

ಸುಮ್ಮನಿರದ ಮನಸ್ಸಿನಲ್ಲಿ ತಿಳುವಳಿಕೆಯ ಹೇಳದೆ ಕೇಳದೆ
ದಂಗೆ ಎದ್ದಿರುವ ಮನಸ್ಸಿನ ಭಾವನೆಗಳು ಅಪರಾಧಿಯಾದರೂ
ಭ್ರಷ್ಟಗೊಳ್ಳುತ್ತ ಸದಾ ಸುಳ್ಳು ಹೇಳುತ್ತ ಹೇಳುತ್ತಾ ಸತ್ಯ ಎಂದು
ಸಾಧಿಸುವ ಯತ್ನಗಳು
ಕರುಳಿನ ಮಾತು ಕೇಳದೆ ಗೋಜಾಗುತ್ತಿರುವುದು ಬಾಳು

ನಮ್ಮ ಮೇಲೆ ಒಬ್ಬ ದೇವರಿದ್ದಾರೆ ಎಂದರೆ
ನಮಗೆ ನೆಮ್ಮದಿ ನೀಡು ಎಂದು ದೇವರ ಬೇಡಿದರೆ
ನಮ್ಮ ಕಷ್ಟಗಳಿಗೆ ದೇವರು ಆಗುವನು ನೆರಳು
ಜೀವನ ಒಂದು ತೃಪ್ತಿಕರ ಪಯಣ ಎಂಬ ಅರಿವು ಮನದಲ್ಲಿ
ಮೂಡಿದರೆ

ದೇವರನ್ನು ಕನ್ನಡಿಯಲ್ಲಿ ಕಾಣದಿದ್ದರೂ
ಮನದಲ್ಲಿ ದೇವರನ್ನು ನೋಡಿ ಅನುಭವ ಪಡೆಯಬಹುದು
ಮಾನವನಲ್ಲಿ ಸರಿ ಪ್ರಜ್ಞೆ ಅರಳಿದರೆ ಅದೇ ದೇವರ ಅನುಭವ
ನಂಬಿಕೆ ಹೆಚ್ಚಾದಾಗೆಲ್ಲ ನಮಗೆ, ಅನುಭವದಿಂದ ಹೇಳಬಹುದು
ದೇವರು ಒಬ್ಬ ದಯಾಳು

**– ಶ್ರೀ ಹರಿ.**

**12–09–2015**

www.sriharikhoday.com

## 1023

ಬಂದಿದ್ದೆಲ್ಲಾ ಬರಲಿ
ಹೋಗುವುದೆಲ್ಲಾ ಹೊರಗೆ ಹೋಗಲಿ

ಸಿದ್ದಾರೂಢರ ಜೊತೆ ಮನ ಬೆರೆಯಲಿ
ನಮ್ಮ ಕಷ್ಟಗಳು ಕಾಣದೆ ಹೊರಗೆ ಹೋಗಲಿ !
ಬಂದಿದ್ದೆಲ್ಲಾ ಬರಲಿ ಹೋಗುವುದೆಲ್ಲಾ ಹೊರ ಹೋಗಲಿ !

ಓಂ ಸಿದ್ಧಾರೂಡ ಎಂದು ಮನವು ನುಡಿಯಲಿ
ಓಂ ನಮಃ ಶಿವಾಯ ಎಂದು ಭಜಿಸಲಿ
ಭಜಿಸಿ. .ಭಜಿಸಿ ಸಿದ್ಧಾರೂಢರ ಜೊತೆ ಮನ ಬೆರೆಯಲಿ !

ಸಂತಸ ಸುಖ ಮನೆಯ ಬಾಗಿಲ ಬಳಿ ಬರಲಿ
ಬೇಡದ ಅನಿಷ್ಟಗಳು ಮನೆಯಿಂದ ಹೊರ ಹೋಗಲಿ
ದಾನ ಧರ್ಮಗಳನ್ನು ಮನಸ್ಸು ಕಲಿಯಲಿ

ಸಿದ್ಧಾರೂಢರ ಜೊತೆ ಬಾಂಧವ್ಯ ಹೆಚ್ಚಲಿ
ಭಜಿಸಿ ಭಜಿಸಿ ಮನಕ್ಕೆ ಧೈರ್ಯ ಸಿದ್ಧರು ನೀಡಲಿ
ಹೆದರಿಕೆ ಬೆದರಿಕೆಯನ್ನು ಮನದಿಂದ ಹೊರ ಹಾಕಲಿ

ಬರುವುದೆಲ್ಲ ಬರಲಿ
ಬೇಡದ್ದೆಲ್ಲ ಮನದಿಂದ ಹೊರ ಹೋಗಲಿ !

– ಶ್ರೀ ಹರಿ.

**14-09-2015**



www.sriharikhoday.com

## 1024

ನಿನ್ನ ನೆನಸುವುದೇ ಒಂದು ಭಾಗ್ಯ
ಹೆಸರಿಲ್ಲದ ದೇವನೇ ಜಗದಲ್ಲಿ
ಸಿದ್ಧಾರೂಢನ ಹೆಸರು ಪಡೆದೆಯಾ . . !

ಹೆಸರಿಲ್ಲದ ದೇವರು ಭೂಮಿಯಲ್ಲಿ ಹುಟ್ಟಿ
ಅವಧೂತನಾಗಿ ಬಂದಿಹೆಯಾ . . !

ಜನ್ಮ ಕೊಟ್ಟ ತಾಯಿಯ ಹೆಸರು ಭೂದೇವಿ ಎಂದೆಯಾ
ಹುಟ್ಟಿನಿಂದಲೂ ಯಾವ ಆಸೆಗಳೂ ಇಲ್ಲದೆ
ಮಾನವ ರೂಪಿಯಾದೆಯಾ . .

ನಿಮ್ಮ ಬಲದಿಂದ ಮನೆಗೆ ಭಾಗ್ಯ ಕಳುಹಿಸಿದೆಯಾ
ನಿನ್ನ ಕಲ್ಲಿನ ಶರೀರದಿಂದ ನಮ್ಮ ಮನದಲ್ಲಿ
ಆಧ್ಯಾತ್ಮಿಕ ಭಾವನೆ ಪ್ರಕಟ ಮಾಡಿಸಿದೆಯಾ !

ಭಾಗ್ಯ ಬೇಡಿದವರಿಗೆಲ್ಲ ಭಾಗ್ಯ
ಬಾಗಿಲೆದುರು ನಿಲ್ಲಿಸಿದೆಯಾ
ನಿನ್ನನು ನೆನೆಸಿ ಜೀವಿಸುವುದೇ ನಮ್ಮ ಭಾಗ್ಯ ಎನ್ನಲಾ !

ನಿನ್ನನ್ನು ಜಪಿಸಿ ಭಜಿಸುವ ಭಾಗ್ಯವು
ಅತಿ ದೊಡ್ಡ ಭಾಗ್ಯ ಎನ್ನಲಾ . .!

**– ಶ್ರೀ ಹರಿ.**

**14-09-2015**

## 1025

ಆಧ್ಯಾತ್ಮಿಕ ಭಾವನೆಯ ದಾರಿ ತೋರಿಸುವವನು ಸಿದ್ಧಾರೂಢರು
ಶಾಶ್ವತ ಸುಖಕ್ಕೆ ಜೀವನದ ಮಾರ್ಗ ಸಿದ್ಧಾರೂಢರು
ಹೆಸರಿಲ್ಲದ ಪವಿತ್ರಾ ಸುಖಾನುಭವಗಳನ್ನು ನೀಡುವವನೇ
ಸಿದ್ಧಾರೂಢರು

ನಮ್ಮನ್ನೆಲ್ಲ ಪ್ರೀತಿಸುವ ತಾಯಿ ಸಿದ್ಧಾರೂಢ
ನಮ್ಮೆಲ್ಲರ ಕಷ್ಟಗಳಿಗೆ ನೆರವಾಗಿರುವ ತಂದೆ ಸಿದ್ಧಾರೂಢರು
ಎಲ್ಲರ ಜೊತೆ ಪ್ರೀತಿ-ವಿಶ್ವಾಸಗಳನ್ನು ಬೆಳೆಸುವವರು ಸಿದ್ಧಾರೂಢ !

ಹಗಲು-ರಾತ್ರಿ ನಿರಂತರವಾಗಿ ಜೊತೆ ಜೊತೆಯಾಗಿರುವವನು
ಸಿದ್ಧಾರೂಢ
ಬೇಡಿದ ವರಗಳನ್ನು ಪ್ರೀತಿಯಿಂದ ನೀಡುವವರು ಸಿದ್ಧಾರೂಢ
ವಿಶ್ವದ ಅಪಾರವಾದ ರಹಸ್ಯ ಹೇಳುವವರು ಸಿದ್ಧಾರೂಢ !

ಎಲ್ಲರಲ್ಲಿ ಏಕತಾ ಭಾವನೆಯನ್ನು ಮೂಡಿಸುವವನು ಸಿದ್ಧಾರೂಢ
ನಮ್ಮೆಲ್ಲರ ಭೂತ-ಭವಿಷ್ಯ ವರ್ತಮಾನಗಳೇ ಸಿದ್ಧಾರೂಢರು
ದೋಷರಹಿತ ಜ್ಞಾನ ನೀಡುವವನು ಸಿದ್ಧಾರೂಢ

ದೇವರ ಅನುಭವದ ಲಾಭ
ದೇವರ ಜೊತೆಗೆ ಸ್ನೇಹ ಬೆಳೆಸುವವನು ಸಿದ್ಧಾರೂಢ !

**– ಶ್ರೀ ಹರಿ.**

**15-09-2015**



www.sriharikhoday.com

## 1026

ಬ್ರಹ್ಮಜ್ಞಾನದಿಂದ ಬ್ರಹ್ಮಾಂಡ
ಸತ್ಯದ ಸೂತ್ರದಿಂದ ಬ್ರಹ್ಮಾಂಡ
ಸತ್ಯದ ಜ್ಞಾನದ ಅರ್ಥವೇ ಬ್ರಹ್ಮಾಂಡ !

ಬ್ರಹ್ಮ ಜ್ಞಾನದಲ್ಲಿ ಕ್ಷಣ ಕ್ಷಣಗಳಲ್ಲಿ ಕಾಲ ಆವರಿಸಿ
ಮನದಲ್ಲಿ ಸದಾ ಜ್ಞಾನದ ಅನುಷ್ಠಾನ ನಡೆಯುತ್ತಲೇ ಇದ್ದರೆ
ಬ್ರಹ್ಮ ಜ್ಞಾನ ಜೊತೆಯಿರುವಂತೆ !

ಆತ್ಮನ ಸ್ವರೂಪವೇ ಬ್ರಹ್ಮ
ಜ್ಞಾನದ ಜಿಜ್ಞಾಸೆಯನ್ನು ಮಾಡುವುದು ನಿಲ್ಲಿಸಿ
ಗುರುಚರಣಗಳ ತೋರಿಸುವ ಜ್ಞಾನವೇ ಬ್ರಹ್ಮಜ್ಞಾನ!

ಅಜ್ಞಾನವನ್ನು ನಮ್ಮಿಂದ ತೊಲಗಿಸಿ
ಸತ್ಯವನ್ನು ಅರಿತುಕೊಳ್ಳಲು
ಇಚ್ಛೆಗಳ ಫಲವಾದ ವಿಷಯಗಳನ್ನು ಮರೆತು

ನಿಜ ಜ್ಞಾನದ ಕ್ರಿಯೆಗಳನು ಅನುಭವಿಸಿ
ಗುರುಗಳಿಂದ ಪಡೆಯುವ ಫಲವಾದ ಅರಿವು
ಆತ್ಮ ಸ್ವರೂಪವಾದ ಅರಿವೇ ಜ್ಞಾನ!

ಮಾತನಾಡದೆ ಕಲ್ಲಿನಲ್ಲೇ ಕುಳಿತು
ನಿಶ್ಶಬ್ದದಲ್ಲಿ ನೀಡುತ್ತಿರುವನು
ವರಗಳ ಜೊತೆ

ಹೊಸ ಮಾನವನಾಗಿಯೇ ಬಾಳಲು
ಬ್ರಹ್ಮ ಜ್ಞಾನದ ಅನುಭವಗಳೇ
ನಮ್ಮೆಲ್ಲರ ಅಜ್ಜ ಸಿದ್ಧಾರೂಢರು

**– ಶ್ರೀ ಹರಿ.**

**15–09–2015**



**1027**

ನೂರು ಕಾಲ ಬಾಳಲು ಬಂದವರು
ಕಾಲದ ಗೆಳೆಯರು
ಸೃಷ್ಟಿಯನ್ನು ನೋಡಿ ಸುಖ ಪಡೆಯುವವರು
ವಿಶ್ವದ ಗೆಳೆಯರು !

ಎಚ್ಚರಿಕೆಯಿಂದ ಮಾತನಾಡುವವರು
ಸಮಾಜದ ಗೆಳೆಯರು
ಒಲವಿನಿಂದ ಎಲ್ಲರ ಜೊತೆ ಬೆರೆಯುವವರು
ಭೂತಾಯಿಯ ಗೆಳೆಯರು !

ಎಚ್ಚರದಿಂದ ಫಲ ಬಿತ್ತನೆ ಮಾಡುವವರು
ಭೂಮಿತಾಯಿಯನ್ನು ರಕ್ಷಿಸುವ ಗೆಳೆಯರು
ನಾಳೆ ಮುಂಜಾನೆ ಬೆಳಕು ಬರುವುದೆಂದು ಹೇಳುವರು
ಭವಿಷ್ಯವನ್ನು ರಕ್ಷಿಸುವ ಗೆಳೆಯರು

ಜೀವನದಲ್ಲಿ ಎಚ್ಚರದಿಂದ ಜೀವಿಸುವವರು
ದೇವರ ನಂಬಿ ಜೀವಿಸುವ ಗೆಳೆಯರು
ತನ್ನ ಸಂಸಾರದಲ್ಲಿ ಸುಖದಿಂದ ಜೊತೆ ಜೀವಿಸುವವರು
ಧರೆಗೆ ಕಾಪಾಡುವ ಗೆಳೆಯರು

www.sriharikhoday.com

ಸಂಬಂಧವಿಲ್ಲದ್ದನ್ನು ಎಂದೂ ಮಾತನಾಡದೆ
ಬೇರೆ ಬೇರೆ ಜಾತಿಯಾದರೂ ಕೂಡ
ದರ್ಶನ ಭಾಗ್ಯ ನೀಡುತ್ತಿರುವವರು
ಹುಬ್ಬಳ್ಳಿಯ ನಮ್ಮ ಸದ್ಗುರುಗಳಾದ ಸಿದ್ಧಾರೂಢರು !

– ಶ್ರೀ ಹರಿ.

15–09–2015



## 1028

ಶಿವನ ವಾಣಿ,
ಸಿದ್ಧರು ನುಡಿಯುವ ವಾಣಿ
ಜೀವನದಲ್ಲಿ ವೈಭವ ನೀಡುವ
ಅರ್ಥದ ಚಿನ್ನದ ಗಣಿ

ದೇವರ ಅತ್ತ ಒಯ್ಯುವ ಓಣಿ
ಜೀವನದ ನೆಮ್ಮದಿಯ ಭಾವಣಿ
ಸಿದ್ಧರು ನುಡಿಯುವ ಅಂತರವಾಣಿ
ಯಾರ ವಾದಕ್ಕೆ ಸಿಗದ ಭಾವನೆಗಳ ಸರಣಿ
ದೋಷಣೆಯ ಮಾತುಗಳು ಆಡುವ
ಅರ್ಥಗಳಿಲ್ಲದ ಜನವಾಣಿ, ಬೇಕಾಗಿದೆ ಸಿದ್ಧರ ವಾಣಿ

ಧರಣಿ ಶಾಂತಿಗೆ ಜೊತೆ ಕಟ್ಟಬೇಕಾಗಿದೆ
ಶಿವನ ವಾಣಿಯ ಸರಪಣಿ
ನಂಬಿ ಜೀವಿಸಬೇಕು ಯಕ್ಷಿಣಿಯ ಮಾತುಗಳಾದ
ಸಿದ್ಧರ ವಾಣಿ
ದೇವಾನುದೇವ ಶಿವನ ವಾಣಿ

– ಶ್ರೀ ಹರಿ.

16–09–2015

www.sriharikhoday.com

## 1029

ಗುರುಗಳ ಜೊತೆ ಜೀವನ ಶೃಂಗಾರ
ತಿಳಿಯದೆ ಇರುವುದನ್ನು ತಿಳಿಸಿದ ಸೌಂದರ್ಯ
ಮನದ ಅಸ್ತಿತ್ವಕ್ಕೆ, ನಮಗೆ ತಿಳಿಯದೆ
ನಿಶ್ಶಬ್ದದಲ್ಲಿ ನಮ್ಮ ಮನಸ್ಸಿಗೆ ಸೇರುವುದು

ಗುರುಶಿಷ್ಯರ ಪರಸ್ಪರ ಸಂಬಂಧ
ಕೊನೆಯವರೆಗೂ ದೀರ್ಘಕಾಲವಿರುವ ಸಂಬಂಧ
ಕಿವಿಗೆ ಕೇಳಿಸದ ಮನದ ಅಂತರವಾಣಿ . . .ಸಿದ್ಧರ ವಾಣಿ

ಋಷಿಗಳಂತೆ ತಪಸ್ವಿಗಳಾದ ಸಿದ್ಧರು
ಜೀವನದಲ್ಲಿ ಬೇರ್ಪಟ್ಟಿದ್ದರೂ ಪ್ರಾಪಂಚಿಕ
ವಿಷಯಗಳಿಂದ ದೂರವಿದ್ದರೂ ವಿಶ್ವದ
ಅರ್ಥವನ್ನು ತಿಳಿದುಕೊಂಡಿರುವ ಸಿದ್ಧರು

ಹಿತವಾಗಿ ಜೀವಿಸಲು ಬೋಧಿಸುವ ಪದಗಳು
ಸತ್ಯದ ಆಧಾರದ ಪದಗಳು ಸಿದ್ಧರು ನೆನೆಸಿಕೊಳ್ಳುವುದು ,
ಮನದಲ್ಲಿ ಬಂದು ನೆನೆಸುತ್ತಾ, ಯಶಸ್ವಿಯಾಗಿ, ಯಶ್ವಸ್ವಿಯಾಗು
ಎಂದು ಮನದಲ್ಲಿ ಆರ್ಶೀವದಿಸುತ್ತಾ, ಎಂದಿಗೂ ದೂರ ಹೋಗದೆ

ನಮ್ಮ ಜೊತೆ ಎಂದೆಂದಿಗೂ ಜೀವಿಸುತ್ತಿರುವರು . . ಸಿದ್ಧರು
ನಮ್ಮ ಅಪ್ಪನವರಾದ ಸಿದ್ಧಾರೂಡರು.

– ಶ್ರೀ ಹರಿ.

16-09-2015

## 1030

ಧನ್ಯನಾದೆ ನಾ ಧನ್ಯನಾದೆ ಗುರುದೇವ
ಪ್ರದಕ್ಷಿಣೆ ಮಾಡುತ್ತಾ . ಮಾಡುತ
ಧನ್ಯನಾದೆ ನಾ ಸಿದ್ಧಾರೂಢ
ಧನ್ಯನಾದೆ ನಾ ಗುರುವೇ ಸಿದ್ಧಾರೂಢ !

ನನ್ನ ಗುರುರಾಯ ನೀನು . .
ನನ್ನ ಗುರುರಾಯ ನೀನು
ಎಲ್ಲಾ ತೀರ್ಥದ ಪುಣ್ಯ ದೊರಕಿದೆ ಎನಗೆ
ಧನ್ಯನಾದೆ ನಾ ಗುರುದೇವ
ನಿನ್ನ ಪ್ರದಕ್ಷಿಣೆಯಿಂದ ಧನ್ಯನಾದೆ !

ತಾಳ ಮೇಳಗಳಿಂದ ಭಜಿಸಿದೆ
ನೀನು ನನ್ನ ಮನದಲ್ಲಿ ಸಂಭ್ರಮವ ಮೂಡಿಸಿದೆ
ಕೋಟಿ ಪಾಪಗಳ ಪಾದ ನುಂಗಿದೆ
ಧನ್ಯನಾದೆ ನಾ ಗುರುದೇವ
ಧನ್ಯನಾದೆ ನಾ ಗುರುದೇವ ಸಿದ್ಧಾರೂಢ !

ಧನ್ಯನಾಗಿಸಲು ಪ್ರದಕ್ಷಿಣೆ ಮಾಡುತ್ತಾ. .ಮಾಡುತ
ಸಿದ್ಧಾರೂಢರ ಭಜನೆಗಳನ್ನು ಹಾಡುತ್ತಾ ಹಾಡುತ್ತಾ
ನಾ ದೈವ ಭಾವನೆಯಲ್ಲಿ ಕಳೆದುಹೋಗಿ
ನಿನ್ನ ಭಕ್ತಿಸಾಗರದಲ್ಲಿ ಕಳೆದುಹೋಗಿರುವೆ ನಾ
ಧನ್ಯನಾದೆ ನಾ ಸಿದ್ಧಾರೂಢ ಗುರುದೇವ !

– ಶ್ರೀ ಹರಿ.

19-09-2015

www.sriharikhoday.com

## 1031

ಹೇ ಅನಂತ . . .
ಸಿದ್ಧಾರೂಢ ಅನಂತ
ಅನಂತದಲ್ಲಿ ಬೆರೆತುಹೋಗಿರುವ ನಿನ್ನನ್ನು
ಎಚ್ಚರಿಸಲಾ. . . .!

ಹೇ ಶಂಕರಾ . . ಹೇ ಶಂಕರ
ಕರುಣಾಕರ ಕರುಣಾಕರ
ಹೇ ಕೃಪಾಳುವೇ . . . ಸಿದ್ಧಾರೂಢ !

ದೇವಾಧಿದೇವ ನೀನಾಗಿರುವೆ
ನಿನ್ನ ಬಾಳಲೀಲೆ ನಾ ಹೇಗೆ ಬಣ್ಣಿಸಲಿ
ಮಹಾ ಮಹಿಮನಾದ ಸಿದ್ಧಾರೂಢ

ಯೋಗಪ್ರಿಯ ಗುರುದೇವ
ಯೋಗರಾಜ ಸಿದ್ಧಾರೂಢ
ದಯಾನಿಧಿಯೇ ಸಿದ್ಧಾರೂಢ

ಜ್ಞಾನಭಕ್ತ ಪ್ರಿಯ ಸಿದ್ಧಾರೂಢ
ನಮೋ ನಮೋ ಸಿದ್ಧಾರೂಢ
ಹೇ ಅನಂತ ಅನಂತ ಸಿದ್ಧಾರೂಢ
ಹೇ ಶಂಕರ . .ಶಂಕರ ಸಿದ್ಧಾರೂಢ!

**– ಶ್ರೀ ಹರಿ.**

**19-09-2015**



## 1032

ದೇಹ ಬೆಳೆಸಿದಂತೆ ಪ್ರೀತಿ ಕೂಡ ಬೆಳೆಸಿ
ಎಲ್ಲರನ್ನೂ ಒಲಿಸಿಕೊಳ್ಳುವ
ಪ್ರೀತಿಯ ಬೆಳೆಯನ್ನು ಬೆಳೆದು ಬಾಳಿ

ಪ್ರೀತಿ ತುಂಬಿಕೊಂಡಿರುವ ನಿಮ್ಮ ದೇಹ
ಎಲ್ಲರೂ ನಿನ್ನ ನೋಡಿ ಒಪ್ಪಿಕೊಂಡು
ಅವರೇ ನಿನ್ನ ಬೇಡಿ ನಿನ್ನಲ್ಲಿರುವ ಪ್ರೀತಿಯಲ್ಲಿ
ಎಲ್ಲರೂ ಮನಬಿಚ್ಚಿ ಬೆರೆಯುವರು !

ಪ್ರೀತಿಯನ್ನು ತಡೆಯುವ ಯಾವ ಶಕ್ತಿಯೂ ಇಲ್ಲವಾಗಿ
ಹೂವಿಗೆ ಸುವಾಸನೆ ಜೊತೆ ಬೆಳೆಯುವಂತೆ
ಒಪ್ಪಿಕೊಳ್ಳುವ ಸುವಾಸನೆಯಂತೆ
ಪ್ರೀತಿಯನ್ನು ಒಪ್ಪಿಕೊಂಡು ಬೆರೆಯುವರು !

ಯಾರಾದರೂ ಪ್ರೀತಿಯನ್ನು ತಪ್ಪಿಸಿಕೊಳ್ಳುವವರೆಂದರೆ
ನೀಡುವ ಪ್ರೀತಿಗೆ ತಪ್ಪಿಸಿಕೊಳ್ಳಲಾರದೆ
ನೀರಿನಲ್ಲಿ ಮುಳುಗಿರುವ ಶರೀರ ಒದ್ದೆಯಾಗಿರುವಂತೆ
ಪ್ರೀತಿಯ ಸಾಗರದ ಕೆರೆ ಸಾಗರದಲ್ಲಿ ಮುಳುಗದೆ

ಕಣ್ಣೋಟದ ರಭಸ
ಚೆಲ್ಲುತ್ತಿರುವ ಪ್ರೀತಿಯಿಂದ ಶರೀರವೆಲ್ಲ
ಪ್ರೀತಿಯಿಂದ ಒದ್ದೆಯಾಗಿದೆ !

**– ಶ್ರೀ ಹರಿ.**

**19-09-2015**



www.sriharikhoday.com

## 1033

ಗುರುಗಳನ್ನು ಪ್ರೀತಿಸುವುದು
ಜನಗಳಿಗೆ . .ಸಮಾಜಕ್ಕೆ . .ಪ್ರೀತಿಸುವುದು
ದೇವರ ಪ್ರೀತಿಸುವುದು ಒಂದಾದರೆ
ಸಿದ್ಧರ ಜೊತೆಗೆ ಪ್ರೀತಿಸಿ ಬೆರೆತುಕೊಳ್ಳುವುದು ಮತ್ತೊಂದು
ಓಂ ನಮಃ ಶಿವಾಯ . . ಓಂ ನಮಃ ಶಿವಾಯ

ಕ್ಷಣ ಕ್ಷಣದಲ್ಲಿಯೂ ಮನದ ತೆರೆಗಳನ್ನು ಎಳೆಯುತ್ತಲೇ ಇದೆ
ತೆರೆಗಳ ಮುಂದೆ ಅರ್ಥ ತಿಳಿಯದ ಮಾತುಗಳು ಕೋಪ ತರಿಸುವ ಮಾತುಗಳೂ
ಹಿಂದು ಮುಂದಾಗಿರುವ ತೆರೆಯ ರೂಪದಲ್ಲಿರುವ ನೆನಪುಗಳ ಮರೆತು
ಶುದ್ಧ ಭಾವನೆಯಿಂದ ನಿನ್ನ ಭಾವನೆ ಹೊರಚೆಲ್ಲು
ಓಂ ನಮಃ ಶಿವಾಯ . .ಓಂ ನಮಃ ಶಿವಾಯ

ಮನದಲ್ಲಿ ನಿಶ್ಶಬ್ದ ತಾಳು
ಉಸಿರು ನಿಟ್ಟುಸಿರಲ್ಲಿ ದೇವರ ನೆನಸಿ ಉಸಿರಾಡು
ಬೇಡದ್ದನ್ನು ಗುರುಪಾದಗಳಿಗೆ ಅರ್ಪಿಸು
ಬೇಡದ್ದನ್ನು ಗುರುಗಳ ಪಾದಗಳಿಗೆ ಭಿಕ್ಷೆ ಕೇಳಿ
ಎಂದೂ ಕಾಣದ ತೃಪ್ತಿಯನ್ನು ಅನುಭವಿಸು
ಓಂ ನಮಃ ಶಿವಾಯ . . ಓಂ ನಮಃ ಶಿವಾಯ



www.sriharikhoday.com

ನೆನಪುಗಳ ತೆರೆಗಳ ಆಧಾರದ ಮೇಲೆ ಜೀವಿಸಬೇಡ
ಪ್ರದರ್ಶನ ಮಾಡಲು ಜೀವಿಸಬೇಡ
ನಿನ್ನ ಹೃದಯ ಕಮಲದಲ್ಲಿ ದೇವರನ್ನು ಅರಳಿಸು
ದೇವರಾದ ಅವಧೂತರು ಸಿದ್ಧರ ನೆನಸು
ನಿನ್ನಲ್ಲಿರುವ ಅಲ್ಪ ಪ್ರೀತಿ ಸಾಗರವಾಗುವುದು
ಓಂ ನಮಃ ಶಿವಾಯ . . ಓಂ ನಮಃ ಶಿವಾಯ

ಸಮಾಜವು ನಿನ್ನ ಜೊತೆಯಾಗಿ
ನಿನ್ನ ಸಂಸಾರದಲ್ಲಿ ಎಲ್ಲರ ಪ್ರೀತಿಗೆ ಪಾತ್ರನಾಗಿ
ನೆನಪುಗಳ ತೆರೆಗಳಲ್ಲದೆ ಪವಿತ್ರ ಭಾವನೆಯಿಂದ ಸಿದ್ಧಾರೂಢರ ನಮಿಸು
ನಿನ್ನ ಜೀವನವೆಲ್ಲ ನಕ್ಷತ್ರಗಳಂತೆ ಮಿನುಗಾಗುತ್ತದೆ
ಓಂ ನಮಃ ಶಿವಾಯ .. . ಓಂ ನಮಃ ಶಿವಾಯ

**- ಶ್ರೀ ಹರಿ.**

**18-09-2015**

## 1034

ಪಡೆಯುವುದೆಲ್ಲಾ ಲಾಭ
ಪಡೆಯುವುದೆಲ್ಲಾ ಲಾಭ
ಗುರುಗಳ ಪಾದಗಳಿಂದ ಬೇಡದೇ ಬರುವುದೆಲ್ಲ ಲಾಭ

ಅಖಂಡದಲ್ಲಿ ಬೆರೆತಿರುವ ಗುರುಗಳ ಪಾದದಿಂದ
ಅಂಜದೆ ಲಾಭ ಪಡೆಯಿರಿ
ಓಂ ನಮಃ ಶಿವಾಯ . .ಓಂ ನಮಃ ಶಿವಾಯ !

ಬಡ್ಡಿಯಿಲ್ಲದ ಲಾಭ ಸಾಲವಿಲ್ಲದೆ ಲಾಭ
ಗುರು ಸುಖದಿಂದ ಬರುವ ಸುಖದ ಲಾಭ
ಹತ್ತಿರ ಜನಗಳಿಗೆ ಉಪಕಾರ ಮಾಡುವ ಭಾವನೆ ಮೂಡಿಸುವ
ಲಾಭ

ನೀಡುವ ಯೋಗ್ಯತೆ ಹೊಂದುವ ಲಾಭ
ಓಂ ಉಚ್ಚರಿಸುವ ಪದದಿಂದ
ಗುರುಚರಣಗಳಿಂದ ಹೊಸ ಕಲ್ಪಿತ ಲಾಭ !

ಸತ್ಯದ ಗಂಗೆಯಲ್ಲಿ ಸ್ನಾನದಿಂದ ಜ್ಞಾನದ ಲಾಭ
ಮನದಲ್ಲಿ ಪೂರ್ಣ ಭಾವನೆಯನ್ನು ಮೂಡಿಸುವ ಲಾಭ
ಗುರು ಚರಣಗಳಿಂದ ಬರುವ ಲಾಭ



www.sriharikhoday.com

ನಮ್ಮ ಬಾಳನ್ನೇ ಮೂಲಧನವಾಗಿ ಗುರುಚರಣಗಳಿಗೆ ಅರ್ಪಿಸಿ
ಗುರುಗಳ ಜೊತೆ ವ್ಯಾಪಾರದಲ್ಲಿ ನಮ್ಮ ಮನ ನೋಂದಾಯಿಸಿದರೆ
ಮನೋವಿಕಾಸದ ಪ್ರೀತಿ ಹೆಚ್ಚಾಗಿ ಬೆಳೆದಿರುವ ಲಾಭ !

ಗುರುಗಳಿಗೆ ಶಿಷ್ಯನ ಲಾಭ ಆನಂದ
ಪಡೆಯಿರಿ ಲಾಭ . .ಪಡೆಯಿರಿ ಲಾಭ
ಗುರುಚರಣಗಳಿಂದ ಪಡೆಯಿರಿ ಲಾಭ ಓಂ ನಮಃ ಶಿವಾಯ !

**– ಶ್ರೀ ಹರಿ.**

**18–09–2015**

## 1035

ಮನದಲ್ಲಿರುವ ಶಿವಲಿಂಗವನ್ನು ಪೂಜಿಸು ಮಾನವ
ಸಿದ್ಧಾರೂಢ ಅವಧೂತರ ಜೊತೆಗೆ
ನಮ್ಮನ್ನು ನಾವೇ ಮರೆತು ಬೆರೆತು
ಪೂಜೆ ಮಾಡೆ ಭವಿಷ್ಯವನ್ನು ಪಡೆಯಿರಿ

ಈಶ್ವರ ಮಹೇಶ್ವರಗಳನ್ನು ಗುರುಗಳಲ್ಲಿ ನೋಡಿ
ಅಣುರೇಣುಗಳಲ್ಲಿರುವ ದೇವರ ಅನುಭವ ಪಡೆದು
ಪಾರಿವರ್ತಿಕ ಅನುಭವ ಪಡೆದು
ಕಲಿಯುಗದಲ್ಲಿ ಮಾನವನಾಗಿ ನಟಿಸಿ

ನಿನ್ನ ಸಂತರ ಮಹಿಮೆಯನ್ನು ಎಲ್ಲರಿಗೂ ತೋರಿಸಿದೆಯಾ
ಜಗತ್ತಿಗೆ ಮೆರಗನ್ನು ಮೂಡಿಸಿ
ಕಲ್ಲಾಗಿ ಜ್ಞಾನರೂಪ ಪಡೆದೆಯಾ
ಓಂ ನಮಃ ಶಿವಾಯ . . !

ಎಲ್ಲರ ಮನದಲ್ಲಿ ಪ್ರತಿಧ್ವನಿಸಿದೆಯಾ
ಮುಕ್ತಿಯ ಜ್ಞಾನದಾತನಾಗಿ ನೀನು
ಮಾನವೀಯ ಅರ್ಥ ತೋರಿಸಿ
ಮೌನವನ್ನು ಆಚರಿಸುತ್ತಿರುವ ನಿನಗೆ



ಜನಗಳು ಶಿವನ ಅವಧೂತ ಎನ್ನುತ ಪೂಜಿಸುತ್ತಿರುವರು
ನಮ್ಮ ಗುರುಗಳಾದ ತಮಗೆ
ಓಂ ನಮಃ ಶಿವಾಯ
ಓಂ ನಮಃ ಶಿವಾಯ !

**–ಶ್ರೀ ಹರಿ.**

**18–09–2015**

www.sriharikhoday.com

## 1036

ಸಿದ್ಧಾರೂಢ ನನ್ನ ಜೀವನದ ಅಂಬಿಗನೆಂದು ನಂಬಿ
ಆಳವಾದ ಜಗತ್ತಿನ ಮೇಲೆ ತೇಲುತ್ತಿರುವೆ
ಕಷ್ಟಗಳ ದಡದಿಂದ ಸುಖದ ದಡಕ್ಕೆ ಒಯ್ದಿರುವ ಅಂಬಿಗನೇ

ನನ್ನನ್ನು ತೇಲಿಸಿಕೊಂಡು ಕೈ ಹಿಡಿದಿರುವ ಅಂಬಿಗನೇ
ಸಿದ್ಧಪುರುಷ ಸಿದ್ಧಾ ರೂಢ!

ಪ್ರಪಂಚದ ವ್ಯವಹಾರಗಳ ಸೆಳೆತದಿಂದ ಬದುಕಿಸು
ಪ್ರಪಂಚದ ವ್ಯವಹಾರಗಳ ಸುಳಿಯಲ್ಲಿ ಮುಳುಗಿದಂತಾಗಿದೆ
ಕಾಪಾಡು ಗುರುದೇವ ಕಷ್ಟಗಳ ಸೆಳೆತದಿಂದ ದೂರಮಾಡು !

ಅಂಬಿಗ ದೇವ ಸಿದ್ಧಾರೂಢ . . .ಶಿವನ ಅವಧೂತ ಸಿದ್ಧಾರೂಢ
ದೇವರೇ ಸುಖದ ದಡಕ್ಕೆ ಕೊನೆಗೂ ಮುಟ್ಟಿಸಿದೆಯಾ . . ..
ಈ ದಡದಲ್ಲಿ ನನ್ನ ಜೊತೆ ಯಾರೂ ಇಲ್ಲದ ಕಾರಣ

ನೀನೇ ನನ್ನ ಜೊತೆಯಾಗಿ
ಹಗಲು ರಾತ್ರಿಗಳ ಜೊತೆ ಕಾಪಾಡು
ಸಿದ್ಧಾರೂಢ ನನ್ನ ಜೀವನದ ಅಂಬಿಗ ಸಿದ್ಧಾರೂಡ !

**– ಶ್ರೀ ಹರಿ.**

**18–09–2015**



## 1037

ಎಲ್ಲಿಂದಲೋ ಬಂದ ಶಿವನು
ಕಲ್ಲಾಗಿ ಕುಳಿತು ಮಾತನಾಡುತ್ತಲೇ ಇರುವನು
ಕತ್ತಲೆಯೂ ತಾನಾಗಿ ಬೆಳಕೂ ತಾನಾಗಿ
ಮನಸ್ಸಿನ ಬಯಲಲ್ಲಿ ಬೆರೆತುಕೊಂಡು

ಬಯಲನ್ನೇ ಸರಿಪಡಿಸಿಕೊಂಡು
ಹುಬ್ಬಳ್ಳಿಯಲ್ಲಿ ಸಿದ್ಧಾರೂಢರೆಂಬ ಗುರುವಾದೆಯಾ
ಓಂ ನಮಃ ಶಿವಾಯ
ಓಂ ನಮಃ ಶಿವಾಯ . .!

ಕಣ್ಣಿಗೆ ಕಾಣದ ಶಿವನನ್ನು ನೋಡಿದಂತಾಯಿತಲ್ಲ
ನೀ ಶಿವನಲ್ಲಿ ಬೆರೆತು ಶಿವನೇ ಆಗಿರುವ ನೀನು
ಓಂ ನಮಃ ಶಿವಾಯ ನಾಮದಲ್ಲಿ ಬೆರೆತುಹೋಗಿ ಎಲ್ಲರ ಜೊತೆ ಸೇರಿ
ಮನದಲ್ಲಿ ಜೊತೆ ಕಾಯುತ್ತಿರುವೆ ನಮ್ಮ ಜೊತೆ !

ನಮ್ಮನ್ನೆಲ್ಲಾ ಉತ್ತಮ ಕರ್ಮಿಗಳಾಗಿ ಮಾರ್ಪಾಟು ಮಾಡಿ
ಎಲ್ಲರ ಮನದಲ್ಲಿ ಓಂ ನಾದವ ತುಂಬಿಸಿರುವೆ
ಯೋಗ್ಯ ಮನಸ್ಸಿನ ಭಾವನೆಯನ್ನು ಬೆರೆಸಿರುವೆ
ನಿನ್ನ ನೆನೆಸಿದ ಅನಾಥರಿಗೆಲ್ಲ ಸತ್ಯ ಜೊತೆಗೆ ಬೆರೆಸಿ

www.sriharikhoday.com

ಅದರ ಜೊತೆಗೆ ನೀನೂ ಬೆರೆತುಕೊಂಡು
ನೀ ಶಿವನಾಗುತ್ತಲೇ ಇರುವೆ
ನಾನು ನಿನ್ನ ಜೊತೆ ನೀ ನೀಡಿರುವ ಆಶೀರ್ವಾದದ ಜೊತೆ
ಬಾಳುತ್ತಲೇ ಇರುವೆ !

ಎಲ್ಲಿಂದಲೋ ಬಂದು ಶಿವನಾದೆ
ಕಲ್ಲಲ್ಲೇ ಕುಳಿತು ಮಾತನಾಡದೆ ನೀನೇ ಬೆಳಕು ಕತ್ತಲು ಆಗಿರುವೆ

**– ಶ್ರೀ ಹರಿ.**

**18–09–2015**



## 1038

ಸಿದ್ಧರ ಮನವೇ ಅಪಾರ
ಅವರ ಕರುಣೆಯೇ ಅಪಾರ
ಭಕ್ತರ ಕಷ್ಟಗಳ ಹೊರುವುದೇ ನಿನ್ನ ವ್ಯಾಪಾರ
ನಿನಗೆ ಲಾಭ ನಷ್ಟವಿಲ್ಲದ ವ್ಯಾಪಾರ !

ಎಲ್ಲರಿಗೂ ಭಾಗ್ಯ ನೀಡುವ ವ್ಯಾಪಾರ
ನಿನ್ನ ವ್ಯಾಪಾರ ಭಕ್ತಿಯಿಂದ ಮುಕ್ತಿ ತೋರಿಸಿ
ನಿನ್ನ ದೃಷ್ಟಿ ನಮಗೆ ಲಾಭವಾಗಿದೆ
ಹಿಂದು ಮುಂದಿನ ಶಿವನ ಮೂರ್ತಿಯಾಗಿ ಕುಳಿತಿರುವೆ !

ನೀ ನೀಡಿರುವ ಬುದ್ಧಿ ಸ್ಫೂರ್ತಿಯ ನೀಡುತ
ತಂದೆಯೂ ನೀನಾಗಿ ತಾಯಿಯೂ ನೀನಾಗಿ
ಜ್ಞಾನ ಜ್ಯೋತಿಯೂ ನೀನಾಗಿ
ಶಿವನಲ್ಲೇ ಬೆರೆತುಹೋಗಿರುವ ನೀನು

ನಮ್ಮನ್ನು ನಿನ್ನಲ್ಲಿ ಬೆರೆಸಿಕೊಂಡಿರುವ ನೀನು
ಹಿಂದಿನದು ಮರೆಸಿ ಅಪಾರವಾದ ಕರುಣೆಯಿಂದ
ನಿನ್ನಲ್ಲಿ ಕಳೆದುಹೋಗಿದ್ದ ನಿಮ್ಮ ಮೇಲಿನ ಭಕ್ತಿ
ಮನದಲ್ಲಿ ಉದಯಿಸಿರುವೆ !

**– ಶ್ರೀ ಹರಿ.**

**18–09–2015**

www.sriharikhoday.com

## 1039

ಓಂ ನಮಃ ಶಿವಾಯ
ಓಂ ನಮಃ ಶಿವಾಯ
ಶಿವ ಶರಣನಾದ ಗುರುನಾಥ
ಸದ್ಗುಣಗಳುಳ್ಳ ಗುರುನಾಥ

ನನ್ನ ಪ್ರಾಣ ಮೂರ್ತಿಯಾದ ಗುರುನಾಥ
ಕರುಣಾಸಾಗರನಾದ ಗುರುನಾಥ
ಕ್ಷಣ ಕ್ಷಣಗಳ ಅರಳುಗಳು ನಿನ್ನದು ಗುರುನಾಥ
ಜೀವನದ ಅವಿಜ್ಞತೆ ಶರಣು ಶರಣು ಗುರುನಾಥ !

ಆದಿರೂಪವುಳ್ಳ ಶಿವನಾದ ಗುರುಗಳು ಗುರುನಾಥ
ನಿನ್ನ ಗುರುವಾದ ಸಿದ್ಧಾರೂಢ ಗುರುನಾಥ
ಭಕ್ತ ರಕ್ಷಕ ಗುರುನಾಥ
ಜಗತ್ ಪಾಲಕ ಗುರುನಾಥ ಸಿದ್ಧಾರೂಢ ಗುರುನಾಥ !

ಬ್ರಹ್ಮರೂಪಿಯಾದ ಗುರುನಾಥ
ಓಂ ಸಿದ್ಧಾರೂಢ ಗುರುನಾಥ
ಓಂ ನಮಃ ಶಿವಾಯ ಗುರುನಾಥ
ಓಂ ನಮಃ ಶಿವಾಯ ಗುರುನಾಥ !

**– ಶ್ರೀ ಹರಿ.**

**18–09–2015**



www.sriharikhoday.com

## 1040

ಶಿವನೆಂದೆ ನಿನಗೆ ಗುರುನಾಥ
ಓಂ ನಮಃ ಶಿವಾಯವೆಂದೆ ನಿನಗೆ ಗುರುನಾಥ !

ಶರಣರಲ್ಲಿ ನಂಬು ಎಂದೆ ಗುರುನಾಥ
ಸದ್ದುಗಳ ರಚನೆಯಲ್ಲಿ ನಂಬು ಎಂದೆ ಗುರುನಾಥ
ಓಂ ಎಂಬ ಶಬ್ದದಲ್ಲಿ ಅರ್ಥ ತಿಳಿದಿರುವೆ ಗುರುನಾಥ
ಜೀವನದ ಸಂಶಯಗಳನ್ನು ಬಿಡು ಎಂದೆ ಗುರುನಾಥ !

ಬಿಂಕದ ಮಾತುಗಳ ಆಡಬೇಡ ಎಂದೆ ಗುರುನಾಥ
ಜನನ ಮರಣಗಳ ಹಿಂದೆ ಇರುವ ಗುರುನಾಥ
ಘನ ಗುರುಗಳ ಪಾದಗಳ ನಂಬು ಎಂದೆ ಗುರುನಾಥ
ಓಂಕಾರ ರೂಪಗಳ ನಂಬು ಎಂದೆ ಗುರುನಾಥ !

ಭಕ್ತಿಯನ್ನು ಬಿಂದುವಾಗಿ ನಂಬು ಎಂದೆ ಗುರುನಾಥ
ಭಕ್ತಿಯ ಬಿಂದುವಿನ ಬೀಜದಿಂದ ಮನದಲ್ಲಿ
ವಿಶ್ವವನ್ನೇ ಬೆಳೆಸಿಕೋ ಎಂದೆ ಗುರುನಾಥ
ಶಿವನ ಪ್ರೀತಿಗೆ ಅರ್ಹನಾಗು ಎಂದೆ ಗುರುನಾಥ

ಗುರುನಾಥ . . . ಗುರುನಾಥ . . . .
ನಿನ್ನ ಮೇಲಿನ ನಂಬಿಕೆ ನನ್ನ ಜೀವನ ಗುರುನಾಥ !

**– ಶ್ರೀ ಹರಿ.**

**18–09–2015**

## 1041

ಶಕ್ತಿಯ ಸ್ವರೂಪ ಅವಧೂತ
ಸಿದ್ಧಾರೂಢ ಅವಧೂತ

ನಿಶ್ಚಲಾತ್ಮದ ಅವಧೂತ
ಸತ್ಯಾನಂದ ಅವಧೂತ

ಉಮಾಪತಿಯ ಜೊತೆ ಇರುವ ಗುರುನಾಥ
ಕಷ್ಟಜೀವಿಗಳಿಗೆ ಗುರುನಾಥ

ನಿಮ್ಮ ಪಾದದ ಭಕ್ತರು ಅವಧೂತ
ಹುಬ್ಬಳಿಗೆ ಗುರುನಾಥ !

ಕಲ್ಲಲ್ಲಿ ಕುಳಿತು ನಮಗೆ ಜ್ಞಾನದ ಕಣ್ಣನ್ನು ತೆರೆಸಿರುವ ಗುರುನಾಥ
ಕೈ ಬಿಡದೆ ನಮ್ಮನ್ನೆಲ್ಲ ಸಲಹು ಗುರುನಾಥ !

ನಂಬಿರುವೆವು ನಾವೆಲ್ಲಾ ನಿಮ್ಮನ್ನು ಗುರುನಾಥ
ಸಿದ್ಧಾರೂಢ ಅವಧೂತ ನಮ್ಮೆಲ್ಲರ ಗುರುನಾಥ !

**- ಶ್ರೀ ಹರಿ.**

**18-09-2015**



## 1042

ನಿಷ್ಕಾಮ ಮನದಿಂದ ಗುರುಗಳ ಸೇವಿಸು
ನಡೆ ಮುಂದೆ ಮನ ದೇಹ ಭ್ರಾಂತಿಯನ್ನು ಸುಟ್ಟು
ಶಾಂತಿಯಿಂದ ಬಾಳು ಹೇ ಮಾನವ !

ಅಂತರಂಗ ಶುದ್ಧಿ ಮಾಡು ಮಾನವ
ಗುರುಬೋಧನೆಗಳ ವಿಚಾರ ಮಾಡು ಮಾನವ
ದೈಹಿಕ ಅನುಭವಗಳನ್ನು ಬಿಟ್ಟು ಗುರುಚರಣಗಳ ಹಿಡಿ ಮಾನವ !

ಗುರುಗಳ ಉಪಕಾರ ಎಂದೂ ಮರೆಯದಿರು ಮಾನವ
ಸಿದ್ಧಿ ಭಕ್ತಿಯ ಜಾಗೃತಿಯಲ್ಲಿ ಬೆರೆತು ಜ್ಞಾನಭಾಗ್ಯಗಳನ್ನು ಎಂದೂ ಬಿಡದೆ
ಲೌಕಿಕ ನಿಂದನೆಗಳನ್ನು ಮರೆತು ಜೀವನದಲ್ಲಿ ಆಸಕ್ತಿಯಿಂದ ಬಾಳು ಮಾನವ !

ವಿಶ್ವದ ಭಾರ ಗುರುಗಳಿಗೆ ನಾ ಹೊರಿಸಿ
ನಮ್ಮ ಜೀವನದಲ್ಲಿ ಬರುವ ಕಷ್ಟಗಳು ಗುರುಗಳ ಭಾರ ಎನ್ನುತ
ಚಿಂತೆಗಳನ್ನು ಮರೆತು ಚಿಂತೆಗಳ ರಾಶಿ ರಾಶಿಗಳನ್ನು ಗುರುಪಾದಕ್ಕೆ ಅರ್ಪಿಸಿ

ಸಿದ್ಧರಾದ ಸಿದ್ಧಾರೂಢರಲ್ಲಿ ನಮ್ಮ ಧ್ಯಾನವನ್ನು ಬೆರೆಸಿಕೊಂಡು
ನಿಷ್ಕಾಮ ಮನದಿಂದ ಗುರುಗಳ ಸೇವೆಯಲ್ಲಿ ಮನವ ನಡೆಸಿಕೊಂಡು
ಶಾಂತಿಯ ಮನೋಪರಿಸರದಲ್ಲಿ ಬಾಳೋಣ !

**- ಶ್ರೀ ಹರಿ.**

**18-09-2015**

www.sriharikhoday.com

## 1043

ನೀ ತೋರಿಸದೆ ಕಾಣಿಸದ
ನೀ ತೋರಿಸದೆ ಕಾಣಿಸದು ಮುಕ್ತಿ ರಸಭಾಗ್ಯಗಳು !

ಎಲ್ಲದರ ಆದಿಯಾದ ಶಿವನು
ಎಲ್ಲದರಲ್ಲಿ ಶಿವನನ್ನು ನೋಡಿ
ಹುಟ್ಟು ಸಾವುಗಳು ಶಿವನಲ್ಲೇ ಅರ್ಪಿಸಿ
ನಮ್ಮ ಕಷ್ಟಗಳು . . ಸುಖಗಳು ಗುರುಗಳ ಪಾದಕ್ಕೆ ಅರ್ಪಿಸಿ

ಶಿವನ ರೂಪವಾದ ಅವಧೂತರನ್ನು ನೀವು ನಂಬಿ
ರಕ್ಷಕನೂ ಅವನೇ ಶಿಕ್ಷಕನೂ ಅವನೇ
ಜೀವನದಲ್ಲಿ ಕ್ಷಣ ಕ್ಷಣದಲ್ಲಿ ಹೊಸ ಸ್ಫೂರ್ತಿಯನ್ನು ಪಡೆಯುತ
ಅವಶ್ಯಕವಾಗಿರುವುದನ್ನು ಸಿದ್ಧಿಯಾಗಿಸಿ

ಭವಿಷ್ಯವನ್ನೇ ನಿನ್ನ ಪಾದಗಳಿಗೆ ಅರ್ಪಿಸಿ
ಶಿವರೂಪಿಯಾದ ಸಿದ್ಧಾರೂಢರಿಗೆ ಅರ್ಪಿಸಿ
ಎಂದೆಂದಿಗೂ ಭಕ್ತನಾಗಿ
ದೊರಕಿದ್ದಕ್ಕೆಲ್ಲ ದೇವರಿಗೆ ಆಭಾರಿಯಾಗಿ

ನೀ ತೋರಿಸಿದೆಲ್ಲ ನೋಡುತ ಮೌನದಿಂದ ಕಲಿಸಿದ್ದೆಲ್ಲ
ಅರ್ಥೈಸಿಕೊಂಡು ನನ್ನ ಜೀವನಯಾನ ಸಾಗಿದೆ !

**– ಶ್ರೀ ಹರಿ.**

**18-09-2015**



www.sriharikhoday.com

## 1044

ದಿನವೂ ಒಂದು ಗುರಿಯಾದರೂ ಸಾಧನೆ ಸಾಧಿಸಿದರೆ
ಬದುಕಿನ ಜೊತೆ ಬದುಕಿದಂತೆ !

ದಿನದ ಜಾಗೃತಿಯಲ್ಲಿ
ದಿನದ ಗುರಿ ಮನಕ್ಕೆ ಅರಿವಾದರೆ
ದಿನದ ಸಾಧನೆಯೊಂದು ಸಾಧನೆ
ಜೊತೆಗೆ ಸಂತಸ ತುಂಬಿಕೊಳ್ಳುವುದು !

ನಮ್ಮ ಪಾಡಿಗೆ ನಾವು ಕೆಲಸ ಮಾಡುತ್ತಲೇ ಇದ್ದು
ಪ್ರಪಂಚದ ಸಂತೆಯಲ್ಲಿ ನಾವು ಏಕಾಂತದಲ್ಲೇ ಇದ್ದು
ಎಲ್ಲದರಲ್ಲಿ ಬೆರೆತು ನಗುತ್ತ
ನಮ್ಮ ಗುರಿಯ ಸಾಧನೆಯನ್ನು ನಾಜೂಕಾಗಿ ನಿಭಾಯಿಸಿಕೊಂಡು

ಬೇರೆಯವರಿಗೂ ಸಂತಸವ ನೀಡಿ
ನಗೆಮುಖಿಯ ಜೀವನ ನಡೆಸು !

ದಿನಚರಿಯಲ್ಲಿ ಕಾಲಕ್ಕೆ ಒಂದು ಬೆಲೆ
ಗುರಿ ಸಾಧಿಸಿ ಜೀವಿಸುವುದು ಒಂದು ಕಲೆ
ಬದುಕೇ ಆಗುವುದು ಒಂದು ಸಾಧನೆಯ ನೆಲೆ
ತಾನಾಗಿಯೇ ತನ್ನಲ್ಲಿ ಆಧ್ಯಾತ್ಮಿಕ ಭಾವನೆ ಬೆಳೆದು

ನಮ್ರತೆಯಿಂದ ಹೇಳುವೆ ಈ ದಿನದ ಸಾಧನೆ
ಒಂದು ದೇವರ ಲೀಲೆ !

**21-09-2015**

**– ಶ್ರೀ ಹರಿ.**

## 1045

ತಲ್ಲಣಿಸದಿರು ಮನ ತಲ್ಲಣಿಸದಿರು
ಗುರುಪಾದಗಳ ಜೊತೆಗೆ ಇರುವಾಗ
ತಲ್ಲಣಿಸದಿರು ಮನ ತಲ್ಲಣಿಸದಿರು !

ಹುಟ್ಟಿಸಿದ ದೇವರೂ ಅವನೆ
ಕಾಪಾಡುವ ದೇವನೂ ಅವನೆ
ಭಕ್ತ ಮಾರ್ಗವನ್ನು ತೋರಿಸುವ ದೇವನೂ ಅವನೆ
ತಲ್ಲಣಿಸದಿರು ಮನ ತಲ್ಲಣಿಸದಿರು !

ಹುಟ್ಟಿದ ಮಗನಾದ ನಿನಗೆ ತೊಟ್ಟಿಲಲ್ಲಿ ತೂಗಿಸಿ
ಬೇಧ ಭಾವನೆಗಳ ನಾಶ ಮಾಡಿದ ನಿನ್ನ ಗುರುಪಾದ
ಸತ್ಯವನ್ನು ಬೋಧಿಸಿ ಪರಮಾತ್ಮನಲ್ಲಿ ಬೆರೆಸಿ
ಗುರುಪಾದಗಳನ್ನು ನಂಬಿರುವ ನೀನು

ತಲ್ಲಣಿಸದಿರು ಮನ ತಲ್ಲಣಿಸದಿರು
ಗುರುಪಾದಗಳ ಜೊತೆಗೆ ಇರುವಾಗ
ತಲ್ಲಣಿಸದಿರು ಮನ ತಲ್ಲಣಿಸದಿರು !

**– ಶ್ರೀ ಹರಿ.**

**21–09–2015**



## 1046

ನಿರ್ಮಲ ಜ್ಯೋತಿ ಬೆಳಗಲಿ. ಜಗದೊಳಗೆಲ್ಲ ಬೆಳಗಲಿ
ಎಲ್ಲರ ಮನದಲ್ಲಿರುವ ಬಾಳು ಬೆಳೆಯಲಿ
ಜ್ಞಾನ ಜ್ಯೋತಿಯನ್ನು ಬೆಳಗಲಿ !

ಕೈಲಾಸಪುರದಲ್ಲಿ ಶಿವನ ಸಂವಹನದಲ್ಲಿ
ಶಿವನಿಗೆ ಪಾರ್ವತಿ ದೇವಿಯು
ಬೆಳಗಿದ ಜ್ಯೋತಿ ಬೆಳಗಲಿ

ಹುಬ್ಬಳ್ಳಿಯ ಭಕ್ತರ ಸಮೂಹದಲ್ಲಿ
ಗುರುಗಳಿಗೆ ನಿರ್ಮಲ ಜ್ಯೋತಿ ಬೆಳಗಲಿ
ಕೋಟಿ ಪೂಜೆ ಕೋಟಿ ಜಪ ಮಾಡಿದೆ

ಹರಿಹರ ರೂಪದಲ್ಲಿರುವ ಸಿದ್ಧಾರೂಢನನ್ನು ನಂಬಿದೆ
ಹಾಡುತಾ . ಕುಣಿಯುತ ಶಿವನ ರೂಪವಾದ ಸಿದ್ಧಾರೂಢನಿಗೆ
ಬೆಳಗುವೆ ಆರತಿಯ . .ನಿರ್ಮಲವಾದ ಜ್ಯೋತಿ ಬೆಳಗುವೆ . . .!

**– ಶ್ರೀ ಹರಿ.**

**21–09–2015**

www.sriharikhoday.com

## 1047

ಜಯ ಜಯ ಸಿದ್ಧಾರೂಢ ಸದ್ಗುರು
ಪರಾತ್ಮರ ಭಕ್ತರ ಕಲ್ಪಿತರು
ಸುಗುಣ ತಾವು ನಿರಾಕಾರರು
ನಿಶ್ಚಲಾನಂದ ಗುರು ಪರಮೇಶ್ವವರರ ಗುರು !

ಬ್ರಹ್ಮಾಂಡದ ವಿಷಯ ತಿಳಿದ
ದೇವಾಧಿದೇವ ಮಹೇಶ್ವರರು
ಸೇವೆಗಾಗಿ ನಮ್ಮ ಅದೃಷ್ಟಕ್ಕಾಗಿ
ಎಲ್ಲರ ಪ್ರಿಯದಾಯಕರು !

ಲಕ್ಷಕಿನ್ನರಿ ನಾರದ ತಂಬೂರಿಯ
ಸ್ವಾದ ಅನುಭವಿಸಿದರು
ಭಕ್ತರು ಭಾವನೆಗಳಿಂದ ಹಾಡುವೆವು
ನಿನ್ನ ಗುಣಗಾನಗಳನ್ನು

ಜಯ ಜಯ ಸದ್ಗುರು . .ಜಯ ಜಯ ಸಿದ್ಧಾರೂಢರು
ಯಾರು ತಿಳಿಯದಿಹರು ನಿನ್ನ ಅಪಾರ ಮಹಿಮೆಗಳ
ದ್ವಂದ್ವಗಳಿರುವ ಸತ್ಯವನ್ನು ಅರಿತಿರುವವರು ಗುರುಗಳು
ನೀ ನೀಡಿರುವ ಸೌಭಾಗ್ಯ ನಾವಾಗಿರುವೆವು ಈಗ

ನಮ್ಮ ಎರಡು ಕಣ್ಣಗಳಿಂದ ನೋಡುತ್ತಾ . ನೋಡುತ
ಅರಿತಿರುವೆವು ನಾವು
ಜಯ ಜಯ ಸದ್ಗುರು . ಜಯ ಜಯ ಸಿದ್ಧಾರೂಢರು

– ಶ್ರೀ ಹರಿ.

21–09–2015



www.sriharikhoday.com

## 1048

ದೃಷ್ಟಿಯಾಗಿದೆ ನಿನಗೆ ಸಿದ್ಧಾರೂಢ
ಬೆಳಗುವೆವು ನಾವು ಸಂತಸ ಮನದಲ್ಲಿ
ನಿಮ್ಮ ಭಕ್ತಿಯ ರೂಪ !

ನಿನ್ನ ಕೃಪೆಗೆ ಒಳಗಾಗಿರುವ
ಕೋಟಿ ಕೋಟಿ ಭಕ್ತರ ದೃಷ್ಟಿಯಾಗಿದೆ
ನಿನಗೆ ಸದ್ಗುರು ಗುರುದೇವ !

ಹುಬ್ಬಳ್ಳಿಯಲ್ಲಿ ಎಲ್ಲರೂ ಸೇರಿ
ದೃಷ್ಟಿ ಮಾಡಿರುವರು
ನಿನ್ನ ಕೀರ್ತಿ ಕೇಳಿ

ಜೊತೆ ಬಂದು ನಿಮ್ಮ ಚರಣಗಳಿಗೊರಗಿ
ನಿನ್ನ ಚರಣಗಳ ಆಶೀರ್ವಾದದ ಸಾಧನೆ
ಭಕ್ತರು ಅನುಭವಿಸಿ ದೃಷ್ಟಿಯಾಗಿದೆ

ಎಲ್ಲಾ ಸಂತ ಮಂಡಲಗಳಿಂದ
ಸಿದ್ಧಾರೂಡ . . .
ಭಕ್ತಿರಿಂದಾಗಿದೆ ದೃಷ್ಟಿ ಸಿದ್ಧಾರೂಢ !

ನಾನಾ ಲೀಲೆಗಳ ಜನರಿಗೆ ತೋರಿಸಿ
ಶಿಲೆಯಾಗಿ ಕುಳಿತಿರುವೆ ನಿಶ್ಶಬ್ದದಲ್ಲಿ ಮುಳುಗಿ
ದೇವಾಧಿದೇವ ನಿನ್ನ

ಸಾಧನೆಗೆ ದೃಷ್ಟಿಯಾಗಿದೆ
ನಿನ್ನ ಭಕ್ತರ ಮನದ ಕಣ್ಣಿನ
ದೃಷ್ಟಿಯಾಗಿದೆ ಗುರುದೇವಾ ಸಿದ್ಧಾರೂಢ ದೃಷ್ಟಿಯಾಗಿದೆ !

– ಶ್ರೀ ಹರಿ.

21–09–2015



## 1049

ದಾರಿ ತೋರಿಸು ದೇವ ಸಿದ್ಧಾರೂಢ
ಶುದ್ಧನಾದ ತಾವುಗಳು
ಮೂರ್ತಿಗಳ ರೂಪದಲ್ಲಿರುವ ತಾವು
ತ್ರಿಭುವನದ ಕೀರ್ತಿಯನ್ನು ಸಾಧಿಸಿರುವ ತಾವು

ಸತ್ಯದಾರಿಯ ತೋರಿಸು ದೇವ
ದತ್ತದಯಾಳು ಸಿದ್ಧಾರೂಢ !

ಮನದ ಭಾವನೆಯಿಂದ ಆರತಿ ಬೆಳಗುತ್ತಿರುವೆ
ಕಾಸಾಯ ವಸ್ತ್ರಧಾರಿಗಳಾದ ತಾವು
ಭಕ್ತರ ತುಳಸಿ ಮಾಲೆಯನ್ನು ಧರಿಸಿಕೊಂಡು
ನಿಶಬ್ಧದಲ್ಲಿ ಮುಳುಗಿರುವ ತಾವು

ದಾರಿ ತೋರಿಸು ದೇವ
ದತ್ತ ದಯಾಳು ದಾರಿ ತೋರಿಸು !

ಶಂಕು ಚಕ್ರ ಗದಾ ಪದ್ಮಗಳಿಂದ
ದೇವಾಧಿದೇವತೆಗಳನ್ನು ಅನುಭವಿಸಿರುವ ನೀನು
ವಿಶ್ವದ ಸಂಗದಲ್ಲಿ ವಿಶ್ವದ ಶೃಂಗಾರವನ್ನು
ನೋಡಿರುವ ನೀನು

ದಾರಿ ತೋರಿಸು ದೇವ
ದತ್ತ ದಯಾಳು ದಾರಿ ತೋರಿಸು !

21–09–2015

– ಶ್ರೀ ಹರಿ.

www.sriharikhoday.com

## 1050

ಗುರುದೇವ ನಿನ್ನ ಬಾಗಿಲಿಗೆ
ಸಿದ್ಧಾರೂಢನೆಂದು ನಾ ಬಂದೆ
ಚಿಂತೆಗಳ ಕಂತೆ ತಂದಿರುವೆ
ಗುರುದೇವ ನಿನ್ನ ಬಾಗಿಲಿಗೆ !

ನೀನೇ ತಂದೆ .. ನೀನೇ ನನ್ನ ತಾಯಿ
ಕಷ್ಟಗಳಿಂದ ಬಿಡಿಸಿಕೊಳ್ಳಲು ಮಾರ್ಗ ತೋರಿಸು
ನಿಮ್ಮ ಸೇವೆಯ ಮಾಡಲು ಬಂದಿರುವೆ
ಪ್ರೀತಿಯಿಂದ ಸ್ವೀಕರಿಸು ಗುರುದೇವ !

ನೀ ಲಂಗೋಟಿಧಾರಿಯಾಗಿ ಕುಳಿತು
ಶಾಂತಿ ಮೌನದಲ್ಲಿ ನೀ ಕುಳಿತು
ಸದಾ ನಿರ್ಮಲನಾಗಿರುವ ನೀನು
ನಮ್ಮನ್ನೇ ಮರೆತು ಶಿಲೆಯಾಗಿ ಕುಳಿತಿರುವೆ

ಕರುಣಿಸು ಗುರುದೇವ
ಕಷ್ಟಗಳ ಸಂತೆಯನ್ನು ತಂದಿರುವೆ ನಿನ್ನ ಬಾಗಿಲಿಗೆ
ನನ್ನ ಮೇಲೆ ನಿನ್ನ ಕೃಪೆ ಧಾರಾಕಾರವಾಗಿ ಹರಿಸಿ
ಕಳಕಳಿಯಿಂದ ನಿನ್ನ ಮನದಲ್ಲಿ ನನ್ನನ್ನು ಬೆರೆಸಿಕೋ !

www.shriharikhoday.com



ನಿನ್ನ ಆಶೀರ್ವಾದ ಭಕ್ತರೆಲ್ಲರ ಮೇಲೆ ಸುರಿಸಿ
ನಾಸ್ತಿಕನಿಗೆ ಆಸ್ತಿಕನನ್ನಾಗಿ ಮಾಡು ಗುರುದೇವ
ಸಿದ್ಧಾರೂಢ ಗುರುದೇವ . .ಗುರುದೇವ ನಿನ್ನ ಬಾಗಿಲಿಗೆ
ಸಿದ್ಧಾರೂಢನೆಂದು ನಾ ಬಂದೆ

**– ಶ್ರೀ ಹರಿ.**

**21–09–2015**

## 1051

ಪ್ರೀತಿ ತುಂಬಿಕೊಂಡಿರುವ
ಸದ್ಗುಣಗಳು ಮನದಲ್ಲಿ ಕುದಿಯುತ್ತಿದ್ದರೆ
ಹೊರ ಬರುತ್ತಿರುವ ಸುಗಂಧದ ತರಂಗಗಳು
ಎಲ್ಲರೂ ನಿಮಗೆ ನಮಿಸುವಂತೆ ಮಾಡುತ್ತದೆ !

ಕೆಟ್ಟುಹೋಗಿರುವ ಮನಸ್ಸುಗಳಿಗೆ ಜೋಡಿಸುವ ತರಂಗ
ಜೊತೆ ಜೊತೆ ಬಾಳಲು ಒಟ್ಟಾಗಿಸುವ ತರಂಗ
ಜೋಡಣೆಯಲ್ಲಿ ದೇವರನ್ನು ಬೆರೆಸುವ ತರಂಗ
ಜಗತ್ತನ್ನೇ ಒಂದಾಗಿ ಕಾಣುವ ಪ್ರೀತಿಯ ತರಂಗ !

ಪ್ರಕೃತಿಯ ಜೊತೆ ಸೇರಿ
ಪ್ರೀತಿ ಜೀವಿಸುತ್ತಿದೆ
ನೆರವಾಗುವ ಗುಣಗಳಿಂದ
ಧಾರ್ಮಿಕ ಗುಣವುಳ್ಳ ಪ್ರೀತಿ

ವಿಶ್ವದ ಗುಣ ಪ್ರೀತಿಯನ್ನೇ ನೀಡುತ
ಏನನೂ ಮರು ಬಯಸದ ಗುಣ ಪ್ರೀತಿಗೆ
ದೇವರಲ್ಲಿ ಅಡಗಿರುವ ಹೇರಳ ಪ್ರೀತಿ
ಪ್ರೀತಿಯ ಸುಗಂಧ ವಿಶ್ವದಲ್ಲಿ ಹರಡುತ್ತಲೇ ಇದೆ !

www.sriharikhoday.com



ಪ್ರೀತಿ ತುಂಬಿಕೊಂಡಿರುವ
ಸದ್ಗುಣಗಳು ಮನದಲ್ಲಿ ಕುದಿಯುತ್ತಿದ್ದರೆ
ಹೊರ ಬರುತ್ತಿರುವ ಸುಗಂಧದ ತರಂಗಗಳು
ಎಲ್ಲರೂ ನಿಮಗೆ ನಮಿಸುವಂತೆ ಮಾಡುತ್ತದೆ !

– ಶ್ರೀ ಹರಿ.

**22–09–2015**

## 1052

ಸಂಶಯದಿಂದ ಜೀವಿಸುವುದು ಜೀವನವಲ್ಲ
ಸಂದೇಹದಿಂದ ನಡೆಯುವುದು ನಡತೆಯಲ್ಲ
ಅನುಮಾನದಿಂದ ಮಾನ ಕಾಪಾಡುವುದು ಮರ್ಯಾದೆ ಅಲ್ಲ!

ನಮ್ಮಲ್ಲಿ ನಮ್ಮನ್ನು ನಂಬಿ ಜೀವಿಸುವುದು
ಮಾನವನಿಗೆ ದೇವರ ಫಲ
ಬೇಡದ್ದನ್ನು ನೆನಸಿ ಅನುಮಾನಪಡುವುದು ಸರಿಯಲ್ಲ!

ನಮ್ಮ ಮೇಲೆ ನಮ್ಮ ನಂಬಿಕೆ ಮೇಲೆ ಸಂದೇಹಪಡುವುದು
ಸರಿಯಲ್ಲ
ನಮ್ಮ ಮಾತು ಮಾತಿನ ಮೇಲೆ ನಂಬಿಕೆ ಇಲ್ಲದ್ದಲ್ಲಿ
ಭವಿಷ್ಯ ಎಂದಿಗೂ ಜೊತೆ ಸೇರುವುದಿಲ್ಲ!

ನೋಡುತ್ತಿರುವುದು ಸರಿ ನೋಡದೆ
ಅದು ಹೀಗೆ. ಅದು ಹಾಗೆ ಎಂದು ಹೇಳುವುದು
ಶರೀರದ ಮೇಲೆ ಪ್ರಜ್ಞೆ ಇಲ್ಲ!

ಜೊತೆಯಿರುವುದರಲ್ಲಿ ಸುಖ ಪಡೆಯದೇ ಇದ್ದರೆ
ಉಸಿರು ನಿಟ್ಟುಸಿರಿನ ಬೆಲೆ ತಿಳಿಯುವುದಿಲ್ಲ!

– ಶ್ರೀ ಹರಿ.

**23-09-2015**



www.sriharikhoday.com

## 1053

ಸತ್ಯದ ನೀರಿನ ಮೇಲೆ ಜ್ಞಾನ ತೇಲುತ್ತದೆ
ತಪ್ಪನ್ನು ಮಾಡುವ ಸಮಯಗಳು ಗಮನವನ್ನು ಸೆಳೆಯುತ್ತದೆ
ಅಹಂಕಾರ ನಮ್ಮಲ್ಲಿ ತುಂಬಿಕೊಂಡಿದೆ ಎಂದು ಅರಿವಾದರೆ

ಬೇರೆಯವರ ಜೊತೆ ಬೆರೆತು
ಬೇರೆಯವರ ಜೊತೆ ಕೆಲಸವ ಮಾಡಲು
ಕೆಲಸ ನಮ್ಮ ಜೊತೆ ಬರೆತುಕೊಳ್ಳುತ್ತದೆ

ಸತ್ಯದ ಆಧಾರ ಇಲ್ಲದ ಮಾತು
ಸುಮ್ಮನೆ ವೇದಿಕೆ ಮೇಲೆ ಬೊಗಳುತ್ತಿದ್ದರೆ
ಕಾಲ ಕ್ರಮೇಣ ಕೇಳುಗರು ಎದ್ದು ಹೊರ ಹೋಗುವರು!

ಸತ್ಯದ ಮಾತುಗಳು ಸತ್ಯದಿಂದ ದೂರ ಇದ್ದರೆ
ಬೊಗಳುವ ಮಾತುಗಳು ಸತ್ಯದ ನೀರಿನಲ್ಲಿ
ಕಾಣದೇ ಮುಳುಗಿಹೋಗುತ್ತದೆ!

**– ಶ್ರೀ ಹರಿ.**

**25-09-2015**

## 1054

ಬೆಳಕಾಗಿದೆ ಏಳಲು ಮನಸ್ಸಿಲ್ಲ
ನಿನ್ನಯ ನನ್ನ ಪ್ರೀತಿಯ ಸ್ವಪ್ನಗಳು ತೇಲಿ ತೇಲಿ
ನನ್ನ ಜೊತೆಗೇ ಇದ್ದು

ಪೂರ್ವ ಪಶ್ಚಿಮಕ್ಕೆ ಇಳಿದಂತೆ
ಸ್ವಪ್ನದಲ್ಲಿ ನೋಡಲು ಇಚ್ಛೆಯಿಲ್ಲದೆ
ಬೆಳಕು ತನ್ನ ಜೊತೆಗೆ ತಾನೇ ಹರಿದು ಬರುವಂತೆ
ಜೊತೆಯಿರಲು ಬಾ ಎಂದು

ತೆರೆದ ತೋಳುಗಳಿಂದ ಕಾದು ನಿಂತಿರುವ ಪ್ರಕೃತಿ
ಪ್ರೀತಿಯನ್ನು ಅಪ್ಪಿಕೊಳ್ಳಲು ಕಾದಿರುವ ಪ್ರೀತಿ
ನಿನ್ನ ತೋಳಪ್ಪಿಗೆ ಎಚ್ಚರ ತರಿಸುತ್ತಿದೆ !

ಹೆದರದೆ ಸೂರ್ಯ ಬೆಳಕು ನೀಡುವಂತೆ
ನೀ ಹೆದರದೆ ನನಗೆ ಪ್ರೀತಿಯನ್ನು ತಾ . .
ಚಿಲಕ ಹಾಕಿ ಮಲಗಿರುವ ನನ್ನ ಕೋಣೆಗೆ
ನನ್ನ ಬಾಗಿಲನು ನೀನು ತಟ್ಟಿದಂತೆ



ನನ್ನ ಎಚ್ಚರ ಹೆಚ್ಚಾಗುತ್ತಿದೆ
ಅನೇಕ ಭಾವನೆಗಳಿಂದ ರೂಪಿಸಿರುವ ನನ್ನ ಮನ
ನನ್ನ ಭಾವನೆಗಳಿಗೆಲ್ಲ ಬೆರೆತುಕೋ. . .
ಹೇ ಕಾಂತೆಯೇ . . !

ಯಾವ ಸಂಚಿಗೂ ಜೊತೆಯಾಗದಿರುವ ನಮ್ಮ ಪ್ರೀತಿ
ಅಂಜಿಕೆ ಏತಕೆ . ? ಹೆದರಿಕೆ ಏತಕೆ . . ?
ಬಾ ನನ್ನ ಗೆಳತಿ
ಜೊತೆ ಸೇರಿ ಸೂರ್ಯನ ಉದಯವನ್ನು ನೋಡೋಣ !

**– ಶ್ರೀ ಹರಿ.**

**25–09–2015**

www.sriharikhoday.com

## 1055

ಶರಣು ಶರಣು ಗುರುರಾಜ
ಶರಣು ಶರಣು ರವಿತೇಜ
ನಂಬಿದವರ ಬೇಡಿಕೆಗಳನ್ನು ಈಡೇರಿಸುತ್ತಿರುವ
ಯೋಗಿರಾಜನೇ . .
ಶರಣು ಶರಣು ನಿನಗೆ ಶರಣು . .ಶರಣು . .!

ಮಾನವೀ ಬೃಂದಾವನದ ಜ್ಯೋತಿರೂಪ
ನಮ್ಮ ಜೀವನದ ದಾರಿದೀಪ
ನೀನೇ ನಮ್ಮ ಕಾಣುವ ದೈವರೂಪ
ಶರಣು ಶರಣು ಗುರುನಾಥ
ಶರಣು ಶರಣು ಯೋಗಿರಾಜ ಸಿದ್ಧಾರೂಡ !

ನಿನ್ನ ಧ್ಯಾನವೇ ನಮ್ಮ ಧೈರ್ಯ
ನಿನ್ನನ್ನು ಜಪಿಸಿ ಚಿಂತಿಸುವುದೇ ಸಾಹಸ
ನಿನಗೆ ನಮ್ಮ ಮೇಲಿರುವ ಪ್ರೀತಿ ಪ್ರೇಮ
ಭಕ್ತಿಯ ನಿಲಯವಾಗಿದೆ ಇಂದು
ಶರಣು ಶರಣು ಗುರುರಾಜ
ಶರಣು ಶರಣು ಸಿದ್ಧಾರೂಢ ಆನಂದ ಸಾಗರ !

**– ಶ್ರೀ ಹರಿ.**

**28-09-2015**



## 1056

ಬೆಳಕೇ ಓ ಬೆಳಕೇ . .
ನೀ ನೀಡಿದ ಬೆಳಕಲ್ಲಿ ನಿನ್ನನ್ನು ನಾ ಕಂಡೆ
ಕರುಣಾಮಯಿ ಸಾಗರವಾದ ಹೇ ಸಿದ್ಧಾರೂಢ . . !

ನಿನ್ನ ಬೆಳಕಲ್ಲಿ ನಿನ್ನ ಅಂತರಾಳದ ಉಜ್ವಲ ಬೆಳಕಿನಲ್ಲಿ
ಸತ್ಯವನ್ನು ಅರಿತು ಅಜ್ಞಾನದಿಂದ ದೂರವಾಗಿ
ನಿನ್ನ ಬೆಳಕಿನಲ್ಲಿ ಬೆಳಗುತ್ತಿರುವೆ !

ಮಲಿನವಾಗಿ ಜೀವನದಲ್ಲಿ ತೇಲಾಡುತ್ತಿದ್ದ ನಾ
ತಂದೆ ತಾಯಿಯಾದ ನಿನ್ನನ್ನು ಅರಿತು ನಾ
ಬೆಳಕಾಗಿರುವೆ ಸಿದ್ಧನೆ !

ನೀನು ನನ್ನಲ್ಲಿ ಬೆರೆತಿರುವುದು ಅರಿವಾಗಿದೆ
ಓಂ ನಮಃ ಶಿವಾಯ ನಾದದಲ್ಲಿ
ನೀನು ನಮ್ಮನ್ನು ಬೆರೆಸಿ

ಸೃಷ್ಟಿ ಸ್ಥಿತಿ ಲಯಗಳ ಜ್ಞಾನದಲ್ಲಿ ನಿನ್ನನ್ನು ಬೆರೆಸಿ
ನೀ ನೀಡಿರುವ ಜ್ಞಾನದ ಅನುಭವದ ಆನಂದದಲ್ಲಿ
ದೇವನಾದ ನಿನ್ನಲ್ಲಿ ಬೆರೆತು ಆನಂದಿಸುತ್ತಿರುವೆ

ಓಂ ನಮಃ ಶಿವಾಯ
ನಮೋ ನಮೋ ಸಿದ್ಧಾರೂಢ
ಓಂ ನಮೋ ನಮೋ ಸಿದ್ಧಾರೂಢ !

**– ಶ್ರೀ ಹರಿ.**

**28-09-2015**

www.sriharikhoday.com

## 1057

ವಿಶ್ವಕ್ಕೆ ಆಶ್ಚರ್ಯಕರವಾದ ಈ ದೇಹ
ಅಂತರಂಗದ ಪದರಗಳನ್ನು
ವಿಂಗಡಿಸುತ್ತಾ. . ವಿಂಗಡಿಸುತ್ತಾ
ಸಮಯಕ್ಕೆ ಉಪಯುಕ್ತಕರವಾಗಿ ದೇಹವನ್ನು ಉಪಯೋಗಿಸಿ
ಹೊಸ ಹೊಸ ಸಾಧನೆಗಳ ಜೊತೆ ಬೆರೆತುಕೊಳ್ಳುತ್ತಿದೆ !

ದೇಹ ಕಲೆತುಕೊಂಡಿರುವ
ನಾನು ನನ್ನದು . .ನಾನೂ ನನ್ನನ್ನು
ಸಾಧನೆಯ ದೆಸೆಗೆ ತಿರುಗಿಸಿ
ಕಾಲಕಾಲಕ್ಕೆ ಸರಿಯಾದ ಸಾಧನೆಗಳನ್ನು ಮಾಡುವ ಪ್ರಯತ್ನದಲ್ಲಿ
ಬೆರೆತು
ಸಾಧನೆ ಎಂಬ ದೇಹಜಾಲ ನರನಾಡಿಗಳಲ್ಲಿ ಹರಿಯುತ್ತಿದೆ !

ಸ್ವಪ್ನವಾದ ಮನಸ್ಸಿನ ತೇರು ಎಳೆಯುತ್ತಾ
ತೇರು ಉರುಳುತ್ತಾ ಉರುಳುತ್ತ ಮುಂದೆ ನಡೆಯುತ್ತ
ಚಕ್ರ ಭೂಮಿ ಮೇಲಿನ ಅಚ್ಚು
ಸಾಧನೆಯ ಸತ್ಯರೂಪ ಪಡೆದು
ಪ್ರಗತಿಯನ್ನೇ ಹತ್ತಿರ ತರಿಸುತ್ತಿದೆ !

www.sriharikhoday.com



ವಿಶ್ವಕ್ಕೆ ಅತಿ ಆಶ್ಚರ್ಯಕರವಾದ ಈ ದೇಹ
ಕಾಣದ ದೆಸೆಯಿಂದ ಹೊಸತನ್ನು ಅರಿತು
ಅರಿತ ಹೊಸತನ್ನು ಕ್ಷಣ ಕ್ಷಣಗಳಲ್ಲಿ ಹೊರಚೆಲ್ಲುತ್ತಿದೆ
ವಿಶ್ವಕ್ಕೆ ಆಶ್ಚರ್ಯಕರವಾದ ಈ ದೇಹ
ಅಂತರಂಗದ ಪದರಗಳನ್ನು ವಿಂಗಡಿಸುತ್ತಲೇ ಇದೆ

**– ಶ್ರೀ ಹರಿ.**

**28–09–2015**

## 1058

ಅಂತರಂಗದಲ್ಲಿ ಪ್ರಶಾಂತ ನೆಲೆ . ನಿಶ್ಶಬ್ದದ ನೆಲೆ
ಎಲ್ಲವೂ ತರಂಗಗಳ ಮೇಲೆ ನಡೆದಂತೆ
ಜ್ಞಾನದಿಂದ ಬಂದ ಲಾಭ

ಜ್ಞಾನದ ಅನುಭವದಿಂದ ಬಂದ ಲಾಭ
ಲಾಭ ಚಿಗುರಿ ಮತ್ತೆ ಬೆಳೆದಂತೆ
ದ್ವಂದ್ವ ಭಾವನೆಗಳನ್ನೆಲ್ಲ ಮರೆತು

ಭಾವನೆಯಲ್ಲಿ ಬೆಳಕು . ಪ್ರಜ್ವಲ ಬೆಳಕು . .ಬೆಳಕಿನ ಮಿನುಗು
ಪೂಜಿಸುವವರೂ ಯಾರೂ ಇಲ್ಲ
ಪೂಜೆಗೊಳ್ಳುತ್ತಿರುವುದು ಯಾವುದೂ ಇಲ್ಲ

ನಾನು ಅಲ್ಲದ ನನ್ನಲ್ಲಿ ವಿಶ್ವದ ಜೊತೆ ಇದ್ದು
ವಿಶ್ವದ ಒಳಗೂ . ವಿಶ್ವದ ಹೊರಗೂ ಕೂಡ ಆವರಿಸಿ
ವಿಶ್ವದ ಕತ್ತಲಿನ ತಪ್ಪಲಲ್ಲಿ

ಕನ್ನಡಿ ಕೂಡ ಬಿಂಬ ಪ್ರತಿಬಿಂಬಗಳಿಲ್ಲದೆ
ಹೊರ ಚೆಲ್ಲುತ್ತಲೇ ಇದೆ !

ಮಹಾನ್ ಶಕ್ತಿಯು ತರಂಗಗಳ ರೂಪದಲ್ಲಿರುವ
ಶಕ್ತಿಯ ದರ್ಶನದ ಭಾಗ್ಯ
ಭೇದಗಳನ್ನರಿಯದ ತರಂಗಗಳು



ನಾನು ನನ್ನದು ಎಂದು ಹೇಳದ
ತರಂಗಗಳ ಬಿಂಬ ಇಲ್ಲದೆ
ಪ್ರತಿಬಿಂಬಗಳು ಅನೇಕ ರೂಪದಲ್ಲಿ ಆನಂದದ ಅರಿವು

ಜೊತೆಯಾಗಿ ಬೆಳಕಾಗಿ
ಆದಿ ತಿಳಿಯದ ಬೆಳಕಿನ ಪಯಣದಲ್ಲಿ ಏನೂ ಸಿಗದೆ
ಜೊತೆಯಿರುವ ಬೆಳಕೂ ಕೂಡ ಜೊತೆಯಿರುವಾಗ

ಬೆಳಕಿನಲ್ಲೇ ಬೆರೆತು ಬೆಳಕಾಗುತ್ತ
ಭೇದವಿಲ್ಲದ ಅಣುರೇಣುಗಳು ಬೆರೆಯುತ್ತಿರಲು
ಮಡಕೆಯು ತಾನು ಮಡಕೆಯೆಂದು ಹೇಳುತ್ತಿರಲು

ಮಡಕೆ ಮಾಡಿರುವ ಮಣ್ಣು ನಾನೇ ಮಡಕೆ ಎನ್ನುವ ಭಾವನೆ
ಬಿಂಬ ಪ್ರತಿಬಿಂಬಗಳು ಒಂದಾಗುತ್ತ ಭೇದರಹಿತ ದರ್ಶನ
ಪ್ರತಿಬಿಂಬಗಳು ಸುಮ್ಮನೆ ಬೆಳೆಯುತ್ತಲೇ ಇದೆ !

**– ಶ್ರೀ ಹರಿ.**

**28-09-2015**

www.sriharikhoday.com

## 1059

ಮನುಷ್ಯನಿಗೆ ನಿಜವಾದ ಸಂಪತ್ತು
ಎಂದೂ ಮರೆಯಲಾಗದ ತಾಯಿಯ ಸಂಪತ್ತು
ಕಷ್ಟಗಳಲ್ಲಿ ಸುಖ ಬೇಕೆಂದರೆ
ಜನ್ಮ ಕೊಟ್ಟ ತಾಯಿಯ ನೆನಪು !

ಅತಿ ಹೆಚ್ಚಿನ ಸುಖದ ಅನುಭವ
ತಾಯಿಯ ನೆನಪುಗಳು
ಮನಸ್ಸಿನ ಆಳದಲ್ಲಿ ಅಡಗಿರುವ
ಯಾರ ಕಣ್ಣಿಗೂ ಕಾಣಿಸದೆ

ಆಳದಲ್ಲಿ ಇದ್ದು ಮನದಲ್ಲಿ ಬಚ್ಚಿಟ್ಟುಕೊಂಡಿರುವ ತಾಯಿಯ ಸಂಪತ್ತು
ಜೊತೆ ಹೋಲಿಸಲಾಗದ
ಬೇರೆ ಯಾರೂ ನಮಗೆ ತಾಯಿಯಾಗದ
ನನ್ನ ತಾಯಿಯ ಷರತ್ತು

ಪವಿತ್ರವಾದ ಮನಸ್ಸಿನ ಆಳದ ಭೂಮಿಕೆ
ಯಾರಿಂದಲೂ ಹಾನಿ ಬಯಸದ ತಾಯಿಯ ಕರುಳು
ವಂಚನೆಗಳಿಲ್ಲದೆ ಪವಿತ್ರವಾದ ಬಾಳು ಕಲಿಸಿದ
ನಮ್ಮ ತಾಯಿಯ ಕರುಳು !

www.sriharikhoday.com



ದಯಾಪರ ಮನಸ್ಸುಳ್ಳ ತಾಯಿ
ಕ್ಷಮಿಸುತ್ತಾ ಜೀವನದ ಮೂಲಬೇರನ್ನು ಬಲಪಡಿಸುತ್ತ
ಜೀವನದಲ್ಲಿ ಹೊಸ ಜೀವನ ತೋರಿಸಿ
ಹೊಸತು ಹೊಸದನ್ನು ತೋರಿಸುತ್ತ

ಹೊಸತನ್ನು ಮನದ ತೋಟದಲ್ಲಿ ಬೆಳೆಸಲು ಕಲಿಸಿ
ದುರುಳ ಮನಸ್ಸನ್ನು ಶುದ್ಧ ಮಾಡಿಸಿರುವ ತಾಯಿ
ತಾಯಿಯ ನನೆಪು ಮನಸ್ಸಿಗೆ . .ನಿಜವಾದ ಸಂಪತ್ತು
ಯತ್ನಿಸಿದರೂ ಮರೆಯಲಾಗದ

ಜನ್ಮ ಕೊಟ್ಟ ತಾಯಿಯ ನೆನಪು
ಜೀವನದಲ್ಲಿ ಅತಿ ಮೌಲ್ಯವಾದ ಸಂಪತ್ತು !

– **ಶ್ರೀ ಹರಿ.**

## 1060

ನಾನು ಜೀವನದಲ್ಲಿ ಒಂದೂ ತಪ್ಪು
ಮಾಡಿಲ್ಲವೆಂದು ಹೇಳುವವರು
ಅವರು ಯಾವ ಕೆಲಸವನ್ನೂ ಮಾಡಲು ಎಂದೂ ಪ್ರಯತ್ನಿಸಿಲ್ಲ!

ತನ್ನ ಮೇಲೆ ತನ್ನ ಪ್ರಜ್ಞೆ ಇಲ್ಲದ್ದಲ್ಲಿ
ತಾನು ಸುಳ್ಳು ಹೇಳುತ್ತಿರುವುದು ಎಂಬ ಭಾವನೆ
ತನಗೂ ಸರಿಯಿಲ್ಲ ಬೇರೆಯವರಿಗೂ ಸರಿಯಿಲ್ಲ!

ತನ್ನಲ್ಲಿ ಬೆಳೆದುಕೊಂಡಿರುವ ಸಂಶಯ
ಯಾವ ಕೆಲಸ ಮಾಡುವ ಸಮಯದಲ್ಲಿ
ಇದು ಸರಿಯಿಲ್ಲ ಅದು ಸರಿಯಿಲ್ಲ ಎಂಬ

ಮನೋ ಅಭ್ಯಾಸ ಬೇರೆಯವರಲ್ಲಿ
ತಪ್ಪು ಹುಡುಕುವುದೇ ಅಭ್ಯಾಸವಾಗಿ ಅವನ ಜೀವನದಲ್ಲಿ
ಸರಿಯಿದ್ದರೂ ಸರಿಯಿಲ್ಲವೆಂದು ಹೇಳುವನು!

ಬೆಳಗಿನಿಂದ ಸಂಜೆಯವರೆಗೂ
ಹಂತಹಂತದ ದಿನಗಳಲ್ಲಿ ತಪ್ಪನ್ನೇ ಹುಡುಕುತ್ತಿರುವ ಅಭ್ಯಾಸ
ಅವನ ಅಂತರಾಳದಲ್ಲಿ ಆಳ ಕಮ್ಮಿ ಇದ್ದರೆ



ತಾನು ಸರಿ ನಡತೆಯ ಜೊತೆ ಬೆರೆಯದೆ
ತಪ್ಪನ್ನೇ ಹುಡುಕುವ ವಾಡಿಕೆಯಾದರೆ
ಜೀವನದಲ್ಲಿ ತಾನು ಏನೂ ಸಾಧನೆ ಮಾಡದೆ

ಬರೀ ತಪ್ಪು ಹುಡುಕುವ
ಜೀವನ ಬಂದು ಹೋದರೂ ಜೊತೆ ಜೀವಿಸುವವರು
ಯಾರೂ ಬಂದು ಹೋದ ವಿಷಯ ಲೆಕ್ಕಕ್ಕೆ ಇಲ್ಲ!

ನಾನು ಜೀವನದಲ್ಲಿ ಒಂದೂ ತಪ್ಪು
ಮಾಡಿಲ್ಲವೆಂದು ಹೇಳುವವರು
ಅವರು ಯಾವ ಕೆಲಸವನ್ನೂ ಮಾಡಲು ಎಂದೂ ಪ್ರಯತ್ನಿಸಿಲ್ಲ!

**– ಶ್ರೀ ಹರಿ.**

**30–09–2015**

www.sriharikhoday.com

## 1061

ಕೊನೆ ಮೊದಲಿಲ್ಲದ ಅಂತರಂಗದ ಪ್ರಕಾಶ
ಕತ್ತಲಿನ ಕೊಪ್ಪಲಲ್ಲಿ ನಿಶ್ಯಬ್ದದ ತಪ್ಪಲು
ಎಲ್ಲವೂ ತರಂಗಗಳಾಗಿ ಅಂತರಂಗದಲ್ಲಿ ಪ್ರಕಾಶ
ಏನೋ ಒಂದು ಲಾಭವಾಗಿ ಬರುತ್ತಿರುವ ಶಕ್ತಿಯ ತರಂಗಗಳು !

ಲಾಭವೇ ಚಿಗುರುತ್ತ ಹಾಲಿನ ಬೆಳಕಿನ ದರ್ಶನ
ಮೈ ಮರೆತು ಆಕಾಶದ ಪಥದಲ್ಲಿ ಚಿತ್ತದ ರಥ ನಡೆದಂತೆ
ಹೊಸ ರೀತಿಯ ಭಾವನೆಗಳು . . ಪ್ರಜ್ವಲ ಬೆಳಕುಳ್ಳ ಭಾವನೆಗಳು
ಪೂಜಿಸುವವರೂ ಯಾರೂ ಇಲ್ಲ . .ಪೂಜೆಗೊಳ್ಳುವುದು
ಯಾವುದೂ ಇಲ್ಲ !

ಶ್ರದ್ಧೆಯಿಂದ ಮುನ್ನಡೆಯುತ್ತಿದೆ ಅಡೆತಡೆಗಳ ಹಳ್ಳಗಳಿಲ್ಲದೆ
ನಡೆದಂತೆ
ಪ್ರಕೃತಿಯೇ ತನ್ನ ಗುರಿಯತ್ತ ಎಳೆಯುತ್ತಿದೆ
ಧ್ಯಾನದಲ್ಲಿ ಶತಮಾನಗಳೇ ಉರುಳಿದಂತೆ
ಯಾವ ನೆಂಟರ ಸಂಬಂಧವಿಲ್ಲದೆ ಬಿತ್ತಿದ ಬಿಂದು ಅರಳುತ್ತಲೇ
ಇದೆ !

ಕಾಲ ತನ್ನ ಇಚ್ಚೆ ಬಂದಂತೆ ನಮ್ಮನ್ನು ಎಳೆಯುತ್ತಿದೆ
ಅನುಭವದ ನೆನಪುಗಳು ಬೆಳೆಯುತ್ತಲೇ ಇದೆ



ಕಣ್ಣಿಗೆ ಕಾಣಿಸದ ಶ್ರೀಗಂಧದಂತೆ ಮೂಲಾಧಾರದಿಂದ
ತುಂಬಿ ಹರಿಯುತ್ತಿರುವ ಆನಂದ

ಶೂನ್ಯವೇ ವಿಶ್ವದ ಗುರುವಾಗಿ ಪೀಠಾಲಂಕಾರವಾಗಿ ಕುಳಿತಿರುವ
ಭಾವನೆ
ಅನುಭವಕ್ಕೆ ತಲೆತಗ್ಗಿಸುವ ಒತ್ತಡ
ನಾನು ಅಲ್ಲದ ನಾ ವಿಶ್ವದ ಜೊತೆಗೆ ಬೆರೆತು
ವಿಶ್ವದ ಒಳಗೂ ಹೊರಗೂ ನಾ ಆವರಿಸಿದಂತೆ

ಬಿಂಬ ಪ್ರತಿಬಿಂಬಗಳಿಲ್ಲದೆ ಹೊರ ಚೆಲ್ಲಿ ಹೋಗುತ್ತಿರುವ
ಕತ್ತಲಿನ ಜೊತೆಗೆ ಬೆಳಕು . . ಬೆಳಕಿನ ಜೊತೆಗೆ ಕತ್ತಲು
ಮಹಾನ್ ವಿಶ್ವದ ಶಕ್ತಿಗಳ ಜೊತೆಗೆ
ಹೊಸ ಹೊಸ ರೀತಿ ತರಂಗಗಳು ಭೇದಗಳಿಲ್ಲದ ತರಂಗಗಳು

ನಾನು ನನ್ನದು ಎಂದು ಅರಿಯದ ತರಂಗಗಳು
ಪ್ರತಿಬಿಂಬಗಳ ಜೊತೆ ಆನಂದದ ಅರಿವು
ಬೆಳಕಿನ ಜೊತೆ ನಾನೇ ಬೆಳಕಾಗಿ ಆದಿ . . ಕೊನೆ ತಿಳಿಯದ
ಪಯಣ
ಬೆಳಕೂ ಕೂಡ ಜೊತೆಯಲ್ಲೇ ಇದ್ದಂತೆ

ಬೆಳಕಿನ ಜೊತೆ ಬೆರೆತು ನಾ ಬೆಳಕಾಗುತ್ತ
ಭೇದಗಳಿಲ್ಲದ ಅಣುರೇಣುಗಳಲ್ಲಿ ಬೆರೆಯುತ್ತ
ಬಿಂಬ ಪ್ರತಿಬಿಂಬಗಳು ಒಂದಾಗುತ್ತ
ಶೂನ್ಯದ ಶಕ್ತಿಯ ಅರಿವು ಎಲ್ಲವೂ ಬೆಳೆಯುತ್ತಲೇ ಇದೆ !

ಪ್ರಾಪಂಚಿಕ ಸ್ಥಿತಿಗೆ ಜೊತೆ ಬೆರೆಯುವ ಇಷ್ಟವಿಲ್ಲದೆ
ಹೊಸ ಶಕ್ತಿಗಳೇ ಶಕ್ತಿಗಳ ಜೊತೆ ನೆಂಟಿನ ಸಂಬಂಧ ಬೆಳೆಸುತ್ತ
ನಾನಾ ದಿವ್ಯ ಚೇತನದ ಮೂಲ ಬಿಂದುವಾಗಿ
ಅರ್ಥವಿಲ್ಲದ ನಾನು ನನ್ನದು ನನ್ನಿಂದ ಜಾರಿ ಹೊರ ಚೆಲ್ಲಿ
ಹೋಗಿದೆ !

www.sriharikhoday.com

ಯಾವುದೇ ಬೇಡಿಕೆಯಿಲ್ಲದೆ ಕ್ರಿಯೆ ಇಲ್ಲ
ಬೇಡಿಕೆಯಿಲ್ಲದ ಕ್ರಿಯೆಗಳಲ್ಲಿ ಮರೆತುಹೋದ ನಾ ಬೇಡಿಕೆಗಳಿಗೆ
ನನ್ನಲ್ಲಿ
ಲಾಭವಾಗಿ ಬಂದಿರುವ ಶಕ್ತಿ ಮಾತನಾಡುತ್ತಿರುವುದ ನಾ
ನೋಡಿದರೆ
ನನಗೇ ತಿಳಿಯದೆ ಬೇಡಿಕೆಗಳು ಪ್ರಗತಿಯ ಬೆಳೆ ಬೆಳೆಸುತ್ತಿದೆ !

**- ಶ್ರೀ ಹರಿ.**

**03-10-2015**



# 1062

ನನ್ನ ದೇಹಕ್ಕೆ ದೇವರು ಆರೋಗ್ಯ ನೀಡಿರುವುದು ಸಂತೋಷ
ನನ್ನ ಪ್ರೀತಿ ಪ್ರೇಮಗಳಿಗೆ ದೊರಕಿರುವ ಪ್ರೀತಿ-ಪ್ರೇಮಗಳಿಂದ
ಸಂತೋಷ
ನನ್ನ ನಾಲಿಗೆಗೆ ಔತಣದ ರುಚಿ ನೀಡಿದ ಸಂತೋಷ
ಅನೇಕ ರೀತಿಯ ಸಂತೋಷಗಳು ನನ್ನ ಜೀವನದಲ್ಲಿ ಸಂತೋಷ !

ತನ್ನ ಸಂಬಂಧಗಳಿಂದ ಸಂತೋಷ
ತನ್ನ ಅಣ್ಣ-ತಮ್ಮಂದಿರುಗಳಿಂದ ಸಂತೋಷ
ತಮ್ಮ ಮಕ್ಕಳ ಜೊತೆ ಆಟ ಆಡುವ ಸಮಯ ಸಂತೋಷ
ತಮ್ಮ ಮನೆಯ ಅಕ್ಕ ತಂಗಿಗಳ ಸಂತೋಷ

ಸ್ನೇಹಿತರಿಂದ ದೊರಕುವ ಸಂತೋಷ
ಮೃಷ್ಠಾನ್ನದ ಊಟ ಮಾಡಿ ತೇಗು ಬರುವ ಸಂತೋಷ
ತನ್ನ ಅಂದವನ್ನು ಕನ್ನಡಿಯಲ್ಲಿ ನೋಡಿ
ಪ್ರತಿಬಿಂಬದ ರೂಪ ನೋಡಿರುವ ಸಂತೋಷ !

ತನ್ನ ಒಪ್ಪಿನಂತೆ ಎಲ್ಲವೂ ನಡೆಯುತ್ತಿರುವ ಸಂತೋಷ
ತನಗೆ ಕುದುರೆ ಗಾಡಿ . .ತನ್ನ ಎಲ್ಲಾ ವಾಹನಗಳಿಂದ ಬರುವ
ಸಂತೋಷ
ತನ್ನ ನೆರೆಹೊರೆಯವರ ಜೊತೆ ಮಾತು ಮಾತುಗಳ ಸಂತೋಷ
ತಾನು ಬೆಳೆಸಿರುವ ಹಸುರಿನ ಬೆಳೆ ನೋಡಿ ಪಡುವ ಸಂತೋಷ

www.shriharikhoday.com

ನಮ್ಮ ಮನೆಯ ಕಣಜ ತುಂಬಿರುವ ಸಂತೋಷ
ತಾನು ಉತ್ತಮ ಪತಿ ಪಡೆದಿರುವನೆಂಬ ಸಂತೋಷ
ತನ್ನನ್ನು ಕೊಂಡಾಡುವ ಜನ ಸಮೂಹದಿಂದ ಸಂತೋಷ
ತನ್ನ ಹೆಸರು ಪತ್ರಿಕೆಯಲ್ಲಿ ಪ್ರಕಟವಾಗಿರುವುದ ಓದಿ ಸಂತೋಷ

ತಾನು ಕಪ್ಪಗಿರುವೆ . . ಕೆಂಪಗಿರುವೆನೆಂಬ ಸಂತೋಷ ತನ್ನ ರೂಪವನ್ನು
ತನ್ನಲ್ಲಿಯೇ ಕನ್ನಡಿಯ ಕಣ್ ದೃಷ್ಟಿಯಲ್ಲಿ ಬಂದಾಗ ಕಾಣುವ
ಸಂತೋಷ
ತಮ್ಮ ಮಕ್ಕಳು ಅಳುತ್ತಿರುವ ಧ್ವನಿ ಕೇಳಿ ತಾತನಿಗೆ ಆಗುವ ಸಂತೋಷ
ತನ್ನ ಜಮೀನಿನಲ್ಲಿ ತೋಡಿರುವ ಬಾವಿಯಲ್ಲಿ ಹೆಚ್ಚಿನ ನೀರು
ತಂದಿರುವ ಸಂತೋಷ

ತನ್ನ ಕಚೇರಿಯಲ್ಲಿ ಜೊತೆಗಿರುವವರು ತಲೆ ಬಗ್ಗಿಸಿ ನಮಿಸುವ
ಸಂತೋಷ
ತನ್ನ ಆಸ್ತಿ ವಿವಾದದಲ್ಲಿ ನ್ಯಾಯಾಂಗ ತನ್ನ ರೀತಿ ಜಯ ನೀಡಿರುವ
ಸಂತೋಷ
ತಾನು ಬರೆದಿರುವ ಕವನಗಳು ಬೇರೆಯವರು ಚೆನ್ನಾಗಿದೆ ಎಂದು
ಹೇಳುವಾಗಿನ ಸಂತೋಷ
ತಾನು ನೋಡಿದ ನಾಟಕ ತನ್ನ ನಂಬಿದ ಅಭಿಪ್ರಾಯಗಳಂತಿರುವ
ಸಂತೋಷ !

ತನ್ನ ತೋಟದಲ್ಲಿ ಬೆಳೆಸಿರುವ ಹೂವಿನ ರೂಪದಲ್ಲಿನ ಸಂತೋಷ
ಜೂಜಾಟದಲ್ಲಿ ತಾನು ಗೆದ್ದಿರುವೆನೆಂಬ ವದಂತಿಯ ಸಂತೋಷ
ತಾನು ಕಲಿತ ನನ್ನಲ್ಲಿರುವ ವಿಷಯಗಳು ಸರಿ ಎಂಬ ಸಂತೋಷ
ನಾನು ನನ್ನ ಕಾಲಿನ ಮೇಲೆ ನಿಂತು ಜೀವನ ನಡೆಸುತ್ತಿರುವೆನೆಂಬ
ಸಂತೋಷ !

ದೇವರ ಗುಡಿಯಲ್ಲಿ ದೇವರ ಬಲಗೈಯಿಂದ ಹೂ ಬಿದ್ದುದನ್ನು ಕಂಡು
ಸಂತೋಷ
ತನ್ನಲ್ಲಿರುವ ಕೆಟ್ಟ ಭಾವನೆಯನ್ನು ತೊಲಗಿಸಿದಾಗ ಬರುವ ಸಂತೋಷ
ತಾನು ಮಾಡಿರುವ ಸಾಲ ಮುಗಿದಿದೆ ಎಂಬ ಸವಿನುಡಿಯ ಸಂತೋಷ



ಮದುವೆ ಮೆರವಣಿಗೆಯಲ್ಲಿ ಎಲ್ಲರೂ ನಮ್ಮ ಜೋಡಿ ನೋಡಿ
ಆನಂದಿಸುವ ಕಣ್ಣೋಟಗಳ ಸಂತೋಷ

ತನ್ನ ಗೆಳೆಯ ಗೆಳತಿಯರ ಅಪ್ಪುಗೆಗಳಲ್ಲಿನ ಸಂತೋಷ
ತನ್ನ ಶಿಲ್ಪಗಳ ಕೆತ್ತನೆಯಿಂದ ಶಿಲ್ಪಿಗೆ ದೊರಕಿರುವ ಸಂತೋಷ
ತನ್ನ ಕುದುರೆ ಗೆದ್ದಿದೆ ಎಂದು ಕುದುರೆ ಸವಾರನ ಸಂತೋಷ
ತಾನು ಬೇಡಿದ ಗುರುಗಳಿಂದ ಸಿದ್ಧಿಯಾಗಿ ಬಂದಿರುವ ಸಂತೋಷ

ತನಗೆ ಹಾಡಲು ಬರದೆ ತಾನು ಹಾಡುತ್ತಿದ್ದೇನೆಂಬ ಸಂತೋಷ
ತಾನು ಕೊನೆ ಮೊದಲುಗಳ ಜೊತೆ ಸೇರಿ ಬೇಡದೆ ಬರುವ
ಸಂತೋಷ
ದಾನ ಧರ್ಮಗಳಿಂದ ಬೇರೆಯವರ ಬಾಯಿಂದ ಒಳ್ಳೆಯದಾಗಲಿ
ಎಂಬ ಆಶೀರ್ವಾದಗಳ ಸಂತೋಷ !
ತನ್ನ ಮನೆಯಲ್ಲಿ ಎಲ್ಲರ ಸುಖದಲ್ಲಿ ತಾನು ಬೆರೆತಿರುವ ಸಂತೋಷ

ತನ್ನ ಜೀವನ ಎಂದೂ ಪೂರ್ಣದಲ್ಲಿ ಬೆರೆತಿರುವ ಬಾಳಿನ ಸಂತೋಷ
ತಾನೇ ಸಂತೋಷವಾಗಿ ಬೇರೆಯವರ ಜೊತೆ ಬೆರೆಯುವ ಸಂತೋಷ
ಸಂತೋಷವು ತಾನೇ ಒಂಟಿಯಾಗಿ ಹೊರಬರದೆ
ಬೆರೆತು ಬೇರೆಯವರಿಂದ ಬರುವುದೇ ಸಂತೋಷ !

ಹೊರಬರುವ ಸಂತೋಷ ನನ್ನ ಸಂತೋಷವಾದರೂ
ನಮ್ಮ ಸಂತೋಷವಾಗಿರುವ ಮಾತು ಏನೂ ಹೊರಬರದೆ
ಯೋಚನೆ ಹರಿಸಿದಾದ ಮೇಲೆ ಬೆರೆತು
ಯೋಚನೆಯಿಂದ ಬಂದ ಪ್ರತಿಬಿಂಬದ ಸಂತೋಷ

ವಿಶ್ವವೇ ಸಂತೋಷ . . ಸೂರ್ಯನಿಗೆ ಬೆಳಕೇ ಸಂತೋಷ
ಉರಿಯುತ್ತಿರುವ ಸಣ್ಣ ದೀಪಕ್ಕೆ ಕತ್ತಲಿನ ಜೊತೆ ಸಂತೋಷ
ಕೊನೆ ಮೊದಲಿಲ್ಲದ ವರ್ಣಿಸಲಾಗದ ಟಿಪ್ಪಣಿ ಬರೆಯಲಾಗದ
ಆಗಿ ಹೋಗಿರುವ ಅಸಂಖ್ಯಾತ ಘಟನೆಗಳೇ ಸಂತೋಷ

**– ಶ್ರೀ ಹರಿ.**

**5–10–2015**



www.sriharikhoday.com

## 1063

ನಾನು ನನ್ನ ಆಳದಲ್ಲಿ ಜಾರುತಾ ಜಾರುತಾ ನಾನೇ ಮರೆಯಾದೆ
ಕಣ್ಣಿಗೇ ಇಲ್ಲದ ಬೆಳಕಿನ ನೋಟ ಜಾರಿ ಸಮುದ್ರದಲ್ಲಿ ಬೆರೆತಂತೆ
ತನಗೆ ಯಾವ ಬೇಡಿಕೆಯೂ ಇಲ್ಲದ ಸಮುದ್ರ
ಆಳಗಲ ಹುಡುಕಲಾಗದ ಸಮುದ್ರ

ಸಂಬಂಧಗಳನ್ನು ಬೆಳೆಸಿಕೊಳ್ಳುವ ಸಮುದ್ರ
ತುಂಬುತನದಲ್ಲಿ ಇರುವ ಸಮುದ್ರ ಜೊತೆಗೆ ಆಕಾಶ . . . ಗಾಳಿ
ತನ್ನ ಅಲೆಗಳನ್ನು ಎಣಿಸಲು ಜೊತೆಗಿರುವ ಕಾಲ
ಬೆಂಕಿಯಂತೆ ಉರಿಯುತ್ತಿರುವ ಹೊಸ ರೂಪದ ಸೂರ್ಯ

ನಾನು ತೇಲುತ್ತಿರುವ ನೆನಪುಗಳ ದೋಣಿಯಂತೆ, ತೇಲುತಾ ..
ತೇಲುತಾ
ದೋಣಿಗಳು ಮತ್ತೊಂದು ದೋಣಿಗಳ ದೆಸೆ ತಿಳಿಯದೇ ಇರುವಂತೆ

ಒಂದೊಂದು ದೋಣಿ ಒಂದೊಂದು ದೆಸೆಗೆ
ಆಸೆಗಳ ದೋಣಿ. . .ಬೇಕು ಬೇಡಗಳ ಜೊತೆ
ನಾನು ಚಿಕ್ಕದೋಣಿ. ನಾನು ದೊಡ್ಡ ದೋಣಿ . . ಎಂಬ
ಜಗಳಗಳು
ಸಾಮರ್ಥ್ಯವುಳ್ಳ ದೋಣಿಯಂತಹ ಜಗಳಗಳ ನೋಡಿ ಸಮುದ್ರ

ತೇಲುವುದಕ್ಕೆ ಬಿಡದೆ ಮರಳ ದಡಕ್ಕೆ ದೂರ ತಳ್ಳುತ್ತಿದೆ
ಮರಳ ಮೇಲಿರುವ ದೋಣಿಗಳು ಮನಸ್ಸಿನ ಆಸೆಗಳ
ದೋಣಿಗಳು



ಮರಳ ಮೇಲೆ ತೇಲಾಡದೆ ಯಾವ ಗುರಿಯೂ ಸಾಧನೆಯಾಗದೆ
ಜಗಳಗಳ ಸಂತೆಯಲ್ಲಿ ಬರೀ ತಮ್ಮ ಉದ್ದೇಶಗಳನ್ನೇ ಮಾರಾಟ
ಮಾಡುತ್ತಿದ್ದಾರೆ !

ಸಮುದ್ರದ ಒಪ್ಪಿಗೆಯ ದೋಣಿಗಳು
ಆನಂದದಲ್ಲಿ ಆನಂದ ಅನುಭವಿಸುತ್ತಿರುವ ಸಮುದ್ರ
ತನ್ನ ಮೇಲೆ ದೋಣಿಗಳು ತೇಲಾಡು
ಸಂತಸಪಡುತ್ತ ಕಣ್ಣಿಗೆ ಕಾಣದ ದೂರದ ಉದ್ದೇಶಗಳನ್ನು

ಸಾಧಿಸಿದ ದೋಣಿಗಳು . . ಸಾಧಿಸುವ ಉದ್ದೇಶಗಳನ್ನು ಸಾಧಿಸಿ
ಹಿಂದೆ ಬರುತ್ತಿವೆ
ತೇಲಾಡುತ್ತಿರುವ ದೋಣಿಗಳು ಸಾಗರದ ಆನಂದದ ಜೊತೆ
ಬೆರೆತು
ತಮ್ಮ ಹೊಸ ಹೊಸ ಉದ್ದೇಶಗಳನ್ನು ಆನಂದದ ಸಾಗರದಲ್ಲಿ
ತೇಲಿಸಿ . . . ಸಾಧಿಸಿ

ಆನಂದದ ಸಾಗರದಲ್ಲಿ ಹೊಸ ಹೊಸ ದೆಸೆಗಳನ್ನು ಹುಡುಕುತ್ತ
ತಮಗೆ ಒಪ್ಪುವ ಉದ್ದೇಶಗಳು ಸಲಿ ಸಲಿ ಸಾಧನೆಯಾಗುತ್ತ
ಅನಂತ ಆನಂದದಲ್ಲಿರುವ ಸಾಗರ
ಆಗಾಗ್ಗೆ ಬರುವ ಪ್ರೀತಿ–ಪ್ರೇಮದ ಅಲೆಗಳು

ಅತಿ ಉಬ್ಬರವಾಗಿ ಪ್ರೀತಿ–ಪ್ರೇಮದ ಅಲೆಗಳು
ರಭಸದಿಂದ ಬಂದು ಸುಮ್ಮನಿರುವ
ದಡಗಳ ಮೇಲೆ ಅಲೆಗಳು ಮುತ್ತನ್ನು ನೀಡುತ್ತ
ತೃಪ್ತಿ ಸಮಾಧಾನದಿಂದ ಆನಂದ ಸಾಗರದಿಂದ ಭಾವನೆಯನ್ನು
ಜೊತೆಗೆ ಒಯ್ದು

ದಡದ ಮೇಲೆ ಬಂದ ಆನಂದವನ್ನು ಹುಡುಕಲು
ಸಾಗರದ ನೀರು ದಡದಲ್ಲೇ ಕರಗಿಹೋಗಿ
ಎಂದೂ ಮರೆಯಲಾಗದ ಸುಖವನ್ನು ಬಯಸುತ್ತ
ಅಲೆಯಾಗಿ ಬಂದ ಆನಂದ ಮತ್ತೆ ಆನಂದ ಸಾಗರವಾಗುತ್ತಿದೆ !
ನಾನು ನನ್ನದು . .ನಾನು ದೊಡ್ಡದು . .ಚಿಕ್ಕದು

www.sriharikhoday.com

ನಾನು ಬೇರೆ . . .ನೀ ಬೇರೆಯೆಂಬ
ಮರಳ ಮೇಲೆ ನಿಂತಿರುವ ದೋಣಿಗಳು
ಬಿಸಿಲಿಗೆ ಒಣಗಿ ಬೆಂಡಾಗುತ್ತ ಯಾವ ಸಾಧನೆಯನ್ನೂ
ಮಾಡಲಾಗದೆ

ಬರೀ ದೋಣಿಯ ರೂಪ ಬೇಡದ ಭಾವನೆಗಳು
ದೋಣಿ ಬರೀ ಮರದ ತೊಲೆಯಾಗಿ ತೇಲುವ ದಿಮ್ಮಿಗಳಾಗಿ
ಆನಂದ ಸಾಗರದಿಂದ ದೂರವಾಗುತ್ತ
ಮರಳ ಮೇಲೆ ಒಣಗಿ ನಿಂತಿವೆ !

ಜೀವನದ ವಿಚಾರದಲ್ಲಿ ಮಾನವನೂ ಕೂಡ
ನಾನಾ ವಿಚಾರಗಳನ್ನು ಮಾಡುತ್ತಿರುವ ತೇಲಲಾಗದ ದೋಣಿಗಳು
ಆನಂದದ ಅರ್ಥ ತಿಳಿಯದ ನೆಮ್ಮದಿಯ ವಿಚಾರಗಳನ್ನು ತಿಳಿಯದೆ
ದೆಸೆಗಳನ್ನು ಸಾಧನೆ ಮಾಡಲಾಗದೆ

ಮರಳ ಮೇಲೆ ನಿಂತು ಒಣಗಿಹೋಗುತ್ತಿರುವ ತೇಲಲಾಗದ
ಮಾನವನ ಅನೇಕ ಉದ್ದೇಶಗಳು
ದೋಣಿಗಳಂತೆ ಮರಳ ಮೇಲೆ ನಿಂತಿದೆ !

ಆನಂದದಲ್ಲಿ ಬೆರೆಯುವ ಯಾವ ಉದ್ದೇಶಗಳು . . ಭಾವನೆಗಳು
ಬರೀ ಭಾವನೆಯಾಗಿ ಮರಳಿನ ದಡದ ಮೇಲೆ ಮರದ
ದಿಮದಮಿಗಳಾಗುತ್ತಿವೆ
ಜೀವನದ ಜೊತೆಗಿರುವ ಆನಂದವನ್ನು ತಿಳಿಯದೆ

ಅರ್ಥೈಸಿಕೊಳ್ಳದೆ ಬರೀ ಉದ್ದೇಶಗಳ ಭಾವನೆಯ ಸುಳಿಯಲ್ಲಿ
ಸಿಲುಕಿ ಮುಂದೆ ಸಾಗಲು ಆಗದೆ
ಮನದಲ್ಲೇ ಆನಂದವನ್ನು ಬೆಳೆಸಿಕೊಂಡರೆ
ಎಲ್ಲಾ ಉದ್ದೇಶಗಳನ್ನು ಸಾಧಿಸುವ ಯೋಗ್ಯ ಉದ್ದೇಶಗಳಾಗುತ್ತಿವೆ !

**– ಶ್ರೀ ಹರಿ.**

**06–10–2015**



www.sriharikhoday.com

## 1064

ಪ್ರೀತಿಯನ್ನು ತೋರಿಸಲು ಹೆದರಿಕೆ
ಪ್ರೀತಿಯನ್ನು ತೋರಿಸಿದರೆ ಬೆದರಿಕೆಯ ಹೆದರಿಕೆ
ಹೇಡಿತನವನ್ನು ಕಲಿಸುತ್ತಿರುವ ಹೆದರಿಕೆ
ಬೇಕಿದೆ ಈಗ ಮಾನವನಲ್ಲಿ ಮಾತಿನ ಜಾಣಗಾರಿಕೆ !

ಬಾಯಿಂದ ಹೇಳಲಾಗದ ಮನಸ್ಸಿನ ಅನಿಸಿಕೆ
ಮಾತು ಮಾತಿನಲ್ಲಿ ಅಪನಂಬಿಕೆ
ವಿಚಿತ್ರವಾದ ರಾಜಕೀಯ ವ್ಯವಸ್ಥೆಯ ಆಳ್ವಿಕೆ
ಸರಿಪಡಿಸಲು ಬೇಕಾಗಿದೆ ಎದೆಗಾರಿಕೆ !

ಹೆದರಿಸುವುದೇ ರಾಜಕೀಯ ಅಳವಡಿಕೆ
ಮಾತಿನ ಹೆದರಿಕೆ ಬೆದರಿಕೆಗಳೇ ಆಗಿರುವುದು
ಇಂದು ಮಾತಿನ ಕೈಗಾರಿಕೆ
ಮಾತು ಮಾತುಗಳಲ್ಲಿ ಕೊಕ್ಕೆ ಅಸಹ್ಯವಾದ ನಂಬಲಾಗದ
ಚಟುವಟಿಕೆ !

ನೋಡುತ್ತಿರುವ ಆಕಾಶದಲ್ಲಿರುವ ಚಂದ್ರಿಕೆ
ಜನಕ್ಕೆ ಏನೋ ಬಂದಿದೆ ಯಾಮಾರಿಕೆ
ಎಚ್ಚರವನ್ನು ಮರೆತಿರುವ ಜನಗಳಿಗೆ
ನಾಯಕರು ನೀಡಬೇಕಾಗಿದೆ ಎಚ್ಚರಿಕೆ !

ಜನಗಳು ಯಾಮಾರದೆ ತೋರಿಸಬೇಕಾಗಿದೆ ಈಗ ತಮ್ಮ ಅಗ್ಗಳಿಕೆ
ಎಣಿಕೆ ಮಾಡಲಾರದಷ್ಟು ಕೆಳಗಿಳಿದಿದೆ ಮಾತು ಮಾತಿನ ಕಥೆಗಾರಿಕೆ
ಜನಕ್ಕೆ ಬೇಕಾಗಿರುವುದು ಎಚ್ಚರವುಳ್ಳ ಒಕ್ಕಲು ಮಾಡುವ
ನಂಬಿಕೆಯಿಂದ ಜೀವಿಸುವ ಧೈರ್ಯಶಾಲಿಕೆ

ಮಾತಿನ ಮಲ್ಲ . . .ಧರ್ಮದ ಅರ್ಥ ತಿಳಿದಿರುವ ಆತ್ಮಚಿಂತಕ
ಹೆದರಿಸದೇ ಪ್ರೀತಿ ತೋರಿಸಬೇಕಾಗಿದೆ
ವಿಶ್ವಾಸವನ್ನು ಗಳಿಸಬೇಕಾಗಿದೆ
ಇದು ಮಾತನಾಡಲಾಗದೆ ಎಲ್ಲರ ಮನದಲ್ಲಿ ಕೊಳೆಯುತ್ತಿರುವ
ಹರಿಕೆ !

**– ಶ್ರೀ ಹರಿ.**

**07–10–2015**



# 1065

ಕನಸು ನೆನಸು ಮಾಡಬೇಕಾದರೆ
ನಮ್ಮ ಜೀವನದ ರೀತಿಯನ್ನು ಬದಲಿಸಬೇಕು
ಕನಸನ್ನು ನನಸು ಮಾಡಬೇಕೆಂಬ ದೃಢ ನಿಶ್ಚಯಕ್ಕೆ
ಮನದಿಂದ ಹೊರಹಾಕಬೇಕು ಕೊಳಕು !

ಎಲ್ಲರ ಮನಸ್ಸನ್ನು ಗೆಲ್ಲಬೇಕು . .
ಎಲ್ಲರ ಜೊತೆ ಬೆರೆತು ಮಾಡಬೇಕು ಕೈ ಕುಲುಕು
ಎಲ್ಲರ ಮನದಲ್ಲಿ ಮೀಟಿಸಬೇಕು ಸಾಧ್ಯ ಅಸಾಧ್ಯಗಳ ಚುರುಕು
ತಲೆಬಗ್ಗಿಸಿ ನಮ್ಮ ನೆನಪಿಗೋಸ್ಕರ

ಸರಳ ಜೀವನ ಮಾಡುತ ಎಂದಿಗೂ ಮಾಡಕೂಡದು ಕೊಳಕು
ನೋಡುವವರಿಗೆ ಕಾಣಬೇಕು ನಮ್ಮ ಜೀವನದ
ಹೊಸ ರೀತಿಯ ಬದುಕು ಮಾತನಾಡದೆ ಪ್ರಯತ್ನವಿಲ್ಲದೆ
ದೂರ ಹೋಗುವುದು ಅಡ್ಡ ಬರುವ ತೊಡಕು !

ನಮ್ಮ ಮನಸ್ಸಿಗೆ ನಾವೇ ಮೋಸಗೊಳಿಸದೆ
ನಾವು ಮಾತನಾಡುವಾಗ ಹಣೆಯ ಮೇಲೆ ಗಂಟಾಕದೆ
ನಮ್ಮ ಮಾತುಗಳು ಬೇರೆಯವರಿಗೆ ಅರ್ಥವಾಗಿದೆಯೇ ಎನ್ನುವಂತೆ
ಬರೀ ಮಾತು ಮಾತುಗಳನ್ನು ಹಿಸುಕದೆ

www.sriharikhoday.com

ಉಳುಕು ಪದಗಳನ್ನು ಉಪಯೋಗಿಸದೆ
ಕೋಪ ಸಿಡುಕುಗಳನ್ನು ಮರೆತು
ನಮ್ಮ ಮೂಲ ಉದ್ದೇಶಗಳಿಗೆ ಚುರುಕು ಇಲ್ಲದೆ
ನಮ್ಮ ಕನಸನ್ನು ನೆನಸಾಗಿರುವ ಉದ್ದೇಶ

ಬೇಕೇ ಬೇಕು ಎಂಬ ಭಾವನೆ
ಮನದ ಅಂತರಾಳದಲ್ಲಿ ಗುಟುಕು ಹಾಕುತ್ತಿದ್ದರೆ
ಚಾಲೂಕು ಇಲ್ಲದ ನಮ್ಮ ಅಂತರಾಳದ ನಿಜಸ್ಥಿತಿ
ಜನರು ನಮ್ಮ ಉದ್ದೇಶಕ್ಕೆ ಸಹಾಯಕರಾಗುತ್ತಾರೆ !

**– ಶ್ರೀ ಹರಿ.**

**08–10–2015**



# 1066

ಪರಿಶುದ್ಧ ಭಾವನೆಯಿಂದ ಅಡುಗೆ ಪಾತ್ರೆ
ದಿನವೂ ಶುದ್ಧಗೊಳಿಸುವಂತೆ
ದಿನದ ಮೊದಲಲ್ಲಿ ಹಳೆಯ ಮನಸ್ಸನ್ನು
ಉದ್ದೇಶವೆಂಬ ಗುರಿ ಸಾಧಿಸಲು

ಮನವನ್ನು ತೊಳೆದು ಶುದ್ಧಗೊಳಿಸಿ
ನಮ್ಮ ಅನಿಸಿಕೆಯ ಮಿಟುಕು ತೆರೆದ ಮುಸುಕಾಗಿ
ಎಲ್ಲರ ಮನಸ್ಸು ನಮ್ಮ ಮನಸ್ಸಿನೊಂದಿಗೆ ಬೆರೆತು

ಮುಂದೆ ಹೆಜ್ಜೆ ಹಾಕು. . . ಮುಂದೆ ಹೆಜ್ಜೆ ಹಾಕು ಎಂದು
ಹೇಳುವ ಜನಗಳ ಮಾತುಗಳು
ಕನಸನ್ನು ನನಸಾಗಿಸಲು ಉದ್ದೇಶ ಹತ್ತಿರ ಬರುತ್ತಿದೆ

ದುಡಿದು ಕೆಲಸ ಮಾಡಲು ಇಂದು ಸಾಕು ಎಂದು ಹೇಳದೆ
ಕನಸನ್ನು ನನಸಾಗಿಸುವುದೇ ಉದ್ದೇಶಗಳಾಗಿ
ನಮ್ಮ ಜೀವನದ ರೀತಿಯನ್ನು ಬದಲಿಸಿ
ಎಲ್ಲರ ಕನಸನ್ನು ನನಸು ಮಾಡೋಣ !

**– ಶ್ರೀ ಹರಿ.**

**08–10–2015**

www.sriharikhoday.com

## 1067

ಬೆಳಕಿನಲ್ಲಿ ಒಬ್ಬನೇ ನಡೆಯುವುದಕ್ಕಿಂತ
ಕತ್ತಲಲ್ಲಿ ಸ್ನೇಹಿತನ ಜೊತೆಗೆ ನಡೆಯುವುದು ಒಳ್ಳೆಯದು
ಕತ್ತಲಲ್ಲಿ ಸ್ನೇಹಿತನ ಜೊತೆಗಿನ ಆಪ್ತತನ
ಬೇರೆ ಯಾರ ಜೊತೆಗೂ ಸಿಗದು !

ಅಂದನ್ನು ಎಂದೂ ಮರೆಯದೆ
ಇಂದನ್ನು ಸದಾ ಜೊತೆ ಮನಸ್ಸಿನಲ್ಲಿ ಜೊತೆ ಮಿಂದು
ಕಿರಿತನ ದೊಡ್ಡತನ ಮರೆತಿರುವ ಸ್ನೇಹತನ
ಎಂದಿಗೂ ನವ ಚೈತನ್ಯವುಳ್ಳದ್ದಾಗಿದೆ

ಎಲ್ಲಾ ಕಷ್ಟದಲ್ಲೂ ಜೊತೆ ಬೆರೆತಿದ್ದ ಸ್ನೇಹಿತನ
ಧೈರ್ಯಗುಂದದೆ ನೀರು ಕುಡಿದರೂ ಒಂದೇ . .
ಮಧು ಕುಡಿದರೂ ಒಂದೇ

ಕಾಲದ ಜೊತೆಗೆ ಬೆಳೆಯುತ್ತಿರುವ ಸ್ನೇಹತನ
ಎಂದಿಗೂ ಆಗದು ಎಂದು ಕೆಳಗೆ ಬೀಳದೆ
ಮಾತು ಮಾತುಗಳಲ್ಲಿ ಮಾತನಾಡುವರು ಆಮದು !

ಬೆಂದು ಪಕ್ವವಾಗಿರುವ ಸ್ನೇಹತನ
ಬೆರೆತು ಜೊತೆ ನಡೆದು ಎಂದಿಗೂ ಕೆಳಗೆ ಬೀಳದೆ



ಮುಂದನ್ನು ಅನುಸರಿಸಿಕೊಂಡು ನಮ್ಮ ಜೊತೆ
ಎಂದೆಂದಿಗೂ ಇಂದಿಗೂ ಮುಂದಿಗೂ ಎಂದು ಅರಿತು

ಯಾವ ಒತ್ತಡಕ್ಕೆ ಸಿಗದೆ
ಸ್ವತಂತ್ರ್ಯವನ್ನು ಅನುಭವಿಸಲು ಸ್ನೇಹತನ
ಯಾವ ನೆಪಗಳನ್ನು ಹೇಳದ ಸ್ನೇಹತನಕ್ಕೆ
ಮಾತೆಂದರೆ ಮಾತು . . ಜಿದ್ದೆಂದರೆ ಜಿದ್ದು

ಜೊತೆ ಜೀವಿಸುತ್ತಿರುವ ಅಂದು ಇಂದುಗಳು
ಬೆಳಕಿನಲ್ಲಿ ಒಂಟಿಯಾಗಿ ಜೀವಿಸುತ್ತಿದ್ದರೂ
ಕತ್ತಲಲ್ಲಿ ಸ್ನೇಹತನ ಜೊತೆ ಜೊತೆಯಾಗಿರುವುದು
ಅದರ ಸುಖ ಯಾರಿಗೂ ಎಂದಿಗೂ ಸಿಗದು

**– ಶ್ರೀ ಹರಿ.**

**09–10–2015**

www.sriharikhoday.com

## 1068

ಮುಂದಿನ ಕ್ಷಣಗಳಲ್ಲಿ ಏನಾಗುವುದು ಯಾರಿಗೂ ಗೊತ್ತಿಲ್ಲ
ಸುಮುದ್ರದ ಅಲೆಗಳು ಯಾವ ರೀತಿ ಬಂದು ಹೋಗುವುದೆಂದು
ಸಮುದ್ರಕ್ಕೆ ತಿಳಿದಿಲ್ಲ
ಸಂತೋಷದಿಂದ ಗುಣಪಡಿಸುವ ರೋಗಗಳು ಔಷಧಿಗೆ ಗುಣ
ಪಡಿಸುವ ಗುಟ್ಟು ತಿಳಿದಿಲ್ಲ!

ಬೇಡದ ಯೋಚನೆಗಳೇ ಮಾನವನಿಗೆ ದುರ್ಬಲದ ಅರ್ಥ ತಿಳಿದಿಲ್ಲ
ನಿನ್ನ ಭಾವಚಿತ್ರ ನಮ್ಮ ಜೊತೆಯಿರುವ ಮನಸ್ಸಿಗೆ ಕಣ್ತೆರೆದು
ನೋಡಲಾಗುವುದಿಲ್ಲ
ಕಷ್ಟಕ್ಕೆ ಬಂದ ಕಣ್ಣೀರು ಆ ಕಣ್ಣಿಗೂ ನಿಲ್ಲಿಸಲಾಗುವುದಿಲ್ಲ
ಬೆಳಕು ಕಾಣದ ಮನಸ್ಸಿಗೆ ಸರಿ ತಪ್ಪುಗಳ ವಿಮರ್ಶೆ ತಿಳಿಯುತ್ತಿಲ್ಲ!

ವಿಶ್ವಕ್ಕೆ ಆಶ್ಚರ್ಯಕರವಾದ ಈ ಶರೀರಕ್ಕೆ ಕೊನೆ ಮೊದಲುಗಳು
ತಿಳಿದಿಲ್ಲ
ಬೆಳೆದಿರುವ ಪರ್ವತಗಳ ಎತ್ತರ ಯಾರು ಬೆಳೆಸಿದರೆಂದು
ಇದುವರೆಗೂ ಯಾರೂ ಅರಿತಿಲ್ಲ
ಉಸಿರು ನಿಟ್ಟುಸಿರುಗಳ ಜೀವದಾನದ ಗುಟ್ಟು ವಿಶ್ವಕ್ಕೇ ತಿಳಿದಿಲ್ಲ!

ಸಸ್ಯಗಳ ಹಸಿರು ಬಣ್ಣ ಅವು ನೋಡಲು ಕಣ್ಣಗಳೇ ಇಲ್ಲ
ಸೃಷ್ಟಿಯು ತನ್ನ ಶಕ್ತಿಯಿಂದ ಬೆಳೆದು ಬೆಳೆಸುತ್ತಿದ್ದರೂ
ತನಗೆ ಆ ಶಕ್ತಿ ಹೇಗೆ ಬಂತೆಂದು ತಿಳಿದಿಲ್ಲ



ಅಗೋಚರ ಶಕ್ತಿ ತನ್ನ ಎಚ್ಚರಕ್ಕೂ ತಿಳಿಯದೆ
ಕ್ಷಣ ಕ್ಷಣಗಳಲ್ಲಿ ಜೊತೆಗಿರುವ ಭರವಸೆಯ ಮೇಲೆ
ಸೃಷ್ಟಿ ಕರ್ತವ್ಯ ರೂಪವಾದ ಸೃಷ್ಟಿ ಮಾಡುತ್ತಲೇ ಇದೆ
ತಾಯಿಯ ಗರ್ಭ ಮಕ್ಕಳನ್ನು ಹಡೆಯುತ್ತಲೇ ಇದೆ!

ಗಿಡಕ್ಕೆ ತನ್ನ ನೆರಳೇ ತಿಳಿಯದೆ ಎತ್ತರವಾಗಿ ಬೆಳೆಯುತ್ತಲೇ ಇದೆ
ದೈವೀಕ ಶಕ್ತಿ ವಿಶ್ವದ ಒಡೆಯನ ಶಕ್ತಿ ಸೃಷ್ಟಿಯ ಹಿಂದಿರುವ ಶಕ್ತಿ
ನಮ್ಮೆದುರಿಗೇ ಇದ್ದರು ಕಾಣಲಾಗದ ಮಾಯೆಯ ಪರದೆಯ ಹಿಂದೆ

ಕಾಲಕ್ಕೆ ಭವಿಷ್ಯ ನೀಡುತ್ತ
ಉದ್ದೇಶಗಳು ತಮಗೇ ತಿಳಿಯದೆ ಅಣುರೇಣುಗಳಲ್ಲಿ ಬೆಳೆಯುತ್ತಿರುವ
ಸ್ವಯಂ ಪ್ರಚೋದನೆ ವಿಸ್ಮಯ ಆಕಾರಗಳು ಬೆಳೆಯುತ್ತಲೇ ಇದೆ

ಈ ಶಕ್ತಿಯ ನೆನೆಸಿಕೊಂಡು ಅಗಾಧ ಶಕ್ತಿಯನ್ನು
ನಾವು ಅರ್ಥೈಸಿಕೊಳ್ಳಲು ಪ್ರಯತ್ನ ಮಾಡಿದರೆ
ನಾವು ಹೊಸತನ ಪಡೆಯುವ ಅಗತ್ಯ ಮನೋಪ್ರಯೋಗ ಶಾಲೆಯಲ್ಲಿ

ಶೋಧನೆ ಮುನ್ನಡೆಸಿದರೆ ನಾವುಗಳು ಆಶ್ಚರ್ಯರೂಪವಾದ
ಅನುಭವಗಳನ್ನು ಅನುಭವಿಸಿ
ಪ್ರಯೋಗ ಮಾಡುವುದನ್ನು ಬಿಟ್ಟು ಪ್ರಭಾವಕ್ಕೆ ಸೋತ ಮನಸ್ಸು

ನಮಗೇ ತಿಳಿಯದ ಹೊಸ ದಡದ ಯೋಚನೆಗೆ ಕರೆದೊಯ್ದುವುದು
ನಾವೇ ಆಕಾಶವಾಗಿ . . ನಾವೇ ಪಂಚಭೂತಗಳಲ್ಲಿ ಬೆರೆತುಹೋಗಿ
ಅನುಭವ ಉಚ್ಚರಿಸಲು ಕಂಠವಿಲ್ಲದೆ

ಗಣಿಕೆಯಿಲ್ಲದ ಅನಂತ ಕಾಲದಲ್ಲಿ ಬೆರೆತುಹೋಗುವೆವು
ಮುಂದಿನ ಕ್ಷಣಗಳು ಏನಾಗುವುದೋ ನಮಗೇ ತಿಳಿಯದು
ಸಮುದ್ರದ ಅಲೆಗಳು ಹೇಗೆ ಬರುವುದೆಂದು ಸಮುದ್ರಕ್ಕೆ ತಿಳಿದಿಲ್ಲ

ಎಲ್ಲವನ್ನೂ ಮರೆತು ಸಂತೋಷದಿಂದ ಗುಣಪಡಿಸುವ
ರೋಗಗಳಿಗೆ ಔಷದ ಏನೆಂದು ತಿಳಿದಿಲ್ಲ
ಎಲ್ಲಾ ಪ್ರಶ್ನೆಗಳಿಗೆ ಸರಿ ಉತ್ತರ ಸಿಗುತ್ತಿಲ್ಲ

www.sriharikhoday.com

ಪ್ರಶ್ನೆಯೇ ಕಲ್ಪಿತ . .ಉತ್ತರವೂ ಕಲ್ಪಿತ
ಎಲ್ಲದರ ಜೊತೆಗೆ ಬೆರೆತು ಕಾಣುವ ಎದುರಲ್ಲಿ
ನಾವೇ ಎದುರಾಗುವ ಭಾವನೆಯೇ .
ಅಗೋಚರ ಸೃಷ್ಟಿಗೆ ಶಾಶ್ವತ ಆನಂದದಲ್ಲಿ
ಹರುಷಪಡುತ ಹೊಸ ರೀತಿಯ ಪ್ರಜ್ಞೆಯ ಸರೋವರದಲ್ಲಿ
ಪ್ರಕೃತಿಯ ಯೋಜನೆಗಳು ಈಜಾಡುತ್ತಲೇ ಇವೆ.

– ಶ್ರೀ ಹರಿ.

10–10–2015



## 1069

ನಮ್ಮ ಬದುಕಿಗೆ ನಮ್ಮದೇ ಆದ
ಮಾರ್ಗ ರೂಪಿಸಿಕೊಳ್ಳಬೇಕು
ಬದುಕು ನಮ್ಮ ಬದುಕಲ್ಲ
ಕ್ಷಣ ಕ್ಷಣದ ಕಾಲದ ಬದುಕು !

ಕಾಲವನ್ನು ಅಳವಡಿಸಿಕೊಂಡು
ಕ್ರಿಯಾಶೀಲ ಭಾವನೆಯಿಂದ ರೂಪಿಸಿ ಬದುಕಬೇಕು
ನಮ್ಮ ಬದುಕಿನಲ್ಲಿ ಒಳ್ಳೆಯದು ಕೆಟ್ಟದ್ದು ನಾವೇ ಅರಿತುಕೊಂಡು
ಬೇರೆಯವರಿಗೆ ತೊಂದರೆಯಿಲ್ಲದ್ದನ್ನು ಆರಿಸಿಕೊಂಡು

ಇಂದಿನ ದಿನದ ಕ್ರಿಯೆಗಳಿಗೆ
ದೀರ್ಘಾಲೋಚನೆ ಮಾಡುವುದೇ ಕ್ರಿಯಾಶೀಲ ಬದುಕು
ಸರಿ ಬದುಕು ಬದುಕಲು ಆಸಕ್ತಿ ಇಲ್ಲದ್ದಲ್ಲಿ
ಕಾರ್ಯಗಳು ರೂಪಿಸದೇ ಇಲ್ಲದ್ದಲ್ಲಿ

ವ್ಯರ್ಥಕಾಲ ಸೋಮಾರಿತನದ ಸಾಧನೆಯಾಗಿ
ಉತ್ಸಾಹ ನೀಡುವ ಕ್ರಿಯಾಶೀಲ ಭಾವನೆ
ಸೋಮಾರಿತನವನ್ನು ನುಂಗಿಬಿಡುವುದು !

ನಮ್ಮ ಬದುಕಿನಿಂದ ನೂರು ಜನ ಬದುಕಬೇಕು
ನಮ್ಮ ಬದುಕಿನಿಂದ ನೂರು ಜನರ ಬದುಕಿನಲ್ಲಿ ಸಂತಸ
ಮೂಡಿಸಬೇಕು

www.sriharikhoday.com

ನಮ್ಮ ಬದುಕಿನಲ್ಲಿ ನೂರು ಗಿಡ ಬೆಳೆಸಬೇಕು
ನಮ್ಮ ಬದುಕಿನಿಂದ ಸಮಾಜಕ್ಕೆ ಒಳ್ಳೆಯದಾಗಬೇಕು ಎಂದರೆ

ನಮ್ಮ ಜನ್ಮ ಸಾರ್ಥಕ
ನಮ್ಮ ಜನ್ಮ ಅಮೂಲ್ಯ
ನಮ್ಮ ಜನ್ಮ ಪ್ರಕೃತಿಯ ಧರ್ಮದ ಮರ್ಮ!

**- ಶ್ರೀ ಹರಿ.**

**12-10-2015**



## 1070

ನಮ್ಮಲ್ಲಿರುವ ವ್ಯಕ್ತಿತ್ವದ ವಿಕಾಸಕ್ಕೆ
ನಮ್ಮ ಮನೋ ಚಟುವಟಿಕೆಯನ್ನು ಶೂನ್ಯದಲ್ಲಿ ಬೆರೆಸಿ
ಸತ್ಯದ ವಿಜ್ಞಾನ ಆಕಾಶದಲ್ಲಿ ಬೆರೆತು
ಕಲ್ಪನೆಗಳಿಲ್ಲದ ನಮ್ಮ ಇರುವಿಕೆ

ನಮ್ಮ ಜೊತೆಗಿರುವ ಸತ್ಯದ ಆಕಾಶದಲ್ಲಿ ಒಂದಾಗಿ
ನಂಬಿಕೆಯಿದ್ದರೂ ಮೂಢ ನಂಬಿಕೆಯಿಲ್ಲದೆ
ಇರುವಿಕೆಗೆ ಗೋಚರವಾಗುತ್ತಿರುವ ಹೊಸ ಹೊಸ್ತಿಲು
ಸತ್ಯವನ್ನು ತಿಳಿಯುವುದೇ ಜ್ಞಾನವಾಗಿ

ವ್ಯಕ್ತಿತ್ವದ ವಿಕಾಸಕ್ಕೆ ಬ್ರಹ್ಮಾಂಡಗಳೇ ಸಾಲದ
ಯಾವ ನಿಯಮಗಳೂ ಇಲ್ಲದೆ
ಯಾವ ದಿಗಂತಗಳೂ ಅಡ್ಡವಾಗದೆ
ಎಲ್ಲ ದಿಕ್ಕುಗಳು ಜೊತೆಗೇ ಸೇರಿಹೋಗಿ

ಯಾವುದರ ಜೊತೆಗೂ ಅಂಟಿಕೊಳ್ಳದೆ
ನಮ್ಮನ್ನು ಮರೆತಿರುವ ಕಾಲದ ಜೊತೆಯಲ್ಲಿ ಸೇರಿಕೊಂಡು
ಬುದ್ಧಿಯೇ ಬ್ರಹ್ಮವಾಗುತ್ತ, ಲಯ ಸೃಷ್ಟಿಗಳೇ ಜೊತೆಯಾಗಿ
ನಾನು ನಾವುಗಳಾಗುತ್ತ

www.sriharikhoday.com

ಹಿಂದಿನ ನೆನಪುಗಳೂ ಇಲ್ಲದೆ
ಭವಿಷ್ಯ ಬುದ್ಧಿಯ ಪ್ರವಾಹಕ್ಕೆ ಸಿಗದೆ
ಪದಗಳು ಮುಂದಿನ ಆಲೋಚನೆಗಳಿಗೆ ಊರುಗೋಲಾಗಿ
ಪೂಜೆ ಮಾಡಲು ಯಾರೂ ಇಲ್ಲ. . ಪೂಜಿಸುವುದು ಯಾವುದೂ
ಇಲ್ಲ!

ಮಿಂಚುಗಳು ಮೋಡದಿಂದ ಕೆಳಗೆ ಇಳಿದಂತೆ
ಜ್ಞಾನದ ಬೆಳಕಿನಿಂದ ಹೊಸ ಅನುಭವದ ಕೋಲ್ಮಿಂಚುಗಳ
ತರಂಗಗಳು
ಜಡವಾಗಿರುವ ಇರುವಿಕೆಗೆ ಶಕ್ತಿಯಲ್ಲಿ ಬೆರೆಸಿದಂತೆ
ಎಲ್ಲರ ಜೊತೆಗಿರುವ ಮಹಾನ್ ಶಕ್ತಿ

ದೇವರ ರೂಪವಾಗಿ ತೋರಿಸಿದ ಶಕ್ತಿಯು
ಕಣ್ಣಿಗೆ ಕಾಣದ ತರಂಗಗಳಾಗಿ
ತರಂಗದ ರೂಪದಲ್ಲಿ ಜೊತೆ ಬೆರೆತುಕೊಂಡು
ಜೊತೆ ಜೊತೆ ಬೆರೆಯುವುದೇ ನಮ್ಮ ಹುಟ್ಟುಗುಣವಾಗಿ

ಜೊತೆ ಜೊತೆಯಲ್ಲಿ ಜೀವಿಸುವುದು ನಮ್ಮ ಹಕ್ಕಾಗಿ
ಸತ್ಯದ ಇರುವಿಕೆಯ ಜೊತೆ ಜೀವಿಸುತ್ತ
ಕೊರತೆ ಇಲ್ಲದೆ ಭಾವನೆಗಳು
ಮುಂದಿನಲ್ಲಿ ನಾವು. ಹಿಂದಿನಲ್ಲೂ ನಾವು

ಹಿಂದು ಮುಂದುಗಳಲ್ಲಿ ಒಂದಾಗಿರುವ ನಾವು
ಎಲ್ಲರ ಜೊತೆ ಬೆರೆತುಹೋಗಿರುವ ಅನುಭವ
ಭವಿಷ್ಯ ವರ್ತಮಾನದಲ್ಲಿ ನಾವೇ ಅನುಭವಿಸುತ್ತ
ಯೋಗಾನುಷ್ಠಾನದಲ್ಲಿ ಸತ್ಯದ ನಾಡಿಗಳ ಚಕ್ರಗಳ ಜೊತೆ ಬೆರೆತು

ಚಿತ್ತ ಶುದ್ಧಿಯಾಗಿಸಿ ಶರೀರವನ್ನು ಮರೆತು
ಒಳಗೆ ಹೊರಗೆ ಒಂದೇ ಆಗಿ
ಓಂಕಾರ ನಾದದಲ್ಲಿ ಬೆರೆತು ಅನುಭವಿಸಿ
ಎಂದೂ ಅನುಭವಿಸದ ಆನಂದದಲ್ಲಿ ಬೆರೆತು ಅನುಭವಿಸಿ



ಕಣ್ಮುಚ್ಚಿರುವ ಕಾರಣ ಕತ್ತಲೆ ಎಂದು
ವ್ಯಕ್ತಿತ್ವ ವಿಕಾಸದಲ್ಲಿ ಬೆಳಕಿನ ಅನುಭವ
ಮೋಡವಾಗಿರುವ ನಿರಾಕಾರದ ಅನುಭವ
ಇರುವಿಕೆಯ ಅನುಭವವಾಗಿ

ಅದರಲ್ಲಿಂದ ಇಳಿಯುತ್ತಿರುವ ಕೋಲ್ಮಿಂಚುಗಳ ಪ್ರಭಾವ
ಹೊಸ ಅರಿವಿನ ಜ್ಞಾನ ಅನುಭವಿಸುತ್ತ
ಹೊಸ ಅನುಭವ ಲಾಭವಾಗಿ ಜೊತೆ ಸೇರುತ್ತಿದ್ದರೆ
ಇಹಪರಗಳಿಂದ ಮುಕ್ತಿ ಪಡೆದು

ಒಲಿಸಿಕೊಳ್ಳಲು ಯಾವುದೂ ಇಲ್ಲದೆ
ದ್ವಂದ್ವಗಳಲ್ಲಿ ಬೆರೆತುಹೋಗಿ
ತಾನಾಗಿ ಮೇಲೆ ಬೀಳುತ್ತಿರುವ ಕಾಲ
ಹೆದರಿಕೆಯಿಂದ ದೂರವಾಗಿ

ಎಲ್ಲವೂ ದೃಷ್ಟಿಯಿಂದ ಮಾತ್ರ ಅನುಭವಿಸುತ್ತ
ವಿಮರ್ಶೆಗಳಿಗೆ ಬೇಡಿಕೆಯೇ ಇಲ್ಲದೆ
ಸತ್ಯದ ಜೊತೆಗೆ ಬೆರೆತು ನನ್ನದಾದ ಅದು ನಮ್ಮದಾಗಿ
ದೃಷ್ಟಿಯಿಂದ ಕಾಲ ಜನಿಸಿದಂತೆ

ಕಾಲದಿಂದ ದೃಷ್ಟಿ ಹುಟ್ಟಿತೋ ಎಂಬ
ವಿಮರ್ಶೆಯ ಬೇಡಿಕೆಯ ಅನುಭವ
ಅನುಭವ ಪಡೆಯುವ ದೃಷ್ಟಿ
ದೇವರು ಎಂಬ ಹೆಸರಿನ ಶಕ್ತಿಯಾಗಿ

ಆ ಶಕ್ತಿಯು ಆನಂದವೋ . .ಆನಂದ
ಯಾವ ಬಂದನದಲ್ಲೂ ಜೊತೆಗಿರುವ ಶಕ್ತಿಯ ಆನಂದ
ಯಾವುದಕ್ಕೂ ಸಿಲುಕದೆ ಇರದ ಇರುವಿಕೆಯ ಅನುಭವ
ದೇವರ ಅನುಭವ

www.sriharikhoday.com

ದೇವರ ತರಂಗ ರೂಪದಲ್ಲಿರುವ ಅನುಭವ
ಅನುಭವ ಅನಂತ ರೂಪದಲ್ಲಿರುವ ದೇವರು !
ನಮ್ಮಲ್ಲೇ ಇರುವ ವ್ಯಕ್ತಿತ್ವ ವಿಕಾಸದ
ಎಚ್ಚರದ ಅನುಭವ

ದೇವರನ್ನು ಜೊತೆಗೂಡಿಸಿರುವ ಅನುಭವ
ದಿಕ್ಕುಗಳು ತಡೆಯಲಾರದ ಅನುಭವ
ನಮ್ಮನ್ನೇ ನಾನು ಮರೆತು ನಾವುಗಳಾಗಿ
ಕಾಲದಲ್ಲೇ ಕಳೆದುಹೋಗಿರುವ ಅನುಭವ !

**– ಶ್ರೀ ಹರಿ.**

www.sriharikhoday.com

**14–10–2015**